TIGHT BINDING BOOK

UNIVERSAL
LIBRARY
OU_200159
UNIVERSAL
LIBRARY

ಸತೀಹಿತೈಷಿಣಿ ಗ್ರಂಥಮಾಲಾ ನಂ. ೩.

ವಿದ್ಯುಲ್ಲತಾ

(ಹರಿಣಿ)

प्रारभ्यते न खलु विघ्नभयेन नीचैः ।
प्रारभ्य विघ्नविहता विरमंति मध्याः ॥
विघ्नैः सहस्रगुणितैरपि हन्यमानाः ।
प्रारब्धमुत्तमजना न परित्यजंति ॥१॥

EDITED AND PUBLISHED BY

Shrimati Tirumalamba

AT THE

Sathihithaishini, Matru Mandiram

NANJANGUD

1927

(All rights reserved)

[ಕ್ರಯ ರೂ. ೧-೦-೦

KARNATAK BOOK-DEPOT.
[illegible]
GOWLIGUDA HYDERABAD-DN

CHECKED 1956

PRINTED AT
THE BANGALORE PRESS, BANGALORE CITY
Second Edition, 2,000 copies

FOREWORD

I have much pleasure in bringing this book to the notice of the Kannada readers. Srimathi Thirumalamba has achieved distinction in the field of Kannada literature and the Kannada-reading public cannot be too grateful to her in her indefatigable labours to provide healthy, popular literature to the people of Karnataka country. Lady authors and writers are few and far between in Kannada literature and Srimathi Thirumalamba has set an example to her sex as to what devotion combined with talent can achieve in any field of activity.

The present book "VIDYULLATA" is a very readable story written in an attractive style and as such should be acceptable to a large circle of Kannada readers, not to speak of its suitability as a text-book for University and other examinations.

BANGALORE,
31st January 1927.

M. SHAMA RAO.

ಸಮಾಲೋಚನೆ

ಈ ''ವಿದ್ಯುಲ್ಲತಾ'' ಎಂಬ ಗ್ರಂಥವು ಈ ರೀತಿಯಲ್ಲಿ ಈಗ ಪುನರ್ಮುದ್ರಿತವಾಗಿ ಪ್ರಕಾಶಿಸಲ್ಪಟ್ಟಿರುವುದು. ಇದು ಪ್ರಥಮಮುದ್ರಣದ ಕೇವಲ ''ಮಕ್ಕೀಕಾಮಕ್ಕಿ''ಯೇ ಅಲ್ಲದೆ ಸಂಸ್ಕರಿಸಲ್ಪಟ್ಟಿರುವುದು. ಲೋಕದಲ್ಲಿ ಅನುಭವವು ಹೆಚ್ಚಿದ ಹಾಗೆಲ್ಲಾ ಅಭಿರುಚಿಯೂ ಸಂಸ್ಕೃತವಾಗುವುದು ಸಹಜವೇ ಸರಿ. ಆದರೆ ಒಂದಾವೃತ್ತಿ ರಚಿಸಿದ ಗ್ರಂಥವನ್ನು ಪರಿಷ್ಕರಿಸಬೇಕಾದರೆ ಅದರ ಮೂರ್ತಿಯನ್ನು ಹಾಗೆಯೇ ಇಟ್ಟುಕೊಂಡು ಕೇವಲವಾಗಿ ಆಹಾರ್ಯವತ್ತಾಗಿ ಇರುವ ಭಾಗಗಳನ್ನು ಹೆಚ್ಚು ಕಡಮೆ ಮಾಡಬೇಕೇ ಹೊರತು ಇಲ್ಲದಿದ್ದರೆ ಆ ಗ್ರಂಥವು ಪೂರ್ವರೂಪದ ಛಾಯಾಮಾತ್ರವನ್ನು ಒಳಕೊಂಡಾದರೂ, ಅದೂ ಇಲ್ಲದೆಯೇ ಆದರೂ ಪರಿಣಮಿಸುವುದು. ಆಗಲಿ ಬಾಧಕವೇನು,—ಎಂಬುದೇನೋ ಸರಿ; ಆದರೆ ಯಾವುದು ಒಳ್ಳೆದೋ ಯಾವುದು ಕೆಟ್ಟದೊ ನಿರ್ಣಯಿಸುವವರು ಯಾರು? ಲೋಕದಲ್ಲಿ ಒಳ್ಳೆದುಕೆಟ್ಟದೆಂಬ ಭಾವನೆ ಜನರಿಗೆ ತಮ್ಮ ತಮ್ಮ ಅನುಭವಾನುಗುಣವಾಗಿ ಬರುವುದು. ನಾವು ದ್ವೇಷಿಸುವ ವಸ್ತುವನ್ನು ಹತ್ತುಮಂದಿ ನಮ್ಮ ಇದಿರಾಗಿಯೇ ಪ್ರೀತಿಸುವರು. ಸಾಹಿತ್ಯಶಾಸ್ತ್ರವು ವಿದ್ಯೆಯಲ್ಲಿ ಸೇರಿದುದಲ್ಲ; ಅದರಲ್ಲಿ ಉಕ್ತವಾದ ನಿಯಮಗಳು ಕೇವಲ ಪದ್ಧತಿಗಳೇ ಹೊರತು ಧರ್ಮಶಾಸ್ತ್ರಾದಿಗಳ ನಿಯಮಗಳಂತೆ ಅನುಲ್ಲಂಘನೀಯಗಳೂ ಅಲ್ಲ, ಉಲ್ಲಂಘಿಸಿದರೆ ಪ್ರತ್ಯವಾಯವೂ ಇಲ್ಲ. ಋಷಿಗಳು ಹೇಳಿದ ಕಥಾಭಾಗಗಳನ್ನೇ ಕವಿಗಳು ತಮ್ಮ ಇಷ್ಟಾನುಸಾರವಾಗಿ ಹೆಚ್ಚು ಕಡಮೆ ಮಾಡಿರುವರು. ಉದಾಹರಣೆಗಾಗಿ ಕಾಳಿದಾಸನನ್ನೇ ತೆಗೆದುಕೊಳ್ಳುವ. ರಘುವಂಶದಲ್ಲಿ ದಿಲೀಪ, ರಘು, ಅಜ, ದಶರಥ, ರಾಮ ಈ ಪ್ರಕಾರವಾಗಿ ವಂಶಾವಳಿಯಿರುವುದು; ಶ್ರೀಮದ್ರಾಮಾಯಣದಲ್ಲಿ ಸೀತಾಕಲ್ಯಾಣ ಪ್ರಸ್ತಾವದಲ್ಲಿ ಈಗಳಿನವರು ಪ್ರವರಪಾರಾಯಣಮಾಡುವಂತೆ ವಂಶಾವಳಿಯನ್ನು ಹೇಳುತ್ತ ಭಗೀರಥ, ಕಕುತ್ಸ್ಥ, ರಘು, ಕಲ್ಮಾಷಪಾದ, ಶಂಖಣ, ಸುದರ್ಶನ, ಅಗ್ನಿವರ್ಣ, ಶೀಘ್ರಗ, ಮರು, ಪ್ರಶುಶ್ರುಕ, ಅಂಬರೀಷ, ನಹುಷ, ಯಯಾತಿ, ನಾಭಾಗ, ಅಜ, ದಶರಥ, ರಾಮ (ಅಧ್ಯಾಯ ೭೦) ಹೀಗೆ ವಂಶಾವಳಿಯನ್ನು ಹೇಳಿರುವರಲ್ಲವೇ? ಶಾಕುಂತಲವನ್ನು ತೆಗೆದುಕೊಂಡರೆ, 'ನನ್ನ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ನೀನು ರಾಜ್ಯವನ್ನು ಕೊಡುವುದಾದರೆ ನಿನ್ನನ್ನು ನಾನು ಮದುವೆಯಾಗುವೆನು' ಎಂದು ಸಮಯವನ್ನು ಮಾಡಿಕೊಂಡು

ಶಕುಂತಳೆ ದುಷ್ಯಂತನನ್ನು ಮದುವೆಯಾದಳೆಂದೂ, ಅವಳು ಭರತನನ್ನು ಆಶ್ರಮದಲ್ಲಿಯೇ ಹೆತ್ತಿದ್ದಳೆಂದೂ, ಅವಳನ್ನೂ ಅವಳ ಮಗನನ್ನೂ ಋಷಿಗಳು ದುಷ್ಯಂತನ ಬಳಿಗೆ ಕಳಿಹಿದರೆಂದೂ, ದುಷ್ಯಂತನು ಅವಳನ್ನು ಕಾಣದವನಂತೆ ನಟಿಸಲು ಆಗ ಅವಳು ನಿರ್ಭೀತೆಯಾಗಿ ಅವನು ಮರ್ಮಾಹತನಾಗುವಂತಹ ಮಾತುಗಳನ್ನಾಡಿದಳೆಂದೂ ಮಹಾಭಾರತದಲ್ಲಿ ಓದುವುದೆಲ್ಲಿ?— 'ದುಷ್ಯಂತನನ್ನು ಕಂಡಕೂಡಲೇ ಅವಳು ಅವನನ್ನು ಕಾಮಿಸಿದಳು, ಗರ್ಭಿಣಿಯಾಗಿ ವಿರಹದಿಂದ ಸಂತಪ್ತೆಯಾಗಿದ್ದ ಅವಳನ್ನು ಕಣ್ವರು ದುಷ್ಯಂತನ ಬಳಿಗೆ ಕಳಿಹಿದರು, ಭರತನನ್ನು ಅವಳು ಮಾರೀಚಾಶ್ರಮದಲ್ಲಿ ಹೆತ್ತಳು, ದೂರ್ವಾಸಸ್ಸಿನ ಶಾಪದಿಂದ ಅವಳ ಸ್ಮೃತಿ ದುಷ್ಯಂತನಿಗೆ ತಪ್ಪಿತ್ತು' ಎಂದು ಹೇಳುವ ಶಾಕುಂತಲದ ಕಥೆಯೆಲ್ಲಿ? ಉತ್ತರರಾಮಚರಿತ್ರೆಯನ್ನು ತೆಗೆದುಕೊಂಡರೆ, ರಾಮನಿಗೆ ಪ್ರತ್ಯಯವನ್ನು ಕೊಡಲು ಸೀತೆ ಪ್ರತಿಜ್ಞೆ ಮಾಡುವಾಗ ಭೂಕುಹರಕ್ಕೆ ಬಿದ್ದುಹೋದಳೆಂಬ ರಾಮಾಯಣವೆಲ್ಲಿ?—ಸೀತಾರಾಮರ ಪುನರ್ಮೇಳನವನ್ನು ವರ್ಣಿಸುವ ಈ ನಾಟಕವೆಲ್ಲಿ? ಇನ್ನೂ ಕಿರಣಾವಳಿಯಲ್ಲಿ ಮಂಗಳಾರಂಭವೇ ಇಲ್ಲ, ಬಾಣನ ಕಾದಂಬರಿಯಲ್ಲಿ ಶೂದ್ರಕವೃತ್ತಾಂತ ವರ್ಣನೆ ಸತ್ಸಮ್ಮತವಲ್ಲ. —ಇತ್ಯಾದಿಯಾದ ವಿಷಯಗಳು ಜನಜನಿತವಾಗಿರುವುವು. ಕಾವ್ಯಗಳು ಗೌರವಸ್ಥಾನಕ್ಕೇ ಏರದೆ ''ಕಾವ್ಯಾಲಾಪಾಂಶ್ಚ ವರ್ಜಯೇತ್'' ಎಂಬ ಸ್ಮೃತಿಯ ಪಥಕ್ಕೆ ಬೀಳುವುವಾದುವು. ಆದರೆ ಕಾವ್ಯಗಳಲ್ಲಿ ವಸ್ತು, ನೇತೃ, ಇತ್ಯಾದಿಗಳಿಂದ ಸಹೃದಯಹೃದಯಾಹ್ಲಾದಕತ್ವವನ್ನು ಮಾಡುವುದು ಮುಖ್ಯವಾಗಿರುವುದು. ವಸ್ತುಗಳೆನ್ನುವವೇ ಈಗಲೀಗ ಉತ್ಪಾದ್ಯವಾದುವೇ ಹೆಚ್ಚು; ನೇತೃಗಳೆನ್ನುವವೇ ಪ್ರಾಕೃತ ನರರೇ ಆಗುತ್ತಿರುವುದು ಹೆಚ್ಚು. ಈ ಸ್ಥಿತಿಯಲ್ಲಿ ಕಾವ್ಯರಚನಾಭಿಲಾಷೆಯುಳ್ಳವರೆಲ್ಲರೂ ಗ್ರಂಥಗಳನ್ನು ರಚಿಸುತ್ತ ಬಂದಿರುವರು. ಯಾವುದು ಶ್ರಮಲಭ್ಯವೋ ಅದು ಯಥಾರ್ಥಯೋಗ್ಯತೆಯನ್ನು ಪರೀಕ್ಷಿಸುವುದು, ಅಂತಹುದಕ್ಕೆ ಅರ್ಹರಲ್ಲದೆ ಸರ್ವರೂ ಪ್ರಯತ್ನಿಸುವುದಿಲ್ಲ. ಪೂರ್ವಕಾಲದಲ್ಲಿ ಸ್ವಯಂವರವೆಲ್ಲಾದರೂ ಆದರೆ ಎಂತಹರು ಎಷ್ಟು ಮಂದಿ ಬಂದು ಎಷ್ಟು ಸಾಹಸವನ್ನು ಮಾಡುತ್ತಿದ್ದರು? ಅದೇ ಈಗ ರತಿದೇವಿಯಂತಹ ಹೆಣ್ಣನ್ನು ತೆಗೆದುಕೋ—ಎಂದರೂ ತಿರುಕನೂ ಕುರೂಪಿಯೂ ಆದವನ ಹರಟೆಯೆಷ್ಟು? ಪೂರ್ವದಲ್ಲಿ, 'ಏಷ್ಟವ್ಯಾ ಬಹವಃಪುತ್ರಾಃ ಯದ್ಯೇಕೋಽಪಿಗಯಾಂ ವ್ರಜೇತ್',—ಬಹುಮಂದಿ ಮಕ್ಕಳಾಗಬೇಕೆಂದು ಕೋರಬೇಕು. ಏಕೆಂದರೆ ಅವರಲ್ಲಿ ಯಾವನೋ ಒಬ್ಬನಾದರೂ ಗಯೆಗೆ ಹೋಗತಕ್ಕವನಾಗಬಹುದು. (ರಾಮಾಯಣವಾಕ್ಯ), ಎಂದು ಅಪೇಕ್ಷಿತವಾಗಿದ್ದುದರಿಂದ ಹಿರಿಯರ ಕೋರಿಕೆಯನ್ನು ನೆರವೇರಿಸಿ ತಾವೂ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಎಲ್ಲಿಯೋ ಅಪ್ಪಿತಪ್ಪಿ

ಒಬ್ಬರೂ ಇಬ್ಬರೂ ಯಾತ್ರೆಗೆ ಹೊರಟು ಈ ಹೊತ್ತು ಈ ಊರು, ನಾಳೆ ಆ ಊರು, ಹೀಗೆ ಪಾದಚಾರಿಗಳಾಗಿ ಸಂಚರಿಸುತ್ತ, ಎಲ್ಲಾ ಪುಣ್ಯಕ್ಷೇತ್ರಗಳನ್ನೂ ನೋಡುತ್ತ, ಎಲ್ಲಾ ಪುಣ್ಯತೀರ್ಥಗಳಲ್ಲಿಯೂ ಸ್ನಾನಮಾಡುತ್ತ ಕೊನೆಗೆ ಕಾಶಿಗೆ ಹೋಗಿ,—

"ಮುನ್ನೂರು ಅರುವತ್ತು ಗಾವುದವ ಬಂದೆ,
ಸ್ವಾಮಿ ವಿಶ್ವೇಶ್ವರನ ದರ್ಶನವ ಕಂಡೆ"

ಎಂದು ಪರಮಾನಂದದಿಂದ ಹಾಡುತ್ತಿದ್ದರು. ಅಲ್ಲಿಯೂ ಸಾಧ್ಯವಾದಷ್ಟು ಕಾಲವಿದ್ದು ಹಿಂದಿರುಗಿ ಬಂದಮೇಲೆಯೂ 'ಕಾಶೀವಾಸಿ'ಗಳೆಂದೇ ಕರೆಯಿಸಿಕೊಳ್ಳುತ್ತಿದ್ದರು; ಈಗ 'ರೈಲು' ಆದಮೇಲೆ ಕಾಶಿಗೆ ಹೋಗದವರೇ ವಿರಳರು. 'ಅಯ್ಯೋ! ಗಂಗೆಯೆಂದರೆ ನಾನು ಏನೋ ಎಂದುಕೊಂಡಿದ್ದೆ, ನಮ್ಮ ಊರ ಕಟ್ಟೆಯ ನೀರೂ ಹೀಗೇ ಇದೆ' ಎಂದುಕೊಂಡು ಬಂದವರನ್ನೂ ತೋರಿಸಬಹುದು. ಅಲ್ಲಿ ಪಂಡಗಳ ಕೈಗೆಸಿಕ್ಕಿ 'ಸಾಕಪ್ಪ ಸಾಕು, ಅರಿಯದೆ ಬಂದು ಮಣ್ಣುತಿಂದೆವು' ಎಂದು ಪೇಚಾಡುತ್ತ ಬಯ್ದುಕೊಂಡು ಅಂದುಕೊಂಡು ಎಲ್ಲರ ಮೇಲೆಯೂ ಗುರ್ರೆನ್ನುತ್ತ "ರಾಮೂಣ್ಯ ಎಂಬೋದು ಸಾಮಾನ್ಯವಲ್ಲ, ಆಳಿಗೆ ಆಳು ಬಾಳ ಬಾರ" ಎಂಬಂತಹ ಅನುಭವವನ್ನು ಪಡೆದವರೂ ಅನೇಕರಿರುವರು. ಎಂದರೆ, ಈಗ ಧನಾಢ್ಯರಿಗೇ ಕಾಲ, ಮಿಕ್ಕವರ ಪಾಡೆಲ್ಲಾ ನಾಯಿಪಾಡೇ,—ಎಂದು ಹೇಳುವುದೂ ಸರಿಯಲ್ಲ; ಈಗಲೂ ಗುಣಾಢ್ಯರಾದವರಿಗೆ ಎಲ್ಲಿಯೂ ಪೂಜ್ಯತೆಯೂ ಪುರಸ್ಕಾರವೂ ದೊರೆತೇ ದೊರೆಯುತ್ತಿರುವುದು. ಇತರರಿಂದ ಸುಲಿಗೆತೆಗೆದುಕೊಳ್ಳುವರೂ ಅವರಿಗೆ ದಾಸರಾಗಿ ಬೇಕಾದುದನ್ನು ಮಾಡಿಕೊಳ್ಳುತ್ತಿರುವರು. ಗುಣಕ್ಕೆ ಮಾನ್ಯತೆ ಈಗಲೂ ತಪ್ಪಿಲ್ಲ, ನಾಳೆಗೂ ತಪ್ಪಲಾರದು; ಎಲ್ಲಾದರೂ ಅದಕ್ಕೆ ಆಕಸ್ಮಿಕವಾಗಿ ಅವಜ್ಞೆಯುಂಟಾದರೆ ಹಾಗೆ ಅವಜ್ಞೆ ತೋರಿದವರಲ್ಲಿಯೇ ಬೇಗನೆ ಪಶ್ಚಾತ್ತಾಪವೂ ಹುಟ್ಟುವುದು. ಮನೋಧರ್ಮವು ಎಲ್ಲೆಲ್ಲಿಯೂ ಒಂದೇ. ಅನುಕೂಲ್ಯಗಳು ಹೆಚ್ಚಿದಷ್ಟೂ ಚಾಪಲ್ಯವು ಹೆಚ್ಚುವುದು. ಮನೋರಥದಲ್ಲಿ ಜನಕ್ಕೆ ಮಿಥ್ಯಾಭಿಮಾನವೆಂಬ ಅಸಾರವಾದ ಒಂದು ಅಂಗವು ಪ್ರಬಲವಾಗಿರುವುದು. ಅದಕ್ಕೆ ಪರವಶರಾಗಿ ಅವರು ನಿಜಶಕ್ತಿಯೆಷ್ಟೆಂದು ಎಣಿಸದೆ ಕಾರ್ಯಾಗಾಧತೆಯನ್ನು ನೋಡದೆ ಔತ್ಸುಕ್ಯಮಾತ್ರದಿಂದ ವರ್ತಿಸುವರು,—ಅದರ ಫಲವು ದಾರುಣವಾಗುವುದೇ ಹೆಚ್ಚು.

ಇನ್ನು ಈ ಸಾಮಾನ್ಯನಿಯಮಗಳನ್ನು ವಿಶೇಷದೃಷ್ಟಿಯಿಂದ ನೋಡುವ. ಮುದ್ರಣಸೌಕರ್ಯಗಳು ಹೆಚ್ಚುತ್ತ ಬಂದಿರುವುದರಿಂದ ಗ್ರಂಥಗಳನ್ನು ರಚಿಸುವರೂ ಹೆಚ್ಚುತ್ತ ಬರುವುದಕ್ಕೆ ಕಾರಣವಾಯಿತು. ಈ ಸ್ಥಿತಿಯಲ್ಲಿ 'ವೈದಿಕವು ಹೋಯಿತು, ಲೌಕಿಕವು ಬರಲಿಲ್ಲ'

ಎಂಬಂತೆ ಪೂರ್ವಪದ್ಧತಿಗಳು ಹೋದುವು. ನವ್ಯಪದ್ಧತಿಗಳು ಬಂದಿಲ್ಲ; ಎಲ್ಲಿ ನೋಡಿದರೂ ಯಾವುದು ಸಾಧುವೋ ಯಾವುದು ಅಸಾಧುವೋ ಹೇಳುವುದಕ್ಕೇ ಆಗುವುದಿಲ್ಲ. ನವ್ಯ ಪದ್ಧತಿಗಳಲ್ಲಿ ಜನರಿಗೆ ಇರುವ ಅಭಿಮಾನವು ಶಾಕುಂತಲದ ವಿದೂಷಕನು ಹೇಳುವಂತೆ 'ಪಿಂಡಖರ್ಜೂರವನ್ನು ತಿಂದು ಸಾಕಾಗಿ ಹುಣಸೆಹಣ್ಣಿಗೆ ಹುಟ್ಟಿದ ಬಯಕೆ'ಯಂತೆಯೋ, ಇಲ್ಲವೇ ಯಥಾರ್ಥವೇ ಆದುದೋ, ಈಗಲೇ ನಿರ್ಣಯಿಸುವುದಕ್ಕಾಗಲಾರದು; ಮತ್ತೆ ದೂರದರ್ಶಿಗಳಾದ ವಿಚಕ್ಷಣರೂ ಕೂಡ ಆ ಅಭಿರುಚಿ "ನಾಮಾಪಿ ನಶ್ರೂಯತೇ" ಎಂಬಂತೆಯೇ ಹೋಗಿಬಿಡುವುದೋ, ಮಾರ್ಗಾಂತರದರ್ಶಕವಾಗಿ ಮಟ್ಟಕ್ಕೆ ನಿಲ್ಲುವುದೋ, ಇಲ್ಲ; ಪೂರ್ಣವಾಗಿಯಾಗಲೀ ಅಂಶಮಾತ್ರವಾಗಿಯಾಗಲೀ ನಿಜರೂಪದಲ್ಲಿಯೇ ನಿಲ್ಲುವುದೋ ಎಂಬ ವಿಷಯದಲ್ಲಿ ಸಂದೇಹಪಡುತ್ತಿರುವರು. ತತ್ಕಾಲದಲ್ಲಿ ಮಿಥ್ಯಾ ವಸ್ತುವೂ ತಥ್ಯವಾಗಿಯೇ ತೋರುವುದು. ಪ್ರಭುತ್ವಮಾಡುವವರು ಶ್ರೇಷ್ಠರೆಂಬ ಭಾವನೆ ಸಹಜವಾಗಿಯೇ ಬರುವುದು. 'ಪುಣ್ಯವಿದ್ದರೆ ನಾನೂ ಪೂರ್ಣಯ್ಯನೇ' ಎಂದು ನಮ್ಮ ದೇಶದಲ್ಲಿ ಹೇಳುವುದೂ, 'ಏನಪ್ಪ, ನೀವು ಬಾಜೀರಾಯನ ಮೊಮ್ಮಕ್ಕಳಾಗಿ ಹೋದಿರಿ' ಎಂದು ಮಹಾರಾಷ್ಟ್ರದೇಶದಲ್ಲಿ ಹೇಳುವುದೂ ಇದಕ್ಕೆ ಉದಾಹರಣೆಗಳಾಗುವುವು. ಹಿಂದೆ ರಾಜಪೂಜಿತರೆನಿಸಲು ಶ್ರಮಪಡುತ್ತಿದ್ದುದೂ, ಈಗ 'ಕೆಟಿ.,' 'ಕೆ.ಸಿ.ಐ.ಇ.,' ಇತ್ಯಾದಿ ಬಿರುದಗಳನ್ನು ಪಡೆಯಲು ಸಾಹಸಮಾಡುವುದೂ ಈ ತತ್ತ್ವವನ್ನು ಅನುಸರಿಸಿಯೇ. ಶ್ರೇಷ್ಠರೆನಿಸುವವರು ಆಚರಿಸುವುದನ್ನೇ ಇತರರೂ ಆಚರಿಸುವರು. ನಮ್ಮ ಉಡುಗೆತೊಡುಗೆಗಳೂ ರೂಪಾಂತರವನ್ನು ಹೊಂದುತ್ತಿರುವುದು ಈ ಕಾರಣದಿಂದಲೇ. ಅವರಿಗೆ ಯಾವುದು ಪ್ರಮಾಣವೋ ಅದನ್ನು ಲೋಕವೂ ಅನುವರ್ತಿಸುವುದು. ನಮ್ಮ ಅನಾದಿಸಿದ್ಧವಾದ ಆಗಮಾದಿ ಪ್ರಮಾಣಗಳು ಅನಾದೃತವಾಗುತ್ತ ಬಂದು ಪ್ರತ್ಯಕ್ಷ (observation) ಪರೀಕ್ಷಾ (experiment) ಇವುಗಳೇ ಪ್ರಮಾಣಗಳಾಗಿ ಭಾವಿಸಲ್ಪಡುತ್ತ ಬಂದಿರುವುದೂ ಇದರಿಂದಲೇ. ಇದು ಈಗಿನ ಮಾತೇ ಅಲ್ಲ. ಪೂರ್ವದ ಕವಿಗಳೂ ಕೂಡ ಈ ಅರ್ಥವನ್ನು, ದೇವರಾಜ್ಯವೈಭವವು ದಾನವರಲ್ಲಿ ಪ್ರತಿಷ್ಠಿತವಾಗಲು ವೈದಿಕರೂ ಕೂಡ ವೇದದಲ್ಲಿ ದೇವತೆಗಳ ಹೆಸರು ಬರುವ ಕಡೆಗಳಲ್ಲೆಲ್ಲಾ ದೈತ್ಯರ ಹೆಸರುಗಳನ್ನು ಹಾಕಿಕೊಂಡೂ ಮತ್ತೆ ಹೊಂದಿಕೊಳ್ಳುವ ಹಾಗೆ ತಿದ್ದಿಕೊಂಡೂ—ಉದಾಹರಣೆಗಾಗಿ 'ಇಂದ್ರಾಯ ಸಾಮಗಾಯತ' ಎಂದು ವೇದವಿದ್ದರೆ 'ಬಲಯೇಽಥರ್ವ ಗಾಯತ' ಇತ್ಯಾದಿಯಾಗಿ—ಪಠಿಸುತ್ತಿದ್ದರೆಂದು ಹೇಳುವುದರ ಮೂಲಕವಾಗಿ ಸೂಚಿಸುವರು. ಹೀಗೆ ಪ್ರಭುತ್ವಮಾಡುವವರ ಎಲ್ಲಾ ಮಾರ್ಗಗಳೂ ಜನರಿಗೆ ಆದರಣೀಯವಾಗುತ್ತಿರಲು

ಅವರ ಕಾವ್ಯಮಾರ್ಗವು ನಮ್ಮಿಂದ ಅನುಕರಿಸಲ್ಪಡುತ್ತಿರುವುದೆಂದರೆ ಆಶ್ಚರ್ಯವೇನು? ಇದರಿಂದ ಈ ಕಲ್ಪನಾಕಥೆಗಳು ತಂಡತಂಡವಾಗಿ ಹುಟ್ಟುತ್ತಿರುವುವು. ಓದುವರೂ ಹಾಗೆಯೇ. ವಿನಯ(ಎಂದರೆ ಇಂಗ್ಲಿಷಿನ education)ಮಾರ್ಗವು ಬೇರೆಯಾದ ಹಾಗೆಲ್ಲವೂ ಮನಸ್ಸ್ಥಿತಿಯೂ ಬೇರೆಯಾಗುತ್ತಿರುವುದು. ಈಗ ನಮ್ಮ ಹುಡುಗನೊಬ್ಬನನ್ನು ಹುಟ್ಟಿದಂದಿನಿಂದಲೂ ಇಂಗ್ಲೆಂಡಿನಲ್ಲಿಯೇ ಬಿಟ್ಟು ಅದೇ ವಿನಯಮಾರ್ಗದಿಂದ 'ತರಬಿಯತ್ತು' ಮಾಡುತ್ತ ಬಂದರೆ ಪರಿಣತವಾಗುವ ಅವನ ಮನಸ್ಸ್ಥಿತಿಗೂ ಅದೇ ವಿನಯಮಾರ್ಗದಿಂದ ತರಬಿಯತಾದ ಇಂಗ್ಲಿಷರ ಹುಡುಗನ ಮನಸ್ಸ್ಥಿತಿಗೂ ಬಹುಭೇದವಿರುವುದು. ನಮ್ಮವನ ಮನಸ್ಸ್ಥಿತಿಯಲ್ಲಿ ನಮ್ಮ ಜನಕ್ಕೆ ನೈಸರ್ಗಿಕವಾಗಿ ಬಂದ ಗುಣವೇ ಮುಕ್ಕಾಲೂ ಮೂರುವೀಸಪಾಲೂ ಅನ್ಯದೇಶೀಯವಿನಯಲಬ್ಧವಾದ ಗುಣವು ಎಲ್ಲಿಯೋ ವೀಸಪಾಲೂ ಸೇರಿ ಒಂದು ಮಿಶ್ರಗುಣವು ಹುಟ್ಟುವುದು: ಈ ಮಿಶ್ರಗುಣವೇ ಅವನ ಸಂತತಿಗೂ ನೈಸರ್ಗಿಕವಾಗಿ ಬರುವುದು, ಅದಕ್ಕೂ ಅನ್ಯದೇಶೀಯಸಂಸ್ಕಾರವನ್ನೇ ಕೊಡುತ್ತ ಹೋದರೆ ಅಲ್ಲಿ ಪರಿಣತವಾಗುವ ಮಿಶ್ರಗುಣದಲ್ಲಿ ಅನ್ಯದೇಶೀಯ ಗುಣಾಂಶವು ಇನ್ನೂ ಕೊಂಚ ಹೆಚ್ಚಿ ದೇಶೀಯಗುಣಾಂಶವು ಕಡಮೆಯಾಗುವುದು. ಹೀಗೆಯೇ ಸಂತತಿಯ ಪ್ರಕಾರವಾಗಿ ಅವಿಚ್ಛಿನ್ನವಾಗಿ ನಡೆಯುತ್ತ ಬಂದರೆ ಆರೇಳು ತಲೆಗಳಲ್ಲಿ ಅನ್ಯದೇಶೀಯ ಗುಣವು ಸಂಪೂರ್ಣವಾಗಿ ಬರುವುದು. ಈ ನಿಯಮವು ಮನಸ್ಸ್ಥಿತಿಯ ವಿಚಾರದಲ್ಲಿಯೂ ದೇಹಸ್ಥಿತಿಯ ವಿಚಾರದಲ್ಲಿಯೂ ಏಕರೂಪವಾಗಿರುವುದು. ಇದನ್ನು ನಮ್ಮ ಋಷಿಗಳು ಅನಾದಿಕಾಲದಲ್ಲಿಯೇ ಉಪದೇಶಿಸಿ ಜಾತ್ಯುತ್ಕರ್ಷವಾಗಲೀ ಜಾತ್ಯಪಕರ್ಷವಾಗಲೀ ಸಂಭವಿಸುವುದಕ್ಕೆ ಐದು, ಆರು, ಏಳು ತಲೆಗಳು ಕಳೆಯಬೇಕೆಂದು ಹೇಳಿರುವರು. ಈ ವಿಷಯವು ಈಗಲೀಗ ಪರೀಕ್ಷಿಸಲ್ಪಡುತ್ತಲಿರುವ ಪಶುಬೀಜಮಿಶ್ರಣದಿಂದ ಸ್ಥಿರೀಕೃತವಾಗುತ್ತಿರುವುದು. ಈಗ ಒಂದು ದೇಶದ ಕುರಿಗೆ ಒಂದು ವಿದೇಶದ ಟಗರನ್ನು ಹಾರಿಸಿದರೆ ಹುಟ್ಟುವ ಮರಿಗೆ ತಾಯಿಯ ಗುಣವೇ ಹೆಚ್ಚುಪಾಲೂ ತಂದೆಯ ಗುಣವು ಎಲ್ಲಿಯೋ ಕೊಂಚಪಾಲೂ ಬರುವುದೆಂದೂ, ಹಾಗೆ ಹುಟ್ಟಿದ ಹೆಣ್ಣುಮರಿಗೆ ಮತ್ತೆ ವಿದೇಶದ ಟಗರನ್ನು ಕೊಟ್ಟರೆ ಆಗ ಹುಟ್ಟುವ ಮರಿಯಲ್ಲಿ ತಂದೆಯ ಗುಣವು (ಎಂದರೆ ವಿದೇಶದ ಟಗರಿನ ಗುಣವು) ಇನ್ನೂ ಹೆಚ್ಚುವುದೆಂದೂ, ಹೀಗೆಯೇ ಮಾಡುತ್ತ ಹೋದರೆ ಆರನೆಯ ಏಳನೆಯ ಮರಿಯಲ್ಲಿ ಸಂಪೂರ್ಣವಾಗಿ ವಿದೇಶದ ಜಾತಿಯ ಗುಣವೇ ಬರುವುದೆಂದೂ ಪ್ರತ್ಯಕ್ಷಾನುಭವದಿಂದ ಸಿದ್ಧಾಂತಮಾಡಲ್ಪಡುತ್ತಿರುವುದು. 'ಉಪಕ್ರಮವೆಲ್ಲಿ, ಉಪಸಂಹಾರವೆಲ್ಲಿ? ಮಧ್ಯದಲ್ಲಿ ಇದೆಲ್ಲಿಯ ಕಗ್ಗವು?' ಎಂದು ಕೇಳಬೇಕಾದುದಿಲ್ಲ. ಗುಣದೋಷವಿಚಾರ

ಗಳಿಗೆ ಹೊರಟವರು ತಮ್ಮ ಸ್ಥಾನವನ್ನು ತಿಳಿದುಕೊಳ್ಳಬೇಕು ; ಇಲ್ಲಿಗೆ ಎಡವು ಅಲ್ಲಿಗೆ ಬಲವಾಗುವುದು, ಅಲ್ಲಿಗೆ ಬಲವು ಇಲ್ಲಿಗೆ ಎಡವಾಗುವುದು ; ದೃಷ್ಟಿಸ್ಥಾನಭೇದಜ್ಞಾನ ವಿಲ್ಲದಿದ್ದರೆ ಎಡಗಡೆಯೇ ಎಂದು ಪ್ರತ್ಯಕ್ಷವೇ ಆಗಿರುವುದೆಂದು ಒಬ್ಬನೂ, ಬಲಗಡೆಯೇ ಎಂದು ಪ್ರತ್ಯಕ್ಷವೇ ಆಗಿರುವುದೆಂದು ಇನ್ನೊಬ್ಬನೂ ವೃಥಾವಾದಕ್ಕೆ ಹೋಗಬಹುದು. ಪ್ರಕೃತದಲ್ಲಿ ನಮ್ಮ ಮನಸ್ಸ್ಥಿತಿ ಹಾಗಿರುವುದರಿಂದಲೂ ಅದರಲ್ಲಿ ದೇಶೀಯನೈಸರ್ಗಿಕಾಂಶವೂ ವಿದೇಶೀಯನೈಸರ್ಗಿಕಾಂಶವೂ ಭಿನ್ನಭಿನ್ನಪ್ರಮಾಣಗಳಲ್ಲಿ ಕಲೆತಿರುವುದರಿಂದ ದೃಷ್ಟಿಭೇದವೂ ಹುಟ್ಟುವುದು. ಆದರೆ ವಿದೇಶೀಯವಿನಯಸಂಸ್ಕಾರವನ್ನು (Educational training) ಎಷ್ಟು ಮಟ್ಟಕ್ಕೋ ದೇಶೀಯವಿನಯಸಂಸ್ಕಾರವನ್ನೂ ಅಷ್ಟು ಮಟ್ಟಕ್ಕೇ ಪಡೆದಿರುವವರು ಇದ್ದರೆ ಅವರ ಮನಸ್ಸ್ಥಿತಿ ತಕ್ಕಡಿಯ ಮುಳ್ಳಿನಂತೆ ಇತ್ತಕಡೆಗೂ ಓಲದೆ ಅತ್ತಕಡೆಗೂ ಓಲದೆ ಮಧ್ಯದಲ್ಲಿ ನಿಲ್ಲುವುದರಿಂದ ಅದರಿಂದ ಮೇಲೆ ಹೇಳಿದಂತಹ ಭಿನ್ನಾಂಶಮಿಶ್ರಣಗುಣವು ಇರಲಾರದು. ಪ್ರಾಯಕವಾಗಿ ಅವರ ದೃಷ್ಟಿ ಏಕರೂಪ ವಾಗಿಯೇ ಇದ್ದು ವಿದೇಶೀಯಮಾರ್ಗಗಳಿಂದ ನಮಗೆ ಬಾಧೆಯಾಗದಂತೆ ಎಷ್ಟು ಪ್ರಯೋಜನಗಳು ಆಗಬಹುದು—ಎಂದು ಅವರು ವಿಮರ್ಶಿಸಿ ತೆಗೆಯಬಲ್ಲರು. ಆದರೆ, ಜನರಿಗೆ ಇಲ್ಲದ ಕಟ್ಟಳೆಗಳನ್ನು ತಂದು ಹಾಕುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಒಂದುವೇಳೆ ತಂದುಹಾಕಿದರೆ ಜನರು ನಿರ್ಬಂಧಕ್ಕೆ ಸಿಕ್ಕಿ ಮೇಲೆ ನಟಿಸಿದರೂ ಒಳಗೆ ಆ ಕಟ್ಟಳೆಗೆ ವ್ಯತಿರಿಕ್ತವಾಗಿ ನಡೆದೇನಡೆವರು. ಉದಾಹರಣೆಗಾಗಿ 'ಏಕಾದಶಿಯ ವ್ರತವನ್ನು ಕಯ್ಯಲಾಗುವರು ಮಾಡಿರಪ್ಪಾ' ಎಂದು ಬಿಟ್ಟುಬಿಟ್ಟರೆ ಕಯ್ಯಲಾಗುವುದೋ ಆಗುವುದಿಲ್ಲವೋ ಅದರ ಫಲವು ಐಹಿಕವಾಗಿಯಾಗಲೀ ಆಮುಷ್ಮಿಕವಾಗಿಯಾಗಲೀ ಉಭಯಾತ್ಮಕವಾಗಿಯಾಗಲೀ ತಮಗೆ ಬೇಕೋ ಬೇಡವೋ ಅವರವರೇ ನೋಡಿಕೊಂಡು ಮಾಡುವರು ಮಾಡುವರು, ಬಿಡುವರು ಬಿಡುವರು. ಅದಿಲ್ಲದೆ ಎಲ್ಲರೂ ಮಾಡಿಯೇ ತೀರಬೇಕೆಂದು ಉಪದೇಶಿಸುತ್ತ ಬಂದರೆ ರಹಸ್ಯಭೋಜನವೂ, ಹಾಗದ ಊಟದಕಡೆ ಮುಪ್ಪಾಗದ ಫಲಾಹಾರವೂ, ಭೋಜ್ಯವಾದ ಅನ್ನದ ಸ್ಥಾನದಲ್ಲಿ ತದಷ್ಟಗುಣಗುರುವಾದ ಪಿಷ್ಟಮಯಾಹಾರಗಳೂ ಹೆಚ್ಚುವುವು. ಆದುದರಿಂದ ಯಾರಿಗೇ ಆಗಲೀ ರಾಗಪ್ರಾಪ್ತವಾದ ಕಾರ್ಯಗಳನ್ನು ಮಾಡುವುದಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಅದರಲ್ಲಿ ಪಾಪಾಂಶವು ಸೇರದಹಾಗೆ ನಿಯಮಗಳನ್ನು ಕಲ್ಪಿಸುವುದು ನಮ್ಮ ಅನಾದಿಸಿದ್ಧವಾದ ಮಾರ್ಗವಾಗಿರುವುದು. ಹೀಗಿರುವುದರಿಂದ ಈಗ ಉಪಲಭ್ಯಮಾನಗಳಾಗುತ್ತಿರುವ ನವೀನಗ್ರಂಥಗಳನ್ನು ಓದಿದರೆ ಬಾಧಕವೇನು ? ರಚಿಸಿದರೆ ಪ್ರತ್ಯವಾಯವೇನು ? ಅವರವರು ತೋರಿದ ಹಾಗೆ ಹೊರಡುತ್ತಿರುವರಲ್ಲವೇ—ಎಂದರೆ, ದಿಟವೇ, ಓದು

ವರ ಮನಸ್ಥಿತಿಯೂ ಒಬ್ಬೊಬ್ಬರದು ಒಂದೊಂದು ಪ್ರಕಾರವಾಗಿರುವುದು. ಹೀಗಿರಲು ಲೋಕದಲ್ಲಿ ಇದು ಒಳ್ಳೆಯ ಪದಾರ್ಥವಲ್ಲವೆನ್ನುವುದಕ್ಕೂ ಆಗುವುದಿಲ್ಲ, ಜನರಿಗೆ ಚೆನ್ನಾಗಿ ನೋಡುವುದಕ್ಕೆ ಬಾರದೆಂದೂ ಅಲ್ಲ, ಎಲ್ಲಿ ಹೋದರೂ ಲೋಕದಲ್ಲಿ ಭಿನ್ನರುಚಿ. ಇದು ನಮ್ಮ ಮಾತೇ ಅಲ್ಲ, ಪೂರ್ವಕವಿಗಳೂ ಹೀಗೆಯೇ ಹೇಳುವರು. ಉದಾಹರಣೆಗಾಗಿ ಕಾಳಿದಾಸನು ರಘುವಂಶದ ಆರನೆಯ ಸರ್ಗದಲ್ಲಿ ಹೀಗೆ ಹೇಳುವನು. "ಜನ್ನೆ ಅಂಗರಾಜನನ್ನು ತೋರಿಸಿ, 'ಲೋಕದಲ್ಲಿ ಲಕ್ಷ್ಮಿಯೂ ಸರಸ್ವತಿಯೂ ಭಿನ್ನಭಿನ್ನಸ್ಥಾನಗಳಲ್ಲಿ ನೆಲಸಿರುವರು; ಇವನಲ್ಲಾದರೆ ಅವರಿಬ್ಬರೂ ನಿನಗೆ ಅನುರೂಪವಾಗಿ ನೆಲಸಿರುವರು' ಎಂದು ಹೇಳಲು ಆಗ—

"ಅಥಾಂಗರಾಜಾದವತಾರ್ಯ ಚಕ್ಷುರ್ಯಾಹೀತಿ ಜನ್ಯಾಮವದತ್ಕುಮಾರೀ ।
ನಾಸೌನಕಾಮ್ಯೋನಚವೇದ ಸಮ್ಯಗ್ದ್ರಷ್ಟುಂ ನಸಾಭಿನ್ನರುಚಿರ್ಹಿಲೋಕಃ ॥"

—ಆ ನಂತರದಲ್ಲಿ ಆ ಕುಮಾರಿ ಅಂಗರಾಜನಮೇಲೆ ಪಸರಿದ ಕಣ್ಣನ್ನು ತೆಗೆದು ಜನ್ನೆಗೆ 'ಮುಂದೆ ನಡೆ'ಯೆಂದಳು; ಅವನು ಕಾಮ್ಯನಲ್ಲವೆಂದಲ್ಲ, ಚೆನ್ನಾಗಿ ನೋಡುವುದನ್ನು ಅವಳೂ ಕಾಣಳೆಂದಲ್ಲ, ಆದರೆ ಲೋಕವು ಭಿನ್ನರುಚಿಯುಳ್ಳುದು." ಹೀಗೆ ಭಿನ್ನರುಚಿ ಸ್ವಾಭಾವಿಕವಾಗಿಯೇ ಇರಲು ಅದರಮೇಲೆ ಭಿನ್ನರುಚಿ ಹೊಸಹೊಸತಾದ ರೂಪದಲ್ಲಿ ದೃಷ್ಟವಾಗುವುದಕ್ಕೆ ವಿಪುಲಕಾರಣಗಳಿರಲು ನಮ್ಮ ಗ್ರಂಥಗಳು ಹೀಗೆಯೇ ಇರಬೇಕೆಂದು ಹೇಳುವರು ಯಾರು? ಹಾಗೆ ಹೇಳಿದರೂ ಎಲ್ಲರೂ ಒಪ್ಪುವರೆಂಬುದಕ್ಕೆ ತಾನೇ ಪ್ರಮಾಣವು ಏನು? ತಾವೇ ಕವಿಗಳಾದರೂ ಇನ್ನೊಬ್ಬ ಜಗತ್ಪ್ರಸಿದ್ಧನಾದ ಕವಿಯ ಗ್ರಂಥವನ್ನು ಪಠಿಸುವುದಕ್ಕೆ ಬೇಸರುಹೊಂದುವವರು ಎಷ್ಟು ಮಂದಿಯಿಲ್ಲ? ಉದಾಹರಣೆಗಾಗಿ ಇಂಗ್ಲಿಷು ಕವಿಯಾದ ಲಾರ್ಡ್ ಬೈರನ್ ಎಂಬಾತನು ಯಾವುದೋ ಒಂದು ಪರೀಕ್ಷೆಗೋ ಏನೋ ಹಾರೆಸ್ (Horace) ಎಂಬ ಪ್ರಸಿದ್ಧನಾದ ಕವಿಯ ಗ್ರಂಥವನ್ನು ಓದಬೇಕಾಗಿಬರಲು ಯತ್ನವಿಲ್ಲದೆ ಓದುತ್ತಿದ್ದು ಕೊನೆಗೆ ಆ ಕಾರ್ಯವು ನೆರವೇರಲು,

"Farewell Horace whom I hated so"

—ಎಲೈ ಹಾರೆಸ್ಸಿನ ಗ್ರಂಥವೇ, ನಿನ್ನನ್ನು ನಾನು ಅಷ್ಟು ದ್ವೇಷಿಸುತ್ತಿದ್ದೆನು; ಇನ್ನು ತೊಲಗು, ನಿನಗೆ ನಮಸ್ಕಾರವು, ಎಂದು ಆ ಗ್ರಂಥವನ್ನು ಬೀಸಾಡಿಯೇ ಬಿಟ್ಟನಂತೆ; ಆದರೂ ಆ ಗ್ರಂಥದ ಪಠನದಿಂದ ಪ್ರಯೋಜನವೆಂದು ಅಲ್ಲಿಯವರು ನಿಯಮಿಸಿದ್ದರು. ನಮ್ಮ ವಿದ್ಯಾರ್ಥಿದಶೆಯಲ್ಲಿ ಮದರಾಸಿನ ಎಫ್. ಎ. ಪರೀಕ್ಷೆಗೆ ರೇಖಾಗಣಿತ,

ಬೀಜಗಣಿತ, ತ್ರಿಕೋಣಮಿತಿ (trigonometry) ಇವುಗಳು ಆವಶ್ಯಕವಾಗಿದ್ದುವು. ನಮ್ಮ ಜೊತೆಯವನೊಬ್ಬನು ಅವನ್ನು ಯತ್ನವಿಲ್ಲದೆ ಕಲಿಯುತ್ತಿದ್ದು ಕೊನೆಗೆ ಪರೀಕ್ಷೆಯಲ್ಲಿ ಗಣಿತಭಾಗವು ಮುಗಿದಕೂಡಲೇ. ಇನ್ನೂ ಪರೀಕ್ಷೆ ಅವಶಿಷ್ಟವಾಗಿದ್ದರೂ ಕೂಡ, ತಾನು ಬರೆದಿರುವ ಉತ್ತರವು ಗಣಿತಭಾಗದಲ್ಲಿ ತೇರ್ಗಡೆಯಾಗುವುದಕ್ಕೆ ಸಾಕೆಂದು ತಿಳಿದವರನ್ನು ಕೇಳಿ ತಾನು ಬರೆದಿರುವುದನ್ನು ಹೇಳಿ ಸಿದ್ಧಾಂತಮಾಡಿಕೊಂಡು, ತನ್ನ ಜೊತೆಯ ಅಯ್ದಾರು ಜನರನ್ನು ಬಲಾತ್ಕಾರಮಾಡಿ, 'ಬನ್ನಿರಯ್ಯಾ ವಡೆ ತಿನ್ನೋಣ; ಈ ಹೊತ್ತಿಗೆ ಈ ಗಣಿತ (Mathematics) ಸತ್ತುಹೋಯಿತು' ಎಂದು "ಹೋಟಲಿ"ಗೆ ಕರೆದು ಕೊಂಡು ಹೋಗಿ ಎಲ್ಲರಿಗೂ ವಡೆಗಳನ್ನು ಕೊಡಿಸಿ ತಾನೂ ತಿಂದುದನ್ನು ನಾವು ಬಲ್ಲೆವು. ಆದರೂ ಗಣಿತಸಂಸ್ಕಾರವು ಆವಶ್ಯಕವೆಂದು ಮದರಾಸು ವಿಶ್ವಕಲಾಸಿಲಯದ ಸಭಾಸದರು ನಿಯಮಿಸಿರಲಿಲ್ಲವೇ? ಹೀಗೆಯೇ ಎಷ್ಟೋ ಉಂಟು. ಆದುದರಿಂದ ಕಾವ್ಯಮಾರ್ಗ ದಲ್ಲಿಯೂ ಇಂತಹ ತತ್ತ್ವಗಳೆಷ್ಟೋ ಕಾಣಬರುವುವು. ಪೂರ್ವಪದ್ಧತಿಯನ್ನು ಅನು ಸರಿಸುವರಿಗೆ ಬಹುಕಾಲದ ಅನುಭವ, ವಿನಯ, ಸಂಸ್ಕಾರ, ಅಭಿರುಚಿ, ಇತ್ಯಾದಿಗಳಿಂದ ಕಲ್ಪಿಸಲ್ಪಟ್ಟ ನಿಯಮಗಳು ಸಿದ್ಧವಾಗಿಯೇ ಇರುವುವು. ಅವನ್ನು ಅವರು ಅನುಸರಿಸಿಯೇ ಅನುಸರಿಸುವರು; ಆ ಮಾರ್ಗವನ್ನು ಅವರು ಅನುಸರಿಸುವುದಾಗಿ ತೋರಬಂದರೆ ಅವರು ಅದರಲ್ಲಿ ದಾರಿತಪ್ಪಿದ್ದ ಪಕ್ಷದಲ್ಲಿ ಇವರು ಹೀಗೆ ದಾರಿತಪ್ಪಿರುವರೆಂದು ನಾವೂ ಹೇಳುವ. ಅದಿಲ್ಲದೆ, ಆಧುನಿಕರು ತಮತಮಗೆ ತೋರಿದಂತೆ ಬರೆಯುತ್ತಿರಲು ಅದರ ಮಾರ್ಗ ತತ್ತ್ವವನ್ನು ನಿರ್ಧರಿಸುವವರು ಯಾರು? ಈ ಬೆರಲ ಹೆಸರೇನೆಂದರೆ 'ಅನಾಮಿಕ'ವೆಂಬಂತೆ ಅಂತಹ ಮಾರ್ಗಗಳನ್ನು ಅನಾಮಿಕಮಾರ್ಗಗಳೆನ್ನಬಹುದು. ಪಾಶ್ಚಾತ್ಯದೇಶಗಳಲ್ಲಿಯೇ ಈ ವಿಷಯಗಳಲ್ಲಿ ಇನ್ನೂ ಲಕ್ಷಣಕಲ್ಪನೆಗೆ ಮೀನಮೇಷ ಎಣಿಸುವ ಪದ್ಧತಿಯಿರುವುದು. ಉದಾಹರಣೆಗಾಗಿ, ಷೇಕ್ಸ್ಪಿಯರನ ನಾಟಕಗಳಲ್ಲೆಲ್ಲಾ 'ಹ್ಯಾಮ್ಲೆಟ್' ಅತ್ಯುತ್ತಮ ವಾದುದೆಂದೂ ಅದರಲ್ಲಿ —

"To be or not to be, that is the question"

ಎಂಬ ಭಾಗವು ಶಾಕುಂತಲದ ನಾಲ್ಕನೆಯ ಅಂಕದಲ್ಲಿ ಶ್ಲೋಕಚತುಷ್ಟಯವು ಹೇಗೋ ತದ್ವತ್ತಾಗಿರುವುದೆಂದು ಅಂಗೀಕರಿಸಲ್ಪಟ್ಟಿರುವುದಷ್ಟೆ. ಈ ಭಾಗವನ್ನು ಕುರಿತು ಅಭಿ ನಯಿಸಬೇಕೇ, ನಿಂತು ಅಭಿನಯಿಸಬೇಕೇ, ಪ್ರತ್ಯನಾಗಿ ಅಭಿನಯಿಸಬೇಕೇ—ಇತ್ಯಾದಿ ವಿಚಾರಗಳಲ್ಲಿ ಇನ್ನೂ ಮಿತಿಯಿಲ್ಲದಷ್ಟು ವಿಚಾರಗಳು ಹುಟ್ಟುತ್ತಿರುವುವು. ಹೀಗಿರು ವಾಗ ನಮ್ಮಲ್ಲಿ ಈಗಲೀಗ ಗ್ರಂಥಗಳನ್ನು ರಚಿಸುತ್ತಿರುವವರು ಅನೇಕರು ಇಂಗ್ಲಿಷನ್ನು

ಎಲ್ಲಿಯೋ ಕೊಂಚ ಓದಿಕೊಂಡವರೋ, ಇಲ್ಲದೆ ಓದದೆಯೇ ಇದ್ದರೂ ಇತರವಾದ ದೇಶೀಯ
ಭಾಷೆಗಳಲ್ಲಿಯೇ ಹುಟ್ಟಿರುವ ಗ್ರಂಥಗಳನ್ನು ಪರಿವರ್ತಿಸುವರೋ, ಅವುಗಳ ಛಾಯೆಯನ್ನು
ಅನುಸರಿಸಿ ಬರೆವರೋ,—ಏನೋ ಆಗಿರುವರು. ಅವುಗಳಲ್ಲಿ ಎಷ್ಟು ಉಳಿವುವೋ ಎಷ್ಟು
ಹೋಗುವುವೋ ನೋಡುವ. ಅವನ್ನು ಪರೀಕ್ಷೆಗೆ ಪಠನೀಯಪುಸ್ತಕಗಳನ್ನು ಮಾಡುವ
ರಲ್ಲವೇ, ಎಂದರೆ ಮಾಡಲಿ; ಈ ಹೊತ್ತು ಇದು, ನಾಳೆ ಅದು, ನಾಡಿದ್ದು ಬೇರೆಯೊಂದು,
ಅಲ್ಲಿಗೆ ಏನಾಯಿತು? ಹಿಂದೆ ಪದ್ಯಸಾರ, ವಾಗ್ವಿಧಾಯಿನಿ, ಮೊದಲಾದ ಪುಸ್ತಕಗಳು
ಸರ್ಕಾರದವರಿಂದಲೇ ಮುದ್ರಿಸಲ್ಪಟ್ಟು ಪಠನೀಯಪುಸ್ತಕಗಳಾಗಿದ್ದುವು; ಬಳಿಕ ತಿದ್ದಿದ
ಪದ್ಯಸಾರವು ಬಂತು, ಈಗ ಅದರ ಹೆಸರೇ ಕೇಳಬರುವುದಿಲ್ಲ. ಈ ಹೊಸತಾಗಿ ಹುಟ್ಟು
ತ್ತಿರುವ. ಪುಸ್ತಕಗಳೂ ಹಾಗೆಯೇ ಎನ್ನುವ; ಸವಿಯಾದರೆ ಇಟ್ಟುಕೊಳ್ಳಲಿ, ಕಹಿಯಾದರೆ
ಬಿಟ್ಟುಬಿಡಲಿ. ಅದು ಕಾಲದಿಂದ ನಿರ್ಣೀತವಾಗಬೇಕು.

ಇದೆಲ್ಲವನ್ನೂ ಹೇಳಿಕೊಂಡು ಬಂದುದಕ್ಕೆ ಕಾರಣವೇನೆಂದರೆ, ಈ ವಿದ್ಯುಲ್ಲತೆಯ
ವಿಚಾರವಾಗಿ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಹತ್ತುವರ್ಷಗಳ ಕೆಳಗೆ
ಈ "ಸತೀಹಿತೈಷಿಣೀಗ್ರಂಥಮಾಲೆ"ಯನ್ನೇ ವಿಮರ್ಶಿಸುತ್ತ ಕೆಲವು ಮಾತು
ಗಳನ್ನು ಹೇಳಿದ್ದು (ಕೆಲವು ಮಾತುಗಳೆಂದರೆ. ಕೃಷ್ಣಸೂಕ್ತಿಯ ೧೮ ಪುಟಗಳಲ್ಲಿ
ಅಡಕವಾಗಿದ್ದುವು) ಅದನ್ನೇ ಕೊಂಚ ಹೆಚ್ಚುಕಡಮೆ ಮಾಡಿ ಪುನರ್ಮುದ್ರಣಮಾಡಿ
ರುವರು. ಅವರ 'ಫಕ್ಕೀ' ಕೇವಲವಾಗಿ ಉಚ್ಚವಾದುದರಿಂದಲೂ, ಅವರ 'ವಿಮರ್ಶೆ'
ಯೆಂಬ ಗ್ರಂಥವನ್ನು ಓದುವವು ನಿರ್ಮತ್ಸರರಾಗಿದ್ದರೆ ಅದರಲ್ಲಿ ಆದ್ಯಂತವೂ ವೈದುಷ್ಯವೇ
ಪ್ರತಿಬಿಂಬಿತವಾಗಿರುವುದೆಂದು ಒಪ್ಪಲೇ ಬೇಕಾಗಿರುವುದರಿಂದಲೂ, ಅವರಿಗೆ ನಾವೂ ನಮ್ಮ
ಅಭಿಪ್ರಾಯವನ್ನು ಒಪ್ಪುವ ರೀತಿಯಿಂದಲೇ ತಿಳಿಯಪಡಿಸಬೇಕಾಗಿರುವುದು. ಮುಖ್ಯ
ವಾಗಿ ತಮ್ಮ ಗ್ರಂಥವನ್ನು ವಿದ್ವಾಂಸರು ಓದಿದರೆಂದರೆ ಅದರಿಂದಲೇ ಗ್ರಂಥಕರ್ತೃಗಳಿಗೆ
ಏನೋ ಒಂದು ಸಂತೋಷವಾಗುವುದು. ಅದನ್ನು ಅವರು ಒಪ್ಪಿಕೊಳ್ಳಲಿ, ತಪ್ಪೆಂದು
ಬಿಡಲಿ, ಅದರ ಮಾತು ಬೇರೆ. ಕಾಳಿದಾಸನೂ ಕೂಡ

"ತಂ ಸಂತಃ ಶ್ರೋತುಮರ್ಹಂತಿ ಸದಸದ್ವ್ಯಕ್ತಿಹೇತವಃ।
ಹೇಮ್ನಃ ಸಂಲಕ್ಷ್ಯತೇಹ್ಯಗ್ನೌ ವಿಶುದ್ಧಿಶ್ಶ್ಯಾಮಿಕಾವಿವಾ ॥"

ಅದನ್ನು (ರಘುವಂಶವನ್ನು) ಸದಸದ್ವ್ಯಕ್ತಿ ಹೇತುಗಳಾದ ವಿದ್ವಾಂಸರು ಕೇಳಬೇಕು;
ಚಿನ್ನವು ಶುದ್ಧವಾಗುವುದೂ ಕಪ್ಪುಹೊಂದುವುದೂ ಬೆಂಕಿಗೆ ಹಾಕಿದ ಮೇಲಲ್ಲವೇ,—ಎಂದು

ಹೇಳಲಿಲ್ಲವೇ ? ಯಾರೇ ಆಗಲಿ ತಮ್ಮ ಕೃತಿಯನ್ನು ಚಿನ್ನವೆಂದೇ ರಚಿಸುವರು, ಹಿತ್ತಳೆಯೆಂದರೆ ತಾವೇ ಬೀಸಾಡಿಬಿಡುವರು ; ಆದರೆ ಅದರ ಪರೀಕ್ಷೆ ತಿಳಿವುದು ವಿದ್ವಾಂಸರ ಉಕ್ತಿಯಿಂದ. ಪ್ರಕೃತದಲ್ಲಿ ಶ್ರೀ|| ಅಯ್ಯಂಗಾರ್ಯರು ಈ ವಿದ್ಯುಲ್ಲತೆಯಲ್ಲಿ ''ಲೆಕ್ಚರು''ಗಳು ಹೆಚ್ಚೆಂದು ಹೇಳುವರು ; ಅಹುದು. ಅಂತಹ ಪದ್ಧತಿಯನ್ನು ಒಪ್ಪುವರೂ ಇರಬಹುದು, ಅದು ಅವರಿಗೆ ಆಗಲಿ ಇಲ್ಲ; ಅದನ್ನು ಹೇಗೋ ಓದಿದವರಿಗೆ ಆ ವಿಷಯಗಳು ತಿಳಿಯದಿದ್ದರೆ ತಿಳಿಯಬರಲಿ. ಜಯಂತನು ಜಮಾದಾರನಿಗೆ ಕೊಡುವ ''ಲೆಕ್ಚರು'' ಎಂದರೆ ಅವನು ತಾನು ಉಚ್ಚವರ್ಗದ ಅಧಿಕಾರಿಯೆಂದು ನಟಿಸುತ್ತಿರುವನು ; ಜಮಾದಾರನನ್ನು ಬಯ್ಯಹೋದರೂ ಆಕ್ಷೇಪಿಸಹೋದರೂ ಅವನಿಗೆ ಆಗ ಆಗಬೇಕಾಗಿರುವ ಕೆಲಸವು ಆಗಲಾರದೆ ಹೋಗುವುದು ಅಷ್ಟೇ ಅಲ್ಲದೆ, ಪುರುಷಾಂತರನಂತೆ ವರ್ತಿಸಿದುದಕ್ಕಾಗಿ ದಂಡವೂ ಸಿದ್ಧವಾಗಿಯೇ ಇರುವುದು. ಹೊತ್ತು ಕತ್ತಲೆಯ ಹೊತ್ತಾಗಿದ್ದರೂ ಅವನು ತನ್ನ ಗುಪ್ತವೇಷವನ್ನು ನಿಪುಣದೃಷ್ಟಿಯುಳ್ಳ ಆ ಪೋಲೀಸಿನವನು ಎಲ್ಲಿ ಕಂಡುಕೊಳ್ಳುವನೋ ಎಂದು ಅವನ ಮನಸ್ಸನ್ನು ಬೇರೆಯಕಡೆ ನಿಲ್ಲುವ ಹಾಗೆ ಮಾಡಲು ಏನೋ ಮಿತ್ರನಂತೆ ಮಾತನಾಡಿ, ''ನಮ್ಮ ಹುದ್ದೇದಾರರು (officer) ಒಳ್ಳೆಯವರಪ್ಪ, ಕೊಂಚವೂ ಬಯ್ಯುವುದಿಲ್ಲ, ರೇಗುವುದಿಲ್ಲ, ಸಿಡುಕನ್ನೇ ಅರಿಯರು. ಹೀಗೆ ಮಾಡು, ಹಾಗೆ ಮಾಡು, ಎಂದು ಹಸುಮಗುವಿನ ಹಾಗೆ ಹೇಳಿಕೊಡುವರು'' ಎನ್ನುವಂತೆ ಮಾಡಲು ಹಾಗೆ ಮಾಡಿದನೆಂದರೆ ಆಶ್ಚರ್ಯವಲ್ಲ. ಒಂದುವೇಳೆ. ಮಾತು ಅಷ್ಟಿರಬಾರದು, ಅಡಕವಾಗಿ ಕೊಂಚವೇ ಇದ್ದರೆ ಚೆನ್ನಾಗಿರುವುದು,—ಎಂದು ಹೇಳಬಹುದು ; ಎಷ್ಟಿದ್ದರೆ ಹೆಚ್ಚೋ ಎಷ್ಟಿದ್ದರೆ ಅಡಕವೋ ಎಂಬುದೂ ಯಥಾಪ್ರಕಾರವಾಗಿ ಭಿನ್ನರುಚಿಯ ಪ್ರಸ್ತಾವಕ್ಕೇ ತರುವುದು. ಹರಿಣಿ ಮೇದಿನಿಗೆ ವಿದ್ಯಾಭ್ಯಾಸವಿಚಾರದಲ್ಲಿ ಕೊಡುವ ಲೆಕ್ಚರೆಂದರೆ, ಇದಕ್ಕೂ ಕಾರಣಗಳನ್ನು ಉದಾಹರಿಸಬಹುದು. ಮೊದಲು, ಮೇದಿನಿ ಆಧುನಿಕಶಿಕ್ಷಣವನ್ನು ಪಡೆದವಳಲ್ಲವೆಂದು ಗ್ರಂಥದಿಂದಲೇ ತಿಳಿಯಬರುವುದು ; ಅವಳು ಗುಣವು ಕೇವಲನೈಸರ್ಗಿಕವೇ ಎಂದು ತಿಳಿದಿರುವಳು. ಹರಿಣಿಯಾದರೆ ಅದು ನೈಸರ್ಗಿಕ ಮಾತ್ರವೇ ಅಲ್ಲ, ಶಿಕ್ಷಣಭೇದದಿಂದಲೂ ಭೇದಿಸುವುದೆಂದು ಅವಳಿಗೆ ತಿಳಿಯಪಡಿಸಲು ಯತ್ನಿಸುವಳು. ಇದಲ್ಲದೆ ಗುಣಗಳು ಹುಟ್ಟಿಂದಲೇ ಬರುವುದೆಂದು ಅನೇಕರು ಭಾವಿಸುವರಾದುದರಿಂದ ಅವರಿಗೆ ಅದರಲ್ಲಿ ಉತ್ತರವೂ ದೊರೆವುದು. ಎರಡನೆಯದು, ಹೆಂಗಸರೆಂದರೆ ಮಾತನಾಡುವುದು ಹೆಚ್ಚು; ಬೇಕಾಗಿರಲಿ, ಬೇಡವಾಗಿರಲಿ,—ಅವರಿಗೆ ಎಲ್ಲವೂ ಬೇಕಾದುದೇ. ಸಂದರ್ಭಕ್ಕೆ ಬೇಕಾಗಿ ಯಾರಾದರೂ ಒಂದು ಮಾತು ಹೇಳತೊಡಗಿದರೆ

ಅದಕ್ಕೆ ಅಲ್ಪಸಾಮ್ಯವೋ ಸಣ್ಣಕೊಕ್ಕೆಯೇ ಸಿಕ್ಕಿದೊಡನೆಯೇ ತಾವು ತಮ್ಮ ಮಾತು ತೆಗೆವರು. ಈ ವಿಷಯದಲ್ಲಿ ಶಿಕ್ಷಿತೆಯರು, ಅಶಿಕ್ಷಿತೆಯರು ಎಂಬ ಭೇದವು ಬಹುಳವಾದ ತಾರತಮ್ಯವನ್ನು ಸೂಚಿಸಲಾರದು.

''ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ''

ಜ್ಞಾನವುಳ್ಳವನಾದರೂಕೂಡ ತನ್ನ ಪ್ರಕೃತಿಗೆ ಯಾವುದು ಸದೃಶವೋ ಆ ಚೇಷ್ಟೆಯನ್ನೇ ಮಾಡುವನು ಎಂದು ಭಗವದ್ವಾಕ್ಯವೂ ಇರುವುದು. ಈ ಪ್ರಕೃತಿ ನೈಸರ್ಗಿಕವಾದರೂ ಆಗಬಹುದು, ಸಂಸ್ಕಾರಜನ್ಯವಾದುದಾದರೂ ಆಗಬಹುದು. ಆದುದರಿಂದಲೇ ರಹಸ್ಯವಾದ ವಿಷಯವು ಯಾವುದಾದರೂ ಇದ್ದರೆ ಅದನ್ನು ಹೆಂಗಸರ ಕಿವಿಗೆ ಹಾಕಬೇಡವೆಂದು ದೊಡ್ಡವರು ಹೇಳುವುದು. ಸಾಲದ ಕಡೆಗೆ ಹರಿಣಿಗಿನ್ನೂ ಚಿಕ್ಕ ವಯಸ್ಸು; ಆ ವಯಸ್ಸಲ್ಲಿ ಸ್ವಪ್ರತಿಭೆಯನ್ನೂ ಸ್ವವೈದಗ್ಧ್ಯವನ್ನೂ ತೋರಿಸಿಕೊಳ್ಳಹೋಗುವುದು ಸ್ವಾಭಾವಿಕವಾದುದು. ಹರಿಣಿ ಒಂದೆರಡು ಮಾತನ್ನು ಹೆಚ್ಚಾಗಿ ಆಡಿರಬಹುದು; ಆದರೆ ಅದು ದೋಷವೆನ್ನುವಷ್ಟು ಆಗುವುದೇ? ಕಾಮಪಾಲನು ಭ್ರಮರೆಗೆ ಕೊಡುವ 'ಲೆಕ್ಚರೋ'?—ಎಂದರೆ ಯಾರಾದರೂ ಇನ್ನೊಬ್ಬರನ್ನು ತಿದ್ದುವಾಗ ಆ ಇನ್ನೊಬ್ಬರು ಸುಮ್ಮನೆ ಬೆಪ್ಪಾಗಿ ನಿಂತಿದ್ದರೆ ಎಷ್ಟು ಮಾತಾಡುವರು, ಏನೇನು ಆಡುವರು, ಎಂಬುದನ್ನು ಮನಸ್ಸಿಗೆ ತೆಗೆದುಕೊಂಡರೆ ಇದಕ್ಕೆ ನಾವು ಬೇರೆಯ ಉತ್ತರವನ್ನು ಹೇಳಬೇಕಾದುದಿಲ್ಲ.

ಹರಿಣಿಯಾಡುವ ಮಾತಿನ ವಿಷಯದಲ್ಲಿ ''ನವೀನ ವಿದ್ಯಾಭ್ಯಾಸವನ್ನು ಪಡೆದ ಸ್ತ್ರೀಯರೆಲ್ಲರೂ ಕೆಟ್ಟವರಿರುವರೆಂದು ಗ್ರಂಥಕರ್ತ್ರಿಯವರು ಅಭಿಪ್ರಾಯಪಟ್ಟಿರುವುದು ಸರಿಯೇ'' ಎಂದು ಶ್ರೀ|| ಅಯ್ಯಂಗಾರ್ಯರು ಕೆಲವು ಮಾತುಗಳನ್ನು ಹೇಳುವರು. ಇಲ್ಲಿ ಕೆಟ್ಟವರೆಂದರೆ ನಾನಾವಿಧದ 'ಕೆಟ್ಟತನ'ವಿರಬಹುದು. ಹೇಳಿದ ಮಾತು ಕೇಳದಿದ್ದರೂ, ಉದ್ಧತೆಯಾಗಿ ವರ್ತಿಸಿದರೂ, ಮನೆಯ ಕೆಲಸವನ್ನು ಮಾಡದೆ ಓದಿಬರೆಯುತ್ತಿದ್ದರೂ, ಸಿಕ್ಕಿದ ಕತೆಗಳನ್ನು ಓದುತ್ತಿದ್ದರೂ, ಸೀರೆಯನ್ನು ಕಾಲು ಮುಚ್ಚುವಹಾಗೆ ಉಟ್ಟುಕೊಂಡರೂ, ಕುಪ್ಪಸಗಳನ್ನು ಬಿಟ್ಟು ''ಜಾಕೆಟ್''ಗಳನ್ನು ಹಾಕಿಕೊಂಡರೂ, ಅರಿಶಿನವನ್ನು ತೊಡೆದುಕೊಳ್ಳದಿದ್ದರೂ, ಕುಂಕುಮವನ್ನು ಸಣ್ಣಗಿಟ್ಟುಕೊಂಡರೂ, ನಡೆನುಡಿಗಳಲ್ಲಿ ಗಾಂಭೀರ್ಯ, ಮರ್ಯಾದೆ ಇವುಗಳನ್ನು ಅರಿಯದಿದ್ದರೂ,—ಹೀಗೆ ಏನು ಮಾಡಿದರೂ ಒಬ್ಬರಲ್ಲದಿದ್ದರೆ ಇನ್ನೊಬ್ಬರು 'ಈ ಹಾಳ ಓದು ಬಂದು ಹೆಣ್ಣುಹುಡುಗರು ಹೀಗೆ ಕೆಟ್ಟುಹೋದರು' ಎಂದು ಹೇಳಿಯೇ

ಹೇಳುವರು. ಕೊಂಚ ಹೊಸದಾರಿಯನ್ನು ಯಾರಾದರೂ ತೆಗೆದರೋ ಅವರಿಗಾಗಲೇ ಕೆಟ್ಟತನದ ಆರೋಪವು ಎಲ್ಲಾ ದೇಶಗಳಲ್ಲಿಯೂ ಉಂಟು ; ಉದಾಹರಣೆಗಾಗಿ,—

"Whatever I do and whatever I say,
Aunt Tabitha tells me that is not the way ;
When she was a girl forty summers ago,
Aunt Tabitha tells me they never did so."

—*O. W. Holmes.*

—"ನಾನು ಏನು ಮಾಡಲಿ, ಏನು ಆಡಲಿ, ನಮ್ಮ ಚಿಕ್ಕಮ್ಮನು ಅದು ಹಾಗಲ್ಲ ಎನ್ನುವಳು; ಅವಳು ಹುಡುಗಿಯಾಗಿದ್ದಾಗ, ನಲವತ್ತು ವರುಷದ ಮಾತು, ತಾವು ಹಾಗೆ ಮಾಡುತ್ತಿರಲಿಲ್ಲವೆಂದು ಚಿಕ್ಕಮ್ಮನು ಹೇಳುವಳು" ಎಂದು ಒಬ್ಬ ಅಮೇರಿಕದ ಗ್ರಂಥಕಾರನು ಬರೆವನು. ಒಂದೇ ಪದ್ಧತಿಯೇ ಇರುವ ದೇಶದಲ್ಲಿಯೇ ಹೀಗೆ ; ಇನ್ನು ಮಾತೆತ್ತಿದರೆ ಧರ್ಮ, ಪುಣ್ಯ, ಆಚಾರ, ಈ ಮಾತುಗಳನ್ನು ಹೇಳುವ ನಮ್ಮ ದೇಶದಲ್ಲಿ ಯಾವುದೋ ದೇಶದ ನಡೆನುಡಿಗಳ ಪ್ರಸ್ತಾಪವು ಬಂದರೆ ಹೇಳಬೇಕೇ? ಇದರಿಂದ ಸ್ತ್ರೀ ವಿದ್ಯಾಭ್ಯಾಸವೇ ಹೇಯವೆಂದು ಭಾವನೆಯಾಗುತ್ತಿರುವುದು; ಆ ದೂರನ್ನು ತಪ್ಪಿಸಿಕೊಂಡು 'ಓದಿ ಏನೇನೋ ಬಕ್ಕಬೋರಲು ಬಿದ್ದುಹೋಗುವರು, ಇವಳಲ್ಲಿ ಮಟ್ಟಕ್ಕೆ ಓದು ತನ್ನ ದುಷ್ಟಪರಿಣಾಮವನ್ನು ತೋರಿಲ್ಲ' ಎಂದು ಎಲ್ಲರ ಕಯ್ಯಲ್ಲಿಯೂ ಎನ್ನಿಸಿಕೊಳ್ಳಬೇಕಾದರೆ, ಕಡಿಯಬರಲು ಮೂವತ್ತೆರಡು ಹಲ್ಲುಗಳಿದ್ದರೂ ಯಾವುದಕ್ಕೂ ಸಿಕ್ಕದೆ ಅವುಗಳ ಮಧ್ಯದಲ್ಲಿಯೇ ತಡೆಯಿಲ್ಲದೆ ಜಿಹ್ವೆ ಚರಿಸುವಂತೆ ಚರಿಸುವುದೆಂದರೆ ಬಾಯಮಾತಲ್ಲ. ಹರಿಣಿಯ ಮಾತಿನ ಸಾರವೇ ಅದು. ವಿದ್ಯೆಯಿಂದ ವಿನಯವೂ ವಿನಯದಿಂದ ಪಾತ್ರತೆಯೂ ಬರುವುದೆಂದು ನೀತಿಜ್ಞರು ಹೇಳುವರು; ಹಾಗೆ ವಿದ್ಯೆಯ ಜೊತೆಯಲ್ಲಿ ನಮ್ರತೆ ಬರುವುದು ಎಲ್ಲಿಯೋ ಹತ್ತಕ್ಕೊಂದರಲ್ಲೋ ನೂರಕ್ಕೊಂದರಲ್ಲೋ ಸಾಸಿರಕ್ಕೇ ಒಂದರಲ್ಲೋ. ಅಪಕೀರ್ತಿಗೆ ಪಕ್ಕಾಗಿ ಸ್ತ್ರೀಜನ್ಮವನ್ನೇ ಹಾಳುಮಾಡಿಕೊಳ್ಳುತ್ತಿದ್ದೆಸೆಂದು ಅವಳು ಹೇಳಿದರೆ ಆಶ್ಚರ್ಯವೇನು? ಅಪಕೀರ್ತಿ ಬಂದರೆ ಇನ್ನು ಬದುಕಬೇಕೆ? ಬ್ರಾಹ್ಮಣನ ತೇಜೋವಧೆ ಮಾಡುವೆಯಾ?—ಎಂದು ಲೋಕದಲ್ಲಿ ಎಷ್ಟು ಮಂದಿ ಹೇಳುವುದಿಲ್ಲ? ಬ್ರಾಹ್ಮಣನಿಗೆ ಮಾನಭಂಗವಾದರೆ ಅಶಸ್ತ್ರವಧೆಯಾದಂತೆ—ಎಂದು ನೀತಿಜ್ಞರು ಹೇಳುವುದಿಲ್ಲವೇ? ಬ್ರಾಹ್ಮಣನನ್ನು ವಾದದಲ್ಲಿ ಗೆದ್ದರೆ ಅದರಿಂದ ಅವನಿಗೆ ಮಾನಭಂಗವಾಗುವುದರಿಂದ ಅವನು ತಾನು ಇದ್ದರೂ ಸತ್ತಕೂಟವಾಗಿ ಭಾವಿಸುವನಾದುದರಿಂದ ಅವನಿಗೆ ಅಷ್ಟು ವಿಷಾದವನ್ನು ತಂದುದಕ್ಕಾಗಿ ನೀನು ಉಪವಾಸವ್ರತದ ಪ್ರಾಯಶ್ಚಿತ್ತವನ್ನು ಮಾಡಿಕೋ,—ಎಂದು ಶಾಸ್ತ್ರವು ಹೇಳುವುದಿಲ್ಲವೇ? ಜನರಿಗೆ ಕೊಂಚ

ಸಿಕ್ಕಿದರೆ ಸಾಕು, 'ಅವಳೆಷ್ಟು ಕಲಿತಿದ್ದಾಳೆ ಎಂತೀರಿ?—ಗರತಿಯಾಗಿ ಬಾಳುವುದು ಬೇರೇಕಾಣೆ' ಎಂದು ಮೊಳದುದ್ದ ಮಾತನಾಡಿಬಿಡುವರು. ಷೇಕ್ಸ್‌ಪಿಯರ್ ಕವಿಯೂ ಕೂಡ.—

'Be thou as chaste as ice, as pure as snow, thou shalt not escape calumny." (*Hamlet, Act III, Scene 1*)

—ನೀನು ಹಿಮಗೆಡ್ಡೆಯಷ್ಟು ನಿಷ್ಕಲಂಕೆಯಾಗಿರು, ಹಿಮದ ಹನಿಯಷ್ಟು ಶುದ್ಧೆಯಾಗಿರು, ನೀನು ಬೇರೆ ಮೃಷಾಪವಾದವನ್ನು ತಪ್ಪಿಸಿಕೊಳ್ಳಲಾರೆ.—ಎಂದು ಹೇಳುವನು. ಈ ವಿಷಯದಲ್ಲಿ ಎಲ್ಲಾ ದೇಶದವರ ಮಾತೂ ಒಂದೇ ಆಗುವುದು. ಹೀಗಿರಲು ಹರಿಣಿಯ ಸ್ಥಿತಿಯನ್ನು ನೋಡುವ. ಅವಳು ಮಣಿಮಾಲೆಯೇ ಎಂಬುದರಲ್ಲಿ ಸಂದೇಹವು ತೋರಲಾರದು; ತನ್ನ ಪತಿಯಾದರೆ ತನ್ನ ಪತ್ನಿ ಸತ್ತುಹೋಗಿರುವಳೆಂದು ಕೊಂಡಿರುವನು. ಇತ್ತ ಅವಳ ಸೌಮಂಗಲ್ಯವು ದೃಢವಾಗಿರುವುದು, ಅತ್ತ ಜನರು ಅವಳು ವಿಶ್ವಸ್ತೆಯೆಂದು ಭಾವಿಸುವರು. ಮನೆಗೆ ಬೆಂಕಿಬಿದ್ದು ತಾಯಿಯೂ ಮಗಳೂ ಸುಟ್ಟು ಹೋದರೆಂದು ಎಲ್ಲರೂ ತಿಳಿದಿರುವರು. ಅವಳನ್ನು ಮುಟ್ಟಕ್ಕೆ ಅಮರನಾಥನು ಕದ್ದೊಯ್ಯಲು ಎಲ್ಲೆಲ್ಲಿಯೋ ಬಿದ್ದು ಹೇಗೆಹೇಗೋ ಬಂದು ಗೋಪೀನಾಥರಾಯರ ಪೋಷ್ಯವರ್ಗಕ್ಕೆ ಸೇರಿರುವಳು; ಅವಳು 'ನಾನು ಇಂತಹಳು' ಎನ್ನುವಳೇ—ಕಂಡವರಿಲ್ಲ, ಕೇಳಿದವರಿಲ್ಲ; ಗಂಡಸರ ಮಧ್ಯದಲ್ಲಿ ಓಡಾಡಬೇಕಾಗಿರುವುದು, ನವೀನವಿದ್ಯಾಭ್ಯಾಸವನ್ನು ಮಾಡಬೇಕಾಗಿರುವುದು, ಇವಳು ಮಣಿಮಾಲೆಯಲ್ಲವೆಂಬ ಭಾವನೆಯುವನಾದರೂ ಮತ್ತೆ ಆ ಅಮರನಾಥನ ಪ್ರಾಣಾಪಹಾರಕವಾದ ಹಿಂಸೆ ತಪ್ಪದು; ಅಮರನಾಥನಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಬಾರದೇ—ಎಂದರೆ, ಅವನು ಬಂಧು ಒಂದುಕಡೆ; ಎರಡನೆಯದು, ಬಾಲ್ಯದಲ್ಲಿ ಅವನು ತನ್ನ ಗಂಡನಾಗಬಹುದೆಂಬ ಹಾಗಿತ್ತಾದುದರಿಂದ ದ್ರೌಪದಿಗೆ ಕರ್ಣನಮೇಲೆ ಹೇಗೆ ಒಳಗೇ ಒಂದು ಭಾವವಿಶೇಷವಿತ್ತೋ ಅಂತಹ ಭಾವವಿಶೇಷವು ಒಂದುಕಡೆ: ಅವಳೇನು ಮಾಡಬೇಕು? ಇತ್ತ ತನ್ನ ಸತೀತ್ವವನ್ನು ರಕ್ಷಿಸಿಕೊಳ್ಳಬೇಕು. ಅತ್ತ 'ಪುನರ್ಭೂ' ವೆಂಬ ಅಪವಾದಕ್ಕೆ ಗುರಿಯಾಗಕೂಡದು; ತನಗಾಗಿ ಬಾಲ್ಯದಲ್ಲಿ ಅಷ್ಟು ಪಾಡುಪಡುತ್ತಿದ್ದ ಅಮರನಿಗೆ ತಾನು ಕೃತಘ್ನೆಯಾಗಕೂಡದು, ಮತ್ತೆ ಅವನು ತನ್ನಿಂದ ಕೋರುವ ಸುಖಕ್ಕೆ ಮಾರ್ಗವನ್ನುಕೊಟ್ಟು ತಾನು ಶಾಶ್ವತವಾಗಿ ಹಾಳಾಗಿ ಹೋಗಕೂಡದು; ಸಾಲದಕಡೆಗೋ ಕಾಮಪಾಲನ ಮನೆಯಲ್ಲಿ ಅವಳು ಅಮರನನ್ನು ಮೆಚ್ಚಿಬಂದವಳೆಂದು ಎಲ್ಲರೂ

ತಿಳಿದುಕೊಂಡಿರುವರು. ಅಮರನಿಗೂ ಅವರಿಗೂ ಇರುವ ಬಾಂಧವ್ಯವು ತಾನು ಯಥಾರ್ಥ
ವನ್ನು ಹೊರಕೆಡಹುವುದಕ್ಕೆ ಸಹಕಾರಿಯಾಗಿಲ್ಲ; ತನ್ನ ನಿಜಸ್ಥಿತಿಯನ್ನು ಹೇಳುವಳೇ,—
ನಂಬುವರು ಯಾರು? ಇವಳಿಗೆ ಮಾಯಾಂಗನೆಯೆಂಬ ಹೆಸರು ತಪ್ಪುವುದೇ? ಅಮರಾದಿಗಳಿಗೆ
ತನ್ನಮೇಲೆ ದ್ವೇಷವು ಹುಟ್ಟದಹಾಗೆ ಮಾಡುತ್ತ ಸಾಧ್ಯವಾದರೆ ಅಮರನನ್ನೂ ನೆಟ್ಟಗಾಗು
ವಂತೆ ಮಾಡಬೇಕೆಂದುಕೊಂಡು ಅಸಹಾಯೆಯಾದವಳು ಹೇಗೆ ಮಾಡಬೇಕೋ ಹಾಗೆ
ಮಾಡುತ್ತಿರುವಳು. ಅವಳು ಶಚೀಕಾಂತನ ವಿಷಯದಲ್ಲಿ ತಾನು ಅವನ ಪತ್ನಿಯಾಗಿದ್ದರೆ
ಹೇಗೆ ನಡೆಯಬೇಕೋ ಹಾಗೆ ನಡಿಯಲಿಲ್ಲವೆನ್ನುವುದೇನೋ ಸರಿಯೇ; ಆದರೆ ವರ್ಣಿತ
ವಾಗಿರುವ ಆ ಸಂದರ್ಭದಲ್ಲಿ ಅವಳು ಇನ್ನು ಹೇಗೆ ನಡೆಯಬೇಕು? ಅವನು ವಿದ್ಯುಲ್ಲತೆ
ಯನ್ನು ಮಣಿಮಾಲೆಗೆ ಎರಡನೆಯ ಕಯ್ಯಾಗಿ ಭಾವಿಸಿರುವನೇಹೊರತು, ವಿದ್ಯುಲ್ಲತೆ
ಮಣಿಮಾಲೆಗೆ ಸಮೆಯೆಂದಾಗಲೀ ಉತ್ಕೃಷ್ಟೆಯೆಂದಾಗಲೀ ಭಾವಿಸಿಲ್ಲ. ಮಣಿ
ಮಾಲಾವಿಯೋಗ ದುಃಖವನ್ನು ವಿದ್ಯುಲ್ಲತಾಪಾಣಿಗ್ರಹಣದಿಂದ ಕೊಂಚವಾದರೂ ಶಾಂತ
ಮಾಡಿಕೊಳ್ಳಬೇಕೆಂದು ಅವನು ಇರುವಾಗ ತಾನು ಅವನಿಗೆ ಪರವಶೆಯಾಗಿ ಅವನ
ಭಾವದಲ್ಲಿ ಮೂರ್ತ್ಯಂತರವು ಅಗ್ರಸ್ಥಾನವನ್ನು ಹೊಂದಿರಲು ತಾನು ನೀಚಸ್ಥಾನ
ವನ್ನು ಸಾಕೆಂದು ಕೋರಿದರೆ ಅವನಿಗೆ ಸಂಪೂರ್ಣವಾದ ಸುಖವೋ ಇವಳಿಗೆ
ಸಂಪೂರ್ಣವಾದ ಸುಖವೋ? ಆದುದರಿಂದ ಗೋಪ್ಯವನ್ನು ಇನ್ನೂ ಕೆಲವು ಕಾಲದ
ವರೆಗೆ ರಕ್ಷಿಸಿಕೊಂಡಿದ್ದು ಬಳಿಕ ಎಲ್ಲವೂ ಸರಿಯಾದಮೇಲೆ ಹೇಗೆಮಾಡಬೇಕೋ ಹಾಗೆ
ಮಾಡುವುದು ಇನ್ನೂ ತೃಪ್ತಿಕರವಲ್ಲವೇ? ಆದುದರಿಂದ ಕಾಲಹರಣಮಾಡುತ್ತ ತನ್ನ ಕಾರ್ಯ
ಸಿದ್ಧಿಗೆ ಮಾರ್ಗವನ್ನು ಒಳಗೇ ಗಣಿಸುತ್ತ, ಏನೋ ಆಲೋಚನೆ ತೋರಿದಕೂಡಲೇ
ಯಾರುಯಾರು ತನ್ನ ವಿಷಯದಲ್ಲಿ ಕುತೂಹಲಿಗಳಾಗಿರುವರೋ ಅವರೆಲ್ಲರನ್ನೂ ಮದು
ವೆಯ ಸಂಭ್ರಮದಲ್ಲಿ ಸಿಕ್ಕಿಸಿ ತನ್ನನ್ನು ಯಾರೂ ಹುಡುಕಿ ಹಿಡಿವುದಕ್ಕೆ ಅವಕಾಶ
ವಿಲ್ಲದಂತೆ ಮಾಡಿ ತಾನು ಮರೆಯಾಗುವಳು. ಇದೆಲ್ಲವನ್ನೂ ಮನಸ್ಸಲ್ಲಿಟ್ಟುಕೊಂಡರೆ
ಅವಳ ವಿದ್ಯಾಭ್ಯಾಸದ ವಿಷಯಕವಾದ 'ಚಿಕ್ಕರಿಗೆ' ಅರ್ಥವಾಗುವುದು. ಹೆಂಗಸು ತನ್ನ
ನೆಳಲಿಗೇ ಹೆದರಿಕೊಳ್ಳಬೇಕೆಂದು ದೊಡ್ಡವರು ಹೇಳುವ ಮಾತಿನ ಅರ್ಥವೂ ಇದೇ; ಕೊಂಚ
ತಪ್ಪಿತೋ?—ಬಂತು ಕೆಟ್ಟಹೆಸರು. ಕೆಟ್ಟಹೆಸರೆಂದರೆ ಕಯ್ಯಿಗೂ ಬಾಯಿಗೂ ಸಂಬಂಧಿಸಿ
ದುದೂ ಆಗಬಹುದು, ತದಿತರವಾದ ಮೂರನೆಯ ಕರಣಕ್ಕೆ ಸಂಬಂಧಿಸಿದುದೇ ಆಗ
ಬೇಕೆಂದಲ್ಲ: ಎಷ್ಟೋ ವೇಳೆಗಳಲ್ಲಿ ಕಯ್ಯಿಗೂ ಬಾಯಿಗೂ ಸಂಬಂಧಿಸಿದುದೇ ದಾರುಣತರ
ವಾಗಿರುವುದು.

ಶ್ರೀ|| ಅಯ್ಯಂಗಾರ್ಯರು ಕೆಲವು ವಿಷಯಗಳು ಅಸಂಭವವೆಂದು ತೋರಿಕೊಡುವರು. ಯುದ್ಧಕ್ಕೆ ಆರಂಭವಾಗಿ ಶಸ್ತ್ರಪ್ರಹಾರಕ್ಕೆ ಮೊದಲಾಗಲು ಎರಡು ಸೇನೆಗಳ ಮಧ್ಯದಲ್ಲಿ ಅರ್ಜುನನಿಗೆ ಕೃಷ್ಣನು ಯೋಗಶಾಸ್ತ್ರವೆನಿಸಿದ ಗೀತೆಯನ್ನೇ ಉಪದೇಶಿಸಬಹುದಂತೆ, ಇನ್ನು ಇದೆಲ್ಲವೂ ಏನು? ನಮ್ಮ ಭಾವನೆಗೆ ಅತೀತವಾದುದೆಲ್ಲವೂ ಅಸಂಭವವೇ ಆಗಿ ಕಾಣಬಹುದು; ಆದರೆ ನಮ್ಮ ಜ್ಞಾನಕ್ಕೆ ಕನಸಿನಲ್ಲಿಯೂ ಸಿಕ್ಕದಿರುವುದು ಲೋಕದಲ್ಲಿ ಎಷ್ಟೋ ಇಲ್ಲದಿಲ್ಲ. ದೊಂಬರು ಗಡೆಕಟ್ಟಿ ಆಡುವ ಆಟವು ನೋಡದವರಿಗೆ ಸಂಭವವಾಗಿ ಕಾಣುವುದೇ? ಮಾಡುವುದಕ್ಕೆ ಒಬ್ಬನು ಭೀತನಾಗುವ ಕೆಲಸವನ್ನು ಇನ್ನೊಬ್ಬನು ಸರಾಗವಾಗಿ ಮಾಡುವನು. ಕೆಲವು ಸಂದರ್ಭಗಳಲ್ಲಿ ಯಾವುದು ಅಪಾಯಕರವೆನ್ನುವಹಾಗೆ ಕಾಣುವುದೋ ಕಾರ್ಯಸಿದ್ಧಿಗೆ ಅದೊಂದಲ್ಲದೆ ಉಪಾಯಾಂತರವೇ ಇರಲಾರದು. ಹೆಚ್ಚಿದ ಎಚ್ಚರವು ಹೊರಗಿನವರಿಗೆ ಕುತುಕವನ್ನು ಹೆಚ್ಚಿಸಿ ರಹಸ್ಯವನ್ನು ಭೇದಿಸುವಂತೆ ಮಾಡಬಹುದು; ಗೂಢವಿಪ್ರಿಯಕಾರಿಗಳಿಗೆ ಶಠತ್ವಕ್ಕೆ ಸಮನಾದ ಮಿತ್ರನಿಲ್ಲ. ಕದಿವನು ಬದಿಯಲ್ಲೇ ಇರುವುದುಂಟು, ಸ್ವಾರ್ಥೈಕಪರರಿಗೆ ''ಧಾಂಡಿಗ''ತನವು ಸಂಪೂರ್ಣವಾಗಿರುವುದು. ಅದರಿಂದ ಅವರಿಗಾಗುವ ಜಯವೂ ಕಾರ್ಯಸಿದ್ಧಿಯೂ, ಸಾಧುವೇ ಅಸಾಧುವೇ ಎಂದು ಕಾರ್ಯವನ್ನೂ ಕಾರಣವನ್ನೂ ಸುಮ್ಮನೆ ಅನ್ವೇಷಿಸುವರಿಗೆ ಬೇರೆ ಆಗುವುದೇ ಇಲ್ಲ. ಹಾಗೆಯೇ ಪತ್ರವ್ಯವಹಾರಗಳ ವಿಷಯವೂ ಎನ್ನಬಹುದು. ಪೂರ್ವಪದ್ಧತಿ ಹೋಗಿರುವುದು; ಹೊಸತು ಬರುತ್ತಿರುವುದು. ಕಾಗದಗಳನ್ನು ಬರೆವಾಗ ''ಪ್ರಿಯಮಿತ್ರನೇ,'' ''ಪ್ರಿಯೆಯೇ,'' ''ಪ್ರಿಯರೇ'' ಇತ್ಯಾದಿಯಾಗಿ ಆರಂಭಿಸಿ ''ನಿನ್ನ ಹಿತೇಚ್ಛು, ದೇವದತ್ತ,'' ''ತಮ್ಮ ಭಾರ್ಯೆ, ಶುಭಸುಂದರಿ'', ''ನಿನ್ನ ಪ್ರೇಮಾಕಾಂಕ್ಷಿ, ಕಲಹಂಸ'' ಇತ್ಯಾದಿಯಾಗಿ ಮುಕ್ತಾಯಮಾಡುವುದು ಯಾವ ಪದ್ಧತಿ? ಒಕ್ಕಣೆಯೂ ಹಾಗೆಯೇ ಎನ್ನುವ. ನಡೆವಹಾಗೆ ನಡೆಯಲಿ; ಇಲ್ಲಿ ಪುಣ್ಯವೇನು, ಪಾಪವೇನು? ವಿಧಿಯೇನು, ನಿಷೇಧವೇನು?

ಒಂದು ವಿಷಯವನ್ನು ಮಟ್ಟಕ್ಕೆ ಗ್ರಂಥಕರ್ತ್ರಿ ಕೃತಜ್ಞತೆಯಿಂದ ಸ್ವೀಕರಿಸಿರುವರು. ''ಕಿರುನಗೆ,'' ''ತಲೆದೂಗುವುದು,'' ''ಮಿದುಳು ಹಾರಿಹೋಗುವುದು'' ಇತ್ಯಾದಿಗಳನ್ನು ಎಷ್ಟೋ ಈ ಪುನರ್ಮುದ್ರಣದಲ್ಲಿ ಅವರು ತೆಗೆದುಹಾಕಿರುವರು; ಹಾಗೆಯೇ ಪೂರ್ಣವಿರಾಮ, ಮೊದಲಾದ ಸಂಜ್ಞೆಗಳನ್ನೂ ಎಷ್ಟೋ ತೆಗೆದುಹಾಕಿರುವರು.

ಇನ್ನೆರಡು ವಿಷಯಗಳು—ಒಂದು ದೇಶವನ್ನು ಉದ್ಧರಿಸುವುದು, ಎರಡನೆಯದು ಸಂಸ್ಕೃತಪದಗಳನ್ನು ವಿಶೇಷವಾಗಿ ಪ್ರಯೋಗಿಸಿ ಶೈಲಿಯನ್ನು ತೊಡಕುತೊಡಕಾಗಿ ಮಾಡು

ವುದು. ಈಗ ಎಲ್ಲಿ ನೋಡಿದರೂ ತನ್ನನ್ನಿರಲಿ, ದೇಶವನ್ನು ಉದ್ಧರಿಸುವುದೂ ಭಾಷೆಯನ್ನು ಉದ್ಧರಿಸುವುದೂ, ಇದೇ ಮಾತೇ ಆದುದರಿಂದ ಹರಿಣಿ ಹಾಗೆ ಮಾತನಾಡುವಂತೆ ಮಾಡಿರುವುದು; ಕಾಮಪಾಲನನ್ನು ಪತ್ರಿಕಾಕರ್ತನನ್ನಾಗಿ ಮಾಡಿರುವುದೂ ಧರ್ಮಭವನವನ್ನು ಸ್ಥಾಪಿಸಿದವನನ್ನಾಗಿ ಮಾಡಿರುವುದೂ ಅದಕ್ಕೇ. ನಮ್ಮಲ್ಲಿ ಪೂರ್ವದಿಂದಲೂ ಬಂದುದು ರಾಜಾ(ರಂಜಕನು) ಪ್ರಜಾ (ರಾಷ್ಟ್ರದಲ್ಲಿ ಹುಟ್ಟಿದವನು), ಇಷ್ಟಲ್ಲದೆ ಈಗಳಿನ ಕಿಂಗ್ (king ಅಧಿರಾಜನು) ಸಬ್ಜೆಕ್ಟ್ಸ್ (subjects ವಶವರ್ತಿಗಳು) ಈ ಅಭಿಪ್ರಾಯಗಳೇ ಬಂದಿಲ್ಲ; ಎಲ್ಲರೂ ವಿಷಯದೃಷ್ಟಿಯಿಂದಲೂ (objectively) ವಿಷಯಿದೃಷ್ಟಿಯಿಂದಲೂ (subjectively) ತಾವು ನಿಪುಣತಮಗುಣಾಢ್ಯರಾಗಬೇಕೆಂದು ಪ್ರಯತ್ನಿಸುತ್ತಿದ್ದರೇ ಹೊರತು ಜನಸಮುದಾಯ (ನೇಷನ್ nation) ಎಂಬ ಭಾವನೆಯೇ ಬೇಕಾಗಿರಲಿಲ್ಲ. ಯಾವನಾದರೂ, ತಾನು ಲೋಕವನ್ನು ಉದ್ಧರಿಸುವನೆಂದರೆ ಅವನನ್ನು ಕೋಳಿಯನ್ನೂ 'ಕುಂಪಟಿ'ಯನ್ನೂ ಇಟ್ಟುಕೊಂಡು ಅಭಿಮಾನಿಯಾಗಿದ್ದ ಮುದುಕಿಗೆ ಸಾಟಿಯಾಗಿ ಭಾವಿಸುತ್ತಿದ್ದರು. ಇದು ಸ್ವಾರ್ಥತೆಯೂ ಅಲ್ಲ, ಮಾಧ್ಯಸ್ಥವೂ (indifference) ಅಲ್ಲ; ತೆನೆತೆನೆಯೂ ನೆಟ್ಟಗಿದ್ದರೆ ಬೆಳಸು ಹೇಗಿರುವುದೆಂದು ಕೇಳಬೇಕೇ ?—ಎಂಬ ನ್ಯಾಯವು. ಈಗಲಾದರೆ ಹೊಸತಾದ ಸ್ಥಿತಿಯಲ್ಲಿ ಇಲ್ಲಿ ಹೆಂಗಸರನ್ನು ಉಚ್ಚಸ್ಥಿತಿಗೆ ತರುವರು, ಅಲ್ಲಿ ವಿಶ್ವಸ್ತ್ರೀಯರನ್ನು ಉದ್ಧರಿಸುವರು, ಅತ್ತ ಬಾಲಿಕೆಯರನ್ನು ವಿದ್ಯಾವತಿಯರನ್ನಾಗಿ ಮಾಡುವರು, ಆದರೆ ಅತ್ತ ಜ್ಞಾನಪ್ರಚಾರಣಕ್ಕೆ 'ದೈನಿಕ', 'ಮಾಸಿಕ' (ಹಾಳ ಅಪಾರ್ಥ !) ಪತ್ರಿಕೆಗಳನ್ನು ಹರಡುವರು, ಇದೇ ಆಗಿರುವುದು. ಆ ಗುಂಪಿಗೆ ಸೇರಿದವರು ಅದಕ್ಕೆ ತಕ್ಕ ಮಾತನ್ನೇ ಆಡುವರು. ಪೂರ್ವದ ತೆರದ ಸನ್ಯಾಸವೂ ಸಂಗಪರಿತ್ಯಾಗವೂ ಅವರಿಗೆ ರುಚಿಸದು. ಹರಿಣಿ ಮೇದಿನಿಗೆ ಕೊಟ್ಟ 'ಲೆಕ್ಚರು' ಇದಕ್ಕೇ. ಇನ್ನು ಸಂಸ್ಕೃತವನ್ನು ಸೇರಿಸಿದರೆ ತೊಡಕೆಂದೇ ಭಾವಿಸಕೂಡದು. ಅರ್ಥಗಾಂಭೀರ್ಯವು ಬರಬೇಕಾದರೆ ಅದರಿಂದಲೇ. ಉದಾಹರಣೆಗಾಗಿ—"ಉಂಡುಕೊಂಡು ಹೋಗುವಿರಂತೆ ಬನ್ನಿರಿ" ಎಂದರೆ ಹೇಗಿರುವುದು, "ಭೋಜನಕ್ಕೆ ದಯೆಮಾಡಿಸಬೇಕು" ಎಂದರೆ ಹೇಗಿರುವುದು? ಇಂಗ್ಲೀಷಿನಲ್ಲಿಯೂ ಅಷ್ಟೆ. ಈಗ ಸ್ಕಾಟ್ (Scott) ಬರೆವಾಗ ಎಷ್ಟು ಲ್ಯಾಟಿನ್ ಭಾಷೆಯ ಮೂಲಶಬ್ದಗಳನ್ನು ಸೇರಿಸಿರುವನು, ಅದೇ ಡಿಕ್ಕೆನ್ಸ್ (Dickens) ಮೊದಲಾದವರು ಏಕೆ ಹಾಗೆ ಮಾಡಿಲ್ಲ? ಆದರೆ ಸ್ಕಾಟಿನ ಶೈಲಿ ತೊಡಕುತೊಡಕೇ? ಅದಲ್ಲ, ಇನ್ನೂ ಬೇಕಾದರೆ ದೊಡ್ಡದೊಡ್ಡದಾಗಿರುವ ಸಮಾಸಪದಗಳನ್ನು ಬಿಡಬಹುದು. ಸಂಸ್ಕೃತ ಶಬ್ದಗಳನ್ನೇ ಪ್ರಕೃತಸ್ಥಿತಿಯಲ್ಲಿ ಬಿಡುವುದಕ್ಕಾಗುವುದಿಲ್ಲ. ನಮಗೆ ತಕ್ಕಷ್ಟು ಪರಿಚಯ

ವಿಲ್ಲದಿದ್ದರೆ ಅದು ತೊಡಕೂ ಅಹುದು, ಅಶ್ಲೀಲವಾಗಿಯೂ ತೋರಬಹುದು. ಉದಾಹರಣೆಗಾಗಿ ಹಿಂದೆ ಒಬ್ಬ ವಿದ್ಯಾರ್ಥಿ ವೇಣೀಸಂಹಾರನಾಟಕವನ್ನು ಓದಬೇಕಾಗಿ ಬರಲು ಶಾಸ್ತ್ರಿಗಳು ''ಉದಾಸೀಣೇಸು ತುಮ್ಹೇಸು ಮಹ ಮಣ್ಣು ಣ ಉಣ ಕುಪಿದೇಸು'' (ಉದಾಸೀನೇಷು ಯುಷ್ಮಾಸು ಮಮ ಮನ್ಯುಃ ನ ಪುನಃ ಕುಪಿತೇಷು) ಎಂಬ ದ್ರೌಪದಿಯ ವಾಕ್ಯವನ್ನು ಓದಿದರೆ ಬಿದ್ದುಬಿದ್ದು ನಗುತ್ತಿದ್ದನು. ಅದೇ ಚಾಸರ್ (Chaucer) ಎಂಬ ಇಂಗ್ಲಿಷು ಕವಿಯು ಹಳೆ ಇಂಗ್ಲೀಷಾದ—

Yn thes estaut ther passed ben four yere.

ಎಂಬ ಮಾತನ್ನು ಕೇಳಿದರೆ ಅವನಿಗೆ ಏನೂ ನಗು ಬರುತ್ತಿರಲಿಲ್ಲ. ಇದಕ್ಕೆಲ್ಲಾ ಪೂರ್ವಪರಿಚಯ, ಸುಲಭ ಪರಿಚಯ, ಅಪೂರ್ವಪರಿಚಯ, ಇತ್ಯಾದಿಗಳೇ ಕಾರಣಗಳು. ಅರ್ಥವು ಸಾಮಾನ್ಯವಾಗಿ ಒಂದೇ ಆದರೂ ಅವುಗಳ ಒಳಭೇದವನ್ನು ತೋರಪಡಿಸುವುದಕ್ಕೆ ಬೇರೆಬೇರೆಯ ಶಬ್ದಗಳೇ ಬೇಕು. ಈಗ ಅಮರಕೋಶವನ್ನು ತೆಗೆದುಕೊಂಡರೆ 'ಛಾತ್ರಾನ್ತೇವಾಸಿನೌ ಶಿಷ್ಯೇ' ಎಂದು ಹೇಳುವುದು;— ಎಂದರೆ ಛಾತ್ರ, ಅಂತೇವಾಸಿ, ಈ ಶಬ್ದಗಳು ಶಿಷ್ಯಾರ್ಥದಲ್ಲಿ ಬರುವುವು,—ಎಂದು. ಛಾತ್ರವೆಂದರೆ ಹಿಂದೆ ಮಠಗಳು (ಈಗಲಿನ ಸ್ಕೂಲಿನಂತಹುವು; ಸ್ಕೂಲುಗಳಿಗೆ ಇನ್ನೂ ಮಠಗಳೆಂದು ಹೆಸರಿರುವುದು) ಇದ್ದುವು. ಇವು ಬೌದ್ಧರ ಕಾಲದಲ್ಲಿ ಹೆಚ್ಚಿದುವು. ಅಲ್ಲಿಗೆ ಹೋಗಿ ಓದುಬರೆಹಗಳನ್ನು ಕಲಿಯುತ್ತಿದ್ದವರು ಛಾತ್ರರು; ಶಿಷ್ಯನೆಂದರೆ ವೇದವಿದ್ಯಾರ್ಥಿ; ಅಂತೇವಾಸಿ (apprentice) ಯೆಂದರೆ ಶಿಲ್ಪವಿದ್ಯಾರ್ಥಿ, ಇಂತಹ ಭೇದಗಳನ್ನು ಸೂಚಿಸುವ ಶಬ್ದಗಳು ಬೇಕೇ ಬೇಡವೇ? ಇವೆಲ್ಲವನ್ನೂ ಕನ್ನಡದಲ್ಲಿ ಎಲ್ಲಿ ತರಬೇಕು? ಇದಕ್ಕಾಗಿಯೂ ಇನ್ನೂ ಶಾಸ್ತ್ರಾದಿಗಳ ವಿಚಾರಗಳಿಗೂ ನಾವು ಸಂಸ್ಕೃತಶಬ್ದಗಳನ್ನು ಪ್ರಯೋಗಿಸಲೇಬೇಕಾಗಿ ಬರುವುದು. ಅರ್ಥವು ಗಹನವಾಗುವ ಪಕ್ಷದಲ್ಲಿ ಪ್ರತಿಪುಟದ ಕೆಳಗಡೆ ಟಿಪ್ಪಣಿಗಳನ್ನು ಕೊಟ್ಟು ಬಿಡಬಹುದು. ಕೆಲವು ಕಾಲದವರೆಗೆ ಹೀಗೆ ಮಾಡುತ್ತ ಹೋದರೆ ಬಳಿಕ ಅಂತಹ ಟಿಪ್ಪಣಿಗಳ ಆವಶ್ಯಕತೆಯೂ ಇರಲಾರದು.

ಇಲ್ಲಿ ನಾವು ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರವರನ್ನು ಕೃತಜ್ಞತೆಯಿಂದಲೂ ಸೌಹಾರ್ದದಿಂದಲೂ ಭಾವಿಸಿಯೇ ಈ ಮಾತುಗಳನ್ನು ಹೇಳಿರುವೆವು; ''ವಾದೇವಾದೇ ಜಾಯತೇ ತತ್ತ್ವಬೋಧಃ'' ಎಂಬ ಮಾತನ್ನು ನಾವು ಅವರಿಗೆ ಹೇಳಿಕೊಡಬೇಕಾದುದಿಲ್ಲ. ಕೇವಲಗ್ರಂಥಕರ್ತೃಗಳೇ ಆಗಲಿ, ಗ್ರಂಥಕರ್ತೃಗಳೂ ವಿಮರ್ಶಕರೂ ಎರಡೂ ಆಗಲಿ—

"ಗುಣಿನಾಮಪಿ ನಿಜರೂಪಪ್ರತಿಪತ್ತಿಃ ಪರತ ಏವ ಸಂಭವತಿ।
ಸ್ವಮಹಿಮದರ್ಶನಮಕ್ಷ್ಣೋರ್ಮುಕುರತಲೇ ಜಾಯತೇ ಯಸ್ಮಾತ್ ॥
—ಸುಬಂಧು

ಕಂ ॥ ಗುಣಿಗಳ್ಗಮತ್ತೆ ಪೆರರ। ತ್ತಣಿನೇ ನಿಜರೂಪಮಿಂತದೆಂಬರಿವಕ್ಕುಂ ॥
ಎಣಿಸಲ್ ಕಣ್ಗೀಕ್ಷಿಸೆ ದ। ರ್ಪಣತಳದೊಳ್ ತನತು ಮಹಿಮೆಯಿಂತೆನೆಬಕ್ಕುಂ॥"

ಎಂಬ ನ್ಯಾಯವನ್ನು ಮರೆಯಕೂಡದು. ಷೇಕ್ಸ್ಪಿಯರನೂ ಹೀಗೆ ಹೇಳುವನು—

'For the eye sees not itself,
But by reflection by some other things'

—*J. C., Act 1., Sc. 2.*

'ಕಣ್ಣು ತನ್ನನ್ನು ತಾನೇ ನೋಡಿಕೊಳ್ಳಲಾರದು, ಅದು ವಸ್ತ್ವಂತರಗಳಲ್ಲಿ ಪ್ರತಿಬಿಂಬಿಸುವುದರ ಮೂಲಕವಾಗಿ ಆಗಬೇಕು' ಎಂದು. ಸಾಸಿರ ಉಳಿಯ ಏಟು ತಗುಲಿದರೆ ಒಂದು ಲಿಂಗವೆನ್ನುವರು; ನಾವೂ ದೋಷಜ್ಞರ (ದೋಷವನ್ನು ತಿಳಿಯಬಲ್ಲವರೇ ಸಂಪೂರ್ಣವಿದ್ವಾಂಸರು; ಗುಣಮಾತ್ರವನ್ನು ಅರಿಯಬಲ್ಲವರ ವಿದ್ವತ್ತೆ ಏಕದೇಶವಾಗುವುದು) ಅಪ್ರಿಯಸದೃಶವಾಗಿರುವ ಹಿತವಾಕ್ಯಗಳನ್ನು ಕೇಳಿಕೇಳಿ ನಮ್ಮ ಅಶ್ಲಕ್ಷ್ಣತೆಯನ್ನು ಬಿಟ್ಟು ಸೂನೃತತತ್ತ್ವವನ್ನು ಪಡೆಯಬೇಕಾಗಿರುವುದು.

ಬೆಂಗಳೂರು
ಮಾಘ ಶು॥ ೭
ಅಕ್ಷಯ ಸಂ॥

ನರಹರಿಶರ್ಮಾ.

ಸ್ವ ವಿ ಷ ಯ

ದೇಶಬಾಂಧವರೇ !

"ಶ್ರೇಯಾಂಸಿ ಬಹುವಿಘ್ನಾನಿ" ಎಂಬ ತತ್ವವು ಪ್ರಾಯಃ ಎಲ್ಲರಿಗೂ ತಿಳಿದುದಾಗಿಯೇ ಇರಬೇಕು ! ಆದರೂ ಸ್ವವಿಷಯವಾದ ಒಂದೆರಡು ವಾಕ್ಯಗಳನ್ನು ಸುಹೃದ್ವರ್ಗದವರ ಮುಂದಿಡುವುದು ಅಪ್ರಸ್ತುತವೆನ್ನಿಸಲಾರದಷ್ಟೆ !

ಜನಸಾಮಾನ್ಯವನ್ನು ಬಿಡದೆ ಸುತ್ತಿರುವ, ಹಾಗೂ ಶ್ರೇಯಃ ಸ್ಕಾಮಿಗಳಿಗೆ ವಿಶೇಷವಾಗಿ ತೋರುತ್ತಿರುವ ಆಧ್ಯಾತ್ಮಿಕ, ಆಧಿ ದೈವಿಕ, ಆಧಿಭೌತಿಕಗಳೆಂಬ ತಾಪತ್ರಯಗಳೂ, (ಅದರಲ್ಲಿ, ದೂಷಕರ ದೆಸೆಯಿಂದೊದಗಬಹುದಾದ ಆಧಿಭೌತಿಕ ಸಂತಾಪವೇ ಹೆಚ್ಚಾಗಿದ್ದು, ರೋಗಾದ್ಯುಪದ್ರವರೂಪದ ಆಧ್ಯಾತ್ಮಿಕವೂ, ಘೋರ ಸಂಗ್ರಾಮ ಸಂಬಂಧವಾದ ದುರ್ಭಿಕ್ಷ ಚಿಂತೆಯು ಆಧಿದೈವಿಕವೂ) ಸೇರಿ ಪಿತೃಪಿಣಿ ಯನ್ನು ಬಹುವಿಧದಿಂದ ಪರೀಕ್ಷಿಸಿತೆಂದರೆ ಸಾಕಲ್ಲವೆ ? ಆದರೆ, **"ಧೈರ್ಯಂ ಸರ್ವತ್ರ ಸಾಧಕಂ"** ಎಂಬಂತೆ ಧೈರ್ಯಸ್ಥೈರ್ಯವನ್ನೇ ಹೆಚ್ಚಿಸುತ್ತಿರುವ ಪ್ರಭುಶಕ್ತಿ, ಮಂತ್ರಶಕ್ತಿ, ದೈವಶಕ್ತಿಗಳೆಂಬ ಶಕ್ತಿ ತ್ರಯ ಸಹಾಯವೇ, ತಾಪತ್ರಯ ಕಾರಣಗಳಾದ ವಿಘ್ನಗಳನ್ನು ನಿರ್ವ ಹಿಸಿ, ಸಂಕಲ್ಪಸಿದ್ಧಿಯನ್ನು ಹೊಂದುವಂತೆ ಮಾಡಿ, ಸರ್ವಪ್ರಕಾರ ದಿಂದಲೂ ಸತೀಪಿತೃಪಿಣಿ ಕರ್ತವ್ಯಪರಾಙ್ಮುಖಿಯಾಗದಿರುವಂತೆ ಜಾಗ್ರತವಾಗಿರುವುದೆಂದೂ, ಇಂದಿಗೆ ಕ್ಷುಲ್ಲಕ ಸ್ವಭಾವದಿಂದಿರುವ ಪ್ರತ್ಯೂಹಗಳೇ ಮುಂದೆ ಮಹೋಪಕಾರಿಗಳಾಗುವುವೆಂದೂ, ಇಂದಿನ ಉದಾಸೀನವೇ, ಈಗಳಿನ ತಿರಸ್ಕಾರವೇ ಕಾಲಕ್ರಮ ಸತತೋದ್ಯಮ ಬಲದಿಂದ ಸನ್ಮಾನಯೋಗ್ಯವಾಗದಿರಲಾರವೆಂದೂ ನಿರೀಕ್ಷಿಸುತ್ತಿರು ವೆವು.

ದೇಶೋನ್ನತಿಗೆಂದೇ ಅನೇಕಾನೇಕ ಮಹನೀಯರು, ಬದ್ಧಕಂಕಣ ರಾಗಿ ಕರ್ಮಮಾರ್ಗದಲ್ಲಿ ಮುಂದುಮುಂದಕ್ಕಡರುತ್ತಿರುವುದೂ, ನಡ ನಡುವೆ ಎಡರುಗಳಿಂದ ತೊಡರುತ್ತಿರುವುದೂ ಆರಿಗೂ ತಿಳಿಯದುದಲ್ಲ. ಆದರೂ, "ಅಂತು ಅವಿಶ್ರಾಂತಶ್ರಮದಿಂದ ಅಲೆದಲೆಯುತ್ತಿರುವವರ ಮಹತ್ಪ್ರಯತ್ನದಲ್ಲಿ ಆರ ಅಭ್ಯುದಯವೇ ಮುಖ್ಯ ಗುರಿಯಾಗಿರು ವುದೋ, ಅವರೇ—ಅಂತಹ ಅಬಲೆಯರೇ, ವಿದ್ಯಾಪ್ರಚಾರಕ್ಕೆಂದು ಕೆಲವ ರಾದರೂ ತಮ್ಮ ನಿರೀಕ್ಷೆಗೆ ತಕ್ಕಂತೆ, ಲೋಕಶಿಕ್ಷಣ ಮಾರ್ಗದಲ್ಲಿ ಮುಂದಾಗಿ ನಿಂತು, ಸಹಕರಿಸದಿರುವುದು ಕೇವಲ ವಿಷಾದಕರವೆಂದು" ಹೇಳುತ್ತಿರುವ ನಮ್ಮ ಸದ್ಧರ್ಮ ಭ್ರಾತೃವರ್ಗದವರ ವಚನವನ್ನು ಗೌರ ವಿಸಿ, ಭವಿಷ್ಯಜ್ಜೀವನವನ್ನು ದೇಶಸೇವೆಗಾಗಿಯೇ ವಿನಿಯೋಗಿಸ ಬೇಕೆಂಬ ಸಂಕಲ್ಪದಿಂದ ಬಹುಭಾಷಾವಿಶಾರದರೂ, ಲೋಕಾನುಭವ ಜ್ಞರೂ ಆದ ಧೀಮಂತ-ಶ್ರೀಮಂತರಿಗೆ ತಕ್ಕುದಾಗಿರುವ ಮಹತ್ಕಾರ್ಯ ದಲ್ಲಿ ಕಯ್ಯಾಡಿ, ನಿಂದಾಸ್ತುತಿಗಳಿಗಾಗಿ ಖೇದ ಮೋದಗಳನ್ನು ಹೊಂದುವಂತಹ ಅಭಿಮಾನಪರತೆಯನ್ನು ದೂರದಲ್ಲಿ ಬಿಟ್ಟು, ಈ ಬಗೆಯಿಂದ ಸತೀಹಿತೈಷಿಣಿಯನ್ನು ಉಪಾಸಿಸತೊಡಗಿರುವುದು! ಸತೀಹಿತೈಷಿಣಿಯಾದರೂ ತನ್ನ ಪ್ರಥಮ ವರ್ಷಾಕಾಲ ಧನವನ್ನು ಯಥೋಚಿತವಾಗಿ ವಿನಿಯೋಗಿಸಿರುವಳಲ್ಲದೆ, ದ್ವಿತೀಯ ವರ್ಷಾರಂಭ ದಲ್ಲಿ ಅತ್ಯುಚ್ಚ ಶಿಕ್ಷಣಾಫಲವನ್ನೂ ಅನುಭವಕ್ಕೆ ತರಲು ಸಂಕಲ್ಪಿಸುತ್ತಿ ರುವಳು.

ಭಾಷಾಮಾತೃಸೇವೆಯೇ, ಹಾಗೂ ದೇಶಭಾಷಾಪ್ರಚಾರವೇ ದೇಶೋನ್ನತಿಗೆ ಮೂಲವೆಂಬುದನ್ನು ಪ್ರಾಜ್ಞರೆಲ್ಲರೂ ಒಪ್ಪುವರು. ಆದರೂ ಭಾಷಾಪ್ರಚಾರಕ್ಕೆ, ದೇಶೀಯಭಗಿನಿಯರ ಸೌಜನ್ಯವೇ ಆಶ್ರಯ ವೆಂಬುದನ್ನು ಮತ್ತೆ ಹೇಳಬೇಕೇ? ಆದರೆ, ದೇಶಮಾತೆಯ ಅಂತಸ್ತಾ ಪಕ್ಕೆ ಕಾರಣವಾಗಿ ಸದ್ಯಸ್ಥಿತಿಯಲ್ಲಿ ಸೌಜನ್ಯಕ್ಕೆ ಪ್ರತಿಯಾದ ಅಭಿಮಾ ನಾಸೂಯಾದಿ ದೌರ್ಜನ್ಯವೇ ಮುಂದಿದ್ದು, ಏಕಮತ್ಯವೆಂಬುದನ್ನು ವಾಚ್ಯಾರ್ಥದಲ್ಲಿಯೇ ನಿಲ್ಲಿಸಿರುವುದನ್ನೂ, ಸ್ತ್ರೀಪುರುಷ ವರ್ಗಗಳಲ್ಲಿ

ಪರಸ್ಪರ ಸಹಾನುಭೂತಿಯಾದರೂ ಹೇಗಿರಬಹುದೆಂಬುದನ್ನೂ ವಿಚಾರ ಪರರು ವಿಮರ್ಶಿಸದಿರಲಾರರು !

ಪ್ರಕೃತ ವಿಚಾರದಲ್ಲಿ, ಸಮಸ್ತ ಸುವಿಸಂಗತಿಗೂ ಸಾರಪಾತ್ರವೆನ್ನಿಸುವ ಶೀಲವೇ ಸತ್ಯಕ್ಕೆ ಸಹಚಾರಿಣಿಯೆಂದೂ, ಶೀಲವು ಬಾಲ್ಯ ಸುಶಿಕ್ಷಣದಲ್ಲೇ ಜನಿಸಿ, ವಯೋಧರ್ಮಾನುಗುಣವಾಗಿ ಪ್ರೌಢತೆಯನ್ನು ಹೊಂದತಕ್ಕುದೆಂದೂ, ಶೀಲವಿಲ್ಲದವರಲ್ಲಿ ಸೌಭಾಗ್ಯರೇಖೆಯೂ ಸಲ್ಲದೆಂದೂ, ಸರ್ವತೋಮುಖದಿಂದ ಶೀಲವನ್ನು ಶ್ಲಾಘಿಸುತ್ತಿರುವ ಆರ್ಯನೀತಿಯನ್ನು ಅನುಸರಿಸಿ, **ಸತೀಹಿತೈಷಿಣೀ ಮಾಲೆ**ಯಲ್ಲಿ ಸುಶೀಲೆಯನ್ನೇ ಪ್ರಥಮ ಪುಷ್ಪವಾಗಿಯೂ, ಶೀಲಕ್ಕೆ ಆಶ್ರಯವಾದ ಸತ್ಯವೇ ನಿತ್ಯಾನಂದಪ್ರದನೆಂಬ ಆರ್ಯೋಕ್ತಿಯಿಂದ, ಸತ್ಯದ ಘನತೆಯನ್ನು ಪ್ರದರ್ಶಿಸುವುದಕ್ಕೆಂದು **ಸತೀತ್ವರಕ್ಷಣೆ**(ಸಭಾ)ಯೇ ದ್ವಿತೀಯ **ಪು**ಷ್ಪವಾಗಿಯೂ, ಭ್ರಾತೃ-ಭಗಿನಿಯರ ಹಸ್ತಪ್ರದೇಶದಲ್ಲಿ ಸಮರ್ಪಿತವಾಗಿರುವುದು ವಿದಿತ ವಿಚಾರವಷ್ಟೆ! ಆದರಿನ್ನು, ಶೀಲ-ಸತ್ಯಪ್ರಕಾಶಕ್ಕೆ ಸುಶಿಕ್ಷಾಪೂರ್ವಕ ವಿದ್ಯಾಪ್ರೌಢಿಮೆಯೂ ಸಹಕರಿಸಿದಲ್ಲಿ, ಲೋಕಶಿಕ್ಷಣ ಮಹತ್ಕಾರ್ಯವೂ ಉಚಿತ ರೀತಿಯಲ್ಲಿ ಸುಧಾರಿಸಲ್ಪಡುವುದೆಂಬುದೂ, ಅಂತಿಲ್ಲದ ಅಶಿಕ್ಷಿತ ಭಾಷಾಪಾಂಡಿತ್ಯವು ಮನಸ್ವೀ ವರ್ತನಕ್ಕೆ ಸಹಕಾರಿಯಾಗಬಹುದೆಂಬುದೂ ಲೋಕಾನುಭವಜ್ಞರ ಉಪದೇಶವಾಗಿರುವುದರಿಂದ, ಮಾಲೆಯಲ್ಲಿ ತೃತೀಯ ಪುಷ್ಪವಾಗಿ ವಿದ್ಯುಲ್ಲತೆಯನ್ನೇ ಪ್ರಚಾರಪಡಿಸಿ, ಸ್ತ್ರೀಜನತೆಗೆ ಶಾಂತಿ ಧೃತಿಗಳು ಕಾಂತಿಯನ್ನುಂಟುಮಾಡುತ್ತಿರಲೆಂದು ಪ್ರಾರ್ಥಿಸುತ್ತಿರುವೆವಲ್ಲದೆ, ಜನಸಾಮಾನ್ಯ ವಿಚಾರವಿಮರ್ಶೆಯಿಂದ, ವಿದ್ಯಾರ್ಥಿನಿಯರ, ಗೃಹಿಣಿಯರ, ವಿಯೋಗಿನಿಯರ ಕರ್ತವ್ಯವಿಚಾರವೂ, ಅವರ ಧರ್ಮ, ಧ್ಯೇಯ ಉದ್ಯಮಗಳೆಂತಿರುವುವೆಂಬುದೂ ಪ್ರಕಾಶಕ್ಕೆ ಬರಬೇಕೆಂಬ ಉದ್ದೇಶದಿಂದ ಗುರ್ವನುಗ್ರಹಲಬ್ಧವಾದ **ವಿರಾಗಿಣಿ**ಯೂ, ಚತುರ್ಥ ಪುಷ್ಪಸ್ಥಾನದಲ್ಲಿ ಪ್ರಕಟೀಕೃತವಾಗುತ್ತಿರುವುದು.

ಏತದ್ಗ್ರಂಥಗಳು ಕೇವಲ ಸ್ವೀಕಾರಮಾತ್ರವಾಗಿರದೆ, ಸಮ್ಯಗವಲೋಕನ, ರಸಾಸ್ವಾದನ ಹಾಗೂ ಗುಣಾನುಭವಪೂರ್ವಕ ಸಾರಾಸಾರ

ವಿವೇಚನಾದಿಗಳಿಂದ, ಭ್ರಾಂತ ಭಗಿನಿಯರ ಹೃತ್ಕುಸುಮಗಳೂ, ಸೌಜನ್ಯರಸ ಪರಿಪೂರ್ಣವಾಗಿ, ಪ್ರಸಿದ್ಧ ಭಾರತ ಮಹಿಳೆಯರ ಕರ್ತವ್ಯ ಕ್ಷಮತೆ, ಸ್ವದೇಶವತ್ಸಲತೆ, ಸ್ನೇಹಪರಾಕಾಷ್ಠೆಗಳಲ್ಲಿ ಸ್ವಲ್ಪಕ್ಕೆ ಸ್ವಲ್ಪ ವಾದರೂ ಅನುಸರಿಸುವಂತಾದರೆ, **ಸತೀಹಿತೈಷಿಣಿ**ಯ ಪ್ರಯತ್ನವೂ ಸಾರ್ಥಕವೆಂದೇ ಭಾವವು! ದೈವಕಟಾಕ್ಷದಿಂದ ಅಂತಹ ಸುಯೋಗ ವುಂಟಾಗಬಹುದೆಂದೇ ನಂಬಿ, ಇತೋಪ್ಯತಿಶಯೋತ್ಸಾಹದಿಂದ ಕರ್ಮ ಯೋಗಮಾರ್ಗದಲ್ಲಿ ಮುಂದು ಮುಂದಕ್ಕಡಿಯಿಟ್ಟು, ವಿದ್ಯಾರ್ಥಿಗಳ, ವಿದ್ಯಾರ್ಥಿನಿಯರ ಹಾಗೂ ಪೋಷಕರ, ಶಿಕ್ಷಕರ, ಸುಧಾರಕ ಮಹನೀಯರ ಅವಶ್ಯ ವಿಚಾರವಿಮರ್ಶೆ, ಕರ್ತವ್ಯ ದಕ್ಷತೆಯನ್ನು ಉಚಿತ ರೀತಿಯಲ್ಲಿ, ಹೃದಯಂಗಮ ವಾಣಿಯಲ್ಲಿ, ಸುಲಲಿತ ಶೈಲಿಯಲ್ಲಿ ವ್ಯಕ್ತಪಡಿಸುವ **'ಮಾತೃನಂದಿನಿ', 'ದಕ್ಷಕನ್ಯಾ'** ಎಂಬೀ ಗ್ರಂಥಪುಷ್ಪಗಳೂ ಸುಹೃದ್ಭ್ರಾತೃ ಭಗಿನೀ ಕರಪಲ್ಲವಗಳನ್ನ ಲಂಕರಿಸುವುವು.

ಪ್ರಸ್ತುತ ಸಮಯದಲ್ಲಿ ಪ್ರಕಟಿತವಾಗಿರುವ ವಿದ್ಯುಲ್ಲತಾ ನಾಮಕ ಗ್ರಂಥದ ಶೈಲಿಯನ್ನು ಕಠಿಣವೆಂದೂ, ಸಂಸ್ಕೃತ ಶಬ್ದಸಮಾಸ ಮಯವೆಂದೂ ನಮ್ಮ ದೇಶಬಾಂಧವರು ಆಕ್ಷೇಪಿಸಬಹುದು! ಅಲ್ಲದೆ, ಸುಲಲಿತವಾದ ತಿಳಿಗನ್ನಡದಿಂದಲೇ ರಚಿಯಿಸಲ್ಪಡಬೇಕೆಂದು ಹೇಳುತ್ತಿರುವ ಸುಹೃದರ ಹಿತಸೂಚನೆಯನ್ನು ಅತ್ಯಾದರದಿಂದ ಸಂಗ್ರ ಹಿಸಿರುವೆವು. ಆದರೆ, ಈವರೆಗೂ, ಕೇವಲ ಕರ್ತವ್ಯವಿಚಾರ ವಿಮರ್ಶೆ ಯಲ್ಲಿಯೇ, ಸ್ವಧರ್ಮರಕ್ಷಾಪೂರ್ವಕ ಸ್ವಾರ್ಥಮಾರ್ಗವನ್ನು ದೃಢ ಪಡಿಸುವ ಏಕನಿಷ್ಠೆಯಲ್ಲಿಯೇ, ನಿಶ್ಚಲತೆಯಿಂದಿದ್ದ ಸತೀಹಿತೈಷಿಣಿಗೆ ದೇಶಸೇವಾವ್ರತಸಿದ್ಧಿಸಾಧಕವಾದ ಲೋಕಾನುಭವವಿಚಾರದಲ್ಲ ಅವ ಕಾಶ ದೊರೆತಂತಿಲ್ಲಾ ಕಾಲಕ್ರಮವನ್ನು ಅನುಸರಿಸಿ, ಸುಧಾರಣಾ ಕಾರ್ಯದಲ್ಲಿ, ತಿಳಿಗನ್ನಡವನ್ನೇ ರೂಢಿಗೆ ತರುವಂತೆ ಅಭ್ಯಾಸವೂ ನಡೆ ಯುತ್ತಿರುವುದೆಂಬುದನ್ನು, ವಿರಾಗಿಣೀ ಸಮ್ಯಗವಲೋಕನದಿಂದಲೂ, ಮತ್ತೆ ಪ್ರಕಾಶವಾಗುವ ಗ್ರಂಥಗಳನ್ನು ಸಮಾಲೋಚಿಸುವುದ ರಿಂದಲೂ ತಿಳಿಯದಿರಲಾರದು!

ಸಂಪ್ರಾರ್ಥನೆ

ಸತೀಹಿತೈಷಿಣೀ—ಪ್ರಥಮ ದ್ವಿತೀಯ ಗ್ರಂಥ ಪ್ರಚಾರದಲ್ಲಿ, ದೈವ ಶಕ್ತಿ ಸ್ವರೂಪದಿಂದ ಪ್ರೋತ್ಸಾಹಿಸಿದ, ಧರ್ಮಪ್ರಭು ಸರ್ಕಾರದವರ ಹಾಗೂ, ವಿದ್ಯಾಂಗದವರ ಮಹದಾಶ್ರಯವು, ಉತ್ತರೋತ್ತರಾಭಿವೃದ್ಧಿ ಹೊಂದಿ, ಸರ್ವಪ್ರಕಾರದಿಂದಲೂ ಸತೀಹಿತೈಷಿಣಿಯನ್ನು ಚಿರ ಪ್ರಕಾಶಕಳನ್ನಾಗಿ ಮಾಡುವಂತಾಗಲೆಂದೂ, ದಯಾಮಯಿಯಾದ ಭಗವತೀಮಾತೃ ಕಟಾಕ್ಷವು ಸ್ಥಿರವಾಗಿದ್ದು, ಧರ್ಮಪ್ರಭು ಸರ್ಕಾರವನ್ನೂ, ತದಾಶ್ರಿತರಾದ ಪ್ರಜಾಸಾಮಾನ್ಯವನ್ನೂ ನಿರಂತರವೂ ಸುಕ್ಷೇಮದಿಂದ ಸಂರಕ್ಷಿಸುತ್ತಿರಲೆಂದೂ, ಅನನ್ಯಭಾವದಿಂದ ಜಗಜ್ಜನನೀ ಜನಕರಲ್ಲಿ ಸಂಪ್ರಾರ್ಥಿಸುತ್ತಿರುವೆವು.

ನಂಜನಗೂಡು,
2–12–14

ಸಂಪಾದಯಿತ್ರೀ.

ದ್ವಿತೀಯ ಮುದ್ರಣದ ಪೀಠಿಕೆ

ಈ ಪುಸ್ತಕವು 1914 ನೆ ಇಸವಿ ಡಿಸೆಂಬರ್ ಕೊನೆಯ ವಾರದಲ್ಲಿ ಪ್ರಕಾಶಕ್ಕೆ ಬಂದು, ಮದರಾಸು ಯೂನಿವರ್ಸಿಟಿಯವರಿಂದ 1918 ನೆ ವರ್ಷದ ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಪಠ್ಯಪುಸ್ತಕವಾಗಿ ಅಂಗೀಕೃತವಾಗಿದ್ದಿತಲ್ಲದೆ ಮೈಸೂರು ವಿದ್ಯಾಂಗದವರಿಂದ ಪಾಠಶಾಲೆಗಳ ಉಪಯೋಗಕ್ಕಾಗಿಯೂ ಸ್ವೀಕೃತವಾಗಿದ್ದಿತು. ಇದಕ್ಕಾಗಿ ಮದರಾಸ್ ಲಿಟರೇಚರ್ ಸೊಸೈಟಿಯಿಂದಲೂ, ಧಾರವಾಡ ವಿದ್ಯಾವರ್ಧಕ ಸಂಘದಿಂದಲೂ (1916–17 ನೆ ಇಸವಿಗಳಲ್ಲಿ) ಬಹುಮಾನವು ದೊರೆದಿತು.

ಇದರೊಡನೆಯೇ ಮುದ್ರಿತವಾಗಿದ್ದ (ಸಭಾ, ಭಾಗ II) ವಿರಾಗಿಣಿಯ ಪ್ರತಿಗಳೂ ಇದರ ಮತ್ತು ಚಂದ್ರವದನೆಯ ಪ್ರತಿಗಳೂ ಮುಗಿದುಹೋಗಿ, 1923 ರಲ್ಲಿ ವಿರಾಗಿಣಿಯ ಪುನರ್ಮುದ್ರಣವಾಗಿ ಇವೆರಡೂ ಮುದ್ರಣವಾಗಲು ಅವಕಾಶವಿಲ್ಲದಂತಾಗಿದ್ದಿತು; ಆದರೆ

ಈಗ ದೈವಸಹಾಯದಿಂದಲೂ ದೇಶಬಾಂಧವರ ಸಹಾಯದಿಂದಲೂ ಇದರ ಮುದ್ರಣಕಾರ್ಯವು ಸಾಂಗವಾಯಿತು. ಈ ವಿದ್ಯುಲ್ಲತೆಯ 2 ನೆ ಮುದ್ರಣವು ಕೂಡ, ಆದರೂ ಇನ್ನೂ ಇದರ ಮುಂದಿನ ಭಾಗವು ಹೊರ ಟಿಲ್ಲವೆಂದು ನಮ್ಮ ಗ್ರಾಹಕರೆಲ್ಲರೂ ಕೇಳುತ್ತಿರುವರು. ಮುಂಗಡ ವಾಗಿ ಹಣವನ್ನುಕೊಟ್ಟು ಇದರ ಹಾದಿ ನೋಡಿ ನೋಡಿ ಬೇಸತ್ತ ವರು ಹಲವರು. ಅವರೆಲ್ಲರಲ್ಲಿಯೂ ನಮ್ಮ ಸವಿನಯ ಸಂಪ್ರಾರ್ಥನೆ ಯಿಷ್ಟು.

"ಈ ಜನವರಿಯಿಂದ ಸತೀಹಿತೈಷಿಣಿ, ಪುನಃ ಪ್ರಕಟನ ಕಾರ್ಯದಲ್ಲಿ ಮುಂದಕ್ಕಡಿಯಿಡಲಾಗುವುದೆಂದು ಹೇಳಿದ್ದೆವು, ಪ್ರಕೃತದಲ್ಲಿ ಮೂರು ಪುಸ್ತಕಗಳ ಪುನರ್ಮುದ್ರಣವಾಗಲೇಬೇಕಾದುದರಿಂದ ನಿಧಾನವಾಗಿ ರುವುದಾದರೂ, ಸಲಕರಣೆಗಳನ್ನೆಲ್ಲಾ ಒದಗಿಸಿಕೊಂಡು ಚೈತ್ರ ಶುದ್ಧ ಪೂರ್ಣಿಮೆಯಿಂದ ಮತ್ತೆ ಪ್ರಕಟಗೊಳ್ಳುವಳೆಂದು ನಂಬಿ ಕ್ಷಮಿಸ ಬೇಕು."

ಇನ್ನು ಈ ವಿದ್ಯುಲ್ಲತೆಯ ಮತ್ತು ಇತರ ಪುಸ್ತಕಗಳ ವಿಷಯ ವಾಗಿ ಕೆಲವರು ಮಾಡಿರುವ ವಿಮರ್ಶೆಗಳಲ್ಲಿ ನಮಗೆ ಸರಿದೋರಿದವು ಗಳನ್ನು ಅಗತ್ಯವಾಗಿ ಸ್ವೀಕರಿಸಿಯೂ ಸಾಧ್ಯವಾದಮಟ್ಟಿಗೆ ಇದನ್ನು ಶೋಧಿಸಿಯೂ ಇರುವೆವು. ಇನ್ನುಳಿದ ಆಕ್ಷೇಪಗಳ ವಿಷಯವಾಗಿ ಬಹುಭಾಗಕ್ಕೆಲ್ಲಾ ಪ್ರಸ್ತಾವನೆ—ಉಪೋದ್ಘಾತಗಳಲ್ಲಿಯೇ ಉತ್ತರ ಪ್ರತ್ಯುತ್ತರಗಳಿರುವುವಲ್ಲದೆ, ಇದರ ಮುಂದಿನ ಭಾಗವು ಇಷ್ಟರಲ್ಲಿ ಪ್ರಕಾಶಕ್ಕೆ ಬರುವಂತಿದ್ದು, ಅದರಲ್ಲಿ ಉತ್ತರವು (ಸಮಾಧಾನವು) ಬರು ವುದೆಂದೂ ನಿವೇದಿಸುವೆವು. ಇಷ್ಟುಮಟ್ಟಿಗೆ, ಪುಸ್ತಕಗಳ ಪುನರ್ಮು ದ್ರಣಾದಿಗಳಿಗೆ ಪ್ರೋತ್ಸಾಹಿಸಿ ಸಹಕರಿಸಿದ ನಮ್ಮ ದೇಶಬಾಂಧವ ರೆಲ್ಲರಿಗೂ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಿ ಅವರ ಅಭ್ಯುದಯವನ್ನು ಹಾರೈಸುತ್ತಿರುವೆವು.

ಮೊಕ್ಕಾಂ, ಬೆಂಗಳೂರು,
15—1—1927.

ಹಿತೈಷಿಣಿ.

ಉಪೋದ್ಘಾತ

ಸುಹೃದ್ಬಾಂಧವರೇ! ದೇಶೀಯಭಗಿನಿಯರೇ!!

"ವಿದ್ಯಾ ವಿವಾದಾಯ ಧನಂ ಮದಾಯ, ಶಕ್ತಿಸ್ಸತಾನಾಮಪಿ ಪೀಡನಾಯ। ಖಲಸ್ಯ ಸಾಧೋರ್ವಿಪರೀತಮೇತತ್, ಜ್ಞಾನಾಯ ದಾನಾಯ ಚ ಪಾಲನಾಯ॥" ಎಂಬ ಆರ್ಯೋಕ್ತಿಯು ಲೋಕಸ್ಥಿತಿ ಸ್ವರೂಪ ನಿರೂಪಣವು, ಪ್ರಾಯಃ ವಿಚಾರಪರರಾದ ನಮ್ಮ ಭ್ರಾತೃ ಭಗಿನೀಚಿತ್ತಕ್ಕೆ ವಿದಿತವಾಗಿರಲಾರದೇ?—ಎಂಬುದೇ ನನ್ನ ಭಾವನೆಯಾಗಿರುವುದು.

ಆದರೆ, ವಿದ್ವತ್ಪ್ರಕಾಶಕ್ಕರ್ಹರಾದ ವಿಚಾರಪರರು, ಆತ್ಮೋನ್ನತಿಗೆ ಆಧಾರವಾದ ವಿದ್ಯೆಯ ಗುಣಾಗುಣವಿಮರ್ಶೆಯನ್ನು ಮಾಡಿಯೇ ಇರಬೇಕಲ್ಲವೆ? ವಿದ್ಯಾಧನವನ್ನು ಸಂಪಾದಿಸುವ ಮಾರ್ಗವನ್ನೂ, ಸಹಜ ಮಾರ್ಗದಲ್ಲಿ ಸಂಪಾದಿತವಾದ ವಿದ್ಯಾಧನದ ಪ್ರಯೋಜನಾಂಶಗಳೇನೆಂಬುದನ್ನೂ ತಿಳಿದು, ತದನುಗುಣವಾಗಿ, ಜ್ಞಾನ–ದಾನ–ರಕ್ಷಣಗಳೆಂಬ ತ್ರಿಗುಣ ಸಂಪತ್ತಿಯಿಂದ ಪ್ರಕಾಶಿಸುವುದೇ ಸತ್ಪುರುಷರ ಲಕ್ಷಣವು! ಆದರೆ, ಇದಕ್ಕೆ ಪಡಿಯಾಗಿ ಸದ್ಯಸ್ಸ್ಥಿತಿಯ ವ್ಯಾಸಂಗ ವಿಚಾರವು ಮೇಲೆ ಹೇಳಿರುವ "ವಿದ್ಯಾವಿವಾದಾಯ ಧನಂ ಮದಾಯ ಶಕ್ತಿಸ್ಸತಾನಾಮಪಿ ಪೀಡನಾಯ" ಎಂಬೀ ವಾಕ್ಯವನ್ನು ಅಕ್ಷರಾಕ್ಷರಶಃ ನಿಜವಾಗಿರುವಂತೆ ಮಾಡಿರುವುದೆಂದು ಹೇಳಬೇಕಾಗಿರುವುದು. ಏಕೆಂದರೆ, ಕೇವಲವಾಗಿ ಆಂಗ್ಲಭಾಷಾ ಪಾಂಡಿತ್ಯವೇ ಪ್ರೌಢ ವಿದ್ಯೆಯೆಂದೂ, ಹೂಣಕಲಾಭ್ಯಸನಾಸಕ್ತಿಯೇ ಪರಮಪುರುಷಾರ್ಥಕಲ್ಪದ್ರುಮವೆಂದೂ ನೆರೆನಂಬಿರುವ ಕೆಲವು ಮಂದಿ ಮಹಾಶಯರು, ಅನೂಚೀನವಾಗಿ ನಡೆದುಬಂದಿರುವ ಮುಖ್ಯಾಚಾರಗಳನ್ನುದ್ಘಾಟಿಸುವುದರ ಮೂಲಕ, ತಮ್ಮ ನವನವೀನಾಚಾರಸುಧಾರಣಾ ಮತವನ್ನು ಪ್ರಕಟಿಸುತ್ತಿರುವುದೂ, ಅಂತಹುದರ

ಪರಿಣಾಮಫಲವೇನೆಂಬುದೂ ಸ್ವಲ್ಪಕ್ಕೆ ಸ್ವಲ್ಪವಾದರೂ, ಜನಸಾಮಾನ್ಯಕ್ಕೆ ತಿಳಿಯುದುದಲ್ಲವಷ್ಟೆ! ಎಂತಾದರೂ, ಅಭಿಮಾನಪೂರ್ವಕವಾಗಿ ಅಶಿಕ್ಷಾರೂಪದಿಂದ ಹೊಂದಬಹುದಾದ ಮನಸ್ಸ್ವೇವರ್ತನಕ್ಕೆ ಭಾಷಾಪಾಂಡಿತ್ಯವೂ ನೆರವಾದಂದು, ಜ್ಞಾನ-ಮಾನ-ದಾನಗಳ ರಕ್ಷಣೋಪಾಯ ಮಾರ್ಗವೇನಾಗುವುದೆಂಬುದನ್ನು ಹೇಳಲಾಗುವುದೇ? ಈ ಕಾರಣದಿಂದಲೇ ವರ್ತಮಾನಕಾಲದ ವಿದ್ಯಾಭ್ಯಾಸವೆಂಬ ಶಬ್ದವು ವಿಪರೀತಾರ್ಥಕಲ್ಪನೆಗೆ ಕಾರಣವಾಗಿಯೂ, ಹಾಗೂ ಸ್ತ್ರೀವಿದ್ಯಾಭ್ಯಾಸವೆಂಬುದು ಕೇವಲಭಯಂಕರವಾಗಿಯೂ ಪರಿಣಮಿಸಿರುವುದು. ಈ ಬಗೆಯ ವಿಕಲ್ಪವೇ, ಈ ನಮ್ಮ ಸ್ತ್ರೀಜನಾಂಗವನ್ನೇ ಮೂರ್ಖ ಸಮಾಜದಲ್ಲಿ ನೆಲೆಗೊಳಿಸಿ, ಅವರ ಸತ್ಯ-ಕರ್ತವ್ಯ-ಶಕ್ತಿ-ಭಕ್ತಿಗಳೆಂಬ ಗುಣಗಳನ್ನೂ ಖಂಡಿಸಿ, ದೇಶೋನ್ನತಿಗೆ ಪ್ರಬಲಕಂಟಕವನ್ನೇ ತಂದೊಡ್ಡಿರುವುದೆಂದು ಹೇಳಲು ವಿಷಾದಿಸಬೇಕಾಗಿರುವುದು!

ಪ್ರಕೃತವಿಚಾರದಲ್ಲಿ, ಸ್ತ್ರೀಜನಾಂಗದ ಅಭ್ಯುದಯಕ್ಕೆ ಆವ ಮಾರ್ಗದಲ್ಲಿ ವಿದ್ಯಾರ್ಜನೆಯನ್ನು ಮಾಡಬೇಕೆಂಬುದೂ, ವಿದ್ಯಾವತಿ ಸ್ತ್ರೀಯರಿಂದ ಹೊಂದಬಹುದಾದ ಲೋಕಶಿಕ್ಷಣದ ಉತ್ತಮಫಲವೆಂತಹದೆಂಬುದೂ, ಈ ಕಥಾನಾಯಿಕೆಯ ಶೀಲ-ಉದ್ಯಮಾದಿ ಪಾಂಡಿತ್ಯಪ್ರಭೆಯಲ್ಲಿ ಪ್ರತಿಫಲಿತವಾಗಿರುವುದು. ಅಲ್ಲದೆ, ವಿಯೋಗಿನಿಯರ (ವಿಧವೆಯರ) ಮತ್ತು ವಿದ್ಯಾರ್ಥಿನಿಯರ ಮುಖ್ಯ ಕರ್ತವ್ಯವೇನೆಂಬುದೂ, ಉದ್ದೇಶವೆಂತಿರಬೇಕೆಂಬುದೂ, ಮೋದಿನಿಯಿಂದಲೇ ವ್ಯಕ್ತವಾಗುವುದು! ಪ್ರತಿಯಾಗಿ, ಅಶಿಕ್ಷಿತ ಯುವತಿಯರ ಕಲಾಕೌಶಲ್ಯಾದಿ ನವನವೀನಾಚಾರ ವಿಚಾರವೂ, ಅವರವರ ಭೀಕರ ವರ್ತನವೂ ತತ್ತತ್ಫಲಾನುಭವನಿರೂಪಣವೂ ಭ್ರಮರಮಾಲಿನಿ, ವಿಲಾಸಿನಿಯರಿಂದಲೇ ತಿಳಿಯಬಹುದಾಗಿರುವುದು. ಸಾಲದುದಕ್ಕೆ ಅವ್ಯವಸ್ಥಿತಚಿತ್ತರಾದ ಯುವಕರ ಪಾಂಡಿತ್ಯಪ್ರಭೆಗೆ ಪರಿಣಾಮವೇನಾಗುವುದೆಂಬುದೂ, ಅಮರ-ಗಂಗಾಧರರಿಂದ ತಿಳಿಯಲಾಗುವುದು. ಮತ್ತೆ ವಿಚಾರ ಮಾಡುವಲ್ಲಿ "ಜ್ಞಾನಾಯ ದಾನಾಯಚ ಪಾಲನಾಯ" ಎಂಬ ಉತ್ತರಾರ್ಧವು ಶೀಲ-ಸತ್ಯಾದಿ ಗುಣಕ್ಕಾಶ್ರಯವಾದ ಜ್ಞಾನವನ್ನೂ,

ದಾನ-ಮಾನ-ನಿಧಾನವನ್ನೂ, ತನ್ನಿರೂಪಿತ ರಕ್ಷಣೋಪಾಯವನ್ನೂ ಕಾಮಪಾಲ, ಶಚೀಕಾಂತ, ಜಯಂತ, ಗೋಪೀನಾಥರಿಂದ ಚೆನ್ನಾಗಿ ತಿಳಿಯಲಾದೀತು! ಹೇಗೂ ಒಟ್ಟಿನಲ್ಲಿ, ದೌರ್ಜನ್ಯರೋಗಕ್ಕೆ ಪಕ್ಕಾಗಿರುವ ಸ್ತ್ರೀಜನಾಂಗವನ್ನು ಉದ್ಧರಿಸುವುದಕ್ಕಾಗಲೀ, ಕೆಡಿಸುವುದಕ್ಕಾಗಲೀ, ಪುರುಷರೇ ಕಾರಣರೆಂದು ಹೇಳಿದರೆ ಸಾಕಾಗಿರುವುದು!

ಕೇವಲ ವಿಧಿಯೆಂದು ಸ್ತ್ರೀಯರನ್ನು ನಿರ್ಬಂಧದಲ್ಲಿ ನರಳಿಸುವುದೂ, ಇಲ್ಲವೇ, ತಾವೇ ನಿರ್ಬಂಧದಲ್ಲಿ ಬಿದ್ದು ಒದೆದಾಡುವುದೂ, ಆಚಾರಕ್ಕಾಗಲೀ, ನಾಗರಿಕತೆಗಾಗಲೀ, ದೇಶಭಾಷೋನ್ನತಿಗಾಗಲೀ ಪ್ರತಿಬಂಧಕವಾದುದು. ಪುರುಷವರ್ಗವು, ತಮ್ಮ ಪಾಂಡಿತ್ಯಪ್ರಭೆಯನ್ನು ಸ್ವಾರ್ಥತೆಗೋಸುಗವೇ ಉಪಯೋಗಿಸುವ ಮೂರ್ಖಭಾವವನ್ನುಳಿದು, ಅವಿಚಾರಾಂಧತೆಯಿಂದ ಐಕಮತ್ಯದ ಗಂಧವನ್ನೂ ಗ್ರಹಿಸಲೊಲ್ಲದೆ ದುರ್ಜನೆಯರೆನ್ನಿಸುತ್ತಿರುವ ಸ್ತ್ರೀಯರನ್ನೂ ಸಹಸಾ ಉನ್ನತಸ್ಥಿತಿಗೆ ತರಲು ಪ್ರಯತ್ನಿಸಬೇಕೆಂದೂ, ಹಾಗೆಯೇ ಪ್ರಾಜ್ಞಶಿರೋಮಣಿಗಳಾದ ನಮ್ಮ ಧರ್ಮಭಗಿನಿಯರೂ, ಧರ್ಮಬಂಧುಗಳ ಸದುದ್ಯಮಕ್ಕೆ ಪ್ರೋತ್ಸಾಹಕರಾಗಿ ನಿಂತು, ತಮ್ಮ ದೇಶಭಗಿನಿಯರನ್ನು 'ಆರ್ಯಧರ್ಮಾಚರಣಾನುವರ್ತನವೇ ಅವಶ್ಯಕರ್ತವ್ಯ'ವೆಂದೂ 'ಸ್ವಧರ್ಮಕುಠಾರಿಗಳೆಂಬ ದೂರಿಗೆ ಪಕ್ಕಾಗುವುದು ನೀತಿಯಲ್ಲ'ವೆಂದೂ ಕಾಲೋಚಿತ ಬೋಧೆಯಿಂದೆಚ್ಚರಿಸಿ, ದೇಶಮಾತೆಯನ್ನುದ್ಧರಿಸಬೇಕೆಂದೂ ಪ್ರಾರ್ಥಿಸುವುದೇ ಈ ಗ್ರಂಥರಚನೆಯ ಮುಖ್ಯ ಸಂದೇಶವಾಗಿರುವುದು.

ಭಗವತ್ಕೃಪೆಯಿಂದ, ಉದ್ದೇಶವೇನಾದರೂ ಸಿದ್ಧಿಹೊಂದುವಂತೆ ಕಂಡುಬರುವಲ್ಲಿ, ಸೋದರೀಸೇವೆಯಲ್ಲಿ ಇತೋಪ್ಯತಿಶಯವಾದ ಉತ್ಸಾಹವನ್ನುಹೊಂದಿ, ಮುಂದಿನ ವಿವರವನ್ನೂ ಜಾಗ್ರತೆಯಾಗಿಯೇ ಪ್ರಕಟವಾಗುವಂತೆ ಸರ್ವಪ್ರಕಾರದಿಂದ ಪ್ರಯತ್ನಿಸುವೆನು; ಅಲ್ಲದೆ, ಪ್ರಯತ್ನಫಲವು ಕಯ್ಗೂಡುವಂತೆಲ್ಲಾ, ಶೈಲಿಯೂ ಸುಲಭವಾಗಿ, ವಿಷಯವಿಚಾರವೂ ಬಾಲಬಾಲಿಕೆಯರಿಗೆ ಬೋಧೆಯಾಗುವಂತಾದೀತು! ವಿದ್ಯುಲ್ಲತಾ ಶೈಲಿ ಕಠಿಣವೆಂದಾಕ್ಷೇಪಿಸಬಹುದಾದರೂ, ಕಥಾನಾಯಿಕೆಯ ಹೆಸರಿಗೆ ತಕ್ಕಂತೆ ಪ್ರೌಢವಿದ್ಯಾವತಿಯರಿಗೆ ಉಪಹಾರ

ವಾಗಬೇಕೆಂಬ ಸಂಕಲ್ಪವೇ ಮುಂದಾಗಿ, ಶೈಲಿಯೂ ಪ್ರೌಢವಾಗಿರ ಬೇಕೆಂಬುದೇ ಸದ್ಯದ ಸಮಾಧಾನವಾಗಿರುವುದು. ಇದಕ್ಕಾಗಿ ವಾಚಕ ರಲ್ಲಿ ಕ್ಷಮೆಯನ್ನೂ ಪ್ರಾರ್ಥಿಸುವುದಾಗಿರುವುದು.

ಈ ಗ್ರಂಥರಚನೆಯಲ್ಲಿ ಅಜ್ಞಾತಗಳಾದ ಅನೇಕ ದೋಷಗಳಿರ ಬಹುದಾದರೂ, ಕೇವಲ ಬಾಲಿಶ ವಿದ್ಯಾರ್ಥಿನಿಯ ಅಲ್ಪಪ್ರಭೆಗೊಳಪಟ್ಟ ಕಾಲ್ಪನಿಕ ಕಾದಂಬರೀ ಕುಸುಮವೆಂದೇ ಭಾವಿಸಿ, ನ್ಯೂನಾತಿರಿಕ್ತ ದೋಷಗಳನ್ನು ಸೂಚಿಸುವುದರಿಂದ, ಭವಿಷ್ಯನ್ಮಾರ್ಗವನ್ನು ಭದ್ರಪಡಿ ಸುವುದೇ ಸುಹೃಲ್ಲಕ್ಷಣವಲ್ಲವೆ?

ಈ ಗ್ರಂಥ ಪರಿಷ್ಕರಣ ಕಾರ್ಯದಲ್ಲಿ, ಹಿತಾಹಿತ ಸೂಚನಾದ್ವಾರಾ ಸಹಕರಿಸಿದ ನಮ್ಮ ಭ್ರಾತೃಗಳ ಉದಾರಗುಣವು ಚಿರಸ್ಮರಣೀಯವಾಗಿ ರುವುದು. ಅಲ್ಲದೆ, ಬಹುಮುಖವಾಗಿ ದೊರೆಯುತ್ತಿರುವ ಭ್ರಾತೃ-ಭಗಿನಿ ಯರ ಪ್ರೋತ್ಸಾಹಬಲವೂ ನನ್ನೀ ಉದ್ಯಮವನ್ನು ಮತ್ತೆಮತ್ತೆ ಹುರಿ ಗೊಳಿಸುತ್ತಿರುವುದು. ಇಂತಿರುವ ದೇಶಬಾಂಧವರ ಸೌಜನ್ಯವು ಉತ್ತರೋತ್ತರಾಭಿವೃದ್ಧಿಹೊಂದುತ್ತ, ದೇಶಭಾಷಾ ಮಾತೃಸೇವೆಯಲ್ಲಿ ಹಿತೈಷಿಣಿಯನ್ನು ಚಿರಪ್ರಕಾಶಕಳನ್ನಾಗಿ ಮಾಡುವಂತೆ ಅನುಗ್ರಹಿಸೆಂದು ಮಾತೃದೈವವನ್ನೇ ಅನನ್ಯಭಾವದಿಂದ ಸಂಪ್ರಾರ್ಥಿಸುತ್ತಿರುವೆನು.

ನಂಜನಗೂಡು,
28—11—1914.

ಇತಿ,
'ಸೋದರೀ'

|| ಶ್ರೀಃ ||

|| ಶ್ರಿಯೈ ನಮಃ ||

ವಿದ್ಯುಲ್ಲತಾ

(ಹರಿಣಿ)

"ಮಾತಾ ದೇವಿ ತ್ವಮಸಿ, ಭಗವಾನ್ವಾಸುದೇವಃ ಪಿತಾ ಮೇ ।
ಜಾತಸ್ಸೋಽಹಂ ಜನನಿ ಯುವಯೋರೇಕಲಕ್ಷ್ಯಂ ದಯಾಯಾಃ ॥
ದತ್ತೋಽಯುಷ್ಮತ್ಪರಿಜನತಯಾ ದೇಶಿಕೈರಪ್ಯತಸ್ತ್ವಂ ।
ಕಿಂ ತೇ ಭೂಯಃ ಪ್ರಿಯಮಿತಿ ಕಿಲ ಸ್ಮೇರವಕ್ತ್ರಾ ವಿಭಾಸಿ॥" (ಶ್ರೀಸ್ತುತಿ, 24)

ಪ್ರಥಮ ಪರಿಚ್ಛೇದ

(ಅಭಿಸಂಧಿ)

ಪ್ರಾತಃಕಾಲ; ಏಳುಘಂಟೆಯಿರಬಹುದು. ರಂಗಪುರದ ಅಂಗಡಿಯ ಬೀದಿಯ ಕೊನೆಯ ಮನೆ. ಮನೆಯ ಮುಂದಣ ಭಾಗವು ಸುಸಜ್ಜಿತವೂ ಬೆಳಗಣ ತಂಗಾಳಿಯಿಂದ ಸುಮನೋಹರವೂ ಆಗಿದ್ದಿತು. ಆದರೂ ನಿಶ್ಶಬ್ದಪ್ರಕೃತಿಯ ನಿಗೂಢಮಂತ್ರಾಲಯವೆನ್ನಿಸುವಂತೆ ಹೊರಗೆ ನೋಡಲು ಶೂನ್ಯಾಲಯದಂತೆ ಕಾಣುತ್ತಿದ್ದಿತು. ಮನೆಗೆ ಅಭಿಮುಖನಾಗಿಯೇ ಬರುತ್ತಿದ್ದ ಇಪ್ಪತ್ತಯ್ದು ವರ್ಷದ ಯುವಕನು ಬಾಗಿಲ ಬಳಿಯಲ್ಲಿ ನಿಂತು, ಬಾಗಿಲನ್ನು ಮೆಲ್ಲನೆ ತಟ್ಟಿದನು. ಉತ್ತರಕ್ಷಣವೇ ಒಳಗಡೆಯ ಅಗ್ಗಳಿ ಸಡಲಿದಂತೆ ಸಪ್ಪಳು ಕೇಳಬಂದಿತು; ಕದವೂ ಕೊಂಚ ಓರೆಮಾಡಲ್ಪಟ್ಟು ಒಳಗಣಿಂದಲೇ ಇಣಿಕಿ ನೋಡಿದ ಕರಾಳ ವ್ಯಕ್ತಿಯೊಂದು ಮೆಲ್ಲನೆ, "ಒಳಗೆ ಬಾ" ಎಂದು ಆಗಂತುಕವ್ಯಕ್ತಿಯನ್ನು ಮನೆಯೊಳಕ್ಕೆ ಬರಮಾಡಿಕೊಂಡ ಕೂಡಲೇ, ಮುನ್ನಿನಂತೆ

ಯೇ ಅಗ್ಗಳಿ ಬಂಧಿಸಲ್ಪಟ್ಟಿತು. ಆಗಂತುಕವ್ಯಕ್ತಿ, ಕರಾಳವ್ಯಕ್ತಿಯಾದ ತನ್ನ ಸ್ನೇಹಿತನೊಡನೆ ಮನೆಯ ವಿಶಾಲವಾದ ಒಳ ಅಂಗಳವನ್ನು ಹೊಕ್ಕು ಹೀಗೆ ಮೆಲ್ಲನೆ ಕೇಳಿದನು :—"ಅಮರನಾಥ ನನ್ನನ್ನು ಇಷ್ಟು ತ್ವರೆಯಿಂದ ಕರೆಯಿಸಿದುದೇಕೆ ?"

ಅಮರ :—(ಆಗಂತುಕವ್ಯಕ್ತಿಯನ್ನು ಕುರಿತು) ಗಂಗಾಧರ ವಿಚಾರಾಸ್ಪದವಾದ ವಿಷಯವು ಒದಗಿರುವುದು.

ಗಂಗಾ :—ಹಾ ! ಹಾಗೆ ?

ಅಮರ :—ಅವನು "ಐ. ಸಿ. ಯಸ್." ನಲ್ಲಿ ತೇರಿದನಷ್ಟೆ! ಇನ್ನು ನಾಲ್ಕಯ್ದು ದಿವಸಗಳಲ್ಲಿಯೇ ಸೀಮೆಯನ್ನೂ ಬಿಡುವನು.

ಗಂಗಾ :—ಬಿಟ್ಟ ಅಷ್ಟಕ್ಕೆ ಭಯವೇನು ?

ಅಮರ :—ಭಯವೆ ? ಅವನು ಇಲ್ಲಿಗೆ ಬಂದುಬಿಟ್ಟಮೇಲೆ ನಮ್ಮ ಕೆಲಸಕ್ಕೆ ಹಾನಿಯಲ್ಲವೆ ?

ಗಂಗಾ :—ಇಲ್ಲಿಗೇಕೆ ಬರುವನು ? ಇಲ್ಲಿ ಅವನ ಆತ್ಮೀಯರಾರು ?

ಅಮರ :—ಏಕೆ ? ಗೋಪೀನಾಥರಾಯರನ್ನು ಮರೆತೆಯೊ ?

ಗಂಗಾ :—ಓಹೋ ! ನಿಜ, ನಿಜ ; ಆದರೆ, ಅವನಿಗೆ ರಾಯರೇನಾಗಬೇಕು ?

ಅಮರ :—ಸಂಬಂಧವೆಂತಹುದೆಂಬುದು ತಿಳಿಯದು. ಹೇಗೂ, ಪ್ರೇಮಪಿತೃ (ಸಾಕುತಂದೆ)ವೆಂದೇ ಹೇಳಬೇಕು.

ಗಂಗಾ :—ಹರಿಣಿಯೋ ?

ಅಮರ :—ಅವಳೇನೋ ಕರುಳ ಸಂಬಂಧಿಯಲ್ಲ.

ಗಂಗಾ :—ಸಂಬಂಧವಿಲ್ಲದಮೇಲೆ ಅವರಲ್ಲಿರುವಳೇಕೆ ?

ಅಮರ :—ಅನಾಥರು ರಾಯರ ಪೋಷ್ಯವರ್ಗದವರಲ್ಲವೇ ?

ಗಂಗಾ :—ಹರಿಣಿ ಅನಾಥೆಯೆ ?

ಅಮರ :—ಅಹುದು.

ಗಂಗಾ :—ಅವಳ ಜನ್ಮಸ್ಥಳ ?

ಅಮರ :—ಕರ್ಣಾಟಕದ ಒಂದು ಹಳ್ಳಿ.

ಗಂಗಾ :—ಕರ್ಣಾಟಕದಿಂದ ಇಲ್ಲಿಗೆ ಹೇಗೆ ಬಂದಳು ?

ಅಮರ :—ಮಾತಾಪಿತೃವಿಯೋಗಾನಂತರದಲ್ಲ ದಾಯಾದರಿಂದ ವಂಚಿಸಲ್ಪಟ್ಟರೆ ಉದರಪೋಷಣಕ್ಕೆ ಅನ್ಯರನ್ನಾಶ್ರಯಿಸುವದು ಸಹಜವು; ದಯಾಳುವಾದ ಶ್ರೀಮಂತನೊಬ್ಬನು, ರಾಯರನ್ನು ನೋಡ ಬಂದವೇಳೆ, ತನ್ನ ಸಂಗಡಲೇ ಅವಳನ್ನೂ ಕರೆದು ತಂದು ಇವರಲ್ಲಿ ಬಿಟ್ಟು ಹೋದನು. ಅಂದಿನಿಂದಲೂ, ರಾಯರು ಸ್ವಮತಸ್ಥೆಯೂ ಅನಾಥೆಯೂ ಆದ ಅವಳ ರಕ್ಷಣಾಭಾರವನ್ನು ತಾವೇ ವಹಿಸಿರುವರು.

ಗಂಗಾ :—ವಿವಾಹಿತೆಯೋ? ಅವಿವಾಹಿತೆಯೋ?

ಅಮರ :—ಪತಿವಿರಹಿತೆ.

ಗಂಗಾ :—ಏನು? ಅವಳು ಚಿಕ್ಕಂದಿನಲ್ಲಿಯೇ ವಿಯೋಗಿನಿಯೆ?

ಅಮರ :—ಅಹುದು, ವಿಯೋಗಿನಿ. ಆದರೆ ನಾಮಮಾತ್ರದಲ್ಲಿ ವಿಯೋಗಿನಿ !! ಗುಣ, ಸ್ವಭಾವ ಇವುಗಳಲ್ಲಿ ವಿನೋದಿನಿ.

ಗಂಗಾ :—ಸರಿಯೆ; ಅವಳು ವಿದ್ಯಾಸಾಗರದ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಮಾಡುತ್ತಿದ್ದಳಲ್ಲವೆ?

ಅಮರ :—ಹೌದು, ನಿಜ! ಈಗ ಇಲ್ಲಿಗೆ ಬಂದಿರುವಳು. ಅವಳು ಬಂದು ನಾಲ್ಕಯ್ದೇ ದಿವಸಗಳಾದುವು.

ಗಂಗಾ :—ಅಲ್ಲಿಯ ವ್ಯಾಸಂಗವೆಲ್ಲವೂ ಮುಗಿಯಿತೋ?

ಅಮರ :—ಆಹಾ! ಅಲ್ಲಿಯ ಸಂಸ್ಕೃತಮಹಾರಾಷ್ಟ್ರಗಳೊಡನೆ ಆಂಗ್ಲಭಾಷೆಯ ಉಚ್ಚವರ್ಗದಲ್ಲ ಉತ್ತೀರ್ಣೆಯಾಗಿ ಬಹುಮಾನದ ಪದಕವನ್ನು ಪಡೆದು, ಪ್ರಶಸ್ತಿಪತ್ರಿಕೆಯೊಡನೆ ಬಂದಿರುವಳು.

ಗಂಗಾ :—ಸಾಧು, ಸಾಧು ! ರಾಯರ ಉದಾರಗುಣವು ಸಾಧುವಾದುದು. ಅನಾಥೆಯೊಬ್ಬಳನ್ನು ಕರೆದುತಂದು, ಉತ್ತಮಶಿಕ್ಷಣೆಯ ವಿದ್ಯಾವತಿಯನ್ನಾಗಿ ಮಾಡಿದ ಸತ್ಸಂಕಲ್ಪವು ಆದರ್ಶಪ್ರಾಯವಲ್ಲವೇ?

ಅಮರ :—ಅವರ ಉದ್ದೇಶವೇ ಬೇರೆ.

ಗಂಗಾ :—ಅದೇನು?

ಅಮರ :—ಅವಳನ್ನು ತಮ್ಮ ಔರಸಪುತ್ರನಿಗೋ ಇಲ್ಲದಿದ್ದರೆ ಆ ಪ್ರೇಮಪುತ್ರನಿಗೋ ವಿವಾಹಮಾಡಿ ಮನೆಯಲ್ಲಿರಿಸಿಕೊಳ್ಳಬೇಕೆಂಬುದೇ.

ಗಂಗಾ:—ಅವಳು ಅದಕ್ಕೆ ಒಪ್ಪುವಳೇ?

ಅಮರ:—ಅದು ಊಹೆಗೆ ವಿಚಾರಿದುದು.

ಗಂಗಾ:—ಆದರೆ, ಇನ್ನು ವಿಳಂಬಮಾಡುವುದು ಕಾರ್ಯ ಹಾನಿಗೇ ಕಾರಣವು.

ಅಮರ:—ಅದಕ್ಕೋಸುಗವೇ ಈಗಲೇ ನಿನ್ನನ್ನು ಬರಮಾಡಿ ದುದು.

ಗಂಗಾ:—ಸರಿ, ಸರಿ! ಈಗ ಅವಳನ್ನು ಕದ್ದೊಯ್ಯುಬಿಡ ಬಹುದು; ಆದರೆ ಈ ಮನೆಯಲ್ಲಿಯೇ ಇರಿಸುವುದು ಹೇಗೆ? ಒಂದು ವೇಳೆ ಎರಡನೆಯ ಮಣಿಮಾಲೆಯಾದರೆ ಗತಿಯೇನು?

ಅಮರ:—ಗಂಗಾಧರ! ಮಣಿಮಾಲೆಯನ್ನು ಒಯ್ಯುವ ಭಾರ ವನ್ನು ಸೇವಕರಿಗೆ ವಹಿಸಿದ್ದುದರಿಂದ ಕೈವಿಚಾರಲು ಅವಕಾಶವಾಯಿತು. ಈಗ ಹಾಗಾಗಲಾರದು.

ಗಂಗಾ:—ಅವಳೇ ಇವಳಾಗಿರಬಾರದೇಕೆ,—ಎಂದು ನನಗೆ ಶಂಕೆ.

ಅಮರ:—ಹಾಗೆ ಊಹಿಸಲು ಅವಕಾಶವಿಲ್ಲ.

ಗಂಗಾ:—ಏಕೆ?

ಅಮರ:—ರೂಪಸಾಮ್ಯದಲ್ಲಿ ಅಲ್ಪಸ್ವಲ್ಪ ಹಾಗೆ ಊಹಿಸಬಹು ದಾದರೂ, ಉಳಿದ ನಡೆ, ನುಡಿ, ಗುಣ, ಸ್ವಭಾವ, ತೇಜೋವಿಶೇಷ ಗಳು,—ಇವುಗಳಿಂದ ಇವಳೊಬ್ಬಳು ಅಪೂರ್ವಮೋಹಿನೀಮೂರ್ತಿಯೇ.

ಗಂಗಾ:—ಹೇಗಾದರೂ ಆಗಲಿ, ಅವಳೇನೋ ಅತಿಚತುರೆ; ಇಲ್ಲಿಟ್ಟರೆ ನಿನಗೆ ದಕ್ಕಳು.

ಅಮರ:—ನಿಜ! ಅವಳನ್ನು ಕಾಮಪಾಲನ ಧರ್ಮಭವನದಲ್ಲೇ ಬಿಡುವುದು ಉತ್ತಮವು; ನಮ್ಮ ಬಲೆಗೆ ಬೀಳುವವರೆಗೂ ಅಲ್ಲಿಯೇ ಇರಲಿ; ಆಮೇಲೆ ನೋಡಿಕೊಳ್ಳುವ!

ಗಂಗಾ:—ಕಾಮಪಾಲನಿಗೆ ನಮ್ಮ ಒಳಸಂಚು ತಿಳಿಯದಂತೆ ಯೂ ಭ್ರಮರೆ, ವಿಲಾಸಿನಿ, ಇವರಿಗೆ ಗುಟ್ಟು ಮುಟ್ಟದಂತೆಯೂ ಇರ ಬೇಕಷ್ಟೆ?

ಅಮರ:—ಕಾಮಪಾಲನಲ್ಲಿ ಸುಳ್ಳುಹೇಳಬೇಕು. ಅವರಿಗೆ ತಿಳಿಸದಿರಬೇಕು.

ಗಂಗಾ:—ಹಾಗೆಯೇ ಮಾಡಬೇಕು; ಅಮರ! ನಿನ್ನನ್ನು ಭ್ರಮರಮಾಲೆ ಇದಿರುನೋಡುತಿರುವಳಲ್ಲ! ಈಗ ಬರಲಾರೆಯೇನು?

ಅಮರ:—ಇಂದು ನಾಳೆ ನೀನೂ ಇಲ್ಲಿಯೇ ಇರುವೆಯಷ್ಟೆ! ಇಲ್ಲಿಯ ಕೆಲಸಗಳನ್ನು ಮುಗಿಸಿ, ಕೂಡಲೇ ಇಬ್ಬರೂ ಹೊರಡುವ.

ಗಂಗಾ:—ಹಾಗೂ ಆಗಬಹುದು. ನಾನಿನ್ನು ಹೊರಡುವೆನು. ವ್ಯವಧಾನವಾದರೆ, ನೀನೇ ಬಂದು ನನ್ನನ್ನು ನೋಡು.

ಅಮರ:—ಅದನ್ನೂ ಹೇಳಬೇಕೆ?

(ಗಂಗಾಧರನು ಹೊರಟು ಹೋದನು.)

ದ್ವಿತೀಯ ಪರಿಚ್ಛೇದ

(ವಸ್ತುವಿಚಾರ)

ಅಪರಾಹ್ಣ, ನಾಲ್ಕು ಘಂಟೆಯ ಸಮಯ! ಸಂಧ್ಯಾನುರಕ್ತನಾಗಿ ಸ್ನೇಹಮಯಿಯ ಸಮಾಲಿಂಗನೋತ್ಸುಕದಿಂದ ತ್ವರೆಗೊಂಡಿದ್ದ ದಿನೇಶನನ್ನು ನೋಡುತ್ತ, ಗೋಪೀನಾಥಬಾಬುವಿನ ಜನಾನಾಮಹಲಿನ ಅಂತಃಪುರದ ಕಿರುಮನೆಯಲ್ಲಿ ಚಿಂತಾಸಕ್ತೆಯಾದ ಹದಿನೆಂಟು ವರ್ಷದ ಯುವತಿಯೊಬ್ಬಳು ಕುರ್ಚಿಯ ಮೇಲೆ ಕುಳಿತಿದ್ದಳು. ಆ ಯುವತಿ ಅಷ್ಟೇನೂ ರೂಪವತಿಯಲ್ಲ; ಆದರೂ, ಆಕೆಯಲ್ಲಿ ನೆಲೆಗೊಂಡಿದ್ದ ಅಸಾಧರಣಕಾಂತಿಯೂ, ಅನುಪಮಸಾರಳ್ಯವೂ ನೋಡುವರ ಮನಸ್ಸನ್ನಾಕರ್ಷಿಸುವಂತಹ ಯಂತ್ರಸಾಧನಗಳೆನಿಸಿದ್ದುವು. ಶ್ರೀಯುತ ರೂಪ, ಗುಣ, ವೈಭವಾದಿ

ಗಳನ್ನು ವಿಶೇಷವಾಗಿ ವರ್ಣಿಸುವ ಕೌಶಲ್ಯವಾಗಲೀ, ಅಭಿರುಚಿಯಾಗಲೀ, ನಮ್ಮಲ್ಲಿಲ್ಲವಾಗಿ ಬಿಟ್ಟುಬಿಡಬೇಕಾಗಿರುವುದು.

ಆ ಯುವತಿ ಗೌರವರ್ಣೆ! ವಯೋನುಗುಣವಾದ ಅಂಗಸೌಷ್ಠವವುಳ್ಳವಳೂ ಅಹುದು; ಉಳಿದ ವಿಷಯಗ್ರಹಣವು ಅವರವರ ಊಹೆಗೇ ಸೇರಿರುವುದು !!

ಆ ಯುವತಿ ಕುಳಿತಿದ್ದ ಕುರ್ಚಿಯ ಮುಂದೆ ಒಂದು ಮೇಜು; ಮೇಜಿನ ಮೇಲೆ ನಾಲ್ಕಯ್ದು ಪುಸ್ತಕಗಳು. ಯುವತಿಯ ಹಸ್ತತಳದಲ್ಲಿ ಸಂಸ್ಕೃತದ ರಾಮಾಯಣದ ಉತ್ತರಕಾಂಡವು; ಅವಲೋಕನ ಭಾಗವು,—ಮಿಥ್ಯಾಪವಾದಪರಿತ್ಯಕ್ತೆಯಾದ ಸೀತಾದೇವಿ ಸಟ್ಟಡವಿಯಲ್ಲಿ ಸಹೃದಯನಾದ ಲಕ್ಷ್ಮಣನೊಡನೆ, ತನ್ನ ಸಂಕಲ್ಪವನ್ನೂ, ಅತ್ತೆಯೇ ಮೊದಲಾದ ಗುರುಜನರಲ್ಲಿ ತನಗಿರತಕ್ಕ ಭಕ್ತಿಗೌರವಗಳನ್ನೂ, ತನ್ನ ಸ್ವಾಮಿಯಲ್ಲಿ ತನಗಿರುವ ಅನಂತವೂ, ಅವಿಚ್ಛಿನ್ನವೂ, ಅಕುಟಿಲವೂ ಆದ ಭಕ್ತಿಪ್ರೀತಿವಿಷಯಗಳನ್ನೂ ಕೂಡ ಪ್ರದರ್ಶಿಸುವಂತಹ ಸ್ಥಳವಾಗಿದ್ದಿತು.

ವಿಷಯಾವಲೋಕನವು ಹೆಚ್ಚಿದಂತೆ, ಯುವತಿಯ ಮನೋಭಾವವೂ ಪರಿವರ್ತಿತವಾಯಿತು. ಕುಳಿತೆಡೆಯಲ್ಲಿಯೇ ನಡುಗಿದಳು! ತನುವಿನಲ್ಲಿ ಪುಳಕಾಂಕುರದಿಂದ ಅಡಿಗಡಿಗೆ ಬೆಮರ್ವನಿಗಳುಕ್ಕಿ ಸುರಿವಂತಾದುವು; ಕಡೆಗೆ, ತಡೆಯಲಾಗದ ದುಗುಡದಿಂದ ಕಣ್ಣೀರಕಾಲುವೆ ಹೊರಟು, ಗಂಡಸ್ಥಲವನ್ನು ನನೆಯಿಸಿ, ಪಾದಪ್ರಾಂತದವರೆಗೂ ಹರಿದು ಹೋಯಿತು!!! ಯುವತಿ ಚಿಂತಾಶೋಕಾಧಿಕ್ಯದಿಂದುಂಟಾದ ಪಾರವಶ್ಯದಿಂದ ಸ್ತಬ್ಧೆಯಾದಳು. ನೀರವರೋದನದಿಂದ ಉದ್ವೇಗವು ಕೊಂಚ ಕಡಮೆಯಾದಮೇಲೆ, ಮತ್ತೆ ಪುಸ್ತಕವನ್ನು ತೆರೆದು ನೋಡಿದಳು. ಅದರಿಂದ ಮುನ್ನಿನ ಶೋಕವು ಮತ್ತೆಮತ್ತೆ ಹೊರಹೊಮ್ಮುವಂತಾದುದೇ ಹೊರತು, ಕಡಮೆಯಾಗಲಿಲ್ಲ. ಆ ಪುಸ್ತಕವನ್ನು ಮೇಜಿನ ಮೇಲಿಟ್ಟು, ಮತ್ತೊಂದನ್ನು ತೆರೆದು ನೋಡಿದಳು; ಅದು ಇಂಗ್ಲೆಂಡಿನ ಒಬ್ಬ ಪ್ರಸಿದ್ಧನಾದ ದೇಶೋದ್ಧಾರಕನ ಜೀವನಚರಿತೆಯಾಗಿದ್ದಿತು. ಅದರಿಂದಲೂ ಸ್ವಾಂತವು ಕೊಂಚಮಟ್ಟಿಕ್ಕೂ ಸಮಾಧಾನ

ವಾಗಲಿಲ್ಲ. ಅದನ್ನೂ ಅತ್ತ ಬಿಸುಟು, ಮತ್ತೊಂದನ್ನು ತೆಗೆದು ಕೊಂಡಳು. ಅದು ಕಾಳಿದಾಸವಿರಚಿತವಾದ ಶಾಕುಂತಲನಾಟಕವು. ಅದರಿಂದ ಕೊಂಚ ಮಟ್ಟಕ್ಕೆ ಹರ್ಷಸೂಚನೆಗಳು ತಲೆದೋರಿದುವು. ಮತ್ತೆ ಮತ್ತೆ ಪುಸ್ತಕದ ಹಾಳೆಗಳನ್ನು ತಿರುಗಿಸಿಹಾಕುತ್ತ ಬಂದಳು ಕಡೆಗೆ, ಅನುತಾಪಾನಲಸಂತಪ್ತಹೃದಯನಾದ ದುಷ್ಯಂತನು ದೈನ್ಯದಿಂದ ಶಕುಂತಲೆಯಲ್ಲಿ ಅಪರಾಧಕ್ಷಮೆಯನ್ನು ಬೇಡುವ ಸ್ಥಳವು ಸಿಕ್ಕಿತು.

ಯುವತಿಯ ಮುಖಾರವಿಂದವು ಪ್ರಫುಲ್ಲವಾಯಿತು. ಕಿರುನಗೆ ಯೊಡನೆಯೇ, "ಛಿಃ, ಛಿಃ! ಪುರುಷರು ಎಂದಿಗೂ ನಂಬುಗೆಗೆ ಅರ್ಹ ರಲ್ಲ" ಎಂಬ ತಿರಸ್ಕಾರವಾಕ್ಯವೂ ಹೊರಟಿತು. ಯುವತಿಯ ಇಂತಹ ಗಂಭೀರವಾಣಿಯಿಂದ ಆ ಸಮಗ್ರವಾದ ಕಿರುಮನೆಯೇ, ಪ್ರತಿಧ್ವನಿಸಿ ನರ್ತಿಸಿಬಿಟ್ಟಿತು. ಅಷ್ಟೇ ಅಲ್ಲ, ಉತ್ತರಕ್ಷಣವೇ ಕಿರುಮನೆಯ ಹೊರಗಡೆ ಯಲ್ಲಿ—"ಸಂಶಯವೇನು? ಪುರುಷರು ಎಂದಿಗೂ ಸ್ತ್ರೀಯರಂತೆ ನಂಬುಗೆಗೆ ಅರ್ಹರಲ್ಲ" ಎಂಬ ವ್ಯಂಗ್ಯಸ್ವರವು ಹೊರಟಿತು.

ರಮಣಿ ಆಶ್ಚರ್ಯಚಕಿತೆಯಾಗಿ ಥಿಗ್ಗನೆದ್ದು, ಗವಾಕ್ಷದಕಡೆ ನೋಡಿದಳು ; ಆರೂ ಕಾಣಬರಲಿಲ್ಲ. ಸುತ್ತಲೂ ನೋಡಿದಳು ; ವಿಶೇಷ ವಾವುದೂ ತೋರಲಿಲ್ಲ. ಆದರೆ, ಸಂಧ್ಯಾರಕ್ತನಾದ ದಿನಮಣಿ ತನ್ನ ತಪ್ತಕಾಂಚನದ್ಯುತಿಪೂರ್ಣರಶ್ಮಿಗಳನ್ನು ಪ್ರಸರಮಾಡುತ್ತ ಗವಾಕ್ಷದಿಂದ ತನ್ನನ್ನೇ ಇಣಿಕಿಣಿಕಿ ನೋಡುತ್ತ ನಗುತ್ತಿರುವಂತೆ ಕಾಣುತ್ತಿದ್ದನು. ಯುವತಿ ದಿನಮಣಿಯ ಈ ಬಗೆಯ ಪರಿಹಾಸ ದಿಂದ ಮರ್ಮಾಹತೆಯಾಗಿ ಮತ್ತೆ ಚಿಂತೆಗೀಡಾದಳು ; ಚಿಂತಿಸುತ್ತಿ ದ್ದಂತೆಯೇ ರಮಣಿಯ ಕಂಬುಕಂಠದಿಂದ ವಾಗ್ಲಹರಿ ತರಂಗತರಂಗ ವಾಗಿ ಹೊರಹೊರಟಿತು. "ನಾನೂ ಒಬ್ಬ ಸೀತೆಯ ಹಾಗಿರುವೆ ನಲ್ಲವೆ? ಪತಿವಿರಹರೂಪದ ದುರ್ದಶೆಗೀಡಾದ ಆಕೆಯಂತೆಯೇ, ದುರಂತಚಿಂತೆಯಿಂದ ಕಾಲಹರಣಮಾಡುತ್ತಿರುವೆನಲ್ಲವೆ? ಆದರೆ ಇಲ್ಲಿ ನನ್ನ ನಿಶ್ಚಿತಾರ್ಥವನ್ನು ಆರೊಡನೆ ಹೇಳಿಕೊಳ್ಳಲಿ? ಲಕ್ಷ್ಮಣನಂತೆ ಅಬಲೆಯ ಇಂಗಿತವನ್ನು ಆದರದಿಂದ ಸಂಗ್ರಹಿಸುವಂತಹ ಜಿತಚಿತ್ತನಾದ ಮಹಾನುಭಾವನಾದರೂ ಇರುವನೆ? ಇದ್ದರೂ ನನಗೆ ಹೇಗೆ ತಾನೇ

ಗೋಚರನಾಗುವನು? ನನ್ನ ಗತಿಯಾದರೂ ಹೀಗೆಯೇ ಕಳೆದು ಹೋಗುತ್ತಿರುವುದು. ನನ್ನ ಭಾಗಕ್ಕೆ ಆವುದೂ ಇಲ್ಲ. ಆದರೂ, ಆಶೆಗೇನೋ ಅಂತವಿಲ್ಲ!

"ಎಲೆ ಆಶೆಯೇ! ನೀನು ನನ್ನನ್ನು ಇದುವರೆಗೂ ಬಿಡಲಿಲ್ಲ; ಮುಂದೆಯೂ ಬಿಡಲೊಲ್ಲೆ, ಎಂದೆಂದಿಗೂ ನನ್ನನ್ನು ನೀನು ಬಿಟ್ಟುಹೋಗಲೊಲ್ಲೆ,—ಅಲ್ಲವೆ? ಹಾಗಾದರೆ ನಾನಿನ್ನು ಆಶಾವೃಕ್ಷದ ತುದಿಯನ್ನು ಸೇರುವುದಿನ್ನೆಂದಿಗೆ? ಈ ನನ್ನ ಅಜ್ಞಾತವಾಸವು ಕೊನೆಗಾಣುವುದೆಂದಿಗೆ? ವಿದ್ಯಾವ್ಯಾಸಂಗಬಲದಿಂದ, ಈ ವರೆಗೂ ನನ್ನ ಹೃತ್ಕೋಶದ ಕುಹರದಲ್ಲಿ ಅಡಗಿದ್ದ ಈ ದುರಂತಚಿಂತೆ ಇಂದೇಕೆ ಹೊರ ಹೊರಟಿತು?" ಎಂದು ನಿಟ್ಟುಸಿರು ಬಿಡುತ್ತ, ಒಮ್ಮೆ ಗೋಡೆಯ ಕಡೆಗೆ ತಲೆಯೆತ್ತಿ ನೋಡಿದಳು. ಗವಾಕ್ಷಕ್ಕೆ ಇದಿರಾಗಿಯೇ ಯುವತಿಯ ಮುಖಭಾವವು ಪ್ರತಿಬಿಂಬಿಸುವಂತೆ ಒಂದು ಕನ್ನಡಿ ಗೋಡೆಗೆ ತಗಲಿಸಿದ್ದಿತು; ಕನ್ನಡಿಯ ಮೇಲೆ ಸಂಧ್ಯಾನುರಕ್ತನಾದ ಸಹಸ್ರರಶ್ಮಿಯ ಸೂಕ್ಷ್ಮದರ್ಶಕಕಿರಣಾವಳಿಗಳು ಪಸರಿಸಿ, ಸಪ್ತವರ್ಣದಿಂದ ಕಿರುಮನೆಯನ್ನೇ ಚಿತ್ರಮಯವಾಗಿ ಮಾಡಿದ್ದುವು.

ರಮಣಿ ಕನ್ನಡಿಯನ್ನು ನೋಡಿದಳು; ಕನ್ನಡಿಯಲ್ಲಿ ಪ್ರತಿಫಲಿಸಿದ್ದ ತನ್ನ ಮುಖದ ಸದ್ಯಸ್ಸ್ಥಿತಿಯನ್ನೂ ತನ್ನ ಮನೋಭಾವಗತಿಯನ್ನೂ ನೋಡಿದಳು! ಕಣ್ಣುಗಳು ಕೆಂಗಾವಿಯ ಕಲ್ಲುಗಳು!! ಮುಖದಲ್ಲಿ ಕ್ಷಣಕ್ಷಣಕ್ಕೂ ರಕ್ತ-ಶ್ವೇತ-ಕೃಷ್ಣ-ಮಿಶ್ರಿತವಾದ ವಿವರ್ಣ!!! ಅಧರದಲ್ಲಿ ಕಂಪನ; ರಸನೆಯಲ್ಲಿ ರಸಹೀನತೆ; ಮತ್ತೇನಾಗಬೇಕು? ಯುವತಿ ತನ್ನ ಶೋಚನೀಯಾವಸ್ಥೆಗೆ ತಾನೇ ಖತಿಗೊಂಡಳು. ಇತರರ ಊಹೆಗಾದರೂ ಅವಕಾಶವಾಗದಿರಬೇಕೆಂದು, ಕುರ್ಚಿಯ ಕೆಳಗಿದ್ದ ಸೀಸೆಯನ್ನು ತೆಗೆದು, ಪನ್ನೀರಿಂದ ಮುಖವನ್ನು ತೊಳೆದುಕೊಂಡು ಪುತ್ತೆ ಕನ್ನಡಿಯನ್ನು ನೋಡಿದಳು. ಇನ್ನೂ ನಯನಾಂಬುಜದ ರಕ್ತಿಮೆ ಇಳಿದಿರಲಿಲ್ಲ; ಮತ್ತೆ ಮತ್ತೆ ತೊಳೆದುಕೊಂಡು ಮತ್ತೆ ಕನ್ನಡಿಯನ್ನು ನೋಡಿದಳು. ಕನ್ನಡಿಯಲ್ಲಿ ಕಂಡುಬಂದ ವಿದ್ಯಮಾನಗಳಿಂದ ಚಕಿತೆಯಾಗಿ ತಿರುಗಿನೋಡಿದಳು; ಮುಖವು ಸಂತೋಷಾಶ್ಚರ್ಯದಿಂದ

ಪ್ರಕಾಶಿಸಿತು! ರಮಣಿ ನೀರೆಯನ್ನೆಳೆದು ಸರಿಪಡಿಸಿಕೊಂಡು ನಿಂತಳು. ರಮಣಿಯ ಇದಿರಾಗಿ ಇಪ್ಪತ್ತು ವರ್ಷದ ಒಬ್ಬ ಸುಂದರ ತರುಣನು ಬಂದು ನಿಂತನು. ಯುವಕನ ಮುಖವು ಹಾಸ್ಯ-ಸಂತೋಷ ಗಳೆರಡನ್ನೂ ಸೂಚಿಸುತ್ತಿದ್ದಿತು.

ಯುವಕನು (ಮೃದು ಮಧುರವಾಣಿಯಿಂದ) ''ಹರಿಣಿ, ಇದೇಕೆ? ದೇಹಸ್ಥಿತಿ ಹೇಗಿರುವುದು?'' (ಎಂದು ಯುವತಿಯನ್ನು ಕೇಳಿದನು).

ಹರಿಣಿ:—(ಸಂಕುಚಿತಸ್ವರದಿಂದ) ದೇಹವು ಸ್ವಸ್ಥವಾಗಿಯೇ ಇರುವುದು.

ಯುವಕ:—ಮನಸ್ಸು ಮಟ್ಟಿಕ್ಕೆ ಸುಸ್ಥಿತಿಯಲ್ಲಿಲ್ಲವೇನು?

ಹರಿಣಿ:—ಹಾಗೂ ಹೇಳಲಾರೆನು!

ಯುವಕ:—(ತಲೆದೂಗುತ್ತ) ಹೇಳದಿದ್ದರೂ ಚೇಷ್ಟಿತಗಳಿಂದಲೇ ತಿಳಿಯಬಹುದಲ್ಲವೆ? ಅದಿರಲಿ, ಹರಿಣಿ! ಬಹುದಿನಗಳ ಮೇಲೆ ಬಹುದೂರದೇಶದಿಂದ ಬಂದ ನನ್ನನ್ನು ಬೆಳಗಿನಿಂದಲೂ ಬಂದು ನೋಡದೆ, ಕುಶಲವೇ,—ಎಂದಾದರೂ ಕೇಳದಿರುವಷ್ಟು ಔದಾಸೀನ್ಯಕ್ಕೆ ಕಾರಣವೇನು?

ಹರಿಣಿ:—ಜಯಂತ! ಅನ್ಯಥಾಭಾವಿಸಕೂಡದು. ನೀನು ಇಂದು ಬೆಳಗಾಗ ಬಂದ ಸುದ್ದಿ ತಿಳಿದಾಗಲೇ ನಿನ್ನನ್ನು ಕಂಡು ಮಾತ ನಾಡಲು ತವಕಗೊಂಡಿದ್ದೆನು. ಆದರೆ,—

ಜಯಂತ:—ಆದರೆ,—ಏನು? ಬೆಕ್ಕಡ್ಡಗಟ್ಟಿತೋ? ಇರಬಹುದು! ಮಾರ್ಜಾರನಿರೋಧದಿಂದ ಮುಂದರಿಯಲಿಲ್ಲವಲ್ಲವೆ?

ಹರಿಣಿ:—(ತಲೆಯೆತ್ತಿ) ಜಯಂತ! ಪರಿಹಾಸ್ಯವೇಕೆ? ಮಾರ್ಜಾರ ವಲ್ಲ; ಮಹತ್ತಾದ ಆಕೃತಿಯ ನೃಪಂಚಮುಖಸ್ವರೂಪವೇ ಇದಿರಾದುದ ರಿಂದ ಮುಂದರಿಯಲಾಗಲಿಲ್ಲ.

ಜಯಂತ:—(ತಲೆದೂಗುತ್ತ) ಸರಿಯೆ, ಹರಿಣಿ! ನೃಪಂಚಮುಖ ಸಂದರ್ಶನದಿಂದ ಜಯಂತನನ್ನು ಮರೆವುದೂ ಸಹಜವೇ!

ಹರಿಣಿ:—ಹರಿಣಿ ಜಯಂತನನ್ನು ಮರೆವಷ್ಟು ಕೃತಘ್ನೆಯಲ್ಲ! ಅವಳಿಗೆ ಆತನು ಚಿರಸ್ಮರಣೀಯನು.

ಜಯಂತ :—ಹಾಗಿದ್ದರೂ ಬಂದು ನೋಡಲಿಲ್ಲವೇಕೆ?

ಹರಣಿ :—ಅಬಲಾಸ್ವಭಾವ!

ಜಯಂತ :—ಅಬಲಾಸ್ವಭಾವದಲ್ಲಿ ಅಧಿಕಬಲಾಕರ್ಷಕವಾದ ಅಮೋಘವಿದ್ಯೆ ಹೇಗೆ ಬೇರೂರಿತು?

ಹರಿಣಿ :—ಅದಂತಿರಲಿ; ನೀನೇ ಬಂದು ನೋಡಬಹುದಾಗಿದ್ದಿತಲ್ಲವೆ?

ಜಯಂತ :—ನಿನ್ನ ಅನುಮತಿಯಿಲ್ಲದೆ ನಾನು ಬಂದರೆ, ನಿನಗೆ ಅಗೌರವವೆಂಬ ಶಂಕೆಯಿಂದ ಪ್ರತೀಕ್ಷಿಸುತ್ತಿದ್ದೆನು.

ಹರಿಣಿ :—(ಕಿರುನಗೆಯಿಂದ) ಈಗ ನನ್ನ ಅನುಮತಿಯಾಯಿತೋ?

ಜಯಂತ:—(ಗಂಭೀರಧ್ವನಿಯಿಂದ) ಈಗಲೂ ನಾನೇನೂ ದುಡುಕಿ ಬರಲಿಲ್ಲ. ಮರೆಯಲ್ಲಿದ್ದು, ನಿನ್ನ ಚೇಷ್ಟಿತಗಳಿಂದ ಮರುಕಗೊಂಡು, ನಿನ್ನನ್ನು ಸಂತವಿಡಬೇಕೆಂಬ ಕುತೂಹಲದಿಂದ ಪ್ರೇರಿತನಾಗಿ ಬಂದೆನು.

ಹರಿಣಿ :—ಏನು? ಹೊಂಚಿ ಸಂಚುಮಾಡಿ ಬಂದೆಯಾ? ನನ್ನ ಯಾವ ಚೇಷ್ಟಿತಗಳು ನಿನ್ನನ್ನು ಮರುಕಗೊಳಿಸಿದುವು?

ಜಯಂತ :—ಯಾವುವೇ? ನಿನ್ನ ಶೋಕ, ಪ್ರಲಾಪ, ಚಿಂತೆ, ತಿರಸ್ಕಾರವಾಕ್ಯ, ಅನುತಾಪ, ಇತ್ಯಾದಿಗಳೆಲ್ಲವೂ ನನ್ನ ಮರುಕಕ್ಕೆ ನಿಮಿತ್ತಗಳು! ನಿನ್ನ ಅಪಾರವಾದ ಆಲೋಚನಾತರಂಗಗಳನ್ನು ಕೇಶಿಯ ಮುಖದಿಂದ ತಿಳಿದು, ನಾನು ಕಿಟಿಕಿಯ ಬಳಿಯಲ್ಲಿಯೇ ನಿಂತಿದ್ದೆನು.

ಹರಿಣಿ :—ಹಾಗಾದರೆ ಆಗ ಹೊರಟ ಉತ್ತರವು ನಿನ್ನದೇ?

ಜಯಂತ :—(ತಲೆದೂಗಿ) ಇದೀಗ ಇಂಗಿತಜ್ಞತೆಯ ಫಲವು!

ಹರಿಣಿ :—ಮನಸ್ಸು ಜಡವಾಗಿದ್ದರೆ, ಧ್ವನಿಗೋಚರವಾಗುವುದಿಲ್ಲ.

ಜಯಂತ:—ಹರಿಣಿ! ಈ ದಿನದ ನಿನ್ನ ವಿಜಾತೀಯ ವ್ಯಾಪಾರವು ನನ್ನನ್ನು ಭ್ರಾಂತನನ್ನಾಗಿ ಮಾಡಿರುವುದು!

ಹರಿಣಿಯ ಕಣ್ಣುಗಳಲ್ಲಿ ನೀರು ತುಂಬಿತು; ಮುಂದೆ ಮಾತು ಹೊರಡದೆಹೋಗಲು, ಮುಖವನ್ನು ತಗ್ಗಿಸಿಕೊಂಡು ಬಿಟ್ಟಳು.

ಜಯಂತನು ಹರಿಣಿಯ ಮುಖವನ್ನು ನೋಡಿದನು. ಶೋಕಾಶ್ರು ಪರಿಪೂರ್ಣವಾದ ಹರಿಣಿಯ ನಯನಾಂಬುಜಗಳ ರಕ್ತಿಮೆಯನ್ನು ಕಂಡನು ; ಕರುಣಸ್ವರದಿಂದ ಕೇಳಿದನು ;—"ಹರಿಣಿ, ಇದೇಕೆ ಅಳುವೆ? ಛಿಹಿ! ಬಿಡು ; ಈವರೆಗಣ ವಿದ್ಯಾವ್ಯಾಸಂಗಕ್ಕೆ ಇದೇ ಪರಿಣಾಮವೇ ? ಧೀರೆಯಾಗು !"

ಹರಿಣಿ:—"ಜಯಂತ! ಇನ್ನು ಅಧೀರತೆಗೆಡೆಗೊಡೆನು; ವಿಜಯೋತ್ಸಾಹದಿಂದ ಬಂದ ನಿನ್ನನ್ನು ಸನ್ಮಾನಿಸದಿದ್ದುದಕ್ಕೆ ಕ್ಷಮೆಯನ್ನು ಬೇಡುವೆನು ! ಕುಳಿತುಕೊ."

ಜಯಂತನು ತಲೆದೂಗಿ, ಮುಂದಿದ್ದ ಮೇಜಿನ ಮೇಲೆ ಕುಳಿತು—"ಇದೀಗ ಸಾಧು ! ಹರಿಣೀ ! ಕ್ಷಮೆಯನ್ನು ಕೇಳುವೆಯಲ್ಲವೆ! ತಪ್ಪಿಗಲ್ಲವೇ ಕ್ಷಮೆ? ನನ್ನಲ್ಲಿ ನೀನು ಅಂಥ ದೊಡ್ಡ ತಪ್ಪನ್ನೂ ಮಾಡಿಲ್ಲವಷ್ಟೇ ! "

ಹರಿಣಿ :—ನಿನ್ನನ್ನು ಕಾಣಿಸಿಕೊಳ್ಳದಿದ್ದುದೇ—

ಜಯಂತ :—ಅದು ಬಲವಾದುದೇ ಸರಿ ; ಹೋಗಲಿ, ಈಗ ಹೇಳು. ನಿನ್ನ ಮುಂದಿನ ಆಲೋಚನೆಯೇನು ?

ಹರಿಣಿ :—ನಮ್ಮ ಆಲೋಚನೆಯಂತೆಯೇ ಕೆಲಸವೂ ನಡೆವುದೇ ?

ಜಯಂತ :—ನಡೆವುದು, ಇಲ್ಲ,—ಬಂದುದು ಅನಂತರದ ವಿಚಾರವು! ಪ್ರಕೃತದ ಇಷ್ಟವೇನು ?

ಹರಿಣಿ :—ಇಷ್ಟವೇನೂ ಇಲ್ಲ.

ಜಯಂತ:—ಹಾಗಾದರೆ ಇಹಸೌಖ್ಯಕ್ಕೆಲ್ಲ ಜಲಾಂಜಲಿಯೋ ?

ಹರಿಣಿ :—ಏಕಾಗಬಾರದು ?

ಜಯಂತ :—ಹೇಗೆ ಸಾಧ್ಯವು ?

ಹರಿಣಿ : —ಪ್ರಯತ್ನದಿಂದ,—

ಜಯಂತ :—ಅದು ಅಸಾಧ್ಯ.

ಹರಿಣಿ :—ಮಾನವಪ್ರಯತ್ನಕ್ಕೆ ಅಸಾಧ್ಯವಾದುದೂ ಉಂಟೊ?

ಜಯಂತ:—ಅದು ಮೇಲುಮೆಟ್ಟಲವಾತು. ಅಷ್ಟು ದೂರ ಕಷ್ಟಪಡಲೇಕೆ ?

ಹರಿಣಿ :—ಸುಖಾಭಾಸವಾದ ಪಾಪಕೂಪದಲ್ಲಿ ಬೀಳದೆ, ತಪ್ಪಿಸಿ ಕೊಳ್ಳುವುದಕ್ಕೆ!

ಜಯಂತ :—ನೀನು ಅಧರ್ಮದಲ್ಲಿ ಪ್ರವರ್ತಿಸುವಂತೆ ಎಂದಿಗೂ ಬೋಧಿಸಲಾರೆನು.

ಹರಿಣಿ :—ಪತಿವಿಯೋಗಿನಿಗೂ ಪಾಪವಿಲ್ಲದ ಸುಖವುಂಟೇ ?

ಜಯಂತ :—ಶಾಸ್ತ್ರಸಮ್ಮತವಾದ ಸುಖಮಾರ್ಗವು ಬೇರೆ ಇರುವುದು ?

ಹರಿಣಿ :—ಅದಾವುದು ?

ಜಯಂತ :—ಸ್ತ್ರೀಗೆ ಪುನರ್ವಿವಾಹವು ಶಾಸ್ತ್ರಸಮ್ಮತವೆಂದು ಈಗಳಿನ ಹೈತುಕರು ಹೇಳುವರಲ್ಲದೆ, ಅನೇಕರಿಂದ ಆಚರಿಸಲ್ಪಟ್ಟೂ ಇರುವುದು.

ಹರಿಣಿ :—ಅಹುದು, ಎಷ್ಟೋ ನಡೆದೂ ಹೋಗಿರುವುವು.

ಜಯಂತ :—ಹಿಂದೆ ನೀನೇ ನನಗೆ ವಿಧವಾವಿವಾಹವಿಚಾರವಾಗಿ ಕೆಲವು ಸಲಹೆಗಳನ್ನೂ ಕೊಟ್ಟಿರುವೆ !

ಹರಿಣಿ :—ಅಹುದು, ಕೊಟ್ಟಿರುವೆನು ;—"ಇಂದ್ರಿಯನಿಗ್ರಹಶಕ್ತಿಯಿಲ್ಲದೆ, ಸ್ವಚ್ಛಂದತೆಯಲ್ಲಿ ಕೆಟ್ಟುಹೋಗುವ ಪಾಪಪ್ರವೃತ್ತಿಯನ್ನು ಬಿಟ್ಟು ಬಹಿರಂಗವಾಗಿ ಇಚ್ಛಿತನೊಬ್ಬನನ್ನೇ ಹೊಂದಿ, ವಿಷಯತೃಪ್ತರಾಗುವುದು ಎಷ್ಟೋ ಮೇಲು" ಎಂದು ಹೇಳಿದೆನು.

ಜಯಂತ :—ನಮ್ಮ ಜನಕನು ಕೈಕೊಂಡಿರುವ ಸ್ತ್ರೀಪುನರ್ವಿವಾಹಶಾಲೆಯಲ್ಲಿ ನಿನ್ನದೂ ಸೇರಬೇಕೆಂಬುದೇ ಅವರ ಇಷ್ಟವು. ನಿನ್ನ ಭವಿಷ್ಯಜ್ಜೀವನನೌಕೆಯನ್ನು ನಡೆಯಿಸಬಲ್ಲ ಚತುರನನ್ನು ಹುಡುಕಿಯೂ ಇರುವರು.

ಹರಿಣಿ :—ವಿವಾಹಕ್ಕೋ ?

ಜಯಂತ :—ಅಹುದು, —

ಹರಿಣಿ :—ವರನಾರೋ ?

ಜಯಂತ :—ಇಚ್ಛಿತಪುರುಷನು ಸಿದ್ಧನಾಗನೇ ?

ಹರಿಣಿ:—ಪಿತಂತುವಿವಾಹದಲ್ಲಿ ನಿನಗೂ ಅಪೇಕ್ಷೆಯಿರಬಹುದಲ್ಲವೆ?

ಜಯಂತ:—ನೀನು ಅಪೇಕ್ಷಿಸಿದರೆ—

ಹರಿಣಿ:—ಸತ್ಯವೋ?

ಜಯಂತ:—ಮಿಥ್ಯೆಯಿಂದ ಬರುವ ಲಾಭವೇನು?

ಹರಿಣಿ:—ಈಗ ನಿಶ್ಚಿತವಾಗಿರುವ ಸಂಬಂಧಸ್ವೀಕಾರದಲ್ಲಿಯೋ?

ಜಯಂತ:—ಅದರಿಂದ ನಿವೃತ್ತನಾಗುವುದೇ—

ಹರಿಣಿ:—ಅದರ ಫಲಪರ್ಯವಸಾನಗಳು ಗೊತ್ತಿರುವುವೋ?

ಜಯಂತ:—ಗೊತ್ತಿಲ್ಲದೆ ಇಲ್ಲ!

ಹರಿಣಿ:—ಹಾಗಾದರೆ, ಸ್ವಚ್ಛವಾದ ಕೀರ್ತಿಲತೆಯನ್ನೇಕೆ ಮಲಿನಗೊಳಿಸಬೇಕು?

ಜಯಂತ:— (ನಕ್ಕು) ಹರಿಣಿ! ಸಮುದ್ರಕ್ಕೆ ಮುಚ್ಚಳವನ್ನು ಹಾಕಲಾಗುವುದೆ?

ಹರಿಣಿ:—(ಗಂಭೀರತೆಯಿಂದ) ಜಯಂತ! ನನ್ನ ಮುಂದಿನ ಸುಖಾನುಭವವು, ನಿನ್ನ ಆಲೋಚನೆಗೆ ಒಳಪಟ್ಟುದಲ್ಲವೇ?

ಜಯಂತ:—ಎಂದೆಂದೂ ಒಳಪಟ್ಟುದೇ!

ಹರಿಣಿ:—ಆ ಆಲೋಚನೆ ನಿನ್ನಲ್ಲಿರುವುದಾದರೆ,—

ಜಯಂತ:— (ಕುತೂಹಲದಿಂದ) ಅದೇನು ಹೇಳು? ನಾನೇನು ಮಾಡಬೇಕೋ, ಬೇಗ ಹೇಳು?

ಹರಿಣಿ:—(ಸ್ಥಿರತೆಯಿಂದ), ಅಣ್ಣಾ! ಇದುವರೆಗೂ ನಾವಿಬ್ಬರೂ ಒಂದೇ ಮನೆಯಲ್ಲಿಯೇ ಇದ್ದೆವಾದರೂ, ನನ್ನ ಅಂತರಂಗವಿಚಾರವು ನಿನಗೆ ತಿಳಿದಿಲ್ಲ! ಇಂದು, ನೀನಾಗಿ ಇಷ್ಟುದೂರ ಚರ್ಚಿಸದಿದ್ದರೆ,— ಎಂದಿಗೂ ನನ್ನ ಆಶಯವು ಹೊರಪಡುತಿರಲಿಲ್ಲ. ಜಯಂತ! ನೀನು ನನಗೆ ಭ್ರಾತ; ನಾನು ನಿನ್ನ ಭಗಿನಿ!! ಇಷ್ಟೇ ತಿಳಿದಿರಬೇಕಾದುದು! ಅಲ್ಲದೆ, ನನ್ನ ಇಹಜನ್ಮಧಾರಣೆಯ ಸ್ಥಿತಿ ಪರಾಕಾಷ್ಠೆಯನ್ನು ಕಾಣುವಂತೆ ಸದಾನಂದಭವನಮಾರ್ಗದಲ್ಲಿ ನನ್ನನ್ನು ಕರೆದುತಂದು ನಿಲ್ಲಿಸಿದ ಸದ್ಗುರುವೂ, ಚಿಂತಾಖತಿಗಳಿಂದ ಕಂದಿ ಕುಂದಿ ಬೆಂದು ಹೋಗುತ್ತಿದ್ದ

ನನ್ನನ್ನು ಅಚಲಧೈರ್ಯದಿಂದ ನೆಲೆಗೊಳ್ಳುವಂತೆ ಮಾಡಿದ ಸದ್ಬೋಧಕನೂ, ಹಿತೈಷಿಯೂ ನೀನೇ ಆಗಿರುವೆ! ಅಣ್ಣಾ! "ನನ್ನ ನಿಜಾಶಯವನ್ನು ಕೇಳಬಲ್ಲ ಮಹಾನುಭಾವನಾದ ಸುಮಿತ್ರಾನಂದನನೊಬ್ಬನು ದೊರೆಯುಲಾಪನೆ" ಎಂದು ಕಳವಳಿಸುತ್ತಿದ್ದೆನು; ಇಂದು ನಿನ್ನಿಂದ ನನ್ನ ಚಿಂತಾಭರವು ಉದ್ಧಾರಿತವಾಯಿತು. ಈಗ ಇಲ್ಲಿ ನಾನೇ ವಿಯೋಗ ಚಿಂತಾಕುಲೆಯಾಗಿ, ನಿಶ್ಚಿತಾರ್ಥವನ್ನು ಹೇಳುವ ವರ್ತಮಾನಕಾಲದ ಸೀತೆ; ನನ್ನ ಸಂಕಲ್ಪವನ್ನು ಸಾದರದಿಂದ ಕೇಳಬಲ್ಲ ಸಾಂಪ್ರತದ ಲಕ್ಷ್ಮಣನಾದರೂ ನೀನೇ ಸರಿ!! ಜಯಂತ! ನಿನ್ನ ನೈಜಭ್ರಾತೃವಾತ್ಸಲ್ಯದಿಂದಲೂ, ನಿಮ್ಮ ಉದಾರಾಶ್ರಯಪ್ರಭಾವದಿಂದಲೂ ಲಭ್ಯವಾದ ವಿದ್ಯಾಸಾಹಚರ್ಯೆಯೇ, ನನ್ನನ್ನು ಇಷ್ಟರ ಮೇಲ್ಮೆಗೆ ತಂದಿರುವುದು. ಇಂತಹ ತಿಳಿವನ್ನು ಕುಲಗೆಡಿಸಿ, ಪಶುಸಾಮಾನ್ಯವಾದ ವಿಷಯೋಪಭೋಗದಲ್ಲಿ ಮನವಿಟ್ಟು, ಚಿರಕಾಲವೂ ದುಃಖಿಸಬೇಕಾದ ದುರಾಶೆ ಕನಸಿನಲ್ಲಿಯೂ ನನಗುಂಟಾಗದಿರಲಿ! ನನ್ನ ಸ್ವಾಮಿ, ನನ್ನ ಒಳಗೂ ಹೊರಗೂ ಕೇವಲಸಮೀಪದಲ್ಲಿಯೇ ಮೂರ್ತೀಭವಿಸಿರುವನೆಂದು ತಿಳಿಯುತ್ತಿರುವೆನು. ಆತನ ಸಂಸ್ಮರಣಮಾತ್ರದಿಂದ ಉತ್ತೇಜಿತವಾಗುವ ಶಕ್ತಿಯೇ ನನ್ನ ಇತರದುರಂತಚಿಂತೆಗಳನ್ನೂ ವಾರಿಸಬಲ್ಲುದಾಗಿರುವುದು; ಇಂತಹ ಬ್ರಹ್ಮಾನಂದಸುಖಕ್ಕಿಂತಲೂ ನನಗೆ ಹೆಚ್ಚಿನ ಸುಖ ವಿನ್ನಾವುದೂ ಇಲ್ಲ.

"ಅಣ್ಣಾ! ಜಯಂತ! ನಿನ್ನ ವಿಷಯದಲ್ಲಿರುವ ನನ್ನ ಭಾವವು, ಪವಿತ್ರಭ್ರಾತೃಪ್ರೇಮರಸಪುಂಜಿತವೂ, ನಿಷ್ಕಪಟವೂ ಆದುದೆಂದು ಭಾವಿಸು! ಜನರು, ಈ ನಮ್ಮ ಸಹೃದಯಬಾಂಧವ್ಯವನ್ನು ತಮ್ಮ ಪಾಪದೃಷ್ಟಿಗಳಿಂದ ವಿಕಲ್ಪವಾಗಿ ನೋಡಿ ನಿಂದಿಸಿದರೂ, ನನಗದರಿಂದ ನಷ್ಟವಾಗಲೀ ಕ್ಲೇಶವಾಗಲೀ ಉಂಟಾಗದು!! ಆದರೆ, ನೀನು ಅಂತಹ ನಿಂದಾಸ್ತುತಿಗಳಿಗೆ ಕಿವಿಗೊಟ್ಟು, ಅಧೀರರ ಹಾಗೆ ಪುರುಷಧರ್ಮವಿರುದ್ಧಕಾರ್ಯದಲ್ಲಿ ಪ್ರವರ್ತಿಸಬಾರದೆಂಬುದೇ ನನ್ನ ಕೋರಿಕೆ" ಎಂದು ಹೇಳುತ್ತ, ಜಯಂತನ ಮುಖವನ್ನು ನೋಡಿದಳು. ಜಯಂತನ ಎರಡು ಕಣ್ಣುಗಳಿಂದಲೂ ಧಾರಾಕಾರವಾಗಿ ನೀರು ಸೋರು

ತ್ತಿದ್ದಿತು. ಹರಿಣಿಯು ದೀರ್ಘೋಪನ್ಯಾಸದ ಶ್ರಾವಣವಾಗು ತ್ತಿದ್ದಂತೆಯೇ, ಜಯಂತನ ಕಾರುಣ್ಯಮಯಚಿತ್ತವು ಕರಗಿ, ಸುರಿದು ಹೋಗುವಂತಾಗಿ ಅವನನ್ನು ಸ್ತಬ್ಧನನ್ನಾಗಿ ಮಾಡಿದ್ದಿತು. ಹರಿಣಿ (ಗದ್ಗದಸ್ವರದಿಂದ), "ಜಯಂತ! ಇದೇನು, ನಿನ್ನ ಇಂದಿನ ವ್ಯಾಪಾರದ ಸೊಗಸು!! ಈ ಅಧೀರತೆಯೇಕೆ? ಕಣ್ಣುಗಳಲ್ಲಿ ನೀರು ಸೋರುವು ದೇಕೆ? ನಾನು ನಿನ್ನ ಸುಖದುಃಖಗಳನ್ನು ಕೇಳಿ ತಿಳಿಯಲು ಬಾಧ್ಯೆಯಾದ ಸೋದರಿಯಲ್ಲವೇ? ನಿನ್ನೀ ನೀರವರೋದನದಿಂದ ತಪಿಸು ತ್ತಿರುವ ಸೋದರಿಯನ್ನು ನೋಡಿ ಶಾಂತನಾಗು!"

ಜಯಂತನ ಶೋಕವು ಮತ್ತೂ ಇಮ್ಮಡಿಯಾಯಿತು. ಕಂಬನಿ ಯನ್ನು ಕಡುಕಷ್ಟದಿಂದ ತಡೆದು, ಕಂಪಿತಸ್ವರದಿಂದ ಹೇಳಿದನು;— "ಹರಿಣಿ! ಇದವರೆಗೂ ಹೇಳಿದ ನನ್ನ ವ್ಯಂಗ್ಯೋಕ್ತಿಗಳನ್ನು ಕ್ಷಮಿಸು! ಸತ್ಯವಾಗಿಯೂ ನಾನಂತಹ ದುರುದ್ದೇಶದಿಂದ ಬರಲಿಲ್ಲವೆಂದು ತಿಳಿ!! ತಾಯಿ! ನೀನು ನನ್ನ ಯಥಾರ್ಥ ಭಗಿನಿ! ಮಾತೃಸ್ನೇಹದಿಂದ ಸುಸಂ ಸ್ಕೃತೆಯಾದ, ಪವಿತ್ರಪ್ರೇಮಮಯಪ್ರಕಾಶಿತಹೃದಯೆಯಾದ, ಆಪ್ತ ಭಗಿನಿ!! ನಾನು ನಿನ್ನ ಹಿತಚಿಂತಕನಾದ ಭ್ರಾತೃ!! ನಿನ್ನ ಶ್ರೇಯೋಭಿ ವೃದ್ಧಿಗಾಗಿ ಒದೆದಾಡುತ್ತಿರುವ ನೈಜಭ್ರಾತೃ. ಆದರೆ, ನೀನು ಮುಂದೆ ಚಿರಕಾಲವೂ ಈತೆರದ ಕ್ಲೇಶಕರವಾದ ತಪಶ್ಚರ್ಯೆಯಲ್ಲಿ ಪ್ರವರ್ತಿ ಸಿರುವ ಭಾಗಕ್ಕೆ ಮಟ್ಟಕ್ಕೆ, ನನ್ನ ಮನವು ಕರಗಿ ನೀರು ನೀರಾಗುತ್ತಿರು ವುದು. ನಿಷ್ಠುರಹೃದಯನಾದ ವಿಧಾತನು ನಿನ್ನ ವಿಷಯದಲ್ಲಿ ನಿರ್ದಯ ನಾಗಿರುವದರಿಂದ ಆತನ ಕಾಠಿನ್ಯಕ್ಕೂ ನಿನ್ನ ಭವಿತವ್ಯತೆಗೂ ಚಿಂತಿಸು ತ್ತಿರುವೆನು.

ಹರಿಣಿ:— ಅಣ್ಣಾ! ನಿನ್ನ ಅಧೀರಭಾವವು ಇನ್ನು ಸಾಕು; ನಾನು ಈ ತಪಶ್ಚರ್ಯೆಯನ್ನು ಕಷ್ಟವೆಂದಾಗಲೀ, ಕಠಿನವೆಂದಾಗಲೀ ಭಾವಿಸೆನು; ಸುಖವೂ, ಸುಲಭವೂ, ಆದುದೆಂದೇ ನಂಬಿರುವೆನು. ಇನ್ನು ಚಿಂತೆಯನ್ನು ಬಿಡು.

ಜಯಂತ:— ತಾಯಿ! ನಾನು ಪಿತೃವಾಕ್ಯನಿಯೋಜಿತನು! ಪಿತ್ರಾಜ್ಞೆ ಅನುಲ್ಲಂಘನೀಯವಲ್ಲವೇ?

ಹರಿಣಿ :—ಅದೇನು ? ವಿವಾಹವಿಷಯವೋ ?

ಜಯಂತ :—ಅಹುದು, ವರನೂ ಸಿಶ್ಕ್ಷಿತನಾಗಿಯೇ ಇರುವನಂತೆ!

ಹರಿಣಿ :—ಅದಾರು ?

ಜಯಂತ :—ವಿಮಲನಗರದ ಅಸಿಸ್ಟೆಂಟ್ ಕಲೆಕ್ಟರನು.

ಹರಿಣಿ:—(ಕುತೂಹಲದಿಂದ) ಹೆಸರು ?

ಜಯಂತ:— ಕೇಳಿಲ್ಲವೆ ? ಸೀಮೆಯ ಕಾಲೇಜಿನಲ್ಲಿ, "ಐ. ಸಿ. ಎಸ್."ಸಲ್ಲಿ, ಉತ್ತಮವರ್ಗದಲ್ಲಿ ಪರಿಗಣಿತನಾಗಿ ಸನ್ಮಾನಹೊಂದಿ ಬಂದಿರುವ ನಮ್ಮ 'ಶಚೀಕಾಂತ'! ("ಶಚೀಕಾಂತ" ಶಬ್ದಶ್ರವಣೋ ತ್ತರಕ್ಷಣವೇ ಹರಿಣಿ ಕಂಪಿತೆಯಾದಳು. ಮುನ್ನಿನಂತೆಯೇ ಮುಖವೂ ವಿವರ್ಣವಾಯಿತು ; ನಿರುತ್ತರೆಯಾಗಿ ನೋಡಿದಳು.)

ಜಯಂತ :— (ಕುತೂಹಲದಿಂದ) ಹರಿಣಿ ! ಪ್ರವರ್ತನವು ಪರಿ ವರ್ತಿತವಾಗಿದ್ದಿತು ; ಮತ್ತೆ ಇದೇನು ? ಮುನ್ನಿನ ಅವಸ್ಥೆ !!

ಹರಿಣಿ:—(ತಲೆಯೆತ್ತಿ ಕ್ಷೀಣಸ್ವರದಿಂದ) ಅಣ್ಣಾ ! ಇಂದು ನನ್ನ ದೇಹಸ್ಥಿತಿ ಸರಿಯಾಗಿಲ್ಲ. ಇಂದು ನೀನು ರಥಾರೂಢನಾಗಿ ಬರುತ್ತಿದ್ದು ದನ್ನು ನೋಡುತ್ತೆ ನಿಂತಿದ್ದ ನನಗೆ, ಅಕಸ್ಮಿಕವಾಗಿ ಭಯವಾಗಿ, ಅದು ಮೊದಲು ಅಡಿಗಡಿಗೆ ಹೀಗಾಗುತಲಿದೆ.

ಜಯಂತ :—ಭಾವೋದಯದ ಸ್ಥಿತಿ ಹೀಗೆಯೇ ! ಇದಕ್ಕೆ ಚಿಕಿತ್ಸೆ ಯೇನೂ ಇಲ್ಲವೆ ?

ಹರಿಣಿ :—ಔದಾಸೀನ್ಯವೇ—

ಜಯಂತ :—(ಹರಿಣಿಯ ಮುಖವನ್ನೇ ನೋಡುತ್ತ ಏನನ್ನೋ ಊಹಿಸಿ ಉತ್ಸುಕತೆಯಿಂದ),— ಹರಿಣಿ ! ನಮ್ಮ ಶಚೀಕಾಂತನು, ಸೀಮೆಯಲ್ಲಿದ್ದವೇಳೆ, ರೋಗಗಳ ನಿದಾನವನ್ನೂ ಅವುಗಳ ಚಿಕಿತ್ಸಾ ಕ್ರಮವನ್ನೂ ತಿಳಿದು ಬಂದಿರುವನು. ಆತನಿಂದ ನಿನ್ನ ಈ ಯಾತನೆ ಗುಣವಾದರೂ ಆಗಬಹುದು !

ಹರಿಣಿ :—(ಲಜ್ಜೆಯಿಂದ), ಆ ಬಾಬುಗಳ ಚಿಕಿತ್ಸೆಗಳೇನೂ ನನಗೆ ಅವಶ್ಯಕವಿರಲಾರವು ; ಆ ಪ್ರಸ್ತಾಪವು ಇಷ್ಟಕ್ಕೇ ನಿಲ್ಲಲಿ !

ಜಯಂತ :—ಹೋಗಲಿ ; ಪಿತ್ರಾಜ್ಞೆಗೆ ಉತ್ತರವೇನು ?

ಹರಿಣಿ :—ಎಲ್ಲವೂ ಆಗಲೇ ಇತ್ಯರ್ಥವಾಗಿದೆಯಲ್ಲ !

ಜಯಂತ :—ಹಾಗಾದರೆ ಶಚೀಕಾಂತನ ಆಶಾಲತೆ ಖಂಡಿಸಲ್ಪಟ್ಟಂತೆಯೇ ?

ಹರಿಣಿ :—(ಚಕಿತಭಾವದಿಂದ) ಅದೇಕೆ ?

ಜಯಂತ :—ಪ್ರತಿಜ್ಞೋಲ್ಲಂಘನ ಮಾಡಲಾರದೆ—

ಹರಿಣಿ :—ಹಾಗೆಂದರೇನು ? ಪ್ರತಿಜ್ಞೆ ಯಾವುದು ?

ಜಯಂತ :—ಪುನರ್ವಿವಾಹರೀತಿಯಿಂದ ಹರಿಣಿಯನ್ನು ಪಡೆದರೆ ಪಡೆದಹಾಗೆ, ಇಲ್ಲದಿದ್ದರೆ ಆ ಮಾರ್ಗವೇ ಇಲ್ಲವೆಂಬುದು !

ಹರಿಣಿ :—ಅಣ್ಣಾ, ಹರಿಣಿಗೆ ಪುನರ್ವಿವಾಹಾವಶ್ಯಕತೆಯಿಲ್ಲ; ಅಲ್ಲದೆ ಒಬ್ಬ ವಿರಕ್ತೆಯ ಮನೋವೃತ್ತಿಗೆ ಪ್ರತಿರೋಧಕರಾಗಿ ಆತ್ಮಪರಿತೃಪ್ತಿ ಹೊಂದಬೇಕೆಂಬ ಕಲೆಕ್ಟರವರ ಉದ್ದೇಶವೂ ಫಲಕಾರಿಯಲ್ಲ !

ಜಯಂತ :—(ಮತ್ತೆಯೂ ಅಧಿಕಕುತೂಹಲದಿಂದ ಹರಿಣಿಯ ಮುಖವನ್ನೇ ನೋಡುತ್ತ) ಹರಿಣಿ, ಚಿರಕಾಲ ನೀನು ಈ ರೀತಿಯಲ್ಲಿಯೇ ಇರುವೆಯಾ? ಇಹಸುಖಾಭಿಲಾಷೆಯೇ ಇಲ್ಲವೇ ?

ಹರಿಣಿ :—(ನಕ್ಕು) ಜಯಂತ, ಇದೇ ಸ್ಥಿರತೆಯಲ್ಲಿಯೇ ಇರಬೇಕೆಂಬುದೇ ನನ್ನ ಸಂಕಲ್ಪವು. ಅದು ನಿರುಪಾಧಿಕವಾಗಿ ನಡೆಯಬೇಕೆಂಬುದೇ ಭಗವಂತನಲ್ಲಿ ನನ್ನ ಸಂಪ್ರಾರ್ಥನೆ. ಸ್ವರೂಪಕ್ಕೂ ಸ್ವಕರ್ತವ್ಯಕ್ಕೂ ಅನುಗುಣವಾಗಿ 'ಅವಶ್ಯಮನುಭೋಕ್ತವ್ಯಂ' ಎಂಬ ಉಕ್ತಿಗೆ ವಿಷಯಗಳಾದ ಸಂಗತಿಗಳು ಹೇಗೆ ಬಿಡಲ್ಪಡುವುವು ?

ಜಯಂತ :—(ತಲೆದೂಗಿ) ಹರಿಣಿ, ಸಾಧು, ಸಾಧು !! ನಿನ್ನ ಸಂಕಲ್ಪವು ಸಾಧುವಾದುದು. ಹಾಗೆಯೇ ಮಾಡು; ಭಗವಂತನೂ ನಿನಗೆ ಸಹಾಯನಾಗಲಿ ! ನಿನ್ನ ಸಂಕಲ್ಪವು ಸಿದ್ಧಿಸಬೇಕೆಂಬುದೇ ನನ್ನ ಮುಖ್ಯಾಭೀಷ್ಟವು. ಹರಿಣಿ, ನಿನ್ನ ಪ್ರೌಢವಿದ್ಯಾಧಿಗಮವು ಶ್ಲಾಘಾರ್ಹವೇ ಸರಿ! ಆಧುನಿಕಮಹಿಳಾವ್ರಾತದಲ್ಲಿ ತೋರಬರುತ್ತಿರುವ ಹೂಣಕಲಾಭ್ಯಸನದ ವಿಚಿತ್ರಪರಿಣಾಮವನ್ನೂ, ಅದರ ಫಲವಾಗಿ ಆರ್ಯಜನಾಂಗವನ್ನು ಮುಸುಕಿ ಆವರಿಸುತ್ತಿರುವ ಅಪಕೀರ್ತಿಯೂ ಆಪದಗಳೂ ಆವಾವುವೆಂಬುದನ್ನೂ, ತೋರಿಕೊಡುವಂತಹ ಲೋಕಾನು

ಭವಚ್ಚಿಂತೆಗಾಗಿಯೇ ವಿದ್ಯಾರ್ಜನೆಮಾಡಲು ನಿನ್ನನ್ನು ಪರಸ್ಥಳಕ್ಕೆ ಕಳಿಹಿಕೊಟ್ಟ ನನ್ನ ಪ್ರಯತ್ನವೂ ಸಾರ್ಥಕವೇಸರಿ. ಆದರೆ, ತಾಯಿ! ಭಗವತ್ಕೃಪೆಯಿಂದ ನೀನು ನಿನ್ನ ಸ್ವಾಮಿಯ ಸಾಕ್ಷಾತ್ಕಾರ ಲಾಭದಿಂದ ವಿರಾಜಿತೆಯಾಗಿ ಈ ನಮ್ಮ ಆರ್ಯಮಹಿಳೆಯರಿಗೆ ಆದರ್ಶರಮಣಿಯಾಗಿ ನಿಂದರೆ, ಅಂದೇ ನನ್ನ ಉದ್ದೇಶವು ಸಫಲವೆನಿಸುವದು.

ಹರಿಣಿ :—(ಗಂಭೀರಭಾವದಿಂದ) ಅಣ್ಣಾ! ನಿನ್ನ ಸ್ವಜವಾತ್ಸಲ್ಯವು ಎಂದಿಗೂ ವಿಫಲವಾಗಲಾರದು. ನಿನ್ನ ಅಭೀಷ್ಟದಂತೆಯೇ ಈ ನಿನ್ನ ಭಗಿನಿ ತನ್ನ ಸ್ವಾಮಿಯ ಸದ್ಧರ್ಮಕಾರ್ಯದಲ್ಲಿ ಸಹಚಾರಿಣಿಯಾಗಿ ಸೇವಿಸುವುದನ್ನೂ ನೀನೇ ನೋಡುವೆ.

ಈ ಪ್ರಕಾರವಾಗಿ ಅಣ್ಣನೂ ತಂಗಿಯೂ ಸಂಭಾಷಿಸುತ್ತಿರಲು ಮಧ್ಯದಲ್ಲಿ "ಜಯಂತಾ, ಜಯಂತಾ" ಎಂಬ ಮತ್ತೊಂದು ಸ್ವರವೂ ಮಹಡಿಯ ಕೆಳಗಣಿಂದ ಹೊರಟು ಸಮ್ಮಿಳಿತವಾಯಿತು.

ಜಯಂತನು ಕೇಳಿದರೂ ಕೇಳದವನಂತೆಯೇ ಹರಿಣಿಯನ್ನೇ ನೋಡುತ್ತಿದ್ದನು.

ಹರಿಣಿ ಗವಾಕ್ಷದಲ್ಲಿ ಮುಖವನ್ನಿಟ್ಟು ಸ್ವರವು ಹೊರಟ ಕಡೆಗೆ ತಿರುಗಿನೋಡಿದಳು ; ಆನಂದೋತ್ಸಾಹಗಳು ಮಿಗಿಲಾದುವು. ಮಂದ ಸ್ಮಿತವದನೆಯಾಗಿ ಜಯಂತನನ್ನು ಕುರಿತು ಹೇಳಿದಳು:—"ಅಣ್ಣಾ, ಇತ್ತ ನೋಡು, ಇಂದು ನಿನ್ನೊಡನೆ ಬಂದಾತನು; ನಿನ್ನನ್ನು ಕರೆವಂತಿರುವುದು ?"

ಜಯಂತ :—"ಎಲ್ಲಿ?" ಎಂದು ನೋಡಿ, ಮತ್ತೆ ಹರಿಣಿಯ ಕಡೆಗೆ ತಿರುಗಿ, ಮೃದುವಚನದಿಂದ, "ಹರಿಣಿ! ಈತನೇ ನಮ್ಮ ಪ್ರಿಯತಮನಾದ ಕಲೆಕ್ಟರ್ ಶಚೀಕಾಂತನು ! ನನ್ನನ್ನು ಕರೆಯಬಂದಿರುವನು. ಇಲ್ಲಿಗೇ ಬರಹೇಳಲೇ? ಆತನಿಗೂ ನಿನ್ನಲ್ಲಿ ಮಾತನಾಡಬೇಕೆಂಬ ಕುತೂಹಲವು ಬಹುಳವಾಗಿರಬಹುದು."

ಹರಿಣಿ :—(ಕ್ಷಣಕಾಲ ಪರವಶೆಯಾದಂತಿದ್ದು ಬಳಿಕ ಸಂಕುಚಿತ ಸ್ವರದಿಂದ) ಏನು?

ಜಯಂತ :—ಇದೇಕೆ? ನಿದ್ರಿಸುತ್ತಿದ್ದೆಯೊ?

ಹರಿಣಿ:—ನಿನ್ನ ಪ್ರಿಯತಮನಿಗೆ ಪ್ರತಿನಿಧಿಸ್ವರೂಪನಾದ ನನ್ನ ಸ್ವಾಮಿಯನ್ನು ಸ್ಮರಿಸುತ್ತಿದ್ದೆನು.

ಜಯಂತ:—ಧ್ಯಾನಿಸು, ಧ್ಯಾನಿಸು! ಅದು ಯುಕ್ತವೇ ಸರಿ; ಒಮ್ಮೆ ಶಚೀಕಾಂತನನ್ನು ಇಲ್ಲಿಗೆ ಬರಹೇಳಲೆ?

ಹರಿಣಿ:—ಏಕೆ? ನೀನೇ ಅಲ್ಲಿಗೆ ಹೋಗಿ ನೋಡು. ನಾನು ಪುಷ್ಕರಿಣಿಯ ಬಳಿಗೆ ಹೋಗಬೇಕು.

ಜಯಂತ:—(ಮತ್ತೊಮ್ಮೆ ತಲೆಯೆತ್ತಿ ಹರಿಣಿಯನ್ನು ನೋಡಿ) "ಸರಿ, ಸರಿ! ಹಾಗಿದ್ದರೆ ಹೊರಡು, ನಾವೂ ವಾಯುಸೇವನೆಗಾಗಿ ಹೊರಡುವೆವು" ಎಂದು ಹೇಳಿ ಹೊರಟುಹೋದನು. ಹರಿಣಿ ತಲೆದೂಗುತ್ತ, "ಜಯಂತನು ಈ ಗೂಢವಿಷಯದಲ್ಲಿ ಯಥಾರ್ಥಾಂಶವನ್ನು ತಿಳಿದಿರಲಾರನೆ?" ಎಂದು ಆಲೋಚಿಸುತ್ತ ತೋಟದ ಕಡೆಗೆ ನಡೆದಳು.

ತೃತೀಯ ಪರಿಚ್ಛೇದ

(ಪ್ರಭುಸಮ್ಮುಖದಲ್ಲಿ)

ಕರ್ಮವ್ಯಸನಿರತನಾದ ದಿನಮಣಿ ಇನ್ನೂ ಅಂತರ್ಹಿತನಾಗಿರಲಿಲ್ಲ; ಸಂಧ್ಯಾಸಮಾಲಿಂಗನದಿಂದ ಸಂಭ್ರಮಿಸಿ ಸಮಸ್ತ ಚೇತನಗಳಿಗೂ ವಿಶ್ರಾಂತಿಸುಖವನ್ನುಂಟುಮಾಡುವನಾಗಿದ್ದನು. ಸರಾಗನಾದ ಸಹಸ್ರರಶ್ಮಿಯ ಅಮೋಘರುಚಿಗಳೂ ತಪ್ತಕಾಂಚನವರ್ಣದಿಂದ ಜಗತ್ತನ್ನೇ ಮನೋಹರವನ್ನಾಗಿ ಮಾಡಿದ್ದುವು. ಪುಷ್ಕರಿಣಿಯನ್ನು ಕುರಿತು ಹೊರಟ ಹರಿಣಿ ತೋಟವನ್ನು ಹೊಕ್ಕಳು; ಸ್ವಲ್ಪದೂರ ನಡೆದಳು; ಒಮ್ಮೆ ತಲೆಯೆತ್ತಿ ಮೇಲೆ ನೋಡಿದಳು; ಅಸ್ತನಾಗುತ್ತಿದ್ದ ದಿನನಾಥನು ದೃಗ್ಗೋಚರನಾದನು! ಹರಿಣಿಯ ಹೃದಯವೂ ಇದ್ದಕ್ಕಿದ್ದಹಾಗೆ ಚಿಂತಾವಿತತಿಗಳಿಂದ ಕ್ಷತವಿಕ್ಷತವಾಯಿತು. ಪರವಶತೆಯಿಂದ ದಿನಮಣಿಯನ್ನೇ ನೋಡುತ್ತ ನಿಂತಳು.

ಆಯಾಸವೂ ಮಿಗಿಲಾಯಿತು; ಬಲುವಾಗಿ ಬಿಸುಸುಯ್ಯುತ್ತ ಹೇಳ ತೊಡಗಿದಳು. "ಎಲೈ, ನಿರ್ದಯವಿಧಾತನೇ! ನನ್ನ ಮನೋರಥ ಚಕ್ರವೂ ಒಂದುವೇಳೆ ಆಶಾಭಂಗದ ಅಂಧಕಾರಕೂಪದಲ್ಲಿ ಮುಳುಗಿ ಹೋಗುವುದೇನು? ನನ್ನ ಉತ್ಸಾಹಸೂರ್ಯನೂ ಒಂದುವೇಳೆ ಸಂಪೂರ್ಣವಾಗಿ ವಿಫಲಪ್ರಯತ್ನದಿಂದ ಅಸ್ತನಾಗುವನೇನು? ಆಗಲಿ, ಹಾಗಾಗುವ ಪಕ್ಷದಲ್ಲಿ—ಅದೂ ನಿನ್ನ ಲೀಲೆಯಾಗಿರುವ ಪಕ್ಷದಲ್ಲಿ—ಇಂದೇ ಮುಳುಗಿಹೋಗಲಿ!! ಹೇಗೂ ವಿಷಯಾಭಿಲಾಷೆಗೆ ಜಲಾಂಜಲಿಯನ್ನು ಬಿಟ್ಟಾಯಿತು; ಬರಬಹುದಾದ ಕಷ್ಟಗಳೆಲ್ಲವನ್ನೂ ಸಮಾದರದಿಂದಲೇ ಇದಿರ್ಗೊಳ್ಳಲು ಸಂಕಲ್ಪಿಸಿದುದಾಯಿತು!! ಹಾಗಲ್ಲದೆ ಇದ್ದ ಪಕ್ಷದಲ್ಲಿ ನನ್ನ ಪ್ರಾಪ್ಯಸ್ಥಾನವು ಸಮೀಪಸ್ಥವಾಗಿದ್ದರೂ ಸಾಕ್ಷಾತ್ಕರಿಸದೆ ಹಿಂತಕ್ಕೆ ಹೋಗುತ್ತಿದ್ದೆನು. ಕ್ಷಣಭಂಗುರವಾದ ಐಹಿಕ ಸುಖಾನುಭವವೇ ಹೆಚ್ಚೆಂದು ನಾನೆಂದಿಗೂ ಭಾವಿಸಲಾರೆನು!! ನಾನು ಆ ನನ್ನ ಪವಿತ್ರಪ್ರೇಮಕ್ಕೆ ಪಾಮರರ ದೃಷ್ಟಿ ತಗುಲಿ ಅದು ಕಲಂಕಿತವಾಗುವಂತೆ ಎಂದಿಗೂ ಮಾಡಲಾರೆನು! ಕೀರ್ತಿಗೂ ಮಿಂಚಿದ ಸುಖವು ಮತ್ತೊಂದಿರದು. ಅಂತಹ ಯಶಶ್ಚಂದ್ರಿಕೆಗೆ ಮುಸುಗುವ ಮುಗಿಲ ರಾಶಿಯನ್ನು ನನ್ನ ನಿಜಕರ್ತವ್ಯವಾತದಿಂದಲೇ ಚದರಿಸುವೆನಲ್ಲದೆ ಅಧೀರೆಯಾಗಿ ದುಡುಕಲಾರೆನು; ಇದರಿಂದ ಆ ನನ್ನ ಆರಾಧ್ಯದೇವನು ಅಸುಖಿಯಾಗುವನೇನು? ಆದರೆ—"

ಹರಿಣಿಯ ಮಾತು ಅಷ್ಟಕ್ಕೇ ತಡೆಯಲ್ಪಟ್ಟಿತು; ಹಿಂದಣಿಂದ "ಇದೊ, ಇದೊ! ಹರಿಣಿ! ಹರಿಣಿ!! ಇಲ್ಲಿಯೇ ಹಿಡಿವೆನು, ಬಲುವಾಗಿ ಹಿಡಿವೆನು; ಎಂದಿಗೂ ಬಿಡೆನು!!!" ಎಂಬ ಮಂಜುಲವಾಣಿ ಹೊರಟು ಹರಿಣಿಯನ್ನು ಚಕಿತೆಯನ್ನಾಗಿ ಮಾಡಿಬಿಟ್ಟಿತು.

ಹರಿಣಿ ತಿರುಗಿ ನೋಡಿದಳು. ವಿಸ್ಮಯಾನಂದಕೌತೂಹಲಗಳು ದ್ವಿಗುಣವಾದುವು; ಇದಿರಲ್ಲಿ ಉಜ್ಜ್ವಲಶ್ಯಾಮಾಂಗನಾದ ಯುವಕನು ನಿಂತಿರುವನು! ಯುವಕನ ಮುಖದಲ್ಲಿ ಉತ್ಸಾಹಾಮೋದಗಳೆರಡೂ ನರ್ತನಮಾಡುತ್ತಿರುವುವು.

ಹರಿಣಿ ನೋಡಿದಳು ; ಯುವಕನೂ ನೋಡಿದನು. ಉಭಯರ ನಯನಚಕೋರಗಳೂ ಪರಸ್ಪರವಾಗಿ ಕುಶಲೋದಂತಗಳನ್ನು ವಿಚಾರಿಸ ತೊಡಗಿದುವು. ಆರ ಬಾಯಿಂದಲೂ ಮಾತು ಹೊರಡಲಿಲ್ಲ. ಇಬ್ಬರೂ ನಿಸ್ತಬ್ಧರಾದರು, ನಿಷ್ಪಂದರೂ ಆದರು.

ಹೆಚ್ಚು ಹೊತ್ತು ಹಾಗಿರಲಾಗಲಿಲ್ಲ; ಯುವಕನು ಯುವತಿಯ ಕಯ್ಯನ್ನು ಹಿಡಿದನು. ಯುವಕನ ಹಸ್ತಸ್ಪರ್ಶದಿಂದ ಹರಿಣಿಯ ಅಂತ ರಾತ್ಮವೂ ಆಹ್ಲಾದಿತವಾಯಿತು. ಆದರೆ ಉತ್ತರಕ್ಷಣವೇ ಹರಿಣಿಯ ಚಿತ್ತದಲ್ಲಿ ನಿಜಸಂಕಲ್ಪವು ಸ್ಫುರಿಸಿ ಶೋಕವನ್ನೂ ಪಶ್ಚಾತ್ತಾಪ ವನ್ನೂ ಉಂಟುಮಾಡಿತು ; ಜನವಾರ್ತೆಯ ಭೀತಿಯಿಂದ ಕಯ್ಯನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದಳು,—ಫಲಕಾರಿಯಾಗಲಿಲ್ಲ, ಯುವಕನ ದೃಢಮುಷ್ಟಿಬಂಧನದಿಂದ ಬಿಡಿಸಿಕೊಳ್ಳಲಾರದೆ ಹೋದಳು. ಹರಿಣಿಯ ಮಹಾಪ್ರಯತ್ನವು ಯುವಕನಿಗೆ ನಗೆಯನ್ನುಂಟುಮಾಡಿತು.

ಹರಿಣಿ ಮುಂದೆ ತಡೆಯಲಾರದೆ ಕಂಪಿಸುವ ಸ್ವರದಿಂದ, "ಮಹಾ ಶಯರಿಗೆ ವಂದನೆ! ನನ್ನ ಮಾರ್ಗಾವರೋಧನಕ್ರಿಯೆ ತಮಗೆ ಸಲ್ಲದು ; ಬಿಟ್ಟುಬಿಡುವುದು ಮೇಲು" ಎಂದು ತಾರುಮಾರಾಗಿ ಹೇಳಿದಳು.

ಯುವಕ:—(ಕಿರುನಗೆಯಿಂದ) ಇದೇನು ? ವಿದ್ಯುಲ್ಲತಾ ! ಹೀಗೇಕೆ ಕುಪಿತೆಯಾಗುವೆ? ನಾನು ನಿನ್ನ ಕೈಹಿಡಿಯಲಾಗದೆ?

ಹರಿಣಿ :—ತಮ್ಮ ವಿದ್ಯುಲ್ಲತೆಯಾರೋ ಅವಳ ಕೈಹಿಡಿಯಿರಿ; ವಿರಕ್ತೆಯಲ್ಲಿ ಸರಸತೆ ಸರಿಯಲ್ಲ!

ಯುವಕ :—ಸಹಜ ; ನಾನು ಅನ್ಯೆಯರನ್ನು ಹಿಡಿಯಬೇಕಾ ದುದೂ ಇಲ್ಲ ; ನನ್ನ ವಿದ್ಯುಲ್ಲತೆಯನ್ನೇ ಹಿಡಿದಿರುವೆನು.

ಹರಿಣಿ :—ಇದೇನು ಭ್ರಾಂತಿ! ವಿದ್ಯುಲ್ಲತೆ ಯಾರು ? ತಾವು ಆರನ್ನು ಹಿಡಿದಿರುವಿರಿ? ನಿರಪರಾಧಿನಿಯೂ ಕರ್ತವ್ಯನಿರತೆಯೂ ಆದ ಸನ್ಯಾಸಿನಿಯನ್ನು ಮರುಳುಮಾಡುವುದೇಕೆ? ಇಂತಹರಿಂದ ದೇಶೋ ದ್ಧಾರವೂ ಸ್ವಾರ್ಥತ್ಯಾಗವೂ ಪರಮಾರ್ಥತೆಯೂ ಎಷ್ಟರ ಮಟ್ಟಕ್ಕೆ ಅನುಷ್ಠೇಯವು ?

ಯುವಕ :—(ಕಿರುನಗೆಯಿಂದ) ಲೋಕವೇ ಸ್ವಾರ್ಥತೆಯಲ್ಲಿ ಬದ್ಧವಾಗಿರುವುದು! ನಾನು ಭ್ರಾಂತನಾಗಿದ್ದ ಪಕ್ಷದಲ್ಲಿ ವಿಮಲನಗರದ ಕಲೆಕ್ಟರನಾಗಿ ಬರುತ್ತಿರಲಿಲ್ಲ! ಗೋಪೀನಾಥರಾಯರ ಪ್ರೇಮಪುತ್ರಿಯಾದ ಹರಿಣಿಯೇ ನೀನಷ್ಟೆ?

ಹರಿಣಿ :—ಅಹುದು.

ಯುವಕ :—ನಾನಾರು? ನಿನಗೆ ಗೊತ್ತಿಲ್ಲವೆ?

ಹರಿಣಿ :—ಚನ್ನಾಗಿಯೂ ಗೊತ್ತಿರುವುದು.

ಯುವಕ :—ಅವಾಗಲಾದರೂ ನನ್ನನ್ನು ನೋಡಿದ್ದ ನೆನಪಿರುವುದೇ?

ಹರಿಣಿ :—ಸರ್ವಕಾಲದಲ್ಲಿಯೂ ನೆನೆಪಿದ್ದೇ ಇರುವುದು.

ಯುವಕ :—ಹಾಗಾದರೆ ನಾನಾರು?

ಹರಿಣಿ :—(ಅಸ್ಪಷ್ಟಸ್ವರದಲ್ಲಿ ತಡೆತಡೆಯುತ್ತ) ತಾವು, ಅಬಲಾ ಸನ್ಯಾಸಿನೀಮಾರ್ಗಪ್ರತಿರೋಧಕರಾದ ವಿಭ್ರಾಂತರು.

ಯುವಕ :—(ಕ್ಷುಣ್ಣನಾಗಿ) ಮತ್ತೆ ಇದೇನು?

ಹರಿಣಿ :—ಅವುದೇನು?

ಯುವಕ :—ನೀನು ಹೀಗೆ ತಾಟಸ್ಥ್ಯದಿಂದ ಮಾತನಾಡುವುದು; ಖಂಡಿತವಾಗಿಯೂ ಹಾಗೆ ಹೇಳಕೂಡದು!!

ಹರಿಣಿ :—ಇಲ್ಲ; ಹೇಳುವುದಿಲ್ಲ. ನನ್ನ ಕಯ್ಯನ್ನು ಬಿಡಬಹುದಷ್ಟೆ?

ಯುವಕ :—ಬಿಡುವೆನು.

ಹರಿಣಿ :—ಅವಾಗ?

ಯುವಕ :—ಮುಖ್ಯವಿಷಯಗಳನ್ನು ತಿಳಿದಮೇಲೆ.

ಹರಿಣಿ :—ತಿಳಿಯಬೇಕಾದುದೇನಿರುವುದು?

ಯುವಕ :—ನಿನ್ನ ನಿಜವಾದ ಪರಿಚಯವನ್ನು ಕೊಡಲಾರೆಯಾ?

ಹರಿಣಿ :—ಈಗ ಸುಳ್ಳಾದ ಪರಿಚಯವನ್ನು ಏನು ಕೊಟ್ಟಿರುವುದು?

ಯುವಕ :—ಹಾಗಾದರೆ ನೀನಾರು?

ಹರಿಣಿ:—ನಾನು ಇನ್ನಾರು? ಗೋಪೀನಾಥರಾಯರ ಪಾಲಿತ ಪುತ್ರಿ— ಹರಿಣಿ!

ಯುವಕ:—ಅದನ್ನೇನೋ ಬಲ್ಲೆನು. ಆದರೆ—

ಹರಿಣಿ:—ಆದರೆ, ಮತ್ತೇನು?

ಯುವಕ:—(ನಿಟ್ಟುಸಿರುಬಿಟ್ಟು) ಇಲ್ಲ, ಅದು ಭ್ರಾಂತಿ! ಹೋಗಲಿ; ಜಯಂತನ ನುಡಿಯಿಂದ ನನ್ನ ಸಂಕಲ್ಪವೂ ಈಗಳಿನ ಪ್ರಯತ್ನವೂ ತಿಳಿದಿರುವುವಷ್ಟೆ!

ಹರಿಣಿ:—ಎಲ್ಲವೂ ತಿಳಿದಿರುವುವು.

ಯುವಕ:—ಆ ವಿಚಾರದಲ್ಲಿ ನಿನ್ನ ಅಭಿಮತವೇನು?

ಹರಿಣಿ:—ಆವ ವಿಚಾರ?

ಯುವಕ:—ವಿವಾಹವಿಚಾರ!

ಹರಿಣಿ:—(ಗಂಭೀರತೆಯಿಂದ) ನನ್ನ ಅಭಿಮತವೇನು? ಕಲೆಕ್ಟರ ಕಯ್ಯಿಹಿಡಿವಳಾರೋ ಅವಳನ್ನು ಕೇಳತಕ್ಕುದು!

ಯುವಕ:—(ಕುತೂಹಲದಿಂದ) ಪ್ರಕೃತದಲ್ಲಿ ಕಲೆಕ್ಟರನು ವಿದ್ಯುಲ್ಲತೆಯನ್ನೇ ಗುರಿಹಿಡಿದಿರುವನು.

ಹರಿಣಿ:—ಸಂತೋಷ! ವಿದ್ವತ್ಪ್ರಭು ವಿದ್ಯುಲ್ಲತೆಯನ್ನು ಪರಿಗ್ರಹಿಸುವುದು ಸಂತೋಷಪ್ರದವಲ್ಲವೆ?

ಯುವಕ:—ಹಾಗಾದರೆ ಈ ಹಸ್ತದ ಸ್ವತ್ವವು ನನಗೇ ಸೇರಿದುದು? (ಎಂದವಳ ಕೈಯ್ಯನ್ನು ಮೇಲಕ್ಕೆತ್ತಿದನು.)

ಹರಿಣಿ:—(ಕಯ್ಯನ್ನು ಬಿಡಿಸಿಕೊಂಡು, ಗಂಭೀರಸ್ವರದಿಂದ) ಕಲೆಕ್ಟರ ಮಹಾಶಯ! ಕ್ಷಮಿಸಿರಿ; ತಾವು ನ್ಯಾಯವಿಧಾಯಕರು! ತತ್ತ್ವವಿದರು!! ನಾನು ಕೇವಲವಿರಕ್ತೆಯಾದ ಅಬಲಾಸನ್ಯಾಸಿನಿ! ಮತ್ತೂ ವಿಚಾರಮಾಡಿ ನೋಡಿರಿ! ಈ ಮಂದಭಾಗಿನಿ ವಿಷಯಪರಿತೃಪ್ತಿಗಾಗಿ ನಿರ್ಮಿಸಲ್ಪಟ್ಟವಳೆಂದು ಭಾವಿಸಬಾರದು. ತಮ್ಮ ನೈಷ್ಠಿಕಧರ್ಮಕ್ರಿಯಾಭಿನಿವೇಶನದಲ್ಲಿ ಮಟ್ಟಕ್ಕೇ ಯಥಾಮತಿ ಪ್ರೋತ್ಸಾಹಕೆಯಾಗಿ ನಿಲ್ಲತಕ್ಕವಳು; ತಮ್ಮ ವಿಷಯಪರಿತೃಪ್ತಿಗೆ ಬೇರೆಡೆಯಲ್ಲಿ ಗಮನಿಸಬಹುದಲ್ಲವೆ? ನನಗಿನ್ನು ಅಪ್ಪಣೆಯಾಗಲಿ!

ಯುವಕನಿಗೆ ಆಕಸ್ಮಿಕವಾಗಿ ಪೂರ್ವವೃತ್ತಾಂತವಾವುದೋ ಸ್ಮೃತಿಪಥವನ್ನಡರಿತು; ಹರಿಣಿಯ ಕಯ್ಯನ್ನು ಬಿಟ್ಟು, ಕಂಪಿತಸ್ವರ ದಿಂದ, "ಹರಿಣಿ! ಕ್ಷಮಿಸು; ನಾನು ಕಾಮಾತುರನಲ್ಲವೆಂದು ನಂಬಿ ಕ್ಷಮಿಸು. ಆವುದನ್ನೇ ಆಗಲಿ, ಸಾವಧಾನರಾಗಿ ಸಮಾಲೋಚಿಸಿ ಮಾಡಬೇಕೆಂಬುದನ್ನು ತಿಳಿದೂ, ನಾನು ನಿನ್ನ ಹಸ್ತಸ್ಪರ್ಶವನ್ನು ಮಾಡಿದುದಕ್ಕಾಗಿ ಮತ್ತೆ ಮತ್ತೆ ಕ್ಷಮೆಯನ್ನು ಬೇಡುವೆನು; ಆದರೆ ನೋಡು, ವಿದ್ಯುಲ್ಲತಾ! ನಾನು ಕರ್ತವ್ಯವಿಮುಖನಾದ ವಿಧರ್ಮಿ ಯಾಗಿಲ್ಲ. ಸತ್ಯಕ್ಕೆ ವಿಮುಖನಾಗಿ ನಡೆಯತಕ್ಕವನೂ ಅಲ್ಲ. ಪ್ರೇಮ ಪಿತೃವಿನ ಆಣತಿಯೂ, ನಿನ್ನ ಮೇಲೆ ನಿಜಭಾರ್ಯೆಯಲ್ಲಿ ಹೇಗೋ ಹಾಗೆ ಅವ್ಯಾಜಾವಿರ್ಭೂತವಾದ ಸ್ನೇಹಾನುಬಂಧವೂ, ನನ್ನನ್ನು ಇಲ್ಲಿಗೆ ಬಂದು ಹೀಗೆ ಮಾಡುವಂತೆ ಪ್ರೇರಿಸಿತಲ್ಲದೆ ಬೇರೆಯಿಲ್ಲ. ನಿನ್ನ ದಾರಿಗೆ ನಾನೆಂದಿಗೂ ತಡೆಯಾಗುವನಲ್ಲ. ನೀನು ಯಥೇಷ್ಟವಾಗಿ ಚರಿಸಬಹುದು," (ಹೇಳುತಿದ್ದಂತೆಯೇ ಯುವಕನ ಶಕ್ತಿ ಕುಂದುತ್ತ ಬಂದಿತು; ಆದರೂ ಮೆಲ್ಲಮೆಲ್ಲನೆ) "ಆದರೆ ಹೇಳು, ಹರಿಣಿ! ನೀನು ಆ ನನ್ನ ಪ್ರಾಣ–ಮಣಿ–ಮಾಲೆ."

ಹರಿಣಿ ಕೌತುಕದಿಂದ ತಲೆಯೆತ್ತಿ ನೋಡಿದಳು. ಯುವಕನು ಕೆಳಗೆ ಬೀಳುತ್ತಿದ್ದುದನ್ನು ಕಂಡಳು; ಮುಂದೆ ತಡೆಯಲಾರದೆ ಹೋದಳು. ತನ್ನಲ್ಲೇ, "ಇನ್ನು ಸಾಕು, ಈ ವ್ಯರ್ಥಜೀವನಧಾರಣವು ಇಷ್ಟಕ್ಕೆ ಸಾಕು; ಆದುದಾಗಲಿ, ನನ್ನ ಕರ್ತವ್ಯವನ್ನು ನಾನಿನ್ನು ಮಾಡುವೆನು;" ಎಂದು ಹೇಳಿಕೊಳ್ಳುತ್ತ ಬೀಳುತಿದ್ದ ಯುವಕನನ್ನು ಕುಳ್ಳಿರಿಸಿ ಉಪಚರಿಸತೊಡಗಿದಳು. ಆಗಳಿನ ಸ್ಥಿತಿಯಲ್ಲಿ ಹರಿಣಿಯ ಅವಸ್ಥೆ ಹೇಗಿದ್ದಿತೆಂಬುದನ್ನು ಹೇಳಲಾರೆವು. ನಿಜಭರ್ತಾರನು ಪೂರ್ವಸ್ಮೃತಿ ಯಿಂದ ಸಂತಪ್ತನಾಗಿ ಕಷ್ಟದಶೆಯನ್ನನುಭವಿಸುತ್ತ ಮೂರ್ಛಿಸು ತ್ತಿರುವ ವೇಳೆಯಲ್ಲಿ ತಾನೂ ಅಗಲಿಕೆಯಿಂದ ಸಂತಪಿಸುತ್ತಿದ್ದರೂ ಸತೀ ಧರ್ಮಪರಿಪಾಲನೈಕಧುರೀಣೆಯಾದ ಸೀತಾದೇವಿಯ ಮನೋಭಾವ ವೆಂತಿದ್ದುದೆಂಬುದನ್ನು ಉತ್ತರರಾಮಚರಿತ್ರೆಯಲ್ಲಿ ಓದಿ ಬಲ್ಲವರು ಹರಿಣಿಯ ಸ್ಥಿತಿಯೂ ಅಂತೆಯೇ ಆಗಿದ್ದಿತೆಂದು ಸುಲಭವಾಗಿ

ತಿಳಿದುಕೊಳ್ಳಬಹುದು. ಹರಿಣಿ, ಪರವಶನಾಗಿ ಕುಳಿತಿದ್ದ ಯುವಕನನ್ನು ನೋಡುತ್ತ ಕಡುದುಗುಡದಿಂದ ನಯನಾರವಿಂದಗಳಲ್ಲಿ ಸಂತತಧಾರೆಯಾಗಿ ಹರಿಯುತ್ತಿದ್ದ ಬಿಸುನೀರನ್ನು ತಡೆಯಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗದೆ ಏರಿಬರಲು, ಅದು ಯುವಕನ ದೇಹವನ್ನು ನನೆಯಿಸುತ್ತಿದ್ದಿತು. ಕಡೆಗೆ ಶೋಕಾಧಿಕ್ಯದಿಂದ ಉನ್ಮಾದಿನಿಯಂತಾಗಿ, —"ಎಲೈ, ಸರ್ವೇಶ್ವರ! ಇನ್ನೆಷ್ಟು ದಿನಗಳನ್ನು ಈ ಅಜ್ಞಾತವೃತ್ತಿಯಲ್ಲಿ ಕಳೆಯಬೇಕು? ಇಂತಹ ಅನುಪಲಭ್ಯವವಸ್ತುವಿನ ದುರಂತಚಿಂತೆಯನ್ನು ನೋಡಿಯೂ ಇನ್ನೆಷ್ಟುಕಾಲ ಕಾಠಿನ್ಯವನ್ನು ವಹಿಸಬೇಕು? ದಯಾಮಯ! ಜೀವನಾಧಾರಸೂತ್ರಕ್ಕೆ ಮುತ್ತಿರುವ ಕೀಟಗಳ ಬಾಧೆಯನ್ನು ಹೋಗಲಾಡಿಸದಿರುವ ಈ ಜನ್ಮವನ್ನು ಇನ್ನು ಸಾಕುಮಾಡು" ಎಂದು ಹೇಳುತ್ತ ಕೆಲಹೊತ್ತು ಸುಮ್ಮನಿದ್ದು, ಬಳಿಕ ಎಚ್ಚೆತ್ತು, ಯುವಕನ ಬಲಗಯ್ಯನ್ನು ಹಿಡಿದು, ಪ್ರೇಮವ್ಯಂಜಕಸ್ವರದಿಂದ ಕೂಡಿ, ಅಮೃತಧಾರಾಮಯವಾದ ಮೃದುವಾಣಿಯಿಂದ—"ಪ್ರಭು! ಏಳಿರಿ, ಎಚ್ಚರಿಕೆಯನ್ನು ಹೊಂದಿರಿ! ಇದೇಕೆ ಅಧೀರರಾಗಿರುವಿರಿ? ಇದು ಪುರುಷಧರ್ಮವಿರೋಧಿಯಲ್ಲವೆ?"

(ಯುವಕನು ಅರ್ಧನಿಮೀಲಿತನಯನನಾಗಿ ಬಳಲಿಕೆಯಿಂದ ಕಯ್ಯನ್ನು ಮುಂದಕ್ಕೆ ನೀಡಿದನು).

ಹರಿಣಿ:—(ಯುವಕನ ಕಯ್ಯನ್ನು ಕಣ್ಣಿಗೊತ್ತಿಕೊಂಡು) ಪ್ರಭು! ಧೈರ್ಯವನ್ನವಲಂಬಿಸುವುದೇ ಮಾನವನ ಧರ್ಮವು.

ಯುವಕ:—(ಭ್ರಾಂತನಂತೆ ಧಿಗ್ಗನೆದ್ದು ಅನುಕಂಪಿತಸ್ವರದಿಂದ) ಹರಿಣಿ, ಕ್ಷಮಿಸು; ನನ್ನ ಹಿಂದಿನ ಅಪರಾಧಗಳನ್ನು ಕ್ಷಮಿಸು. ನನ್ನ ಇಂದಿನ ತಿಳಿವುಗೇಡಿತನಕ್ಕಾಗಿ ನಾನು ಎಂದೆಂದಿಗೂ ಅನುತಾಪಾನಲದಿಂದ ತಪಿಸಬೇಕಾಯಿತು. ಇನ್ನು ನನ್ನ ಸುಖಜೀವನದಾಸೆ ಕೊನೆಗಂಡಂತೆಯೋ ಸರಿ.

ಹರಿಣಿ:—(ಎದ್ದುನಿಂತು, ಯುವಕನ ಪಾದಧೂಳಿಯನ್ನು ಶಿರಸ್ಸಲ್ಲಿ ಧಾರಣೆಮಾಡಿ, ವಿನಯದಿಂದ) ಪ್ರಭು! ಕ್ಷಮಿಸಬೇಕು! ತಮ್ಮ ಇಂತಹ ನಿರಾಶಾಸೂಚಕವಾದ ಕಠಿಣವಾಕ್ಯದಿಂದ ಈ ದೀನಚೇತಸ್ಸನ್ನು

ಕುಂದುತಿರುವುದು ; ತಮ್ಮಿಂದ ಅವಿವೇಕವೇನೂ ನಡೆದಿಲ್ಲ. ಮಾನವ ನಿಂದ ಮಾಡಲ್ಪಡಬಹುದಾದುದೇನೋ ಅದೇ ಮಾಡಲ್ಪಟ್ಟಿರುವುದು. ನಾನು ತಮ್ಮನ್ನಗಲಿದು ಮತ್ತೆಲ್ಲಿಗೂ ಹೋಗಬೇಕಾದುದಿಲ್ಲ. ತಮ್ಮ ಸೇವಾವೃತ್ತಿಯಲ್ಲಿಯೇ ಇದ್ದು ಇಹಜೀವನನೌಕೆಯನ್ನು ನಡೆಯಿಸ ಬೇಕೆಂಬುದೇ ನನ್ನ ಅಭಿಮತವು.

ಯುವಕ:—(ಬಿಸುಸುಯ್ಯುತ್ತ) ಹರಿಣಿ! ನಾನು ಪರಸ್ವಾಪ ಹಾರಿಯಾಗಲೊಲ್ಲೆನು. ನಿನ್ನ ನೈಷ್ಠಿಕವೃತ್ತಿಗೆ ಲೋಪವನ್ನು ತರಬೇ ಕೆಂಬುದು ನನ್ನ ಮನೋಗತವಲ್ಲ. ತಕ್ಕಮಟ್ಟಿಕಲ್ಕು ಇಂತಹ ನೈಷ್ಠಿಕ ಬ್ರಹ್ಮಚರ್ಯೆಗೆ ಉತ್ತೇಜನವನ್ನು ಕೊಡಬೇಕೆಂಬುದೇ ನನ್ನ ಯಥಾರ್ಥ ಸಂಕಲ್ಪವು; (ಕುತೂಹಲದಿಂದ) ಆದರೆ ಹರಿಣಿ! ನೀನು ನನ್ನ ಬಳಿಯಲ್ಲಿ ಸೇವಾವೃತ್ತಿಯಿಂದಿರುವೆನೆಂದ ಮಾತು ಕೌತುಕಕ್ಕೆ ಸ್ಥಾನವಾಗಿರು ವುದು ; ಅದೇನು ಅಭಿಪ್ರಾಯವು? ಅದರಿಂದ ಪ್ರಯೋಜನವೇನು?

ಹರಿಣಿ :—ಅದೊಂದು ನನ್ನ ಸ್ವೀಕೃತವ್ರತವೆನ್ನುವ. ಪ್ರಯೋಜ ನವು ಪರ್ಯವಸಾನದಲ್ಲಿ ಪ್ರತ್ಯಕ್ಷಪ್ರಮಾಣದಿಂದ ತಿಳಿಯಲಾಗುವುದು. ಆದರೆ ಆದೊಂದು ಭಿಕ್ಷೆಮಟ್ಟಕ್ಕೆ ದೊರೆತರೆ ಸಾಕು?

ಯುವಕ:—(ನಿಟ್ಟುಸಿರುಬಿಟ್ಟು) ಆಗಲಿ. ನಿನ್ನ ಭಿಕ್ಷೆ ಧರ್ಮೈಕ ದೃಷ್ಟಿಯಿಂದ ಸಂಗ್ರಾಹ್ಯವಾಗಿರುವುದು; ಆಲೋಚಿಸತಕ್ಕುದ್ದಿಲ್ಲ. ಭಗವತ್ಕಟಾಕ್ಷವಿದ್ದರೆ ನಿನ್ನ ಸದಾಚರಣೆಗೆ ನನ್ನಿಂದಲೂ ಉತ್ತೇಜನವು ದೊರೆಯದಿರದು.

ಹರಿಣಿ:—(ಆಶ್ವಾಸನದಿಂದ) ಹಾಗಿದ್ದರೆ ಇನ್ನು ಅನುಮತಿಯೆ?

ಯುವಕ :—ಎಲ್ಲಿಗೆ ಹೋಗಬೇಕು?

ಹರಿಣಿ:— ಪುಷ್ಕರಿಣಿಗೆ.

ಯುವಕ :—ಒಂಟಿಯಾಗಿ ಹೋಗುವೆಯಾ? ಕತ್ತಲೆಯಾಗುತ್ತಿ ರುವುದಲ್ಲ?

ಹರಿಣಿ:—ಭಯವೇನು? ಬೇಗ ಬಂದುಬಿಡುವೆನು.

(ಅಷ್ಟರಲ್ಲಿಯೇ ಭವನದ ಉಪ್ಪರಿಗೆಯ ಮೇಲ್ಗಡೆಯಿಂದ "ಶಚೀಕಾಂತಾ! ಶಚೀಕಾಂತಾ! ಹೊತ್ತು ಏರುತ್ತಿರುವುದು; ಬೇಗ ಬಾ" ಎಂಬ ಶಬ್ದವು ಕೇಳಬಂತು.)

ಹರಿಣಿ:—(ಸವಿತರ್ಕಭಾವದಿಂದ) ಜಯಂತನು ಕೂಗುವನು. ಇಲ್ಲಿಯ ವಿದ್ಯಮಾನಗಳನ್ನು ಆತನೂ ನೋಡಿರಬಹುದು. ಆತನು ನೋಡುವುದು ಅನುಕೂಲವಲ್ಲದೆ ಪ್ರತಿಕೂಲವಲ್ಲ; ಅಲ್ಲದೆ, ಮತ್ತಾರು ನೋಡಿದ್ದರೂ ಭಯವು ತಾನೇ ಏನು? ಸ್ತ್ರೀಯ ಕರ್ತವ್ಯವಾವುದೋ ಅದನ್ನೇ ನಾನಿಂದು ಕಯ್ಕೊಂಡಿರುವೆನು! ವಿಚಾರಹೀನರಾದ ಪಾಪದೃಷ್ಟಿಗಳು ನನ್ನಲ್ಲಿ ವಿಪರೀತಭಾವಗಳನ್ನು ಕಲ್ಪಿಸುವರಾದರೆ ಕರ್ಮಫಲವೂ ಸಿದ್ಧವಾಗಿಯೇ ಇರುವುದು. ನನ್ನ ಇಂದಿನ ಕಾರ್ಯವು ಸಾಧುವೊ, ಅಸಾಧುವೊ ಪ್ರತ್ಯಕ್ಷಪ್ರಮಾಣದಿಂದ ತಾನಾಗಿಯೇ ತಿಳಿಯಬರುವುದು. ನನಗಿನ್ನು ಅಪ್ಪಣೆಯಾಗಲಿ!

ಯುವಕನು—(ಸಂದೇಹದಿಂದ ಹರಿಣಿಯನ್ನೇ ನೋಡುತ್ತ) ಹರಿಣಿ! ಇದರಲ್ಲಿ ಏನೋ ರಹಸ್ಯವಿದ್ದೇ ಇರಬೇಕು. ನನಗೆ ನಿನಗೆ ಏನೋ ಪೂರ್ವಸಂಬಂಧವು ಇಲ್ಲದಿದ್ದರೆ ಇಷ್ಟು ಗಾಢವಾದ ಪ್ರೇಮವು ಆವಿರ್ಭವಿಸಿ ಚಿತ್ತವೃತ್ತಿ ಹೀಗಾಗುತ್ತಿರಲಿಲ್ಲ. ನೀನು ಯಥಾರ್ಥಾಂಶವನ್ನು ಮರೆಯಿಸಿರುವೆ; ನನ್ನ ಬಳಿಯಲ್ಲಿ ಸೇವಾವೃತ್ತಿಯನ್ನು ಯಾಚಿಸುವೆ; ಅದು ನಿನ್ನ ಜನ್ಮ ವ್ರತವೆನ್ನುವೆ; ನಿನ್ನ ಪೂರ್ಣಪರಿಚಯವು ನನಗೆ ದೊರಿಯದೆ ಕೌತುಕಕ್ಕೆಡೆಯಾಗಿರುವುದು. ಬಳ್ಳಿದಿರಲಿ, ಏನೋ ಪ್ರತ್ಯಕ್ಷಪ್ರಮಾಣದಿಂದ ತಿಳಿಯಲಾಗುವುದೆನ್ನುವೆಯಲ್ಲ,—ನೋಡುವ. ನೀನಿನ್ನು ಪುಷ್ಕರಿಣಿಗೆ ಹೋಗಿ ಬೇಗ ಬಾ. (ಎಂದು ಹಿಂದಿರುಗಿದನು.)

ಹರಿಣಿ, ಒಮ್ಮೆ "ಜೀವರತ್ನವೇ" ಎಂದು ಮೆಲ್ಲನೊರೆದು, ಅಷ್ಟರಲ್ಲೇ ಎಚ್ಚತ್ತು, "ಪ್ರಭುಸಮ್ಮುಖದಲ್ಲಿ ನಾನೇಕೆ ಮರೆಯಿಸಲಿ?" ಎಂದು ಹೇಳುತ್ತ ಹೊರಟು ಹೋದಳು.

ಚತುರ್ಥ ಪರಿಚ್ಛೇದ

(ಸಂದಿಗ್ಧಸಮಯ)

ಕರ್ತವ್ಯವಿಮುಖರ ಕುತ್ಸಿತವ್ಯಾಪಾರವನ್ನು ನೋಡಲಾರದೆ ಕರ್ಮಸಾಕ್ಷಿ ಕಣ್ಮರೆಯಾದನು! ಕರ್ತವ್ಯನಿರತರನ್ನು ಕಟಾಕ್ಷಿಸಬೇಕೆಂದು, ಕಲಾನಿಧಿ ಕ್ಷೀಣಕಲೆಯಿಂದಲೇ ತಲೆದೋರಿದನು; ಆದರೆ, ಭವಿಷ್ಯತ್ತನ್ನು ತಿಳಿದುದರಿಂದಲೋ ಹೇಗೋ, ಕೂಡಲೆ ಮುಗಿಲಸಂದಣಿಯಲ್ಲಿ ಮರೆಯಾದನು. ಪೃಥ್ವೀದೇವಿ ನಿಶಾಗಮನವನ್ನು ತಿಳಿದು ಕಳವಳಿಸುತ್ತ ಕಂದಿ ಕುಂದುತ್ತಿದ್ದಳು. ಸಂಧ್ಯಾದೇವಿಯ ಮನವುಲ್ಲಾಸಕ್ಕಾಗಿ ಪುರವಾಸಿಗಳು ದೀಪೋತ್ಸವಕಾರ್ಯಸಮಾರಂಭದಲ್ಲಿ ತತ್ಪರರಾದರು. ಇಂತಹ ವೇಳೆಯಲ್ಲಿ ಸುಪ್ರಸಿದ್ಧಪುರುಷನಾದ ಗೋಪೀನಾಥನು ನಿಜಭವನದ ಮುಂಗಡೆಯ ಅಂಗಳದಲ್ಲಿ ಮಗನೊಡನೆ ಕುಳಿತು ಮಾತನಾಡುತ್ತಿದ್ದನು. ತಂದೆಮಕ್ಕಳಿಬ್ಬರ ಮುಖದಲ್ಲಿಯೂ ಕಿರುನಗೆ! ಇಬ್ಬರ ಭಾವವೂ ಆನಂದೋತ್ಸಾಹಪರಿಪೂರ್ಣ!!

ಗೋಪೀ:—ಕಡೆಗೂ ಹರಿಣಿ ಕಡೆಗಣಿಸಿಬಿಟ್ಟಳಲ್ಲವೆ?

ಜಯಂತ:—ಅವಳು ನುಡಿಯಲ್ಲಿ ಕಡೆಗಣಿಸಿದ ಮಟ್ಟಕ್ಕೇ ಏನು? ಅವಳ ಮುಖಭಾವ, ನೋಟ, ಸ್ವರ,—ಇತ್ಯಾದಿಗಳಿಂದ ಶಚೀಕಾಂತನ ಅನುರಾಗಾನುಬಂಧಿನಿಯಾಗಿರುವಂತೆ ತಿಳಿದು ಬಂದಿರುವುದು! ಇದರ ಮೇಲೆ ಪ್ರತ್ಯಕ್ಷಪ್ರಮಾಣಕ್ಕಾಗಿ ತೋಟದ ಕಡೆಗೆ ಅವನನ್ನೇ ಕಳಿಹಿದುದಾಯಿತು. ಅಲ್ಲಿ ಅವನು ನಾನು ಸೂಚಿಸಿದ್ದಂತೆಯೇ ನಡೆಯಿಸಿದನು; ಮಿಕ್ಕ ವಿದ್ಯಮಾನಗಳೆಲ್ಲವೂ ಸಂಶಯಕ್ಕೇ ಸಂಶಯವನ್ನುಂಟು ಮಾಡುತ್ತಿರುವುವು.

ಗೋಪೀ:—ಆದರೂ ಒಮ್ಮೆ ಅವನನ್ನೇ ಇದಿರಾಗಿ ಕೇಳಿ ಮಾಡುವುದು ಮೇಲು! ಎಲ್ಲಿ? ಇನ್ನೂ ಆತನು ಬರಲಿಲ್ಲ!

ಜಯಂತ:—ಮೃಗವು ಕಯ್ಯುವಶವಾದಮೇಲಲ್ಲವೆ ಬೇಟೆಗಾರನು ಹಿಂದಿರುಗುವುದು? (ತಿರುಗಿ ನೋಡಿ) ಇದೋ ಬಂದೇಬಂದನು!

ಗೋಪೀ :—ಹೇಗಾದರೂ ಆಗಲಿ, ಅವರಿಬ್ಬರೂ ಸುಖದಿಂದಿರುವುದೇ ನನ್ನ ಮುಖ್ಯವಾದ ಅಭೀಷ್ಟವು. (ಇಷ್ಟರಲ್ಲಿ ಶಚೀಕಾಂತನು ಅವರು ಕುಳಿತಿದ್ದ ಸ್ಥಳಕ್ಕೆ ಬಂದು ನಿಂತನು).

ಜಯಂತ :—ಅಣ್ಣಾ! ಕುಳಿತುಕೊ, ಇಷ್ಟು ತಡವಾಯಿತೇಕೆ ?

ಗೋಪೀ :—ಪ್ರಯತ್ನದ ಫಲವನ್ನು ತಿಳಿದಮೇಲಲ್ಲವೇ ಸ್ಥಳವನ್ನು ಬಿಟ್ಟು ಬೇರೆಕಡೆಗೆ ಬರುವುದು ?

ಜಯಂತ :—(ಶಚೀಕಾಂತನ ಕೈಹಿಡಿದೆಳೆದು ಒಳಿಯಲ್ಲಿ ಕುಳ್ಳಿರಿಸಿಕೊಂಡು) ಅಣ್ಣಾ! ಹೇಳು? ಮೃಗವೇನೋ ಬಲೆಗೆ ಬಿದ್ದಿರುವುದು. ಇನ್ನು ಮುಂದಣ ಕಾರ್ಯಕ್ಕೆ ತಡೆಯೇನು ?

ಶಚೀ :—ಅದು ಅಷ್ಟರಲ್ಲಿಯೇ ನಿಲ್ಲಬೇಕು.

ಜಯಂತ :—ಅದೇಕೆ ? ಅನಂಗೀಕಾರವೊ ?

ಶಚೀ :—ಹಾಗೆಯೇ !

ಜಯಂತ :—ಹೇಗೆ? ವಿವಾಹವೇ ಅನವಶ್ಯಕವೋ? ನೋಡುದದಲ್ಲೇ ಪರ್ಯವಸಾನವೊ ?

ಶಚೀ :—ನೀನು ಊಹಿಸುವುದೇನು ?

ಜಯಂತ :—ನನ್ನ ಊಹೆಯೇಬೇರೆ!

ಶಚೀ :—ಹೇಳು ನೋಡುವ.

ಗೋಪೀ :—ನಾನೂ ಕೇಳಲಿಚ್ಛಿಸುವೆನು !

ಜಯಂತ :—ಶಚೀಕಾಂತನಿಗೂ ಹರಿಣಿಗೂ ಪುನರ್ವಿವಾಹದ ಅವಶ್ಯಕತೆಯಿಲ್ಲವೆಂಬುದೇ ನನ್ನ ಭಾವನೆ!

ಗೋಪೀ :—(ಕುತೂಹಲದಿಂದ) ಹಾಗೆಯೇ! ಅದೇನುಕಾರಣ?

ಜಯಂತ :—ಇಬ್ಬರ ಮನೋಭಾವವೂ ಒಂದೇ ಆಗಿ, ಪೂರ್ವದ ಆವುದೋ ಒಂದು ನಿಗೂಢವಾದ ಬಲವತ್ಸಂಬಂಧವನ್ನು ಹೊರಪಡಿಸುತ್ತಿರುವುದು. ಇದರ ಮೇಲೆಯೂ ಮತ್ತೆ ಸಂಬಂಧಪ್ರಸ್ತಾವವೇನು ?

ಗೋಪೀ :—ಶಚೀಕಾಂತ! ನೀನು ಹಿಂದೆ ಯಾವಾಗಲಾದರೂ ಹರಿಣಿಯನ್ನು ನೋಡಿದ್ದೆಯಾ?

ಶಚೀ:—ಹರಿಣಿಯುನ್ನು ನೋಡಿದುದು ಈಗಲೇ! ಹಿಂದೆ ನಾನೆರಡು ಬಾರಿ ಬಂದಿದ್ದಾಗಲೂ ಅವಳು ವಿದ್ಯಾಸಾಗರದಲ್ಲಿಯೇ ಇದ್ದಳು. ಆದರೂ ಅವಳನ್ನು ನೋಡಿದಾಗಳಿಸಿಂದಲೂ ಅವಳ ಆಕಾರ, ಗತಿ, ಸ್ವಭಾವ, ಇವುಗಳು ನನ್ನ ಕೇವಲವಾದ ಆತ್ಮೀಯವ್ಯಕ್ತಿಯೊಂದನ್ನು ನೆನೆಪಿಗೆ ತಂದು ಸಂದೇಹದಲ್ಲಿ ಮುಳಿಗಿಸಿಬಿಟ್ಟಿರುವುವು. ಅದರದು ಬರಿಯ ಭ್ರಾಂತಿಯೇ ಇರಬೇಕಲ್ಲದೆ ದಿಟವಿರಲಾರದು.

ಗೋಪೀ :—ನಿನಗೂ ಈಕೆಗೂ ಮತ್ತಾವ ಬಾಂಧವ್ಯವಾದರೂ ಇರಬಹುದೇ ?

ಶಚೀ :—ನನಗೆ ಮತ್ತಾವ ಸಂಟತನವೂ ತಿಳಿಯದು.

ಜಯಂತ :—ನೀವು ಏನನ್ನಾದರೂ ಹೇಳಿರಿ. ಆವುದೋ ಬಲವ ದ್ಬಂಧವು ನಿಮ್ಮಿಬ್ಬರನ್ನೂ ಆಕ್ರಮಣಮಾಡಿರುವುದೆಂದು ನಾನು ನಂಬುವೆನು. ನನ್ನ ಸಂದೇಹನಿವಾರಣೆಗೆ ಸಾಕಾದಷ್ಟು ನಿದರ್ಶನಗಳೂ ದೊರೆತಿರುವುವು.

ಶಚೀ :—ಏತರಿಂದ ?

ಜಯಂತ :—ತೋಟದಲ್ಲಿ ನಡೆದ ವಿದ್ಯಮಾನದಿಂದ ; —ಸಂದೇಹ ಪರಿಹಾರಕವಿದ್ಯಮಾನದಿಂದ !

ಶಚೀ :—ವಿದ್ಯಮಾನವೆಂತಹದು ?

ಜಯಂತ :—ನಿಮ್ಮಿಬ್ಬರ ಪರಸ್ಪರವರ್ತನವು.

ಶಚೀ :—ಮುಖ್ಯವಿಷಯಗಳೂ ಸ್ಪಷ್ಟಪಟ್ಟುವೋ ?

ಜಯಂತ :—ಪಟ್ಟಂತೆಯೇ ಸರಿ.

ಶಚೀ :—ಏನು ? ಈಗ ನೀನು ಹೇಳಿದುದೋ ?

ಜಯಂತ :—ಅಹುದು.

ಗೋಪೀ :—ಮುಂದಣ ವಿಚಾರದಲ್ಲಿಯೊ ?

ಶಚೀ :—ಮುಂದಣ ಮಾತೇನಿನ್ನು ? ಅದು ಅಷ್ಟಕ್ಕೇ ನಿಲ್ಲಬೇಕು.

ಗೋಪೀ :—ಶಚೀಕಾಂತಾ ! ನೋಡು ; ಜಯಂತನಿಗೆ ವಧುವೂ ನಿಶ್ಚಿತೆಯಾಗಿರುವಳು. ವಾಗ್ದಾನವು ನಡೆದು ವಿವಾಹ ಮುಹೂರ್ತವೂ ಗೊತ್ತಾಗಿರುವುದು. ಸಂಬಂಧವೂ ಉತ್ತಮೋತ್ತಮವಾಗಿರುವುದು.

ತ್ವರೆಯೂ ಬಹುಳವಾಗಿರುವುದು ; ತಿರಸ್ಕರಿಸುವಂತಿಲ್ಲ. ಆದರೆ ಅದಕ್ಕೆ ಮುಂಚಿತವಾಗಿಯೇ ನಿಮ್ಮಿಬ್ಬರಿಗೂ ಈ ಸಂಬಂಧವು ಬಳೆದುಬಿಟ್ಟರೆ ನನ್ನ ಸಂತೋಷಕ್ಕೆ ಪರಿಮಿತಿಯೇ ಇಲ್ಲ.

ಶಚೀ :—ಅಹುದು, ತಮ್ಮ ಅಭಿಮತವನ್ನು ತಿರಸ್ಕರಿಸುವುದಕ್ಕೆ ನಾನೂ ಶಕ್ತನಲ್ಲ. ಆದರೆ, ಇತರರಿಗೆ ಅನಿಷ್ಟವನ್ನುಂಟುಮಾಡುವ ಕಾರ್ಯದಲ್ಲಿ ಕೈನೀಡುವುದಕ್ಕೂ ನನಗೆ ಮನಸ್ಸಿಲ್ಲ.

ಗೋಪೀ :—ಅಂತಹದೇನು ? ಹರಿಣಿಗೆ ಇಷ್ಟವಿಲ್ಲವೆ ?

ಶಚೀ :—ಪುನರ್ವಿವಾಹದಲ್ಲಿ ಅವಳಿಗೆ ಇಷ್ಟವಿಲ್ಲವಂತೆ.

ಗೋಪೀ :—ಹೇಗೆ ?

ಶಚೀ :—ಅದರಿಂದ ಸುಖಸಂತೋಷವಿಲ್ಲದುದೇ—

ಗೋಪೀ :—ಹಾಗೆಂದರೇನು ? ಅವಳ ಉತ್ತರವೇನು ?

ಶಚೀ :—ಚಿರಕಾಲವೂ ಸನ್ಯಾಸಿನಿಯಂತಿರಬಲ್ಲೆನೆಂಬುದೇ—

ಜಯಂತ :—(ವ್ಯಂಗ್ಯಭಾವದಿಂದ ನಗುತ್ತ) ಸನ್ಯಾಸಿನಿಗೆ ಧ್ಯಾನಾರ್ಹವಾದ ವಸ್ತುವಾವುದು ?

ಶಚೀ :—ಪರಾಭಿಪ್ರಾಯದ ತತ್ತ್ವಜ್ಞನೆ ಬಾರಿಸ್ಟರಾಗಿರುವ ನಿನಗಲ್ಲದೆ ನನಗೆ ಹೇಗೆ ಲಭಿಸಬೇಕು ?

ಗೋಪೀ :—ಅದೇಕೆ? ಬಾರಿಸ್ಟರಾದವನಿಗೂ ಉತ್ತಮತರದ ಪದವೀಧರನಾಗಿಯೇ ಇರುವೆಯಷ್ಟೆ ?

ಜಯಂತ :—ಅಣ್ಣಾ ! ಅದೆಲ್ಲವೂ ಹಾಗಿರಲಿ; ಹರಿಣಿ ಏನು ಹೇಳಿದಳು ? ಒಡೆದು ಹೇಳು.

ಶಚೀ :—ಇಷ್ಟೆ "ವಿವಾಹವು ಅನವಶ್ಯಕವು ; ನಮ್ಮ ಮುಖದಲ್ಲಿದ್ದುಕೊಂಡು ಯಥೋಚಿತಸೇವೆಯಿಂದ ಕಾಲವನ್ನು ಕಳೆವೆನು; —ಇದೇ ನನ್ನ ಚಿರವ್ರತವು !" ಎಂದು.

ಗೋಪೀ :—ಅದರಿಂದಾಗುವ ಪ್ರಯೋಜನವೇನು ?

ಶಚೀ :—ಪ್ರತ್ಯಕ್ಷಪ್ರಮಾಣದಿಂದ ತಿಳಿಯಬಹುದೆಂದೂ ಇದೊಂದು ಭಿಕ್ಷೆಮಟ್ಟಕ್ಕೆ ಪ್ರತ್ಯಾಖ್ಯಾನಮಾಡಲ್ಪಡಕೂಡದೆಂದೂ ಹೇಳಿಕೊಂಡಳು.

ಜಯಂತ :—(ಶಚೀಕಾಂತನ ಬೆನ್ನಮೇಲೆ ತಟ್ಟುತ್ತ) ಸರಿ, ಸರಿ! ಇನ್ನು ಸಂಶಯವಿಲ್ಲ. ದೃಢವಾಯಿತು. ಎಂದಿದ್ದರೂ ಹರಿಣಿ ಶಚೀಕಾಂತನ ಹೃದಯೇಶ್ವರಿಯೇ!! ತಡೆಯಿಲ್ಲ.

ಶಚೀಕಾಂತನು ಉಬ್ಬಿಹೋದನು. ಆನಂದಬಾಷ್ಪವು ಅವಿರಳವಾಗಿ ಪ್ರವಹಿಸಿತು. ಆದರೆ, ದುರ್ದೈವಕ್ಕೆ ಶಚೀಕಾಂತನ ಆನಂದವು ಸಹನಾತೀತವಾಯಿತು. ಆನಂದಬಾಷ್ಪವೇ ಶೋಕಬಾಷ್ಪವಾಗುವಂತೆ ಪರಿಣಮಿಸಿತು. ಅದೇಸಮಯದಲ್ಲಿ ತೋಟದ ಕಡೆಯಿಂದ ವಿಸ್ಪಷ್ಟಸ್ವರದಲ್ಲಿ "ಜಯಂತಾ—ಹೋ—ಹೋ" ಎಂಬ ಆರ್ತನಾದವು ಕೇಳಬಂತು. ಜಯಂತನು ಎದ್ದು ನಿಂತನು. ಶಂಕೆ, ಭೀತಿ, ತ್ವರೆ, ಇವೆಲ್ಲವೂ ಏಕೀಭವಿಸಲು ನಡುಗುತ್ತಿರುವ ಧ್ವನಿಯಿಂದ "ಅಪ್ಪ! ಏಳಿರಿ. ಶಚೀ! ಹೊರಡು! ನಮ್ಮ ಹರಿಣಿ, ತೋಟದಕಡೆ, ಆರ್ತನಾದ" ಎಂದು ತಡವರಿಸಿ ಹೇಳುತ್ತ ಒಂದೇ ಉಸಿರಿಗೆ ಓಡಿಹೋದನು.

ಗೋಪೀನಾಥನೂ ಶಚೀಕಾಂತನೊಡನೆ ಸಂಭ್ರಾಂತಿಯಿಂದ ಮುಂದೋರದೆ, ತೋಟದ ಕಡೆಗೆ ಹೊರಟನು. ಆದರೇನು? ಕುತ್ಸಿತರ ಸಹಕಾರಿಣಿಯಾದ ತಾಮಸಿ ಆಗಲೇ ಅಂಧಕಾರಮೋಹನಭಸ್ಮದಿಂದ ಜಗತ್ತನ್ನೇ ಮಂಕುಮಾಡಿ ಬಿಟ್ಟಿದ್ದಳು! ದಾರಿಯೇ ಕಾಣದು, ದಿಕ್ಕೇ ತೋರದು!! ಗೋಪೀನಾಥನು, "ಕೇಶೀ! ದೀಪಾ, ದೀಪಾ!! ಎಲ್ಲಿ! ಬೇಗ!" ಎಂದು ಕೂಗಿದನು. ಅಷ್ಟರಲ್ಲಿಯೇ ಕೇಶಿಯೂ ಕೈದೀವಟಿಗೆಯನ್ನು ತಂದನು. ಮೂವರೂ ತೋಟದ ಪುಷ್ಕರಿಣಿಯ ಬಳಿಗೆ ಬಂದರು; ಗೋಪೀನಾಥನು ಬಂದು ಮುಟ್ಟುವುದರೊಳಗಾಗಿಯೇ, ಬಳಲಿ, ಬೆವರನ್ನುಸುರಿಸುತ್ತ ಬಂದ ಜಯಂತನು ತಂದೆಯ ಮುಂದೆ ನಿಂತು, ನಿಟ್ಟುಸಿರುಬಿಟ್ಟು ವಿಕೃತಸ್ವರದಿಂದ, "ಸರ್ವನಾಶವಾಗಿ ಹೋಯಿತು!" ಎಂದನು.

ಗೋಪೀ :—(ತೊದಲು ನಾಲಗೆಯಿಂದ) ಹಾ! ಹಾಗೆಂದರೆ? ಹರಿಣಿಯೆಲ್ಲಿ?

ಜಯಂತ :—ಹರಿಣಿಯನ್ನು ಅಪಹರಿಸಿಬಿಟ್ಟಿರುವರು, ಸರ್ವನಾಶವಾಗಿ ಹೋಯಿತು!

ಶಚೀಕಾಂತನು ಮರ್ಮಾಹತನಾದನು. ದೇಹಪ್ರಜ್ಞೆತಪ್ಪಿ, "ಜಯಂತಾ-ಹಿಡಿ-ಬೀಳು" ಎಂದು ಕೂಗುತ್ತಿದ್ದಂತೆಯೇ ಬೀಳುವುದರಲ್ಲಿದ್ದನು.

ಜಯಂತನು ಓಡಿಬಂದು, ತಬ್ಬಿಹಿಡಿದು, ಕುಳ್ಳಿರಿಸಿದನು.

ಗೋಪೀ :—(ಹೀನಸ್ವರದಲ್ಲಿ) ಮಗು ವರ್ತಮಾನವೇನು ?

ಜಯಂತ:—ಆರೋ ಗೃಧ್ನುಗಳು ಹರಿಣಿಯನ್ನು ಅಪಹರಿಸಿರುವರು! ನಾನು ಓಡಿಹೋಗಿ ಆರೋ ಇಬ್ಬರನ್ನು ಕಂಡೆನು. ಒಬ್ಬನನ್ನು ಬೆನ್ನಮೇಲೆ ಗುದ್ದಿ ಕೆಳಗೆ ಉರುಳಿಸಿದೆನು, ಮತ್ತೊಬ್ಬನನ್ನು ಒದೆದು ಕೆಡಹಿದೆನು. ಅವರಿಬ್ಬರಲ್ಲಿ ಆರ ಮುಖವೂ ಕಾಣಲಿಲ್ಲ; ಸ್ವರವೂ ತಿಳಿಯಲಿಲ್ಲ. ಇಬ್ಬರೂ ತೋಟದ ಹೊರಗಡೆಯಲ್ಲಿ ಏಳಲಾರದೆ ಬಿದ್ದಿರುವರು. ಅತ್ಯಾಚಾರಿಗಳಾರೆಂದು ಊಹಿಸುವುದಕ್ಕೂ ಆಗುತ್ತಿಲ್ಲ.

ಗೋಪೀ :—ಅಪಹೃತೆಯಾದಳೆಂದು ನಂಬುವುದು ಹೇಗೆ ?

ಜಯಂತ :—ನನ್ನನ್ನು ಕಾಣುವುದಕ್ಕೆ ಮೊದಲು ಅವರು ಆಡಿಕೊಂಡು ಹೋಗುತ್ತಿದ್ದ ಮಾತುಗಳಿಂದ ತಿಳಿಯಬಂದಿರುವುದು.

ಶಚೀ :—(ಕುಗ್ಗಿದ ಧ್ವನಿಯಿಂದ) ಅಲ್ಲೇ ಬಿಟ್ಟು ಬಂದೆಯೇಕೆ ?

ಜಯಂತ:—ಮತ್ತೇನು ಮಾಡಬಹುದು? ಅಸಹಾಯನಾಗಿ ಕಗ್ಗತ್ತಲೆಯಲ್ಲಿ, ಹಾಗೆಯೇ ಬರಿಯ ಕೈಯಲ್ಲಿ, ಅವರನ್ನು ಇನ್ನೇನು ಮಾಡಲಾಗುವುದು? ಅವರು ನೆಲಕ್ಕೆಬಿದ್ದಮೇಲೆ ನನಗೆ ಸ್ವಲ್ಪಜ್ಞಾನೋದಯವಾದಂತಾಗಲು ಅಂಧಕಾರಸಾಹಸದಿಂದ ಏನೂ ಆಗಲಾರದೆಂದೂ, ಆವುದೂ ಉಪಾಯಾಂತರದಿಂದಲೇ ಕೊನೆಗಾಣಬೇಕೆಂದೂ ತಡೆದುಕೊಂಡು ಬೆಳಕನ್ನು ತರಲು ಬಂದೆನು.

ಶಚೀ :—ಹಾಗಾದರೆ ನಡೆ; ನಾನೂ ಬರುವೆನು.

ಜಯಂತ :—ಅಣ್ಣಾ! ಇದು ನಿನ್ನಿಂದ ಆಗತಕ್ಕ ಕೆಲಸವೂ ಅಲ್ಲ, ನೀನು ಬರತಕ್ಕ ಸಮಯವೂ ಅಲ್ಲ. ನಾನು ಕೇಶಿಯೊಡನೆ ಹೋಗುವೆನು; ನೀನು ಹೋಗಿ ವಿಶ್ರಮಿಸಿಕೊಳ್ಳುತ್ತಿರು.

ಶಚೀ :—ಹಾಗೆಯೇ ಮಾಡು, ನಾನೂ ಹೆಚ್ಚು ಹೊತ್ತು ನಿಲ್ಲಲು ಅಶಕ್ತನಾಗಿರುವೆನು (ಎಂದು ಹೇಳಿ ಭವನಾಭಿಮುಖನಾಗಿ ನಡೆದನು).

ಜಯಂತ :—ಅಪ್ಪಾ! ಶಚೀಕಾಂತನು ಒಬ್ಬನೇ ಹೋಗುತ್ತಿರುವನು; ಈಗ ಅವನ ಮೇಲೆ ದೈವವೇ ತಿರುಗಿಬೀಳುವಂತಿರುವುದು; ಇಂತಹ ಸಂದಿಗ್ಧಸಮಯದಲ್ಲಿ ಅವನನ್ನು ಒಂಟಿಯಾಗಿ ಬಿಟ್ಟಿರಲಾಗದು; ತಾವೂ ಜೊತೆಯಲ್ಲಿರುವುದು ಮೇಲು.

ಗೋಪೀ :—(ನಿಟ್ಟುಸಿರು ಬಿಟ್ಟು) "ಭಗವಂತನೇ ರಕ್ಷಕನು!" ಎಂದು ಹೇಳಿ ಶಚೀಕಾಂತನನ್ನು ಹಿಂಬಾಲಿಸಿದನು.

ಜಯಂತನೂ ಕೇಶಿಯೊಡನೆ ತೋಟದ ಹೊರಗಡೆಗೆ ಹೊರಟು ಹೋದನು.

'ದೈವೀ ವಿಚಿತ್ರಾ ಗತಿಃ' ಎಂಬುದು ಇದೇ ಅಲ್ಲವೆ? ನಾವು ಬಗೆವುದೊಂದಾದರೆ ಆಗತಕ್ಕುದೇ ಮತ್ತೊಂದಾಗುವುದು. ಭವಿಷ್ಯತ್ತನ್ನು ತಿಳಿದು ಹೇಳುವರಾರು? ಕ್ಷಣಕ್ಕೆ ಮೊದಲು ಆರ ಕಣ್ಣುಗಳಿಂದ ಆನಂದ ಬಾಷ್ಪವು ಸುರಿಯಿತೋ, ಅದೇ ಆನಂದಬಾಷ್ಪವೇ ಈಗ ಹೃದಯ ವಿದ್ರಾವಕವಾದ ಶೋಕಾಶ್ರುವಾಗಿ ಪರಿಣಮಿಸಿತು. ನಮ್ಮ ಯತ್ನವಾವುದೂ ಇಲ್ಲ, ಎಲ್ಲವೂ ದೈವಾಯತ್ತವು,—ಎಂದು ಭಾವಿಸಿ, ನಮ್ಮ ನಮ್ಮ ಕರ್ತವ್ಯವನ್ನು ನಾವು ನಾವು ಗಮನಿಸಬೇಕೆಂಬುದೊಂದಲ್ಲದೆ ನಮಗೆ ಮತ್ತಾವ ಸಮಾಧಾನವಿರುವುದು?

ಪಂಚಮ ಪರಿಚ್ಛೇದ

ವಿಷಮಸಂಕಷ್ಟ

"ಶಚೀಕಾಂತಾ! ಇದೇಕಿಂತು ಶೋಕಕಾತರನಾಗಿರುವೆ? ಸುಖದ ದಾರಿ ಮುಚ್ಚಿ ಹೋಯಿತೇ?" "ಅಪ್ಪ! ಸುಖದ ದಾರಿಯೂ ಆಹ್ಲಾದದಾಯಕವಸ್ತುವೂ ಇರಬಹುದು. ಆದರೆ, ಪ್ರಕೃತದಲ್ಲಿ ನನಗೆ ಮಟ್ಟಕ್ಕೆ ಅಜ್ಞಾತವಾಗಿರುವುದು! ನಾನು

ಸ್ವಸುಖವನ್ನು ಕೋರಿ ಚಿಂತಿಸುತ್ತಿಲ್ಲ. ಕರ್ತವ್ಯನಿರತೆಯೂ ಧರ್ಮ ಮಾರ್ಗಾನುಯಾಯಿನಿಯೂ ಆದ ಒಬ್ಬ ಅಬಲೆಯ ದುಸ್ಸ್ಥಿತಿಗೆ ಮಟ್ಟಕ್ಕೆ ಮರುಗಬೇಕಾಗಿರುವುದು.''

''ಮಗು! ಹರಿಣಿ ನನ್ನ ಪ್ರಾಣಾಧಿಕಪುತ್ರಿ. ಅವಳಲ್ಲಿ ನನಗಿರುವ ವಾತ್ಸಲ್ಯವು ಅಷ್ಟಿಷ್ಟೆಂದು ಹೇಳುವಂತಿಲ್ಲ. ಅವಳ ಗುಣ, ಶೀಲ, ಸ್ವಭಾವ, ಇತ್ಯಾದಿಗಳು ನನ್ನ ಮನಸ್ಸನ್ನೇ ವಿಸ್ಮಯಿಸಿರುವುವು! ನನ್ನಂತಹ ಮಂದಭಾಗ್ಯನಿಗೆ ಹರಿಣಿಯಂತಹ ಪುತ್ರಿಕಾರತ್ನವಾದರೂ ದಕ್ಕುವುದುಂಟೆ? ಶಚೀಕಾಂತ! ಅವಳ ಭವಿಷ್ಯತ್ಸ್ಥಿತಿಯನ್ನು ತಿಳಿಯಬೇಕೆಂಬುದೊಂದೇ ನನ್ನ ಉತ್ಕಟೇಚ್ಛೆಯಾಗಿರುವುದು.

ಈ ತೆರದ ಉತ್ತರಪ್ರತ್ಯುತ್ತರಗಳು ಕಿರುಮನೆಯಲ್ಲಿ ಕುರ್ಚಿಯ ಮೇಲೆ ಕುಳಿತಿದ್ದ ಗೋಪೀನಾಥಶಚೀಕಾಂತರಿಗೆ ನಡೆಯುತ್ತಿದ್ದುವು. ಹರಿಣಿಯ ಅಪಹರಣದಿಂದ ಆನಂದಭವನದ ಕಾಂತಿಯೇ ಹಾರಿಹೋಗಿದ್ದಿತಲ್ಲದೆ, ಹೃದಯವಿದ್ರಾವಕವಾದ ಶೋಕಾಂಧತೆ ಮನೆಯನ್ನೇ ಮಾಲಿನ್ಯಗೊಳಿಸಿದ್ದಿತು; ಇನ್ನು ಆಪ್ತೇಷ್ಟರ ಸ್ಥಿತಿಯಾದರೂ ಹೇಗಿರಬಹುದೆಂದು ಹೇಳಬೇಕೇ? ಶಚೀಕಾಂತನ ಮುಖವು ಚಿಂತಾಶೋಕಗಳಿಂದ ವಿಕೃತವಾಗಿ ಹೋಗಿದ್ದಿತು! ವಾಕ್ಛಕ್ತಿ ಕುಂದಿದ್ದಿತು!! ಗೋಪೀನಾಥನ ಸ್ಥಿತಿಯನ್ನು ವರ್ಣಿಸುವುದರಿದು! ಆದರೂ, ಆತನು ಅಧೀರನಾಗಿ ಕರ್ತವ್ಯವನ್ನು ಬಿಟ್ಟು ಕುಳಿತುಬಿಡದೆ, ಸ್ವಭಾವಸಿದ್ಧವಾದ ಸ್ಥೈರ್ಯದಿಂದಲೇ ಶಚೀಕಾಂತನಿಗೆ ಸಮಯೋಚಿತವಾಗಿ ಸಮಾಧಾನ ಹೇಳುತ್ತಿದ್ದನು. ಅದೇ ವೇಳೆಯಲ್ಲಿಯೇ ಕೇಶಿ, ಜಯಂತನ ಕಯ್ಯನ್ನು ಹಿಡಿದುಕೊಂಡು ಮೆಲ್ಲನೆ ಕಿರುಮನೆಯೊಳಗೆ ಕರೆತಂದನು. ಜಯಂತನು ತಂದೆಯ ಬಳಿಯಲ್ಲಿದ್ದ ಕುರ್ಚಿಯ ಮೇಲೆ ಕುಳಿತನು. ಆತನ ಸ್ಥಿತಿ ಆ ವೇಳೆಯಲ್ಲಿ ಬಹುಭಯಂಕರವಾಗಿದ್ದಿತು. ಮುಖವು ವಿವರ್ಣ! ಕ್ಷಣಕ್ಷಣಕ್ಕೂ ದೀರ್ಘನಿಶ್ವಾಸ!! ವಾಕ್ಛಕ್ತಿ ಲೋಪ!!! ಜಯಂತನನ್ನು ನೋಡಿ ಶಚೀಕಾಂತನು ಮತ್ತೂ ಅಧಿಕಕಾತರನಾಗಿ ಕುಳಿತನು.

ಗೋಪೀನಾಥನು ಮಗನ ಮುಖವನ್ನು ಕರವಸ್ತ್ರದಿಂದೊರಸಿ, ಕೆಲಹೊತ್ತು ಬೀಸುತ್ತ ಉಪಚರಿಸಿದನು. ಪಿತನ ಆದರದಿಂದ ಪುತ್ರನಿಗೆ

ಕ್ರಮಕ್ರಮವಾಗಿ ಪ್ರಜ್ಞಾಲಾಭವಾಗುತ್ತ ಬಂದಿತು. ಜಯಂತನು ಮೆಲ್ಲನೆ ತಲೆಯೆತ್ತಿ ಪಿತನನ್ನು ನೋಡಿದನು.

ಗೋಪೀ :—ಜಯಂತ! ಇದೇನೀಯವಸ್ಥೆ? ಹೋಗಿದ್ದ ಕೆಲಸ ವೇನಾಯಿತು ?

ಜಯಂತ :—(ನಿಟ್ಟುಸಿರು ಬಿಟ್ಟು) ಅಪ್ಪ! ನಾವು ಹೋಗುವಷ್ಟ ರಲ್ಲಿಯೇ ಅತ್ಯಾಚಾರಿಗಳು ಎದ್ದು ಹೊರಟು ಹೋಗಿದ್ದರು. ಅವರ ಮಾರ್ಗಾನುಸಂಧಾನಕ್ಕಾಗಿ ಅಲೆದಲೆದೇ ನನಗೀಯವಸ್ಥೆಯುಂಟಾ ಯಿತು! ಏನಾದರೇನು? ಮನೋರಥವು ಭಗ್ನವಾಗಿ ಹಿಂತಿರುಗ ಬೇಕಾಯಿತು !! ಹರಿಣಿಯ ಗತಿಯೇನಾಯಿತೋ ತಿಳಿಯದು!

ಗೋಪೀ :—ವೃಥಾಚಿಂತೆಯಿಂದೇನು ? ಧೈರ್ಯವನ್ನವಲಂಬಿಸು! ಶಕ್ತ್ಯನುಸಾರವಾಗಿ ನಾವು ನಮ್ಮ ಕರ್ತವ್ಯವನ್ನು ಮಾಡಿ ನೋಡುವ; ಅದರಮೇಲೆ ಅದೃಷ್ಟವೂ ದೈವಕೃಪೆಯೂ ನೆರವಾದರೆ ಎಲ್ಲವೂ ಸಫಲವೇ ಆಗಬಹುದು !

ಜಯಂತ :—ಅಹುದು, ಅದುವರೆಗೂ ಹರಿಣಿ ಜೀವಿಸಿರಬೇಕಲ್ಲವೆ?

ಗೋಪೀ :—ಮಗು ! ನಾನು ತಿಳಿದಿರುವುದಕ್ಕೂ ಹೆಚ್ಚಾಗಿ ನೀನು ಹರಿಣಿಯ ಸ್ವಭಾವ, ಗುಣ, ವಿಚಕ್ಷಣತ್ವ, ಇತ್ಯಾದಿಗಳನ್ನು ಚೆನ್ನಾಗಿ ತಿಳಿದಿರುವೆ; ಸಂದಿಗ್ಧಸಮಯಗಳಲ್ಲಿ ತಕ್ಕಂತೆ ಬಿಡುಗಡೆ ಮಾಡುವಂತಹ ಗೋಪ್ಯಮಾರ್ಗಗಳನ್ನೂ ತಕ್ಕಷ್ಟು ಸೂಚಿಸಿಯೂ ಇರುವೆ; ಆದರೂ ನೀನಿಂತು ಚಿಂತಿಸುವೆಯೇಕೆ? ಅವಳೆಂದಿಗೂ ನೀತಿ ವಿರುದ್ಧವಾದ ಆತ್ಮಹತ್ಯೆಗೆ ಮನಗುಡಲಾರಳೆಂಬನಂಬುಗೆ ನನಗಿರುವುದು.

ಶಚೀ :—ಅದು ಹೇಗೆ ನಿಶ್ಚಯವು? ಕಷ್ಟವಿಮೋಚನೆ ನಿವೃತ್ತಿ ಯಾಗದ ವೇಳೆಯಲ್ಲಿ ಸ್ತ್ರೀಯರು ಆತ್ಮಹತ್ಯೆಗೆ ಹಿಂದೆಗೆವರೆ ?

ಗೋಪೀ :—ಏನು ? ಶಚೀಕಾಂತ ಹೀಗೆನ್ನುವೆ? ನಮ್ಮ ಹರಿಣಿ ಯನ್ನು ಸ್ತ್ರೀಸಾಮಾನ್ಯದಲ್ಲಿ ಸೇರಿದ ಅಬಲಾಮಾತ್ರೆಯೆಂದು ಬಗೆದೆಯೊ ಆಕೆಯಲ್ಲಿರುವ ಧೈರ್ಯ, ಸ್ಥೈರ್ಯ, ಚಾತುರ್ಯ, ಸಾಹಸ, ಇತ್ಯಾದಿ ಯಾದ ಅನನ್ಯಸಾಧಾರಣಗುಣಗಳು ಎಂತಹ ವಿಪ್ಲವಗಳಿಂದಲಾದರೂ ಪಾರಾಗಿಸುವುವೆಂದು ತಿಳಿ?

ಜಯಂತ :—(ದೀರ್ಘಸ್ವರದಿಂದ) ಅಹುದು ; ಸಂದೇಹವಿಲ್ಲದೆ ನನ್ನ ಸೋದರೀರತ್ನವು ಅಂತಹ ಶ್ಲಾಘಾರ್ಹವಸ್ತುವೇ ಅಹುದು !!

ಶಚೀ :—ಆಗಲಿ, ಎಷ್ಟಾದರೂ ಅಬಲೆ! ಅಬಲೆ ದುರ್ಜನರ ಬಲೆಯಿಂದ ಬಿಡುಗಡೆಹೊಂದುವುದೆಂತು ?

ಗೋಪೀನಾಥನಿಗೆ ಅಭಿಮಾನವು ಉಕ್ಕಿ, '' ಶಚೀಕಾಂತ! ನಮ್ಮ ಹರಿಣಿ ಸತ್ಪುರುಷಸಮಾಜದಲ್ಲಿ ಮಟ್ಟಕ್ಕೇ ಅಬಲೆ! ಅತ್ಯಾಚಾರಿಗಳಾದ ವಿಧರ್ಮಿಗಳ ವಿಷಯದಲ್ಲಿ ಅವಳು ಪ್ರಬಲೆಯಾದ ಸಾಕ್ಷಾಚ್ಛಕ್ತಿಮೂರ್ತಿ !! ಬಲ್ಲೆಯೊ ? ''

ಅಷ್ಟರಲ್ಲಿಯೇ ಕೇಶಿ ಬಂದು ಕೈಮುಗಿದು, '' ಕುಮಾರರನ್ನು ನೋಡಲು ಅಮರನಾಥಗಂಗಾಧರರಾಯರುಗಳು ಬಂದಿರುವರು.''

ಗೋಪೀ :—(ವಿಸ್ಮಿತನಾಗಿ) ಇಷ್ಟು ಹೊತ್ತಲ್ಲೇನು ?

ಜಯಂತ :—(ತಲೆದೂಗಿ) ಏನೋ ಕಾರ್ಯಗೌರವದಿಂದ ಬಂದಿರಬಹುದು. ಬರಹೇಳು.

ಕೇಶಿ ಹೊರಟು ಹೋದನು ; ಒಂದೆರಡು ನಿಮಿಷದಲ್ಲಿಯೇ ನಾವು ಆದಿಯಲ್ಲಿ ಪ್ರಸ್ತಾಪಿಸಿರುವ ಅಮರಗಂಗಾಧರರು ಕಿರುಮನೆಯೊಳಹೊಕ್ಕು ಕೈಮುಗಿದರು.

ಗೋಪೀ :—(ಮನ್ನಣೆಯಿಂದ) ಅಯ್ಯಾ ಸುಖಾಗಮನವೆ ? ಕುಳಿತುಕೊಳ್ಳಿರಿ.

ಗಂಗಾಧರನೂ ಅಮರನೂ ಇಬ್ಬರೂ ಕುರ್ಚಿಯನ್ನೆಳೆದು ಕುಳಿತುಕೊಂಡರು.

ಜಯಂತನು ನಿಜಸೂಚ್ಯಗ್ರಬುದ್ಧಿಕಟಾಕ್ಷಬಾಣವನ್ನು ಆಕರ್ಣಾಂತವಾಗಿ ಸೆಳೆದು, ಆಗಂತುಕರಿರ್ವರ ಮರ್ಮಸ್ಥಲದವರೆಗೂ ಹೋಗುವಂತೆ ಬೀಸಿ ಬಿಸುಟನು.

ಜಯಂತನ ವಿಜಾತೀಯ-ವೀಕ್ಷಣ-ವ್ಯಾಪಾರದಿಂದ ಅಮರಗಂಗಾಧರರು ಶಂಕಾತಂಕಿತಹೃದಯರಾದರೂ ಹೃದ್ಗತಭಾವವನ್ನು ಪ್ರಕಟಿಸದೆ ಮೈತ್ರಿಯನ್ನೇ ನಟಿಸುತ್ತಾ ಕುಳಿತರು.

ಜಯಂತ :—ಇದೇನು? ಅಪೂರ್ವಲಾಭ! ಮಿತ್ರದ್ವಯದ ಸ್ವಾರಿ!! "ಅಪೂರ್ವಂ ಚೋರ ದರ್ಶನಂ" ಎಂಬಂತೆ—

ಅಮರ :—(ಮುಂದುಗೊಡಿಸದೆ ತಡೆದು) ಏನಯ್ಯಾ ಜಯಂತ! ನೀನು ಬಾರಿಸ್ಟರಾದೆ!! ಇನ್ನು ನಮ್ಮ ನೆನೆಪೇಕೆ?

ಜಯಂತ :—ಅಹುದು, ಬಾರಿಸ್ಟರೇನೋ ಆದ ಹಾಗಿರುವುದು. ಆದರೆ, ಅದಕ್ಕೆ ಮುಖ್ಯ ಉತ್ತೇಜಕರಾದ ನಿಮ್ಮಂತಹವರನ್ನೇ ಮರೆತು ಬಿಟ್ಟರೆ, ನಮ್ಮ ನ್ಯಾಯವಾದಿತ್ವಕ್ಕೆ ಬೆಲೆಯೆಲ್ಲಿಯದು?

ಅಮರ :—ಭಲೆ! ಜಯಂತ! ಭಲೆ!! ನಮ್ಮನ್ನು ಮರೆವುದಿಲ್ಲವಷ್ಟೆ?

ಜಯಂತ :—(ಕಿರುನಗೆಯಿಂದ) ಮರೆಯುವಷ್ಟರ ಸಾಮಾನ್ಯನೆಂದು ಭಾವನೆ ಕೂಡದು!

ಗಂಗಾ :—ಹೇಗೂ, ನಿನ್ನ ಸಂತೋಷವೇ ನಮ್ಮ ಮೇಲ್ಮೆಗೆ ಕಾರಣ!

ಜಯಂತ :—ಹಾಗಾದರೆ ಸರಿ! ಅತ್ಯಂತಸಂತೋಷಿಯೇ ಆಗಿರುವೆನು.

ಅಮರ :—(ಶಚೀಕಾಂತನ ಕಡೆಗೆ ತಿರುಗಿ) ಇದೇನು? ನಮ್ಮ ಕಲೆಕ್ಟರ್ ಮಹಾಶಯ! ಹೀಗೆ ಮೌನಧಾರಣೆ? ಇದಾವ ವ್ರತ?

ಜಯಂತ :—ಇದು "ಸತೀಧ್ಯಾನಮೌನ"ವೆಂಬ ಅಮೋಘ ತಪಶ್ಚರ್ಯೆ! ಆರಿಗೂ ಹೇಳತಕ್ಕುದಲ್ಲ.

ಗಂಗಾ :—ಜಯಂತ! ಶಚೀಕಾಂತನು ಹೀಗೇಕೆ ಕುಳಿತಿರುವನು?

ಜಯಂತ :—ಆತನನ್ನೇ ಕೇಳಬೇಕು.

ಗಂಗಾ:—ಏನಪ್ಪ ಕಲೆಕ್ಟರೇ! ಇಷ್ಟರ ಅನಾದರವೋ ಕೋಪವೋ ಏಕೆ! ಬಾಲ್ಯಸಖ್ಯವು ಮರೆತುಹೋಯಿತೇ?

ಶಚೀ :—ಅಯ್ಯಾ! ಕ್ಷಮೆ ಬೇಡುವೆನು. ಇಂದಿನ ಸಂಶ್ಲೇಷೆಯಲ್ಲಿ ನನ್ನ ಚಿತ್ತವೃತ್ತಿ ಹೇಗೆ ಹೇಗೋ ಆಗಿ ಆವ ವಿಚಾರವೂ ಹತ್ತುತ್ತಿಲ್ಲ. ನೀವು ಬಂದುದಾವಾಗ?

ಗಂಗಾ :—ಈದಿನ ಬೆಳಗಾಗ.

ಶಚೀ :—ಮರಳಿ ಹೊರಡುವುದೋ ?

ಗಂಗಾ :—ನಾಳೆಯೇ.

ಶಚೀ :—ಅಮರನೋ ?

ಗಂಗಾ :—ಇಬ್ಬರೂ ಜೊತೆಯಾಗಿಯೇ.

ಶಚೀ :—ನೀನೇನೋ ಸರ್ಕಾರದ ಕೆಲಸವನ್ನು ಬಿಟ್ಟುಬಿಟ್ಟೆ ; ಅಮರನೋ ?

ಜಯಂತ :—(ಕಿರುನಗೆಯಿಂದ) ಅಮರಪ್ರಭುಗಳು ದೊಡ್ಡ ಪದವೀಧರರಾಗಿರುವರೆಂಬ ವರ್ತಮಾನಬಂದಿರುವುದು.

ಅಮರ :— (ಕುಳಿತಂತೆ ಒಮ್ಮೆ ಬೆದರಿ ಹಾಗೆಯೇ ಎಚ್ಚೆತ್ತು) ದೊಡ್ಡ ಪದವಿ ! ಅದೆಂತಹ ದೊಡ್ಡ ಪದವಿಯಪ್ಪ ನನ್ನದು ?

ಜಯಂತ :—(ವ್ಯಂಗ್ಯಭಾವದಿಂದ ನಗುತ್ತ) ಎಂತಹ ದೊಡ್ಡ ಪದವಿಯೆ ? ಮಹೋನ್ನತದದಳದಪತಿತ್ವ ! ಮತ್ತು ಸ್ವಯಂಪ್ರಭುತ್ವ !!

ಅಮರ :— (ಜಯಂತನ ಬೆನ್ನು ತಟ್ಟಿ) ಭಲೆ ! ಜಯಂತ ! ಭಲೆ!! ಹೇಳಿದರೂ ಒಳ್ಳೆಯ ಮಾತನ್ನೇ ಹೇಳುವೆ ! ಆಗಲಿ, ಹೇಳು ! ಹೇಗೂ ಸ್ವಯಂಪ್ರಭುತ್ವದ ಲಕ್ಷಣವೇ ಅಲ್ಲವೆ ಕಲೆಕ್ಟರನ್ನೂ ಮತ್ತು ಬಾರಿಸ್ಟರನ್ನೂ ಹುಡುಕಿಕೊಂಡು ಬರುತಿರುವುದು !

ಜಯಂತ :—ಓಹೋ ! ಸಂಶಯವಿಲ್ಲದೆ ನಮ್ಮನ್ನೂ ಸ್ವಯಂಪ್ರಭುತ್ವಕ್ಕೆ ಒಳಪಡಿಸಿಕೊಳ್ಳಲು ಬಂದಿರುವಿರಷ್ಟೆ !

ಅಮರ :—ಕೂಡದೋ ?

ಜಯಂತ :—ಶಚೀಕಾಂತನ ಮುಂದಿನ ಪ್ರಕೃತಿಸ್ವಭಾವವು, ಹೇಗೆ ತಿರುಗುವುದೋ ನನಗದು ತಿಳಿಯದು. ಆದರೆ, ನಾನು ಮಟ್ಟಕ್ಕೆ ಸ್ವಯಂಪ್ರಭುತ್ವಕ್ಕೆ ಹೇಗೂ ಒಳಪಡಲಾರೆನು.

ಅಮರ :—ನಿನ್ನ ಇಷ್ಟ ! ನಿನ್ನ ಸ್ನೇಹವೇ ನಮಗೆ ಸಾಕು. ಕಲೆಕ್ಟರ ದಯಾಪರಚಿತ್ತವು ಮಟ್ಟಕ್ಕೆ ನಮ್ಮಲ್ಲಿರಬೇಕು.

ಜಯಂತ:—ಕಲೆಕ್ಟರ ಚಿತ್ರವು ಸ್ವವಿಷಯವಿಚಾರದಲ್ಲಲ್ಲದೆ ಬೇರೆಯ ಕಡೆಯಲ್ಲಿರಲಾರದೆಂದೂ ಹೇಳಬಲ್ಲೆನು.

ಅಮರ:—(ಗೋಪೀನಾಥನ ಕಡೆಗೆ ತಿರುಗಿ) ನಮಸ್ಕಾರ, ನಾವಿನ್ನು ಹೊರಡುವೆವು.

ಗೋಪೀ:—ಒಳ್ಳೆಯದು.

ಗಂಗಾ:—ಶಚೀಕಾಂತ! ನಾವೂ ಸ್ವಲ್ಪ ದೂರದ ವರೆಗೆ ಮಾತ ನಾಡುತ್ತ ಹೋಗುವ;—ಬರುವೆಯಾ?

ಶಚೀ:—ಇಲ್ಲ; ಬರಲಾರೆನು! ಇಂದು ಮನಸ್ಸು ಕಳವಳಿಸು ತ್ತಿರುವುದು.

ಗಂಗಾ:—ಅದೇಕೆ ಕಳವಳ?

ಜಯಂತ:—ಇಷ್ಟವಸ್ತು ವಿಯೋಗದಿಂದ.

ಗಂಗಾ:—ಹೇಗೆ?

ಜಯಂತ:—ಸ್ವಯಂಪ್ರಭುತ್ವದ ದರ್ಪ, ಗತಿ, ಸ್ವಭಾವವೈಚಿತ್ರ್ಯ, ಇವುಗಳು ವರ್ಣನೀಯಗಳಾಗಿರುವುವಲ್ಲವೆ?

ಗಂಗಾ:—ಅದೇನೋ ನನಗೆ ಬೋಧೆಯಾಗಲಿಲ್ಲ. ಏನಾಯಿ ತೆಂಬುದನ್ನು ಹೇಳಬಾರದೆ?

ಜಯಂತ:—(ಸಾಟೋಪಸ್ವರದಿಂದ) ಆಗಬೇಕಾದುದೇ ಆಗಿರು ವುದು "ಆಶಾಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಂ *" ಅದೇ ಆಗಿರುವುದು. ಆದರೇನು? ಕುತ್ಸಿತರಿಂದ ವಂಚಿತರಾಗಿರುವ ನಮಗೆ ಏತತ್ಕ್ಷಣದಲ್ಲಿ ಕಷ್ಟಕ್ಲೇಶಗಳುಂಟಾದರೂ ಧರ್ಮಮಾರ್ಗೈಕ ಗರಾದ ನಾವು ಪರ್ಯವಸಾನದಲ್ಲಿ ದೈವಬಲದಿಂದ ಸುಖಿಗಳೇ ಆಗುವೆವು. ಅತ್ಯಾಚಾರಿಗಳಾರೋ ಅವರು, ಸದ್ಯಸ್ಸ್ಥಿತಿಯಲ್ಲಿ ಆಶಾಂಧತೆಯಿಂದ ಮುಂಗಾಣದೆ ಅಲ್ಪ ಸಂತೋಷದಲ್ಲಿದ್ದರೂ, ಆತ್ಮಾನಂದ, ಮನಸ್ಸಾಕ್ಷಿ, ಇಹಪರಸೌಖ್ಯ, ಇವುಗಳಿಗೆ ಎಷ್ಟು ಮಟ್ಟಕ್ಕೂ ಭಾಗಿಗಳಾಗರು!

---

* ಕಂ॥ ಎಡೆಯಷ್ಟುದಾಸೆ ಪಿರಿದುದು।
ಗುಡಕ್ಕೆ ತಾನಾಸೆಯುಂಬಿಡಲ್ ಪರಮಸುಖಂ॥

ಇಂದಿನ ದುರಾಗತವೇ ಅವರ ಭವಿಷ್ಯತ್ಫಲಪ್ರಾಪ್ತಿರೂಪದ ಕಷ್ಟ, ನಷ್ಟ, ಭ್ರಷ್ಟತೆ, ಇವುಗಳಿಗೆಲ್ಲಾ ಹೇತುವಾಗಿ ನಿಲ್ಲುವುದೆಂದು ಮಟ್ಟಕ್ಕೆ ಹೇಳದಿರಲಾರೆವು !

ಗೋಪೀ :—(ಖತಿಯಿಂದ) ನೋಡಬಂದವರೊಡನೆ ಈ ಪ್ರಕಾರದ ಮಾತುಗಳೇಕೆ ? (ಗಂಗಾಧರನನ್ನು ಕುರಿತು) ಅಯ್ಯಾ ! ಈಗ ಯಾಮಾತ್ಪೂರ್ವದಲ್ಲಿ ನಡೆದ "ಹರಿಣೀಹರಣವೇ"—

ಅಮರ :—(ಚಕಿತಭಾವವನ್ನು) ಏನು, ಏನು ? ಹರಿಣೀಹರಣ ! ಹಾಗೆಂದರೇನು ? ಹರಿಣಿ ಅಪಹೃತೆಯಾದಳೆ ? ಹೇಗೆ ?

ಗೋಪೀ :—ಈಗಲೇ ಹೇಗೆ ತಿಳಿವುದು ?

ಗಂಗಾ :—(ಕೈಯನ್ನು ಕೊಡಹಿಕೊಳ್ಳುತ್ತ) ಅಯ್ಯೋ, ಅಯ್ಯೋ ! ಎಂತಹ ಕೆಲಸ !! ಏನು ಅತ್ಯಾಚಾರ ! ಹೀಗೂ ಉಂಟೇ !!!

ಶಚೀ :—(ಕರುಣಸ್ವರದಿಂದ) ಗಂಗಾಧರ ! ಇಂದಿನ ನಮ್ಮ ಆಶಾಭಂಗದ ಫಲಾನುಭವವು ವಿದ್ರೋಹಿಗಳನ್ನು ಬೇಗನೆಯೇ ಹೊರಗೆಡಹದಿರದು ! ಇರಲಿ; ಭಗವದಿಚ್ಛೆಯಿದ್ದಂತಾಗಲಿ ! ಪ್ರಾಪ್ತವಾಗತಕ್ಕ ಫಲಾನುಭವವು ಆರಿಗಾದರೂ ದುರ್ವಾರವಲ್ಲವೆ ?

ಜಯಂತ :—(ಉದಾಸೀನಭಾವದಿಂದ) ಇದೆಲ್ಲವನ್ನೂ ನಿಮ್ಮಲ್ಲಿ ಹೇಳಿ ಫಲವಿಲ್ಲ. ವೃಥಾವಿಚಾರದಿಂದ ನಿಮಗೆ, ಚಿಂತಾ—ವಿಸ್ಮಯ—ಕ್ಲೇಶಗಳುಂಟಾಗುವುವು. ಇನ್ನು ಸಾಕು ! ನಿಮ್ಮ ಕಾರ್ಯವೂ ಅತಿಪಾತವಾಗಬಾರದು. ನಿಮಗಿದೋ ನನ್ನದೊಂದು ವಂದನೆ.

ಗಂಗಾಧರಅಮರನಾಥರು ಇಬ್ಬರೂ ಪರಸ್ಪರಮುಖಾವಲೋಕನಾನಂತರದಲ್ಲಿ, ಒಮ್ಮೆ ನಿಟ್ಟುಸಿರುಬಿಟ್ಟು, "ಸಂಸಾರಚಕ್ರಪರಿವರ್ತನಕ್ರಮವೇ ಇದಸ್ಟೆ ? ಶಚೀಕಾಂತ ! ಸುಮ್ಮನೆ ವ್ಯಥೆಯು ಕಾಲದಲ್ಲಿ ನಿಮ್ಮನ್ನು ಬಾಧಿಸಬಾರದು. ಅದೃಷ್ಟವಿದ್ದರೆ, ಕಮಲಪುರದಲ್ಲಿ ನಿಮ್ಮ 'ದರ್ಶನವನ್ನು' ತೆಗೆದುಕೊಳ್ಳುವೆವು."

ಶಚೀ :—ಆಗಲಿ.

ಅಮರಗಂಗಾಧರರಿಬ್ಬರೂ ಹೊರಟು ಹೋದರು ; ಗೋಪೀನಾಥನೂ ಚಾವಡಿಗೆ ವರ್ತಮಾನ ಕೊಡಬೇಕೆಂದು ಹೊರಟನು.

ಜಯಂತ:—(ಶಚೀಕಾಂತನ ಕೈಹಿಡಿದು) "ಅಣ್ಣಾ! ಇನ್ನು ಜಡಭಾವವು ಸಾಕು! ನಮ್ಮ ಕರ್ತವ್ಯಕ್ಕೆ ನಾವು ಎಂದಿಗೂ ಅವಿಧೇಯರಾಗಬಾರದು. ಇನ್ನು ಏಳು; ಭಗವತ್ಕಟಾಕ್ಷವೇ ಪವಿತ್ರಸಹೋದರಿಯನ್ನು ಈ ಸಂಕಟದಿಂದ ಬಿಡಿಸಿ ರಕ್ಷಿಸದಿರದೆಂದು ನನಗೆ ಭರವಸೆಯುಂಟು" ಎಂದು ಹೇಳುತ್ತ, ಶಚೀಕಾಂತನೊಡನೆದ್ದು ಸ್ಥಾನಾಂತರವನ್ನು ಗಮನಿಸಿದನು.

ಷಷ್ಠ ಪರಿಚ್ಛೇದ

(ವಸ್ತ್ವನ್ವೇಷಣೆ)

ಕಲಾನಿಧಿಯಾದ ರಾಜನು ಕರ್ತವ್ಯನಿರತರನ್ನು ಕಂಡು, ಕಡು ನಲವಿಂದ ಕಿರುನಗೆಯನ್ನು ಬೀರುತ್ತಿದ್ದನು. ಕಾಂತ್ಯಾರಾಮನ ಕಟಾಕ್ಷಸುಧೆಯನ್ನು ಸೂರೆಗೊಳ್ಳುವ ತ್ವರೆಯಿಂದ, ತಾರಾಭ್ರಮರಗಳು ಅಹಮಹಮಿಕೆಯಿಂದ ಸ್ಪರ್ಧಿಸುತ್ತ ಮುಂದುಮುಂದೋರುತಿದ್ದುವು. ಆದರೆ, ಕರ್ತವ್ಯನಿರತರಿಗೆ ಮಟ್ಟಕ್ಕೆ ತನ್ನ ಕಿರಣಾಳಿ ಸುಖಾವಹವೆಂದೂ, ಕುತ್ಸಿತರಾದ ಕರ್ತವ್ಯವಿಮುಖರಿಗೆ ತಾನು ಸುಧಾಕರನಲ್ಲವೆಂದೂ ಶೀತಕಿರಣನು ತಿಳಿಸಿದುದರಿಂದ ಮುಂದಾಗುತಿದ್ದ ತಾರಾಗಣಗಳು ಮಂದತ್ವದಿಂದ ನಿಂದಲ್ಲೇ ನಿಂದು, ಮಿಟಮಿಟನೆ ಮಿನುಗುತಿದ್ದುವು. ಇಂತಹ ಸುಸಮಯದಲ್ಲಿ ಸ್ವಕರ್ತವ್ಯನಿರತನಾದ ಸುಂದರಯುವಕನಾದ ಗ್ರಾಮಪಾಲ(ಪೋಲೀಸು)ರ ಆದೇಷ್ಟೃ (ಸರದಾರ) ವೊಬ್ಬನು ಅಂಗಡಿಯ ಬೀದಿಯಲ್ಲಿ ಹೋಗುತ್ತ, ಚಾವಡಿಯಮುಂದೆ ಬಂದು ನೋಡಿದನು. ಆರೊಬ್ಬರೂ ಇರಲಿಲ್ಲ. ಮುಂದಕ್ಕೆ ನಾಲ್ಕಾರು ಮಾರುದೂರ ನಡೆವಷ್ಟರಲ್ಲಿಯೇ ಜಮಾದಾರನು ಬಂದು ಸಂಧಿಸಿದನು.

ಸರ:—ಏನಯ್ಯಾ? ಜಮಾದಾರ್! ಸ್ಟೇಷನ್ನಿನ ಬಳಿಯಲ್ಲಿ ಯಾರೂ ಇರಬೇಡವೆ?

ಜವಾ:—(ವಿನೀತನಾಗಿ ಕೈಮುಗಿದು) ಮಹಾಸ್ವಾಮಿಾ! ಇಂದು ಗೋಪೀನಾಥರಾಯರ ಪಾಲಿತಪುತ್ರಿ ಅದೃಶ್ಯೆಯಾಗಿರುವಳು ; ಹುಡುಕುವುದಕ್ಕಾಗಿ ಜವಾನ (ಅಧಿಕೃತಪುರುಷ) ರನ್ನು ನಾಲ್ಕು ಕಡೆಗೂ ಅಟ್ಟಿರುವೆನು. ಇಲ್ಲಿನ ಮೇಲುವಿಚಾರಣೆ ನನ್ನ ಮೇಲೆಯೇ ಬಿದ್ದಿರುವುದಾದರೂ ಗತವಸ್ತ್ವನ್ವೇಷಣೆಗಾಗಿ ಹೋಗಿ ಈಗ ತಾನೇ ಬಂದೆನು.

ಸರ:—ಸಹಜ, ಎಲ್ಲೆಲ್ಲಿ ಹುಡುಕಿದೆ?

ಜವಾ:—ವಿಮಲನಗರದ ಹೆದ್ದಾರಿ, ನಡುವಣ ಕಾಡುದಾರಿ, ರಾಯರ ಮನೆಯ ಸುತ್ತಮುತ್ತಲ ಪ್ರದೇಶ, ಇವು ಎಲ್ಲವನ್ನೂ ನೋಡಿ ಬಂದೆನು. ಆವ ವಿಶೇಷವೂ ತಿಳಿಯಬರಲಿಲ್ಲ.

ಸರ:—ಕೈಕೆಳಗಣವರ ಯೋಗ್ಯತಾಪರಿಶೀಲನವಾಗಿರುವುದೆ?

ಜವಾ:—ಮಹಾಸ್ವಾಮಿಾ, ಯಥಾಮತಿ ಪರೀಕ್ಷಿಸಿರುವೆನು.

ಸರ:—ಅಯ್ಯಾ, ಈಗ ನೋಡು ; ಸತ್ಯಪುರುಷನು ಕೇವಲ ಸೂಕ್ಷ್ಮರೂಪದಿಂದ ಅಜ್ಞಾತವಾಸದಲ್ಲಿರುವನು ; ಆದುದರಿಂದಲೇ ನಿರ್ಭೀತರಾದ ದುರಾಚಾರರೇ ಎಲ್ಲೆಲ್ಲಿಯೂ ತಾವೇ ತಾವಾಗಿ ಆಕ್ರಮಿಸುತ್ತಿರುವರು. ಪ್ರಜಾಕ್ಷೇಮಾಭ್ಯುದಯಕ್ಕಾಗಿಯೇ ಗ್ರಾಮರಕ್ಷಕರು (Police) ನಿಯಮಿತರಾಗಿರುವರು. ಅವರು ತಮ್ಮ ಕರ್ತವ್ಯವನ್ನು ಗಮನಿಸಿ ಸರಿಯಾದರೀತಿಯಲ್ಲಿ ನಡೆವುದಾದರೆ, ಇಂತಹ ದುರಾಚಾರಗಳೆಂದಿಗೂ ನಡೆಯಲಾರವು. ಆವುದೊಂದು ಕಳುವೂ, ಕೊಲೆಯೂ ಈ ಗುಂಪಿನ ಸಣ್ಣಸಣ್ಣ ಅಧಿಕಾರಿಗಳ (ನೌಕರರ) ಸಲಹೆ ದೊರೆತಲ್ಲದೆ ಉತ್ತೇಜಿತವಾಗಲಾರವು. ಹಾಗೂ ಈಗ ನಡೆದಿರುವ ರಾಯರ ಮನೆಯ ಕಳುವೆಂದರೆ, ಅತ್ಯಂತವಾಗಿ ವಿಸ್ಮಯವೇ ಆಗಿರುವುದು! ಹಾಗಿಲ್ಲದಿದ್ದರೆ, ಕತ್ತಲೆ ಇನ್ನೂ ಚೆನ್ನಾಗಿ ಹರಡುವುದಕ್ಕೆ ಮೊದಲೇ, ಜನನಿಬಿಡವಾದ ಹೆದ್ದಾರಿಯಲ್ಲಿಯೇ, ಕಾವಲುಗಾರರು ಹೆಚ್ಚಾಗಿ ನೋಡಿಕೊಳ್ಳಬೇಕಾದ ಸ್ಥಳದಲ್ಲಿಯೇ ಈ ಬಗೆಯ ಅತ್ಯಾಚಾರವು ನಡೆವುದೆ? ಅವಿಚಾರಾಂಧತೆಯಿಂದ ದುರಾಚಾರರು ಈಗ ಏನೊಂದನ್ನೂ ತಿಳಿಯಲಾರರು ; ಆದರೆ, ಅವರೇ ಮುಂದೆ ಅತ್ಯಲ್ಪಕಾಲದಲ್ಲಿಯೇ ಭಯ, ಕ್ಲೇಶ, ನಿಂದೆ,

ಇವುಗಳಿಗೆ ತುತ್ತಾಗಿ ಆನಂದ, ಕೀರ್ತಿ, ಸುಖ, ಇವುಗಳಿಗೆ ಬಾಹಿರ ರೆನಿಸಿ ನಾಮಾವಶೇಷರಾಗುವುದರಲ್ಲಿ ಸಂಶಯುವಿಲ್ಲ.... ...... .ಆದರೆ ಕರ್ತವ್ಯ ಬದ್ಧರಾಗಿ ಆತ್ಮೋನ್ನತಿಯಲ್ಲಿಯೇ ಗುರಿಯಿಟ್ಟು, ನ್ಯಾಯ, ಸತ್ಯ, ಕ್ಷಮೆ, ಮೊದಲಾದುವುಗಳಿಂದ ವರ್ತಿಸುವವರಿಗೆ ಚ್ಯುತಿಯಿಲ್ಲದ ಮನಸ್ಸಮಾಧಾನ, ಆತ್ಮೋನ್ನತಿ, ಚಿರಕೀರ್ತಿಸ್ವರೂಪದ ಇಹಪರ ಸೌಖ್ಯಗಳು, ದೈವಸಹಾಯಸಂಪತ್ತಿ, ಇವೆಲ್ಲವೂ ಉಂಟಾಗುವುದ ರಲ್ಲಿ ಏನೇನೂ ಸಂಶಯುವಿಲ್ಲ.

ಪ್ರಕೃತ ವಿಚಾರವೇನಂದರೆ, ಆಧುನಿಕಸಭ್ಯಸಮಾಜದಲ್ಲಿ ಹೆಸರು ಗೊಂಡ ಕೆಲವು ಸುಧಾರಕಮಹಾಶಯರು ನಿರಾಮಯಪ್ರಪಂಚ ದಲ್ಲಿ ಆನಂದಧಾಮನೆನಿಸಿ ತಾರಾಮಂಡಲಮಧ್ಯವರ್ತಿಯಾಗಿರುವ ಸುಧಾಕರನನ್ನು ನೋಡುತಿದ್ದರೂ ನಿರಾಕರಿಸಿ, ಕೇವಲಕ್ಷಣಭಂಗುರ ತರವಾದ ಹರಿಣೀಕಟಾಕ್ಷದ ಕ್ಷಣಿಕರುಚಿಯನ್ನು ಕಾಮಿಸಿ, ಅದನ್ನಾ ಸ್ವಾದಿಸಲು ಕಾತರರಾಗಿರುವರು. ಅವರು, ಈ ತೆರದ ವೃತ್ತಿ ತಮ್ಮ ನವನಾಗರಿಕತೆಗೆ ದೊಡ್ಡ ಕುಂದೆಂಬುದನ್ನು ತಿಳಿಯದಿರುವುದು ಶೋಚನೀಯವೇ ಸರಿ.

ಜಮಾ:—ಮಹಾಸ್ವಾಮಿಾ! ತಮ್ಮ ಅಮೋಘವಾದ ಹಿತೋಪ ದೇಶವನ್ನು ಸಂಗ್ರಹಿಸಿರುವೆನು.

ಸರ:—ಅಯ್ಯಾ! ಈಗಲಿನ ಪೋಲೀಸು ಇಲಾಖೆ (ರಾಜ್ಯಾಂಗ) ಯಲ್ಲಿ, ಒಬ್ಬ ಸಾಮಾನ್ಯ ನೌಕರನಿಂದ ಮೊದಲು, ದೊಡ್ಡ ಹುದ್ದೇ ದಾರನವರೆಗೂ ಇರಬೇಕಾದ ಸ್ಥಾನ, ಬಲ, ಅವರವರ ಕರ್ತವ್ಯಕರ್ಮ, ಇತ್ಯಾದಿಗಳೆಲ್ಲವೂ ನನಗೆ ಚೆನ್ನಾಗಿ ತಿಳಿದಿರುವುವು. ಆ ಇಲಾಖೆಯುವ ರಲ್ಲಿ ನಿಯಮಿತರಾಗಿರತಕ್ಕವರ ನಾಗರಿಕತೆಯು ನೂತನವಾದ ನಡೆವಳಿ ಗಳೂ, ಅವರಲ್ಲಿ ನೆಲೆಗೊಂಡಿರುವ ಸತ್ಯಸಂಧತೆಯೂ ನನಗೆ ತಿಳಿಯದ ವಿಷಯಗಳಾಗಿಲ್ಲ. ಗ್ರಾಮಸೌಖ್ಯವನ್ನು ಕಾಪಿಡುವುದಕ್ಕೋಸುಗವೇ ನಿಯಮಿತರಾಗಿರುವ ಈ ಸಂಘದವರಲ್ಲಿ ಪಡಿಯೊಬ್ಬನ ಹೃದಯದ ಲ್ಲಿಯೂ ಉತ್ಸಾಹ, ಸತ್ಯ,ಶ್ರದ್ಧೆ, ಇತ್ಯಾದಿಗಳು ಬೇರೂರಿ ತನ್ನ ಕೆಲಸವು, ಮುಗಿಸಿ ಹೆಮ್ಮೆಯನ್ನು ತೋರುವುದಕ್ಕಲ್ಲವೆಂದೂ ತಾನು ಪ್ರಜಾ

ಕ್ಷೇಮರಕ್ಷಣೆಯಲ್ಲಿ ಬದ್ಧನಾದ ರಾಜಪುರುಷನೆಂದೂ ಭಾವನೆಹುಟ್ಟಿ ಅವನ ಪ್ರವರ್ತನವು ನಿರ್ದುಷ್ಟವಾಗಿರುವ ಪಕ್ಷದಲ್ಲಿ, ಪುಂಡಾಟಗಳ ತಂಡಗಳು ಅಂಡಳಿದು ಹೋಗುವುದರಲ್ಲಿ ಸಂದೇಹವುಂಟೆ?

ಅಯ್ಯಾ! ನನ್ನ ಈ ವರೆಗಿನ ಎಚ್ಚರಿಕೆಯನ್ನು ಚೆನ್ನಾಗಿ ಕೇಳಿದೆಯಷ್ಟೆ! ಇನ್ನು ಮುಂದೆ ನೀನಾದರೂ ಇಂತಹ ಪುಂಡರನ್ನು ಕೆಲದಲ್ಲಿರಿಸದೆ ಎಚ್ಚತ್ತಿರುವುದೊಳ್ಳೆಯದು! ತುಚ್ಛವಾದ ಕ್ಷಣಿಕಸುಖಕ್ಕಾಶೆಪಟ್ಟು ಶ್ಲೇಷ್ಮದಲ್ಲಿ ಬಿದ್ದ ಮಶಕದಂತೆ ಕ್ಲೇಶಪಡುವುದು ಸರಿಯಲ್ಲ.

ಜಮಾ:—ಅನುಗೃಹೀತನಾದೆನು!

ಸರ:—ಅಯ್ಯಾ, ಮತ್ತೊಂದು ವಿಶೇಷವಿಷಯವಿರುವುದು.

ಜಮಾ:—ಅಪ್ಪಣೆಯಂತೆ ನಡೆಯಲು ಸಿದ್ಧನಾಗಿಯೇ ಇರುವೆನು.

ಸರ:—ಇಂದಿಗೆ ಆರೇಳು ವರ್ಷಗಳ ಹಿಂದೆ ನಡುಗಾಡಿನಲ್ಲಿ ಕಳ್ಳರ ಪಾಲಾಗುತ್ತಿದ್ದ ಬಾಲವಿಯೋಗಿನಿಯನ್ನು ನೀನು ಬಿಡಿಸಿದುದು ನೆನೆಪಿನಲ್ಲಿರುವುದೆ?

ಜಮಾ:—ಮಹಾಸ್ವಾಮಿ! ಚೆನ್ನಾಗಿಯೂ ನೆನಪಿನಲ್ಲಿರುವುದು. ಆಕೆಯನ್ನೇ ಜಯಂತಕುಮಾರರ ಬಳಿಯಲ್ಲಿ ಬಿಟ್ಟಿದ್ದುದು.

ಸರ:—ಸರಿ, ಆಗ ನಿನ್ನಿಂದಲೇ ಬಿಡುಗಡೆಹೊಂದಿದಳು, ಈಗಲೂ ಹಾಗೇಆದರೆ, ಬಲು ಮೇಲ್ಮೆಯುಂಟು! ಹಿಂದೆ ತಪ್ಪಿಸಿಕೊಂಡ ವಿದ್ರೋಹಿಗಳು ಈಗಲಾದರೂ ಸಿಕ್ಕದಿದ್ದರೆ ನಮಗೆ ಮಾನವುಳಿಯದು.

ಜಮಾ:—(ಕುತೂಹಲದಿಂದ) ಈಗ ಕಳುವಾಗಿರುವಳೂ ಅವಳೇನು?

ಸರ:—ಅಹುದು.

ಜಮಾ:—ತಮಗೆ ಹೇಗೆ ತಿಳಿಯಿತು?

ಸರ:—ನಾನೂ ಇಂದು ವಿಮಲನಗರದಿಂದ ಬಂದೆನು. ರಾಯರ ಮನೆಯಲ್ಲಿಯೇ ಉಳಿದೆನಾದುದರಿಂದ ವರ್ತಮಾನವೂ ಬೇಗನೆ ತಿಳಿಯ ಬಂದಿತು.

ಜಮಾ:—ಮಹಾಸ್ವಾಮಿಾ! ನಾನು ನನ್ನ ಕರ್ತವ್ಯವನ್ನು ಶಕ್ತಿ ವಂಚನೆಯಿಲ್ಲದೆ ಮಾಡುವೆನು. ಅನುಕೂಲವಾಗುವುದೋ ಪ್ರತಿಕೂಲ ವಾಗುವುದೋ ಅದು ದೈವಾಯತ್ತವು!

ಜಮಾದಾರ, ಸರದಾರ, ಇಬ್ಬರೂ ಮಾತನಾಡುತ್ತ ಠಾಣೆಯ (Police Station) ಬಳಿಗೆ ಬಂದರು. ಅಷ್ಟರಲ್ಲಿಯೇ ಬಂದಿದ್ದ ಜವಾನರು (Constables) ಕಯ್ಯೆತ್ತಿ ಪದ್ಧತಿಗನುಸಾರವಾಗಿ ಗೌರವವನ್ನು ಪ್ರಕಾಶಿಸಿದರು.

ಜಮಾ:—ವಿಶೇಷ ವರ್ತಮಾನವೇನು?

ಜವಾನ:—ಎಲ್ಲೆಲ್ಲಿ ನೋಡಿದರೂ ಏನೂ ವಿಶೇಷವಿಲ್ಲ; ಈಗಲೇ ಕಳುವು ಪತ್ತೆಯಾಗುವಂತಿಲ್ಲ.

ಜಮಾ:—ಒಳ್ಳೆಯದು; ಠಾಣೆಯಲ್ಲಿಯೇ ಇರತಕ್ಕದು.

ಜವಾನ:—ಅಪ್ಪಣೆ!

ಸರ:—ಅಮರನಾಥರಾಯರು ಎಲ್ಲಿರುವರೊ, ಗೊತ್ತಿರುವುದೊ?

ಜವಾನ:—ಅವರು ಈವೂರಲ್ಲೇ ವಾಸಮಾಡುವರಾಗಿಲ್ಲ. ಅಡಿಗಡಿಗೆ ಬಂದಾಗ ನಂಟರ ಮನೆಯಲ್ಲಿಯೇ ಇಳಿದಿದ್ದು, ಕೆಲಸ ಮುಗಿದಮೇಲೆ ಹೊರಟು ಹೋಗುವರು. ಈಗ ಅವರು ಈವೂರಲ್ಲಿರುವರೋ ಇಲ್ಲವೋ ತಿಳಿಯದು.

ಸರ:—(ಜಮಾದಾರನ ಕಡೆಗೆ ತಿರುಗಿ) ಹೇಗಾದರೂ ಆಗಲಿ, ಜಮಾದಾರ್! ಅವರಲ್ಲಿ ವಿಶೇಷಕಾರ್ಯಗೌರವವುಂಟು. ಅವರ ಮನೆಗೆ ಹೋಗಬಹುದಲ್ಲವೆ?

ಜಮಾ:—ಆಗಬಹುದು.

ಇವ್ವರೂ ವಸ್ತ್ವನ್ವೇಷಣೆಯ ತತ್ತ್ವವಿಚಾರದಲ್ಲಿ ನಿರತರಾಗಿ ಮುಂದೆ ನಡೆದರು.

ಸಪ್ತಮ ಪರಿಚ್ಛೇದ

(ಗುಪ್ತ ಪರಿಶೀಲನೆ)

ನಾವು ಗ್ರಂಥಾರಂಭದಲ್ಲಿ ವರ್ಣಿಸಿರುವ ಮಹಡಿಯ ಮನೆ. ಮನೆಯ ಹೊರಬಾಗಿಲು ಬೀಗ ಹಾಕಲ್ಪಟ್ಟಿದ್ದಿತು. ಹೊರಗಡೆಯ ಪಟ್ಟಸಾಲೆಯ ಮೇಲೆ ಸೇವಕನೊಬ್ಬನು ತೂಕಡಿಸುತ್ತ ಕುಳಿತಿದ್ದನು. ಜಮಾದಾರ ಸರದಾರ, ಇಬ್ಬರೂ ಬಂದು ಹಂತದ ಬಳಿಯಲ್ಲಿ ನಿಂತರು; ತೂಕಡಿಸುತ್ತಿದ್ದ ಆಳು ಎದ್ದುನಿಂತು ಕೈಮುಗಿದನು.

ಜಮಾ:—ನೀನು ಯಾರು?

ಆಳು:—ನಾನು ಸಾಹುಕಾರರ ಮನೆಯ ಆಳು.

ಜಮಾ:—ಸಾಹುಕಾರರಾರು?

ಆಳು:—ಶ್ರೀಯುತ ಸುಂದರಪ್ರಸಾದರು.

ಜಮಾ:—ಸಾಹುಕಾರರ ಆಳಾಗಿದ್ದರೆ ಇಲ್ಲಿರುವುದೇಕೆ?

ಆಳು:—ಮನೆಯ ಕಾವಲಿಗೆ.

ಜಮಾ:—ಈ ಮನೆ ಅಮರನಾಥರಾಯರದಲ್ಲವೆ?

ಆಳು:—ಈಗ ಅವರದಲ್ಲ.

ಜಮಾ:—ಎಂದಿನಿಂದ?

ಆಳು:—ರಾಯರಿಂದ ಮನೆ ಸಾಹುಕಾರರಿಗೆ ಮಾರಲ್ಪಟ್ಟು ಹದಿನೈದು ದಿನಗಳಾದುವು. ಸ್ವಾಧೀನಕ್ಕೆ ಬಂದು ಎರಡು ದಿನಗಳಾದುವು.

ಜಮಾ:—ಈಗ ರಾಯರಿರುವುದೆಲ್ಲಿ?

ಆಳು:—ಇದೇ ಸಾಲಲ್ಲಿಯೇ ಈ ಮನೆಗೆ ಮೂರನೆಯ ಮನೆಯಲ್ಲಿಯೇ.

ಜಮಾ:—ಬಾ, ಆ ಮನೆಯನ್ನು ತೋರಿಸು.

ಆಳು:—ಸ್ವಾಮಿ, ಜ್ವರಬಂದಿರುವುದು; ನಿಲ್ಲಲೇ ಆರೆನು.

ಸರ:—ಅಯ್ಯಾ! ಎಷ್ಟು ದೂರ ನಡೆವುದಕ್ಕೆ ಹೆದರುವೆ? ಅವರಲ್ಲಿ ನಮಗೆ ತ್ವರಿತದ ಕೆಲಸವಿರುವುದು. ಇದಿರುಮಾತಾಡದೆ ಹೊರಟು ಬಾ.

ಆಳು ಮರುಮಾತಾಡಲಾರದೆ ಮುಂದಾಗಿ ದಾರಿತೋರಿಸುತ್ತಾ ನಡೆದನು. ಜಮಾದಾರ, ಸರದಾರ, ಇಬ್ಬರೂ ಅವನನ್ನೇ ಹಿಂಬಾಲಿಸಿದರು. ಸೇವಕನು ಮೊದಲು ಹೇಳಿದ್ದಂತೆಯೇ ಸಾಮಾನ್ಯವಾದೊಂದು ಹೆಂಚಿನ ಮನೆಯನ್ನು ತೋರಿಸಿ ಹಿಂತಿರುಗಲೆತ್ನಿಸಿದನು.

ಸರ:—ಏಕೆ? ರಾಯರ ಸಮಯವೇನೆಂಬುದನ್ನು ತಿಳಿದು ಹೇಳದೆಯೇ ಹೋಗುತ್ತಿರುವೆ?

ಆಳು:—(ಭೀತನಾಗಿ ಮನೆಯ ಹೆಬ್ಬಾಗಿಲ ಬಳಿಗೆ ಬಂದು) "ಯಾರು? ಮನೆಯವರು!" ಎಂದು ಕೂಗಿದನು.

ಆಳು ಕೂಗಿದ ಒಂದೆರಡು ನಿಮಿಷದಲ್ಲಿಯೇ ನಡುಹರೆಯದ ಹೆಂಗಸೊಬ್ಬಳು ಬಂದು ನಡುಮನೆಯಲ್ಲಿ ನಿಂತು, "ಯಾರು ಕೂಗುವರು?" ಎಂದು ಕೇಳಿದಳು.

ಆಳು:—(ಸರದಾರನ ಕಡೆಗೆ ಕೈತೋರಿಸಿ), "ಅಮ್ಮಾ! ಈ ದೊಡ್ಡಮನುಷ್ಯರು ಬಂದಿರುವರು."

ಹೆಂಗಸು:—ಏತಕ್ಕಾಗಿ?

ಆಳು:—ಅಮರನಾಥರಾಯರಲ್ಲಿ ಕೆಲಸವಿದ್ದುದರಿಂದ, ವಿಮಲ ನಗರದಿಂದ ಬಂದಿರುವರು.

ಹೆಂಗಸು:—ಅವರು ಜ್ವರಪೀಡಿತರಾಗಿ ಮಲಗಿರುವರು.

ಆಳು:—ಈ ಮಹಾಶಯರಿಗೆ ಅವರ ಭೇಟಿಯಾಗಬೇಕಲ್ಲ?

ಹೆಂಗಸು:—"ತಿಳಿದು ಹೇಳುವೆನು" ಎಂದು ಹೇಳಿ ಒಳಗೆ ಹೋಗಿ ಮತ್ತೆ ಬಂದು "ಅಯ್ಯಾ, ಅವರು ಏಳಲಾರರು. ಮಹಾಶಯರೇ ದಯೆಯಿಟ್ಟು ಬಂದು ದರ್ಶನವನ್ನು ಕೊಡಬೇಕೆಂದು ಕೋರುವರು" ಎಂದುಸಿರಿ ಹಿಂದಿರುಗಿದಳು.

ಸರದಾರನು ಜಮಾದಾರನೊಡನೆ ಹೆಂಗಸಿನ ಹಿಂದೆಯೇ ಹೊರಟನು; ಹೆಂಗಸು ಬೀದಿಯ ಕಡೆಯ ಅಂಗಳದ ಕಿರುಮನೆಯ ಕದದ

ಬಳಿಯಲ್ಲಿ ನಿಂತು, "ಅಮರ! ಮಹಾಶಯರೇ ಬಂದಿರುವರಪ್ಪ" ಎಂದೊರೆದು ಗೃಹಾಂತರವನ್ನು ಹೊಕ್ಕುಬಿಟ್ಟಳು.

ಸರದಾರನು ಜಮಾದಾರನೊಡನೆ ಕಿರುಮನೆಯೊಳಹೊಕ್ಕು ನೋಡಿದನು. ಮಂಚದಮೇಲೆ ಮಲಗಿದ್ದ ಅಮರನು ಹೊದೆದಿದ್ದ ಹಚ್ಚಡವನ್ನು ಒತ್ತರಿಸಿ ಅರೆಬಾಗಿ ಮೆಲ್ಲನೆ, "ಮಹಾಶಯರಿಗೆ ವಂದನೆ! ಏಳಲಾರೆನು. ಕ್ಷಮಿಸಬೇಕು; ಕುಳ್ಳಿರಬೇಕು."

ಸರ:—"ಏಳಬೇಕಾದುದಿಲ್ಲ, ಮಲಗಿರಿ" ಎಂದು ಹೇಳಿ, ಕುರ್ಚಿಯನ್ನೆಳೆದು ಕುಳಿತುಕೊಂಡನು. ಜಮಾದಾರನೂ ಸರದಾರನ ಬಳಿಯಲ್ಲಿಯೇ ಬೇರೊಂದು ಕುರ್ಚಿಯಮೇಲೆ ಕುಳಿತನು.

ಅಮರನು ಸವಿಚಾರನಯನನಾಗಿ ಕುತೂಹಲವಿಸ್ಮಯಗಳಿಂದ ಸರದಾರನನ್ನೇ ಎವೆಯಿಕ್ಕದೆ ನೋಡತೊಡಗಿದನು.

ಜಮಾ:—(ಕಿರುನಗೆಯಿಂದ) ಇದೇನು ಅಮರನಾಥರಾಯರೇ! ಹೀಗೇಕೆ ನೋಡುವಿರಿ?

ಅಮರ:— (ಚಕಿತಭಾವದಿಂದ) ಓಹೋ! ಜಮಾದಾರ್! ಇದೇನು? ಅಪೂರ್ವಲಾಭ!!

ಜಮಾ:—ನಮ್ಮ ಡಿಟೆಕ್ಟಿವ್ ಇನಸ್ಪೆಕ್ಟರ್ (ಪ್ರಣಿಧಿ ಕಾರ್ಯಾಧ್ಯಕ್ಷ) ಸಾಹೇಬರ ಅಪ್ಪಣೆಯಂತೆ.

ಅಮರ:—ಇವರ ಪರಿಚಯವು ನನಗೆ ಹಿಂದೆ ಎಲ್ಲಿಯೋ ದೊರೆತಿದ್ದಿತೆಂದು ತೋರುವುದು. ಆದರೆ, ಇಂತಹ ಸ್ಥಳದಲ್ಲೆಂದಾಗಲೀ, ಇಂತಹರೆಂದಾಗಲೀ ನಿಶ್ಚಯಿಸಿ ಹೇಳಲರಿಯದು.

ಸರ:— (ತಲೆದೂಗಿ) ಅಮರನಾಥ್! ನನ್ನಂತೆಯೇ ಮತ್ತಾರನ್ನೋ ನೋಡಿ ಭ್ರಮಿಸಿರಬಹುದು!

ಅಮರ:—ತಮ್ಮ ಆಗಮನವೆಲ್ಲಿಂದಲೋ?

ಸರ:—ಸೀಮೆಯಿಂದಲೇ—

ಅಮರ:—ಜನ್ಮಸ್ಥಳ?

ಸರ:—ಬಂಗಾಳಕ್ಕೆ ಸೇರಿದ ಸಾಮಾನ್ಯಗ್ರಾಮ. ಈವರೆಗಿನ ವಾಸವು ಸೀಮೆಯಲ್ಲೇ.

ಅಮರ:—ತಮ್ಮ ಪ್ರಖ್ಯಾತನಾಮವನ್ನು ಕೇಳಲು ಕುತೂಹಲಿಯಾಗಿರುವೆನು.

ಸರ:—ನನ್ನ ಹೆಸರು "ಜಯಚಂದ್ರನಾಥ."

ಅಮರ:—ಹಾಗಾದರೆ ನಾನು ತಮ್ಮನ್ನು ಹಿಂದೆ ನೋಡಿದುದಿಲ್ಲ. ಮತ್ತೇನು ವಿಶೇಷ?

ಸರ:—(ಕಿರುನಗೆಯಿಂದ) ತಮ್ಮಿಂದೊಂದು ಮಹೋಪಕಾರವನ್ನು ಬಯಸಿ ಬಂದೆನು.

ಅಮರ:—ಅದೆಂತಹ ಉಪಕಾರ?

ಸರ:—(ಕಿರುನಗೆಯಿಂದಲೇ) ಗೃಹದಾನವು!

ಅಮರ:—ದಾನಾರ್ಹವಾದ ಗೃಹವಿದ್ದರಲ್ಲವೇ?

ಜಯಚಂದ್ರ:—ಪ್ರತಿಫಲಸ್ವೀಕಾರಪೂರ್ವಕವಾಗಿ ಆಗಬಹುದು.

ಅಮರ:—ಆವುದಾದರೂ ನನ್ನಲ್ಲಿದ್ದರಲ್ಲವೆ?

ಜಯ:—ಇದೇ ಸಾಲಿನಲ್ಲಿರುವ ದೊಡ್ಡ ಮಹಡಿಯ ಮನೆ ತಮ್ಮದೆಂದೂ, ಅದನ್ನು ತಾವು ಬಾಡಿಗೆಗಾಗಲೀ ಬೆಲೆಗಾಗಲೀ ಕೊಡುವಿರೆಂದೂ ಕೇಳಿಬಂದೆನು?

ಅಮರ:—ಹೇಳಿದವರಾರು?

ಜಯ:—ವಿಮಲನಗರದ ಪ್ರಸಿದ್ಧಪುರುಷರೊಬ್ಬರು.

ಅಮರ: —ಅವರಾರಿರಬಹುದು?

ಜಯ:—ನನಗವರ ಸಂಪೂರ್ಣಪರಿಚಯವು ದೊರೆಯಲಿಲ್ಲ.

ಅಮರ:—ಸುಂದರತರುಣರೊ?

ಜಯ:—ಅಷ್ಟೇ ಅಲ್ಲ—

ಅಮರ:—ಸರಿಯೆ, ಪ್ರಸಂಗಪ್ರಿಯರೂ ದಯಾಳುಗಳೂ ಆಗಿದ್ದರಲ್ಲವೆ?

ಜಯ:—ಅಹುದು; ಮಹೋನ್ನತಪದವೀಧರರಾಗಿಯೂ ಕಂಡುಬರುತ್ತಿದ್ದರು.

ಅಮರ:—ಸರಿ, ಸರಿ! ಅವರೇ ನಮ್ಮ ಮಿತ್ರಮಹಾಶಯರಾದ "ಸಾಮೋದನಪತ್ರಕರ್ತರು."

ಜಯ :—ದಿಟ, ದಿಟ ! ಅವರೇ ಹೇಳಿದವರು. ಆದರೆ ಅವರ ಹೆಸರೇನೋ ಮರೆತಂತಿರುವರು.

ಅಮರ :—'ಕಾಮಪಾಲ' ಮಹಾಶಯನೆಂದು.

ಜಯ :—(ತಲೆದೂಗಿ) ಅಹುದು ; ನೆನೆಪಿಗೆ ಬಂತು. ಅವರ ಮಾತಿನ ನಂಬುಗೆಯ ಮೇಲೆಯೇ ನಾನಿಲ್ಲಿಗೆ ಬಂದುದು. ಮೇಲಾಗಿ, ಜಯಂತಕುಮಾರರು ತಮ್ಮನ್ನು ಹೊಗಳಿದುದನ್ನೂ ಕೇಳಿದೆನು.

ಅಮರ :—(ವಿಸ್ಮಿತನಾಗಿ) ಏನು, ಏನು ? ಜಯಂತನು ಹೊಗಳಿದನೆ ? ಆಶ್ಚರ್ಯ ! ನನಗೆ ಮನೆಯುಂಟು, ಇಲ್ಲವೆಂಬುದು ಅವನಿಗೇನು ಗೊತ್ತು ?

ಜಯ :—ಅದಾವುದನ್ನೂ ಹೇಳಲಿಲ್ಲ. "ಭಾರಿಯ ಸಂಘಾಧ್ಯಕ್ಷರೂ ಶ್ರೀಮಂತರೂ ಆದವರಲ್ಲಿ ಬಾಡಿಗೆಗಾಗಲೀ ಬೆಲೆಗಾಗಲೀ ಮನೆಗಳು ದೊರೆಯಲಾರವೆ ?" ಎಂದು ಮಟ್ಟಕ್ಕೆ ಹೇಳಿದರು.

ಅಮರ :—ಮಹಾಶಯ ! ಕ್ಷಮಿಸಬೇಕು ! ಆ ಮನೆಯೇನೋ ನನ್ನದೇ ಆಗಿದ್ದಿತು. ಆದರೆ ನಾನದನ್ನು ಮಾರಿಬಿಟ್ಟೆನು.

ಜಯ :—ಅದೇತಕ್ಕೆ ಹಾಗೆ.

ಅಮರ :—ಅವೆಲ್ಲವೂ ಗೃಹಕೃತ್ಯವಿಚಾರಗಳು ; ಆದರೆ, ಮನೆ ಮಾರಲ್ಪಟ್ಟು ಹದಿನಯ್ದು ದಿನಗಳಾದುವು. ಅದನ್ನವರಿಗೆ ಒಪ್ಪಿಸುವುದಕ್ಕಾಗಿಯೇ ನಾನಿಲ್ಲಿಗೆ ಬಂದುದು. ಈ ರಾತ್ರಿಯೇ ಹೊರಡಲು ಜ್ವರವು ತಡೆಯಾಯಿತು.

ಜಯ :—ನನ್ನ ಕಾರ್ಯವು ನಿಷ್ಫಲವಾದಂತಾಯಿತಲ್ಲ ?

ಅಮರ :—ಏನುಮಾಡುವುದು, ಯತ್ನವಿಲ್ಲ.

ಜಯ :—ಸಾಹುಕಾರರಿಂದ ತೆಗೆದುಕೊಂಡ ಹಣವೆಷ್ಟೋ, ಅದಕ್ಕೂ ಹೆಚ್ಚಾಗಿಕೊಡುವ ಪಕ್ಷದಲ್ಲಿ ಸಾಧ್ಯವೋ ?

ಅಮರ :—ಈಗ ತಮಗಷ್ಟರ ಅಗತ್ಯವೇನು ?

ಜಯ :—ನಾನು, ಇಲ್ಲಿಯೇ ವಾಸವಾಡಬೇಕಾಗಿರುವುದು.

ಅಮರ :—ಬೇರೆಯ ಮನೆಗಳಿಲ್ಲವೆ ?

ಜಯ :—ಇದ್ದರೇನು? ನಮ್ಮ ಕಾರ್ಯಗೌರವ, ಕ್ರಿಯಾಭಿನಿವೇಶ, ಇವುಗಳಿಗೆ ತಕ್ಕಂತೆ ಅನುಕೂಲತೆಯುಳ್ಳುದಾಗಿರಬೇಕಲ್ಲವೆ?

ಅಮರ :—ಸಕಲವಿಧವಾದ ಆನುಕೂಲ್ಯಗಳುಳ್ಳ ನಗರವಾಸವನ್ನು ಬಿಟ್ಟು ಈ ಕುಗ್ರಾಮದಲ್ಲಿರಲೇಕೆ?

ಜಯ :—(ಒಮ್ಮೆ ವಿಸ್ಫಾರಿತನೇತ್ರದಿಂದ ಅಮರನನ್ನು ನೋಡಿ ದೃಪ್ತಸ್ವರದಿಂದ) "ಮಹಾಶಯ! ಅಲ್ಲಿ ನಮಗೆ ಅನುಕೂಲತೆಗಳಿಗೇನೂ ಕೊರತೆಯಿಲ್ಲ; ಬೇಕಾದಷ್ಟಿರುವುವು. ಆದರೆ, ನಾವು ಕೈಕೊಂಡಿರುವ ಕಾರ್ಯಭಾರವು ಮನೆಯಲ್ಲಿ ಮಲೆತು ಮಲಗಿರುವುದಕ್ಕೆಂದು ನಮಗೆ ಕೊಡಲ್ಪಟ್ಟುದಲ್ಲ! ಈ ನಮ್ಮ ಕಾರ್ಯದಲ್ಲಿ, ಸತ್ಯತೆ, ಶ್ರಮಸಹಿಷ್ಣುತೆ, ಕರ್ತವ್ಯತತ್ಪರತೆ, ದಕ್ಷತೆ, ಶಾಂತತೆ, ಇತ್ಯಾದಿ ಗುಣಭಾಗಗಳು ಮುಖ್ಯಾಂಗಗಳಾಗಿ ಧರಿಸಲ್ಪಡತಕ್ಕುವುಗಳಾಗಿರುವುವು. ಪ್ರಜೆಗಳ ಮಾನಪ್ರಾಣಗಳಿಗೆ ಹಾನಿಕರಗಳಾದ ಉಪದ್ರವಗಳು ಪ್ರಾಯಕವಾಗಿ ಇಂತಹ ಕುಗ್ರಾಮಗಳಲ್ಲಿ ನಡೆವುದೇ ಹೆಚ್ಚು. ಆದುದರಿಂದಲೇ ನಗರವಾಸಕ್ಕಿಂತಲೂ ಈ ಕುಗ್ರಾಮವಾಸವು ಅತ್ಯವಶ್ಯಕವೆನ್ನಿಸಿರುವುದು.

ಅಮರ :—ಅದು ಹೋಗಲಿ; ತಮಗಷ್ಟರ ಅಗತ್ಯವಿದ್ದರೆ, ಗೋಪೀನಾಥರಾಯರ ವಿಶಾಲಭವನವು ಅತ್ಯನುಕೂಲವುಳ್ಳುದಾಗಿರುವುದು. ಹಾಗೂ ಅವರು ಸಮ್ಮತಿಸಿದರೆ, ಪ್ರತ್ಯೇಕಸ್ಥಳವೇ ದೊರೆಯಬಹುದು. ರಾಯರು ಬಹು ಉದಾತ್ತರು!

ಜಯ :— (ಕಿರುನಗೆಯಿಂದ) ಬಲ್ಲೆನು. ರಾಯರು ನನಗೆ ಚಿರಪರಿಚಿತರು. ಅವರ ಮಕ್ಕಳಂತೂ ನನಗೆ ಸಹಾಧ್ಯಾಯಿಗಳಾಗಿದ್ದವರು.

ಅಮರ :—ಹಾಗಿದ್ದಮೇಲೆ ಪ್ರಸ್ತಾವಿಸಲು ತಡೆಯೇನು?

ಜಯ :—ಅದು ನಿರರ್ಥಕವಾಯಿತು.

ಅಮರ :—ಏಕೆ?

ಜಯ :—ರಾಯರೇನೋ ಅಂಗೀಕಾರಪಟ್ಟರೂ, ಅವರ ಮಕ್ಕಳು ಜಯಂತಕುಮಾರರೇ ನಿರಾಕರಿಸಿಬಿಟ್ಟರು.

ಅಮರ :—ನಿರಾಕರಣಕ್ಕೆ ಕಾರಣವೇನು?

ಜಯ :—"ತಮ್ಮಲ್ಲಿ ಅನಾಥರಿಗೆ ಮಟ್ಟಕ್ಕೇ ಆಶ್ರಯವುಂಟು; ಉಪಪತ್ತಿಯುಳ್ಳವರಿಗೂ ಪ್ರಮತ್ತರಿಗೂ ಸಲ್ಲದು; ಅದರಮೇಲೆಯೂ ಆಶಾಪರರೂ, ಸ್ವಾಭಿಮಾನಿಗಳೂ, ಅನೃತವಾದಿಗಳೂ, ಸ್ವಾಮಿದ್ರೋಹಿಗಳೂ ಆದ ಪೋಲೀಸು ಇಲಾಖೆಯವರಿಗೆ ಮಟ್ಟಕ್ಕೆ, ತಮ್ಮಲ್ಲಿ ಎಷ್ಟು ಮಟ್ಟಕ್ಕೂ ಸ್ಥಳವು ದೊರೆಯದು; ಬಾಲ್ಯಸ್ನೇಹಕ್ಕೂ, ಈ ವಿಧದ ವ್ಯವಹಾರಕ್ಕೂ ಸಂಬಂಧವೇನೂ ಇರಲಾರದು. ಇದನ್ನು ನಾನು ಸಂಪೂರ್ಣಾಭಿಪ್ರಾಯದಿಂದಲೇ ನಿರೋಧಿಸಿರುವೆನು" ಎಂದು ತಿರಸ್ಕರಿಸಿಬಿಟ್ಟರು.

ಅಮರ :—ಸಹಜ; ಮಡದ ಸ್ವಭಾವವೇ ಅಷ್ಟು! ವಿದ್ಯಾಲಾಭದಿಂದ ಪದವೀಧರರಾದೆವೆಂಬ ಮತ್ತತೆಯೊಡನೆ, ಧನಮದಾಂಧತೆಯೂ, ಯೌವನಮದಾಂಧತೆಯೂ ಸೇರಿ, ಬಾಲ್ಯಸ್ನೇಹ, ಬಾಂಧವ್ಯ, ಇವುಗಳನ್ನೇ ಮರೆಮಾಡಿಬಿಟ್ಟಿರುವುವು.

ಜಮಾ :—ಅಮರನಾಥರಾಯರೇ, ತಾವೂ ಜಯಂತಕುಮಾರರೂ ಬಾಲ್ಯ ಸ್ನೇಹಿತರಷ್ಟೆ?

ಅಮರ :—ಆದುದರಿಂದಲೇ ನನಗಿಂತಹ ಮನ್ನಣೆಯುಂಟಾಯಿತು.

ಜಮಾ :—ಅದೇನು?

ಅಮರ :—ಬಾಲ್ಯಸ್ನೇಹಿತನ ಸುಖಾಗಮನವನ್ನು ಬಯಸಿ, ನೋಡಹೋಗಿದ್ದುದಕ್ಕೆ ಅವರಿಂದ ಸನ್ಮಾನವು ಹಾಗಿರಲಿ, ಒಂದು ಆದರದ ಮಾತಾದರೂ ದೊರೆಯದೆ ಔದಾಸೀನ್ಯವೇ ದೊರೆಯಿತು. ಅಲ್ಲಿಂದ ಹಿಂತಿರುಗಿ ಬರುತ್ತಿದ್ದಾಗಲೇ, ದೇಹಸ್ವಾಸ್ಥ್ಯತಪ್ಪಿ ನನಗೀಯವಸ್ಥೆಯುಂಟಾಯಿತು.

ಜಮಾ :—ಇದ್ದಕ್ಕಿದ್ದಹಾಗೆ ಹಾಗಾಯಿತೇಕೆ?

ಅಮರ :—ಏನೆಂದು ಹೇಳಲಿ?

ಜಯ :—(ತಲೆದೂಗಿ) ಎಲ್ಲವೂ ಕರ್ಮಫಲವೆಂಬುದೊಂದೇ ಸಮಾಧಾನವು.

ಜಯ:—ರಾಯರ ಮನೆಯಲ್ಲಿ ಸ್ತ್ರೀಹರಣವಾದುದು ತಿಳಿಯಿತೆ?

ಅಮರ:—ಅಲ್ಲಿಗೆ ಹೋಗಿದ್ದವೇಳೆ ತಿಳಿಯಿತು.

ಜಯ:—ಕಳುವಾದವಳಾರು?

ಅಮರ:—ರಾಯರ ಪಾಲಿತಪುತ್ರಿಯಾದ ವಿಯೋಗಿನಿಯೊಬ್ಬಳು.

ಜಯ:—'ಹರಿಣಿ' ಎಂಬುವಳಷ್ಟೆ!

ಅಮರ:—ಅಹುದು; ತಮಗೆ ಆಕೆಯ ಪರಿಚಯವುಂಟೋ?

ಜಯ:—ವಿಶೇಷವಾಗಿ ಆದರೆ; ಪರೋಕ್ಷದಲ್ಲಿಯೇ.

ಅಮರ:—ಅದು ಹೇಗೆ?

ಜಯ:—ವಿದ್ಯಾಸಾಗರದ ವಿಶ್ವವಿದ್ಯಾಲಯದಲ್ಲಿ ಅವಳು ತೇರಿದಳಷ್ಟೆ! ಆ ಸಂತೋಷಪ್ರದರ್ಶನೋತ್ಸವಕ್ಕಾಗಿ, ಸೀಮೆಯಲ್ಲಿದ್ದ ಶ್ರದ್ಧಾಳುಗಳು ಸೇರಿ, ಪ್ರಶಸ್ತಿಪತ್ರಿಕೆಗಳನ್ನೂ ಬಹುಮಾನದ ಪದಕವನ್ನೂ ಕಳಿಹಿದರು. ಆ ವೇಳೆಯಲ್ಲಿ ನಾನೂ ಅಲ್ಲಿಯೇ ಇದ್ದೆನು; ಅಂತಹಳು ಕಳುವಾಗಿರುವಳೆಂದರೆ ನನಗೆ ನಂಬುಗೆಯಾಗದು.

ಅಮರ:—ಅದೇಕೆ?

ಜಯ:—ಆಕೆ ಅತಿಚತುರೆಯೆಂಬುದು ಪ್ರಶಸ್ತಿಪತ್ರಿಕೆಯಿಂದಲೇ ತಿಳಿವುದು. ಮೇಲೆಯೂ ವಿಯೋಗಿನಿಯಾದವಳು! ತಾನಾಗಿ ಆರನ್ನಾದರೂ ವರಿಸಿ ಹೋಗಿರಬಾರದೇಕೆ?

ಅಮರ:—(ನಕ್ಕು) ಅಹುದಹುದು! ಆಗಿರುವುದೂ ಹಾಗೆಯೇ! ರಾಯರು ಅವಳ ಸಂಗತಿಯನ್ನು ಹೇಳಲಿಲ್ಲವೋ?

ಜಯ:—ನಮ್ಮ ಕಿವಿಗೆ ಬೀಳದೆಯೇ ಹೋಗುವದೇನು? ಹೇಗಿದ್ದರೂ, ಎಂದಾದರೂ ಅತ್ಯಾಚಾರಿಗಳು ಹೊರಬೀಳುವುದೇ ಸಿದ್ಧವು. ಈಗ ನನಗೆ ಉತ್ತರವೇನು?

ಅಮರ:—ಆಗಲೇ ಹೇಳಿದೆನಷ್ಟೆ! ಯತ್ನವಿಲ್ಲದ ವಿಚಾರವೆಂದು.

ಜಯ:—ಅಧಿಕಕ್ರಯವನ್ನು ಕೊಟ್ಟರೂ—

ಅಮರ:—ಇಲ್ಲ. ಸಾಹುಕಾರರು ಅಷ್ಟು ಕೀಳುತೆರದವರಲ್ಲ. ಕ್ಷಮಿಸಬೇಕು.

ಜಯ :—ಕ್ಷಮೆಗೆ ಕೊರತೆಯಿಲ್ಲ. (ಜಮಾದಾರನ ಕಡೆಗೆ ತಿರುಗಿ) ಜಮಾದಾರ್! ಇನ್ನೇಕೆ ತಡೆ?

ಜಮಾ:—ಹೊರಡಬಹುದು.

ಅಮರ :—ಮಹಾಶಯ, ನನ್ನದೊಂದು ಕೋರಿಕೆ.

ಜಯ :—ಅದೇನು?

ಅಮರ:—ಹರಿಣಿ ಕಳುವಾಗಿರುವಳಷ್ಟೆ!

ಜಯ:—ಇರಬಹುದು ಮತ್ತೇನು?

ಅಮರ:—ಅವಳು ನನ್ನನ್ನು ಮದುವೆಯಾಗುವೆನೆಂದು ಮಾತು ಕೊಟ್ಟಿದ್ದಳು.

ಜಯ :—ಆಶ್ಚರ್ಯ!

ಅಮರ:—ಅದೇಕೆ?

ಜಯ:—ಇಂದ್ರೋಪೇಂದ್ರಸಮಾನರಾದ ಪುರುಷಶ್ರೇಷ್ಠರಿಬ್ಬರೂ ಸಮೀಪದಲ್ಲಿದ್ದೂ ಅನ್ಯತ್ರಗಮನವೆಂದರೆ?

ಅಮರ:—ಆ ವಿಚಾರವೇ ಬೇರೆ; ಅದೆಲ್ಲವೂ ಮಾನಸಿಕವರ್ತನೆ. ಹೇಗೂ ವಾಗ್ದಾನವಾಗಿದ್ದಿತು.

ಜಯ :—ನನಗೇನೋ ನಂಬುಗೆಯಿಲ್ಲ.

ಅಮರ:—ಇದರ ಸಲುವಾಗಿಯೇ ಅವಳು ತಲೆತಪ್ಪಿಸಿಕೊಂಡಿದ್ದರೂ ಇರಬಹುದು. ವಿಮಲನಗರಕ್ಕೆ ಹೋದಮೇಲೆ ತಿಳಿಯಬರುವುದು.

ಜಯ :—ಅದೇನು ನಿಶ್ಚಯವೋ?

ಅಮರ:—ಅಹುದು; ಅವಳು ಮುಂಚಿತವಾಗಿಯೇ ನನ್ನಿಂದಲೇ ಆ ನೆಲೆಯನ್ನು ತಿಳಿದಿದ್ದಳು.

ಜಯ:—ನಿಮ್ಮ ನಿಮ್ಮ ವಿಷಯಗಳು ಹೇಗಾದರೂ ಇರಲಿ. ನಮಗದರ ತರ್ಕವೇಕೆ? ಅದೃಶ್ಯವಾಗಿರುವ ವಸ್ತು ನಾಶವಾಗದಂತೆ ಶಕ್ತಿಮೀರಿ ಹುಡುಕಿ ತರುವುದೇ ನಮ್ಮ ಕರ್ತವ್ಯವು. ಕಳುವಾಗಿರುವಳು ಪ್ರಾಣಾಪಾಯಕ್ಕೆ ಗುರಿಯಾಗದಂತೆ ಜಾಗರೂಕರಾಗಿ ಇರಬೇಕಾದುದೇ ನಮ್ಮ ಧರ್ಮವು.

ಅಮರ :—ಅಂತಹ ಅಪಾಯವೇನೂ ಇಲ್ಲವೆಂಬ ಭರವಸೆಯುಂಟು. ಅವಳ ಪತ್ತೆದಾರಿ ನನಗೂ ಸೇರಿದುದು. ಆದುದರಿಂದಲೇ ತಮಗಿಷ್ಟು ದೂರ ಹೇಳಬೇಕಾಗಿರುವುದು.

ಜಯ :—ಅದೇನೋ ಹೇಳಬಹುದಲ್ಲವೆ?

ಅಮರ :—ಅವಳು ನನ್ನ ಪತ್ತೆಗೆ ಒಳಪಟ್ಟರೆ ಹೇಳಬೇಕಾದುದಿಲ್ಲ. ಒಂದುವೇಳೆ ನಿಮ್ಮ ಪತ್ತೆಗೆ ಒಳಪಟ್ಟಳಾದರೂ ಅವಳನ್ನು ತಾವು ನನಗೇ ಒಪ್ಪಿಸಿಕೊಡಬೇಕು. ಇದಕ್ಕಾಗಿ ನಾನು ತಮಗೆ ಚಿರಕೃತಜ್ಞನಾಗಿರುವೆನು.

ಜಮಾ :—ಅದು ಹೇಗೆ? ನ್ಯಾಯವನ್ನು ಮರೆಯಲಾಗುವುದೇ?

ಅಮರ :—ಅವಳ ಮನೋಭಾವವು ನನಗೆ ತಿಳಿದಿರುವುದು. ಒಂದುವೇಳೆ ಸಿಕ್ಕಿದರೂ ಅವಳು ರಾಯರ ವಶದಲ್ಲಿರಲಾರಳು.

ಜಮಾ :—ಅದು ತಮಗೆ ಸಮರ್ಪಕವೊ?

ಅಮರ:—ನಾವಿಬ್ಬರೂ ಪರಸ್ಪರವಾಗಿ ಪ್ರೀತಿಸಿರುವೆವು. ಅವಳು ಅನ್ಯತ್ರಗಮನಮಾಡಲಾರಳೆಂಬ ನಂಬುಗೆ ನನಗೆ ಬಲವಾಗಿರುವುದು. ಮಹಾಶಯ! ಕೃಪೆಯಿರಲಿ! ಇಷ್ಟನ್ನು ಮಾಡಬೇಕು. ಇದೋ ವಂದನೆ.

ಜಯಚಂದ್ರನು ಎದ್ದುನಿಂತು ತಿರಸ್ಕಾರಭಾವದಿಂದ ನೋಡುತ್ತ, ಸಾಟೋಪಸ್ವರದಿಂದ:—"ಅಯ್ಯಾ! ನನಗೆ ವಿಷಯಗಳು ಸಾಧ್ಯವಾದ ಮಟ್ಟಕ್ಕೂ ತಿಳಿದಿರುವುವು. ಮತ್ತೆ ವಿಚಾರವು ಅಗತ್ಯವಿಲ್ಲ. ಮನೋಭಾವ-ಕರ್ಮಗಳಿಗೆ ತಕ್ಕ ಫಲಾನುಭವವೂ ಸಿದ್ಧವಾಗಿಯೇ ಇರುವುವು. ಗುಪ್ತಪರಿಶೀಲನದಲ್ಲಿ ಗೂಢವಿಚಾರವೂ ಹೊರಬೀಳದಿರದು. ಎಚ್ಚರಿಕೆ!" ಎಂದು ಹೇಳಿ ನಿಲ್ಲದೆ ಹೊರಟು ಹೋದನು. ಜಮಾದಾರನೂ ಜಯಚಂದ್ರನನ್ನೇ ಹಿಂಬಾಲಿಸಿದನು.

ಅಷ್ಟಮ ಪರಿಚ್ಛೇದ

(ಶುಭವರ್ತಮಾನ)

ಜಯಂತನು ತನ್ನ ಕಿರುಮನೆಯಲ್ಲಿ ತಂದೆಯೊಡನೆ ಮಾತನಾಡುತ್ತ ಕುಳಿತಿದ್ದನು. ಅವರಿಬ್ಬರ ಸಂಭಾಷಣೆಯಲ್ಲಿಯ ಮುಖ್ಯ ಭಾಗವಾದರೆ ಇದು.

ಗೋಪೀ:—ಜಯಂತ! ಮಾರುವೇಷದಿಂದ ತಂದ ವರ್ತಮಾನದಲ್ಲಿ, ಹರಿಣಿಗೆ ಪ್ರಾಣಾಪಾಯವಿಲ್ಲವೆಂಬುದು ಹರ್ಷಪ್ರದವೇ ಸರಿ. ಆದರೆ, ಒಂದು ಸಪ್ತಾಹವಾದರೂ ಇನ್ನೂ ಮುಖ್ಯ ವಿಚಾರವು ಹೊರಪಡದಿರುವುದು ಕಳವಳಕ್ಕೆ ಕಾರಣವಾಗಿರುವುದು.

ಜಯಂತ:—ಅಪ್ಪ! ಜಯಚಂದ್ರನಾಗಿ ಅಮರನ ಅಭಿಸಂಧಿಯನ್ನು ತಿಳಿದುದಾಯಿತು. ಅದರಮೇಲೆ "ಸಾಮೋದನ" ಪತ್ರಿಕೆಯಲ್ಲಿ ಪ್ರಕಟನೆಯನ್ನೂ ಕೊಟ್ಟಾಯಿತು. ಉತ್ತರವೂ ಇಷ್ಟರಲ್ಲಿಯೇ ಬರಬಹುದು.

ಗೋಪೀ:—ಶಚೀಕಾಂತನಿಗೆ ಈ ವಿಚಾರವನ್ನು ಸ್ಪಷ್ಟಪಡಿಸಿಲ್ಲವೆನ್ನುವೆ; ಆದರೂ, ಆತನ ಮುಖದಲ್ಲಿ ಮುನ್ನಿನ ನೈರಾಶ್ಯವು ಹೊರಪಡುತ್ತಿಲ್ಲ. ಕಾರಣವೇನು?

ಗೋಪೀ:—ನಿಮಿಷ ನಿಮಿಷದಲ್ಲಿಯೂ, ಕೊಡಲ್ಪಡುವ ನನ್ನ ಎಚ್ಚರಿಕೆಯ ಬಲವೇ!

ಗೋಪೀ:—ಮಗು! ಎಷ್ಟು ಬಗೆಯಾಗಿ ಆಲೋಚಿಸಿದರೂ ಹರಿಣಿಯ ವಿಷಯವಾಗಿ ಸಂದೇಹವೇನೂ ತೋರುವುದಿಲ್ಲ. ಅವಳು ಹಾಗೆ ಕುಟಿಲೆಯಾಗಿದ್ದ ಪಕ್ಷದಲ್ಲಿ, ಅಂದು ನಿನ್ನನ್ನೇಕೆ ಕೂಗುತ್ತಿದ್ದಳು? ಆ ಆರ್ತನಾದವೇಕೆ? ಅದೆಲ್ಲವೂ ಇರಲಿ; ಶಚೀಕಾಂತನ ಪಾದಧೂಳಿಯನ್ನು ಶಿರಸ್ಸಲ್ಲಿ ಧರಿಸಿದುದೂ, ಕೆಳಗೆ ಬೀಳುತಿದ್ದಾತನನ್ನು ಹಿಡಿದೆತ್ತಿ ಉಪಚರಿಸಿದುದೂ ಏತರಿಂದ? ಪತಿಯ ವಿಷಯದಲ್ಲಿ ಸ್ತ್ರೀ ಎಂತೆಂತು

ನಡೆವಳಿಯೋ, ಅಂತಂತೆ ಅಂದು ಅವಳಿಂದ ನಡೆಯಿಸಲ್ಪಟ್ಟುದೇತರ ದೆಸೆಯಿಂದ?

ಜಯಂತ:—ಹೇಗಾದರೂ ಆಗಲಿ, ಅವಳಿಗಾವ ಅಪಾಯವೂ ಉಂಟಾಗದೆಂಬುದೊಂದೇ ಸಾಕು. ಹೇಗೂ ಅಂದು ಅವಳು ಶಚೀಕಾಂತನ ಪ್ರತ್ಯಕ್ಷಪರೋಕ್ಷಗಳಲ್ಲಿ ನಡೆಯಿಸಿದ ನಡೆವಳಿಗಳಿಂದಲೂ, ಮೊದಲು ಕಂಡುಬಂದಿದ್ದ ವಿದ್ಯಮಾನಗಳಿಂದಲೂ ಆತನ ಪತ್ನಿಯಾಗಿರಬೇಕೆಂಬುದೊಂದೇ ನನ್ನ ಭಾವನೆಯಾಗಿರುವುದು.

ಗೋಪೀ:—ಹಾಗಾದರೆ, ಅವಳು ತಾಯಿಯೊಡನೆ ಬೆಂಕಿಯಿಂದ ಸುಡಲ್ಪಟ್ಟಳೆಂಬುದೂ ಸುಳ್ಳಾಗಬೇಕಾಯಿತು!

ಜಯಂತ:—ಏಕಾಗಬಾರದು? ವಿದ್ರೋಹಿಗಳ ಕೃತಕವಾಗಿದ್ದ ಪಕ್ಷದಲ್ಲಿ?

ಗೋಪೀ:—ಹಾಗಾಗಿದ್ದರೆ, ಅವಳೇಕೆ, ಹೀಗೆ ವಿಯೋಗಿನೀ ಧರ್ಮವನ್ನು ಹಿಡಿದಿರುವಳು?

ಜಯಂತ:—ವಿಮರ್ಶಿಸಹೋದರೆ ಅನೇಕ ಕಾರಣಗಳು ಕಾಣಬರುವುವು. ಆದರೆ, ಸ್ತ್ರೀಚಿತ್ತವು ಹೀಗೆಯೇ ಸರಿಯೆಂದು ನಿಶ್ಚಯಿಸಲಾಗದು.

(ಇವರಿಬ್ಬರ ಸಂಭಾಷಣೆಯ ಮಧ್ಯದಲ್ಲಿಯೇ, ಶಚೀಕಾಂತನೂ ಪತ್ರಹಸ್ತನಾಗಿ ಪ್ರವೇಶಿಸಿದನು.)

ಗೋಪೀ:—ಅಣ್ಣಾ, ಬಾ; ಇದೇನು? ಯಾರಿಗೆ?

ಶಚೀ:—"ಜಯಂತನಿಗೆ" ಎಂದು ಪತ್ರವನ್ನು ಜಯಂತನ ಕಯ್ಯಲ್ಲಿತ್ತು, ಬಳಿಯಲ್ಲಿ ತಾನೂ ಕುಳಿತುಕೊಂಡನು.

ಜಯಂತನು, ಪತ್ರದ ಮೇಲವಿಳಾಸದ ಅಕ್ಷರಗಳನ್ನೂ, ಕಳಿಹಲ್ಪಟ್ಟ ಸ್ಥಳದ ಮುದ್ರೆಯನ್ನೂ ಆತ್ಯಾತುರದಿಂದ ನೋಡಿದನು. ಆನಂದೋತ್ಸಾಹಗಳಿಂದ ಉನ್ಮತ್ತನಂತಾಗಿ, ತಂದೆಯು ಇದಿರಲ್ಲಿರುವನೆಂಬ ಜ್ಞಾನವೂ ಇಲ್ಲದೆ "ಭಲೆ! ಭಲೆ!! ಸುದಿನ! ಇಂದೇ ಸುದಿನ!! ಅಣ್ಣಾ! ಭಲೆ!! ಭಲೆ!!!" ಎಂದು ಹೇಳುತ್ತಾ ಶಚೀಕಾಂತನ ಬೆನ್ನಿನ

ಮೇಲೆ "ದಡಬಡ" ಎನ್ನುವಂತೆ ತಟ್ಟಿಬಿಟ್ಟನು. ಶಚೀಕಾಂತನು ಸಮಾಚಾರವೇನೊಂದನ್ನೂ ತಿಳಿಯದೆ ವಿಭ್ರಾಂತನಾಗಿ ನೋಡುತ್ತಿದ್ದನು.

ಗೋಪೀ :—(ವಿಸ್ಮಯಕುತೂಹಲಗಳಿಂದ) "ಜಯಂತ! ಪತ್ರವಾವುದು ? ವಿಶೇಷವೇನು ?"

ಜಯಂತ:—ಪತ್ರವು ನಮಗೆ ಅಗತ್ಯವಾಗಿದ್ದುದೇ! ಶುಭವರ್ತಮಾನವೇ ವಿಶೇಷ !

ಗೋಪೀ :—ನನಗೆ ಅರ್ಥವಾಗಲಿಲ್ಲ.

ಜಯಂತ:—(ತಲೆದೂಗಿ) ಹಾಗಾದರೆ ಓದುವೆನು. ಶಚೀಕಾಂತ! ನೀನೂ ಅವಶ್ಯಕವಾಗಿ ಕೇಳತಕ್ಕುದೇ! ಚೆನ್ನಾಗಿ ಕಿವಿಗುಡು.

ಶಚೀ :—ಕಾಗದವನ್ನು ಒಡೆವುದಕ್ಕೆ ಮೊದಲೇ ವಿಷಯ ವಿಮರ್ಶನವೇ ?

ಜಯಂತ:—"ಇರುವುದೂ ಹಾಗೆಯೇ! ಕೇಳಿದರೆ ಗೊತ್ತಾಗಲಾರದೋ ?" ಎಂದು ಪತ್ರವನ್ನು ವಾಚಿಸಲಾರಂಭಿಸಿದನು.

ಪತ್ರ

ಪ್ರಿಯಸಹೋದರ !

ಮಂದಭಾಗ್ಯೆಯಾದೊಬ್ಬ ಸೋದರಿಗಾಗಿ ನೀನು ದಂದುಗದಿಂದ ಬೆಂದು ಬೇಸತ್ತು ಹೋಗುತ್ತಿರುವ ವಿಚಾರವು ಶೋಚನೀಯವಾಗಿರುವುದು. ಈ ತೆರದ ಅಧೀರತೆ ನಿನ್ನನ್ನು ಆವರಿಸುವುದೆಂದೂ, ಆ ನಿನ್ನ ಅಪೂರ್ವವಾದತೇಜೋಬಲ, ಮನಸ್ಥೈರ್ಯ, ಇವುಗಳು ಈಯಲ್ಪಚಿಂತೆಯಿಂದ ಕುಗ್ಗಿ ಕ್ಲಾಂತವಾಗುವುದೆಂದೂ ತಿಳಿದಿರಲಿಲ್ಲ! ಆವ ಸುಹೃದ್ಭ್ರಾತೃವಿನ ಸುಬೋಧಾಮೃತಾಸ್ವಾದನದಿಂದಲೇ, ಅಚಲಮನೋವೃತ್ತಿ ತನಗುಂಟಾಗಿರುವುದೋ, ಅಂತಹ ಪ್ರಾಣಾಪ್ತಸೋದರನ ವ್ಯಸ್ತತೆಗೆ ಆ ನಿನ್ನ ಸೋದರಿಯ ಚಿತ್ತವು ಕೊರಗದಿರುವುದೇನು ?

ಅಣ್ಣಾ! ನಿರ್ಬಂಧವೆಂಬುದು ಆವುದೊಂದು ಪ್ರಾಣಿಯನ್ನೂ ಬಿಟ್ಟುದಲ್ಲ. ಎಲ್ಲೆಲ್ಲಿಯೂ ತಾನೇ ತಾನಾಗಿ, ಎಲ್ಲರನ್ನೂ ತನ್ನ ಕಟ್ಟಳೆಯಲ್ಲಿ ಬಿಗಿದು ಹಾಕುವುದೇ ಅದರ ಸ್ವಭಾವವು. ಈ ನಿರ್ಬಂಧವೇ

ಕೆಲವುವೇಳೆ ಸುಖರೂಪವಾಗಿಯೂ, ಕೆಲವುವೇಳೆ ದುಃಖರೂಪವಾಗಿಯೂ ಪರಿಣಮಿಸುವುದು. ಆದರೆ ಸುಖದುಃಖಾನುಭವಗಳಿಗೆ ಕರ್ಮಫಲವೇ ಕಾರಣವಲ್ಲದೆ ಬೇರೆ ಇಲ್ಲ. ಕರ್ಮಫಲವು, ಎಲ್ಲಿರಲಿ, ಹೇಗಿರಲಿ, ಬಿಟ್ಟಿರತಕ್ಕುದೂ ಅಲ್ಲ, ಬಿಡತಕ್ಕುದೂ ಅಲ್ಲ; ಕರ್ಮದೊಡನೆಯೇ ಇದ್ದು, ಅವುಗಳ ತುಚ್ಛೋಚ್ಚ ಫಲಾನುಭವವನ್ನುಂಟುಮಾಡಿಸಿಯೇ ಬಿಡುವುದು ಲೋಕಾನುಭವಜ್ಞರು ತಮಗೊದಗಿದ ಸುಖದುಃಖಗಳನ್ನು ಸಮರಸದಿಂದಲೇ ಕೈಕೊಂಡು, ವಿವೇಚನೆ, ಮನಸ್ಥೈರ್ಯ, ಬುದ್ಧಿಕೌಶಲ್ಯ, ಸಾಹಸೋದ್ಯಮ, ಪ್ರಭಾವ, ಇವುಗಳಿಂದ ಸಮಾಹಿತಚಿತ್ತರಾಗಿಯೇ ಕಾಲಚಕ್ರವನ್ನೂ, ಕರ್ತವ್ಯರಥವನ್ನೂ, ಇಹಜೀವನನೌಕೆಯನ್ನೂ ನಿರುಪಾಧಿಕವಾಗಿ ನಡೆಯಿಸುತ್ತಿರುವರು.

ಜಯಂತ!

ನೀನು, ಆ ನಿನ್ನ ಸೋದರಿಗಾಗಿ ಕಣ್ಣೀರನ್ನು ಸುರಿಸುತ್ತಿರುವೆ! ಮಾಡತಕ್ಕುದೇನು? ಅವಳಾದರೂ ಸುಮ್ಮನಿರುವಳೆಂದು ಭಾವಿಸಬಾರದು. ಸ್ವಜಭ್ರಾತೃಸಮ್ಮುಖದಲ್ಲಿ ತನ್ನ ನಿಷ್ಕಲ್ಮಷಹೃದಯವನ್ನು ಬಯಲ್ಪಡಬಾರದೆಂದೂ, ಎಲ್ಲವನ್ನೂ ಸಪ್ರಮಾಣವಾಗಿ ವ್ಯಕ್ತಪಡಿಸಬೇಕೆಂಡೂ ಆಶಿಸುತ್ತಿರುವಳು. ಅದಕ್ಕಾಗಿ ಅಹೋರಾತ್ರಿಯೂ ಉತ್ಸುಕೆಯಾಗಿ ಕಾಲ ನಿರೀಕ್ಷೆಯಲ್ಲಿರುವಳು. ಆದರೇನು? ಕಾಲಬಲವೇ ಪ್ರತಿಕೂಲವಾಗಿರುವುದು. ಅಕಾಲದಲ್ಲಿ ಬಾಯ್ದೆರೆವುದೂ ಒಳ್ಳಿತಲ್ಲನೆಂದು ಸುಮ್ಮನಿರಬೇಕಾಗಿರುವುದು.

ಅಣ್ಣಾ!

ಸಾಕು; ಈ ನಿನ್ನ ಅಧೀರಭಾವವನ್ನು ಸಾಕು!! ನಿನ್ನ ಮೇಲೆ ಬೀಳುತ್ತಿರುವ ಸಂಸಾರನಾವೆಯನ್ನು ಸುಲಲಿತವಾಗಿ ನಡೆಯಿಸತಕ್ಕ ಭಾಗ್ಯಶಾಲಿಸಿಯನ್ನು ಆದಷ್ಟುಬೇಗನೆಯೇ ಭರಿಸುವುದರಲ್ಲಿ ಮನವಿಡು! ನಿನ್ನ ವಿವಾಹಮಹೋತ್ಸವದಲ್ಲಿ ತಾನೇ ಮುಂದಾಳಾಗಿ ನಿಂತು, ಕಾರ್ಯವನ್ನು ನಿರ್ವಹಿಸಬೇಕೆಂಬ ಉತ್ಕಟೇಚ್ಛೆ ಸೋದರಿಯಲ್ಲಿ ತುಂಬಿತ್ತು; ನಿನ್ನ ಕಯ್ಪಿಡಿವ ಕಾಂತಾಮಣಿಯನ್ನು ಅವಳೆಂದಾದರೂ ನೋಡದೆ ಬಿಡುವುದಿಲ್ಲ. ಅಂದು, ಆವೇಳೆ, ನಿಮ್ಮಿರ್ವರನ್ನೂ ಒಮ್ಮೆ ಹಾಸ್ಯಲಹರಿ

ಯಲ್ಲಿ ಸಿಕ್ಕಿಸಿ ಆಡಿಸದೆ ಬಿಡಲಾರಳು. ಅದೇ ನಿನ್ನನುಜಾತೆಯ ದೃಢ ಸಂಕಲ್ಪವು! ಆ ಸಂಕಲ್ಪಕ್ಕೆ ವಿಘಾತವಾಗದಂತೆ ವಿಶ್ವಂಭರಾಸಹಿತನಾದ ವಿಶ್ವಪಿತನೇ ಸಹಾಯನಾಗಿರಲಿ!

ಪ್ರಿಯಸೋದರ!

ಒರ್ವ ವಿರಕ್ತನಾಗಿ ಕಲೆಕ್ಟರ್ ಪ್ರಭು, ತಮ್ಮ ಕರ್ತವ್ಯಕರ್ಮವನ್ನು ಕೈಕೊಳ್ಳದೆ, ಅಲಸತೆಯಲ್ಲಿರುವರೆಂಬ ಜನಜನಿತವರ್ತಮಾನವು ಆರಿಗೂ ಸಹ್ಯವಾಗಿರದು! ಅಷ್ಟರ ಅವಕಾಶವನ್ನು ಕೊಡಲೇಕೆ? ಅವರನ್ನು ಸರ್ವಪ್ರಕಾರದಿಂದಲೂ ಎಚ್ಚರಿಸಿ, ಸದಾನಂದಸಾಮ್ರಾಜ್ಯದಲ್ಲಿ ನೆಲೆಗೊಳಿಸಬಲ್ಲ ಉದ್ಯಮೋತ್ಸಾಹಶಕ್ತಿ ನಿನ್ನಲ್ಲಿ ದೃಢಮೂಲವಾಗಿಯೇ ಇರುವುದೆಂದೆಣಿಸುವೆನು.

ಜಯಂತ!

ವಿದ್ವನ್ಮಣಿಯೆಂದೆನ್ನಿಸಿದ ಕಲೆಕ್ಟರ್ ಪ್ರಭು, ಆ ನಿನ್ನ ದೀನ ಸೋದರಿಗೆ ಹಿತಚಿಂತಕರಾಗಿರುವುದು ದಿಟವಾಗಿದ್ದರೆ, ತಮ್ಮ ಕರ್ತವ್ಯಕಾರ್ಯದಲ್ಲಿ ತಾವು ಅತ್ಯವಶ್ಯಕವಾಗಿ ನಿರ್ವಹಿಸಬೇಕಾಗಿರುವ ಧರ್ಮಪ್ರತಿಪಾಲನಾಮಹಾಕಾರ್ಯದಲ್ಲಿ, ಮಾನವಜನ್ಮಸಾರ್ಥಕತೆಗೆ ಆಧಾರವಾದ ಮಾರ್ಗದಲ್ಲಿ, ತಮ್ಮ ಸುಸಂಸ್ಕೃತಚಿತ್ತವನ್ನು ಜಾಗ್ರತೆಯಾಗಿ ಪ್ರಕಾಶಪಡಿಸಲಿ! ಅವರ ಮನವು ವೃಥಾವಿಚಾರಕ್ಕೆಡೆಗೊಡದಿರಲಿ; ಗತವಸ್ತು ನಷ್ಟವಾಗಿಯೇ ಹೋಗುವುದಿಲ್ಲ; ಕಾಲ, ದೇಶ, ವರ್ತಮಾನ, ಇವುಗಳಿಗನುಗುಣವಾದ ನಿರುಪಾಧಿಕವೃತ್ತಿಯಿಂದ ಜೀವನರಥವನ್ನು ನಡೆಯಿಸುತ್ತಿರುವ ಆ ವಸ್ತು, ಭ್ರಾತೃಸುಶಿಕ್ಷಣೆ, ಸ್ವಬುದ್ಧಿಬಲ, ದೈವಕಟಾಕ್ಷ, ಇವುಗಳಿಂದ ಅಪೂರ್ವಪ್ರಕಾಶವನ್ನು ಪಡೆಯಬಲ್ಲುದೆಂಬ ನಂಬುಗೆ ಬಲುವಾಗಿರಲಿ! ಮತ್ತೇನನ್ನು ಬರೆಯಲಿ? ನೈಜಸಹೋದರ!

ಮುಖ್ಯವಿಚಾರವೊಂದು; ಕಲೆಕ್ಟರ್ ಪ್ರಭುವಿಗೆ, ಅವರ ಆ ಮಂದಭಾಗ್ಯೆಯಾದ ಮಣಿಮಾಲೆಯ ನೆನೆಪು ಸಾಸಿವೆಯಕಾಳಷ್ಟಾದರೂ ಇದ್ದರೆ ಸಾಕು; ಅವಳು ಸತ್ತಿಲ್ಲವೆಂದೂ, ಮತ್ತೆ ಬದುಕಿದಳೆಂದೂ

ತಿಳಿಯಬಹುದು. ಅಷ್ಟಾದರೆ ಆ ನಿನ್ನ ದೀನಸೋದರಿಯ ಜನ್ಮವೇ ಸಾರ್ಥಕವೆನಿಸುವುದು. ಮತ್ತೊಂದು ಕೋರಿಕೆ ನಿನ್ನಲ್ಲಿ ನೆರವೇರ ಲಾರದೇನು? ಪವಿತ್ರಹೃದಯನಾದ ಸೋದರನೆಡೆಯಲ್ಲಿ, ವಿಫಲವಾಗ ಬಹುದೆಂಬ ಭಯವಾದರೂ ಏಕೆ? ಹಾಗಿದ್ದರೆ ಹೇಳದಿರುವುದು ಸರಿಯಲ್ಲ ವಷ್ಟೆ? ಆದರೆ, ಕಲೆಕ್ಟರ್ ಪ್ರಭು ಪುನರ್ವಿವಾಹಕ್ಕೊಪ್ಪುವ ಪಕ್ಷದಲ್ಲಿ ಅನುಕೂಲೆಯೆನಿಸುವ ಅಂಗನಾಮಣಿಯನ್ನು ಹವಣಿಸಿಕೊಡುವ ಕಾರ್ಯಭಾರವು ತನ್ನದಾಗಿರಲೆಂದೂ, ನಿನ್ನ ಸೋದರಿಯ ಸವಿನಯ ನಿವೇದನೆ ನಿನ್ನ ಪ್ರಿಯತಮರಲ್ಲಿ ಸಮರ್ಪಿತವಾಗಲಿ! ಅಮೋಘ ವಾದ ಪವಿತ್ರವಾತ್ಸಲ್ಯವು ಅವ್ಯಾಜಮನೋಹರವಾತ್ಸಲ್ಯವು ಸರ್ವತ್ರ ನೆಲೆಗೊಂಡಿರಲಿ!

ಇಂತಾಶಿಸುವ ''

ಶಚೀಕಾಂತನಿಗೆ ಆ ಸಂದರ್ಭದಲ್ಲಿ ಆವುದೂ ಬೋಧೆಯಾಗಲಿಲ್ಲ. ವಿಕೃತಸ್ವರದಿಂದ, '' ಇದೆಂತಹ ಅಸಂಬದ್ಧಪ್ರಲಾಪ? ''

ಜಯಂತ:—ವಿಭ್ರಾಂತರಿಗೆ ಅಸಂಬದ್ಧಪ್ರಲಾಪ; ವಿಮರ್ಶಕರಿಗೆ ಸುಸಂಬದ್ಧಸಲ್ಲಾಪವೇ?

ಗೋಪೀ:—ಇದೇಕೆ? ಜಯಂತ! ಲೇಖಕರ ಹೆಸರು, ಸ್ಥಳವಾವು ದೊಂದನ್ನೂ ಸೂಚಿಸಿಲ್ಲ!

ಜಯಂತ:—ಸಂದರ್ಭವಿಶೇಷಗತಿಯೇ ಹಾಗೆ.

ಗೋಪೀ:—ಲೇಖಕರ ಪರಿಚಯಕ್ಕೋ?

ಜಯಂತ:—ಕಷ್ಟವೇನು? ಲೇಖಕರು ಮತ್ತಾರೂ ಅಲ್ಲ; ಹರಿಣಿಯೇ! ವಿಚಾರವೂ ಅವಳದೇ! ಪ್ರೇಷಿತಸ್ಥಳವೆಂದರೆ ವಿಮಲ ನಗರವೇ; ಮತ್ತೇನು?

ಶಚೀ:—(ತ್ವರೆಯಿಂದ) ಏನು? ಹರಿಣಿ ಬದುಕಿರುವಳೆ?

ಜಯಂತ:—(ನಕ್ಕು) ಅಣ್ಣ! ಇದೇನು? ಇದುವರೆಗೂ ನಿದ್ರಿಸು ತ್ತಿದ್ದೆಯೊ? ಹರಿಣಿಯ ಪಲಾಯನದೊಡನೆಯೇ, ನಿನ್ನ ಪ್ರತಿಭೆಯೂ ಪಲಾಯನವಾಯಿತೋ? ಪತ್ರಾಭಿಪ್ರಾಯವು ತಿಳಿಯಲಿಲ್ಲವೆ?

ಶಚೀ :—ಹಾಗೆಯೇ ಇರುವುದು. ಎಲ್ಲಿ? ಪತ್ರವನ್ನು ನಾನೂ ಒಮ್ಮೆ ನೋಡುವೆನು !

ಜಯಂತ :—"ಆಹಾ ! ಅಗತ್ಯವಾಗಿಯೂ ನೀನು ನೋಡ ತಕ್ಕುದೇ ! ಚೆನ್ನಾಗಿ ನೋಡು" ಎಂದು ಪತ್ರವನ್ನು ಶಚೀಕಾಂತನ ಕಯ್ಯಲ್ಲಿ ಕೊಟ್ಟನು.

ಶಚೀಕಾಂತನು ಪತ್ರಿಕಾವಲೋಕನಕ್ಕಾರಂಭಿಸಿದನು. ಒಮ್ಮೆ ನೋಡಿದನು; ತೃಪ್ತನಾಗಲಿಲ್ಲ. ಮತ್ತೊಮ್ಮೆ ನೋಡಿದನು; ಮನದಣಿಯಲಿಲ್ಲ. ಮತ್ತೆ ಮತ್ತೆ ನೋಡಿದನು; ನೋಡುತ್ತ ಬಂದಂತೆಲ್ಲಾ ಹೃತ್ಕೋಶದಲ್ಲಿ ಅಡಗಿದ್ದ ಅನುರಾಗವೂ ಹೊರ ಹೊಮ್ಮುತ್ತಿದ್ದಿತು. ವಿಶಾಲನೇತ್ರಗಳಿಂದ ವಾರಿಧಾರೆ ಸಂತತಾ ಕಾರವಾಗಿ ಹರಿದುಬಂದು ಗಂಡಸ್ಥಲವನ್ನು ತೋಯಿಸಿತು. ಕಡೆಗೆ ಶಚೀಕಾಂತನು ಉದ್ವೇಗವನ್ನು ತಡೆಯಲಾರದೆ ತಲ್ಲಣಿಸಿ ಪರವಶ ನಾದನು.

ಗೋಪೀ :— (ಸಂಭ್ರಾಂತತೆಯಿಂದ) ಶಚೀಕಾಂತ ! ಇದೇನು ಮಾಡುತ್ತಿರುವೆ ?

ಜಯಂತನು ತಲೆದೂಗುತ್ತ ಶಚೀಕಾಂತನ ಕಯ್ಯಲ್ಲಿದ್ದ ಪತ್ರ ವನ್ನು ತೆಗೆದುಕೊಂಡು ಅಂಗಿಯ ಕಿಸೆಯಲ್ಲಿರಿಸಿಕೊಂಡನು.

ಶಚೀ :—(ಎಚ್ಚತ್ತು) ಅದೇಕೆ ತೆಗೆದುಕೊಂಡೆ ?

ಜಯಂತ :—ಏಕೆಂದರೆ ? ಸ್ವತ್ವವಿಲ್ಲದುದರಿಂದ—

ಶಚೀ :—ಏನು ? ಸ್ವತ್ವವಿಲ್ಲವೆ ? ಪತ್ರವೇ ಸೂಚಿಸುತ್ತಿಲ್ಲವೆ ?

ಜಯಂತ :—ನನಗದು ಬೇಡ.

ಶಚೀ :—ಮತ್ತೇನು ಬೇಕು ?

ಜಯಂತ :—(ಕಿರುನಗೆಯಿಂದ) ಅವಳ ಪ್ರಾರ್ಥನೆಯಂತೆ, ಅನುಕೂಲಭಾರ್ಯಾಲಾಭದಲ್ಲಿ ಸಮ್ಮತಿ—

ಶಚೀ :—ಜಯಂತ! ನನ್ನ ಮನವು ಏಕರೂಪದಲ್ಲಿಯೇ ನಟ್ಟಿರು ವುದು ; ಮತ್ತೆ ಚಲಿಸಲಾರದು !

ಗೋಪೀ:—ಹಾಗಾದರೆ ಸುಖವು ಸ್ವಪ್ನದಲ್ಲಿಯೂ ಕೂಡ ದುರ್ಲಭವೇ ?

ಶಚೀ :—ಅಪ್ಪಾ ! ಸುಖವಾವುದು ? ಶಾಂತಿಯೇ ನೈಜಸುಖಾನುಭವವಲ್ಲವೆ ? ಸತ್ಯಕ್ಕೆ ಚ್ಯುತಿಯುಂಟೆ? ಸತ್ಯವೂ ಪಥ್ಯವೂ ಮರ್ತ್ಯರಿಗೆ ಮೃತ್ಯುವೆ ? ವಿಚಾರಮಾಡಿ ನೋಡಿರಿ ! ನನ್ನ ಅದೃಷ್ಟಲತೆಯಲ್ಲಿ ಈ ದೇಹಸೌಖ್ಯದ ಹೂವರಳುತ್ತಿದ್ದ ಪಕ್ಷದಲ್ಲಿ, ಮಣಿಮಾಲಾವಿಯೋಗವಾಗುತ್ತಿದ್ದಿತೆ? ಅವಳ ವಿಯೋಗಾನಂತರದಲ್ಲಿ ಮಾಡಿದ್ದ ಸಂಕಲ್ಪವು ಹರಿಣಿಯ ದೆಸೆಯಿಂದ ಸಡಿಲವಾಗುತ್ತಿರಲಿಲ್ಲವೆ ?

ಗೋಪೀ :—ಹೇಗೆ ?

ಶಚೀ :—ಹರಿಣಿಯನ್ನು ನೋಡಿದಾಗಳಿಂದಲೂ ನನಗೆ ಮಣಿಮಾಲೆಯ ನೆನಪೇ ಉಂಟಾಗುತಿದ್ದಿತಲ್ಲದೆ, ಆವುದೋ ಒಂದು ಬಗೆಯ ಸ್ನೇಹವೂ ಅವಳಲ್ಲಿ ತೋರಿತು. ಇದರಮೇಲೆ ಜಯಂತನ ಹೇಳಿಕೆಯೂ, ನಿಮ್ಮ ಆಣತಿಯೂ ಸಹಕಾರಿಗಳಾದುವು. ಅದರಮೇಲೆ ನಾನು ದುಡುಕುತಿದ್ದುದಕ್ಕೆ ಈಗಲೂ ಪಶ್ಚಾತ್ತಾಪಪಡಬೇಕಾಗಿರುವುದಾದರೂ, ಅಂದು ಅವಳ ಬಾಯಿಂದ ಹೊರಹೊರಟ ಪಡಿಯೊಂದು ಮಾತೂ, ಅವಳ ಅಂದಿನ ನಡೆವಳಿ ನನ್ನನ್ನು ವಿಚಾರವಿಮರ್ಶೆಯಲ್ಲಿ ನೆಲೆಗೊಳಿಸಿ, ಪೂರ್ವಸಂಕಲ್ಪ, ಕೃತಜ್ಞತೆ, ಇವುಗಳನ್ನು ಮತ್ತೆ ಸ್ಥಿರಪಡಿಸುವಂತೆ ಎಚ್ಚರಿಸುತ್ತಿರುವುದು. ಸಾಲದುದಕ್ಕೆ ಇಂದಿನ ಪತ್ರವೂ ಯಥಾರ್ಥಾಂಶವನ್ನು ತಿಳಿಯಬೇಕೆಂಬೊಂದು ಕುತೂಹಲವನ್ನು ಹುಟ್ಟಿಸಿರುವುದು. ಇಷ್ಟಾದರೂ ನನ್ನನ್ನು ಮತ್ತೊಂದಕ್ಕೆ ಬಲಾತ್ಕರಿಸುವುದೇಕೆ ?

ಜಯಂತ:—ಬಲಾತ್ಕಾರವಿಲ್ಲ ; ಬ್ರಹ್ಮಚಾರಿಯಾಗಿರುವುದೇ ಒಳ್ಳಿಯದು ! ನನ್ನ ಇಷ್ಟವೂ ಅಷ್ಟೇಸರಿ.

ಶಚೀ :—ನಿನ್ನ ಇಷ್ಟವನ್ನು ಕೇಳಿದಾಗಳಲ್ಲವೇ ಆಮಾತು ? ಈಗ ನಿನಗೆ ಕಟ್ಟಪ್ಪಣೆಯೇ ಸರಿ.

ಜಯಂತ:—(ತಲೆದೂಗಿ) ಆಗಬಹುದು. ನೀನು ವಿರಕ್ತಸನ್ಯಾಸಿಯಾಗಿರು. ನನಗೆ ಮಟ್ಟಕ್ಕೆ ಈ ಪ್ರಾಪಂಚಿಕವಾದ ಸಂಸಾರಬಂಧವನ್ನು ತಂದುಹಾಕು. ಇದಲ್ಲವೇ ಕಟ್ಟಪ್ಪಣೆ?

ಶಚೀ:—ಜಯಂತ! ಬೇರೆಯಾಗಿ ಭಾವಿಸಬಾರದು! ನನಗೊಮ್ಮೆ ಮದುವೆಯಾಗಿರುವುದು; ಮತ್ತೆ ಮಾಡಿಕೊಳ್ಳಲೇಬೇಕೆಂಬ ವಿಧಿಯೇನೂ ಇಲ್ಲ. ನಿನಗೆ ಹಾಗಾಗಲಾರದು. ಸತ್ಯಕ್ಕೆ ಸಮಸ್ತರೂ ಕಟ್ಟುಬೀಳಬೇಕು. ನಾನು ಮತ್ತೊಂದನ್ನಾಶಿಸಿದರೂ ಸತ್ಯಚ್ಯುತನಾಗುವೆನು; ನೀನು ತಿರಸ್ಕರಿಸಿದರೂ ಸತ್ಯಚ್ಯುತನಾಗುವೆ; ಅದರಮೇಲೆ ಪಿತೃವಾಕ್ಯೋಲ್ಲಂಘನದೋಷಕ್ಕೂ ಭಾಗಿಯಾಗುವೆ.

ಜಯಂತ:—ಹೇಗಾದರೂ ಹೇಳಿರಿ. ನನಗೇನೋ ವಿವಾಹಾಪೇಕ್ಷೆಯಿಲ್ಲ.

ಗೋಪೀ:—ಹಾಗೆಂದರೆ ಹೇಗೆ ಜಯಂತ? ವಾಗ್ದಾನದ ಗತಿಯೇನಾಗಬೇಕು? ಸತ್ಯಚ್ಯುತಿಯಿಂದ ಕುಲದ ಗೌರವವೂ ಕೀರ್ತಿಯೂ ಹೋಗುವುದಿಲ್ಲವೆ? ಈ ವೇಳೆಯಲ್ಲಿ ನಿನ್ನನ್ನು ಬಲಾತ್ಕರಿಸುವುದರಿಂದ ಧರ್ಮಲೋಪವೇನೂ ಇಲ್ಲ. ಆದರೆ ನಿನಗೆ ವಿರೋಧವಾಗಿ ನಡೆಯಿಸುವುದಕ್ಕೂ ಇಷ್ಟವಿಲ್ಲ. ಆದರೂ ನಿನ್ನನ್ನು ಬಲಾತ್ಕರಿಸುವ ಮಾತೃವಾತ್ಸಲ್ಯವೂ ಕೂಡ ನನ್ನಲ್ಲಿಯೇ ಸೇರಿ, ನಿನ್ನ ಅಭಿಪ್ರಾಯವನ್ನು ಕೇಳಬೇಕಾಗಿರುವುದು; ಏನು ಹೇಳುವೆ?

ಶಚೀ:—ಅಪ್ಪಾ! ಸಂಶಯವೇಕೆ? ತಮ್ಮ ಇಷ್ಟವನ್ನು ಅನುಮೋದಿಸುವುದೊಂದಲ್ಲದೆ ಅವನಿಗೆ ಮತ್ತಾವುದೂ ತೋರುವಂತಿಲ್ಲ. ಕಾರ್ಯವು ನಡೆಯಲಿ!

ಜಯಂತನು ಕರ್ತವ್ಯಕ್ಕೆ ಕಟ್ಟುಬಿದ್ದು ಸಮ್ಮತಿಸಬೇಕಾಯಿತು.

ವಿವಾಹಮಹೋತ್ಸವವು ವೀರೇಂದ್ರಪೇಟೆಯಲ್ಲಿ ನಡೆಯಬೇಕಾಗಿದ್ದುದರಿಂದ ಸಪರಿವಾರನಾಗಿ ಗೋಪೀನಾಥನು ಪಯಣಕ್ಕೆ ಅನುವಾದನು. ವಿವಾಹಾನಂತರದಲ್ಲಿ ವಧುವನ್ನು ಜೊತೆಯಲ್ಲಿಯೇ ಕರೆದುಕೊಂಡು ಬರಬೇಕೆಂದು ನಿಶ್ಚಿತವಾಗಿದ್ದಿತು.

ಸತ್ಯಪರಾಕ್ರಮಿಯಾದ ಶಚೀಕಾಂತನು ಅಂತರ್ಗತವಾದ ದುಗುಡವನ್ನು ಮರೆತು, ಜಯಂತನ ವಿವಾಹಮಹೋತ್ಸವದಲ್ಲಿ ಮುಂದಾಳಾಗಿ ನಿಂತು ಸಂಭ್ರಮದಿಂದ ಪಯಣಕ್ಕೆ ಅಭಿಮುಖನಾದನು.

ಜಯಂತನ ಮುಖದಲ್ಲಿ ಉತ್ಸಾಹವೆಂಬುದು ಎಳ್ಳಷ್ಟಾದರೂ ಇರಲಿಲ್ಲ. ಹರಿಣಿಗಾಗಿ ಪ್ರತಿನಿಮೇಷದಲ್ಲಿಯೂ ನಿಟ್ಟುಸಿರನ್ನು ಬಿಡುತ್ತಿದ್ದರೂ ಪಿತೃಮುಖೋಲ್ಲಾಸಕ್ಕಾಗಿ ಮೌನವಾಂತಿದ್ದನು. ಆದರೂ ಪಯಣದ ಕಾಲದಲ್ಲಿ ಅವನಿಗೆ ಉದ್ವೇಗವನ್ನು ತಡೆಯಲಾಗದೆ ಹೋಯಿತು. ದಯಾರ್ದ್ರಹೃದಯನಾದ ಜಯಂತನು ಬಾಷ್ಪಾಕುಲಿತಲೋಚನನಾಗಿ ವಿಕೃತಸ್ವರದಿಂದ :—'' ಪ್ರಿಯ ಸಹೋದರಿ! ಈಗ ನೀನೆಲ್ಲಿರುವೆ? ಆವ ಸೋದರನ ವಿವಾಹೋತ್ಸವದಲ್ಲಿ ಅಧಿಕವಾಗಿ ಕುತೂಹಲಿಸಿಯಾಗಿದ್ದೆಯೋ, ಆ ಸೋದರನೇ ಈಗ ನಿನಗಾಗಿ ಕಣ್ಬನಿಗರೆಯುತ್ತಿದ್ದರೂ ಏಕೆ ಕೇಳದಿರುವೆ?''

'' ಹರಿಣಿ! ನೀನು ಅಜ್ಞಾತವಾಸದಲ್ಲಿ ಆವ ವಿಧದ ನಿರ್ಬಂಧದಲ್ಲಿ ಸಿಕ್ಕಿ ಕೊರಗುತಿರುವೆಯೋ ತಿಳಿದು ಹೇಳುವರಾರು? ನಾನಾದರೆ ಇಂದು ಸುಖಭೂಮಿಯಲ್ಲಿ ಕಾಲಿಡಲು ಹೊರಹೊರಡಬೇಕಾಗಿರುವುದು. ಇದಲ್ಲವೇ ಸ್ವಾರ್ಥೈಕಭಾವದ ಹೆಗ್ಗುರುತು? ಈ ವೇಳೆಯಲ್ಲಿ ನೀನು ನನ್ನ ಬಳಿಯಲ್ಲಿದ್ದ ಪಕ್ಷದಲ್ಲಿ, ನನ್ನ ಆನಂದಕ್ಕೆ ಮೇರೆಯಿರುತ್ತಿದ್ದಿತೆ? ಆದರೆ, ಹರಿಣಿ! ನಿನ್ನ ಸಂಕಲ್ಪವು ದಿಟವಾಗಿಯೂ ನೆರವೇರುವುದೆ? ನುತ್ತೆ ನೀನು ನಿನ್ನ ಈ ಸೋದರನನ್ನು ನೋಡಲಾಪೆಯಾ? ಎಂದಿಗೆ?'' ಎಂದು ಕೆಲಹೊತ್ತು ಸ್ತಬ್ಧನಾಗಿದ್ದು, ಬಳಿಕ ಎಚ್ಚೆತ್ತು, '' ತಾಯಿ! ಕ್ಷಮಿಸು. ನಿನ್ನ ಸಂದೇಶವನ್ನೂ ನನ್ನ ಪ್ರಮಾಣವನ್ನೂ ಮರೆತಿದ್ದೆನು. ಇನ್ನು ಅಧೀರನಾಗೆನು. ನಿನ್ನ ಎಚ್ಚರಿಕೆಯಂತೆಯೇ, ಇಂದಿನ ನಿನ್ನ ಕುಶಲವಾರ್ತಾಪ್ರಕಾರದಿಂದಲೇ ಸಮಾಧಾನಹೊಂದಿ ಹೊರಡುವೆನು. ಭಗವತೀಮಾತೃಕಟಾಕ್ಷವು ಸ್ಥಿರವಾಗಿರಲಿ!'' ಎಂದು ಹೇಳುತ್ತ ಪಯಣಮಾಡಿದನು.

*   *   *   *   *

——o——

ದ್ವಿತೀಯ ಭಾಗ

ಪ್ರಥಮ ಪರಿಚ್ಛೇದ

(ಭ್ರಾತೃಸಮ್ಮುಖ)

ರಾತ್ರಿ ಒಂಬತ್ತು ಗಂಟೆಯ ಸಮಯ. ಯಾಮಿನಿಯ ಆಧಿಪತ್ಯವು ಎಲ್ಲೆಲ್ಲಿಯೂ ವ್ಯಾಪಿಸಿ ಸಮಸ್ತರನ್ನೂ ತನಗೆ ವಿಧೇಯರನ್ನಾಗಿ ಮಾಡಿಕೊಳ್ಳುತ್ತಿದ್ದಿತು. ಯಾಮಿನಿಯು ಸಾರ್ವಜನಿಕ ಸಮತಾಪ್ರೇಮಸಂಭಾವನೆಯಿಂದ ಮುದಿತಹೃದಯರು, ವಿವಿಧದೀಪಾರಾಧನೆ, ಗೀತೆ, ಪ್ರಸಂಗ, ಭೋಜನ, ಇತ್ಯಾದಿಗಳಿಂದ ತಮ್ಮತಮ್ಮ ಆತ್ಮಸಂತೋಷವನ್ನು ಪ್ರಕಟಿಸುತ್ತ ಶಾಂತಿರಾಜ್ಯವನ್ನು ಸ್ಥಾಪಿಸುತ್ತಿದ್ದರು. ಅಂತಹ ಸರ್ವಂಜಯಿನಿಯಲ್ಲಿ ಅನುರಕ್ತನಾದ ಸುಧಾಕರನೂ ಜನಮನೋರಂಜಕನಾಗಿದ್ದನು! ಇಂತಹ ನಿಶಾಸಮಯದಲ್ಲಿ ವಿಮಲನಗರದ ಪ್ರಸಿದ್ಧಕಾರ್ಯಾಲಯದ ಕಾರ್ಯದರ್ಶಿಯೂ 'ಸಾಮೋದನ' ದೈನಿಕಪತ್ರಿಕಾಕರ್ತನೂ ಆದ ಶ್ರೀಯುತ ಕಾಮಪಾಲಮಹಾಶಯನ ವಿಶಾಲಭವನದ ಮಧ್ಯಗತವಾದ ಶಾಂತಿಮಂದಿರದಲ್ಲಿ ಚಿಂತಾಸಕ್ತೆಯಾದ ಯುವತಿಯೊಬ್ಬಳು ಕುರ್ಚಿಯಮೇಲೆ ತಲೆಬಾಗಿ ಕುಳಿತಿದ್ದಳು. ಯುವತಿಯ ಕೈಯಲ್ಲಿ ನೆಪಮಟ್ಟಕ್ಕೆ ಪತ್ರಿಕೆಯೊಂದು ಹಿಡಿಯಲ್ಪಟ್ಟಿದ್ದಿತು. ಅವಳ ದೃಷ್ಟಿ ಪತ್ರದ ಮೇಲಿರದೆ ಕೇವಲವಾಗಿ ಕುತೂಹಲದಲ್ಲಿದ್ದಿತು. ಮುಖದಲ್ಲಿ ಹೊರಹೊಮ್ಮುತಿದ್ದ ಬೆಮರ್ವನಿಗಳು ಮುತ್ತುಗಳನ್ನು ನೆನೆಪಿಗೆ ತರುತ್ತಿದ್ದುವು.

ಈ ಅಂಗನಾಮಣಿ ಯಾರು? ನಮ್ಮ ಪೂರ್ವಪರಿಚಿತೆಯಾದ ಹರಿಣಿಯೆಂಬುದನ್ನು ಮತ್ತೊಮ್ಮೆ ಹೇಳಬೇಕೆ? ಹರಿಣಿ ಇಲ್ಲಿಗೆ ಹೇಗೆ, ಏಕೆ, ಬಂದಳು? ಆ ವಿಚಾರವೂ ಕೂಡ ಯಥಾಸ್ಥಾನವಾಗಿ ತನಗೆ ತಾನೇ ತಿಳಿಯಬರುವುದು.

ಚಿಂತಾಸಕ್ತೆಯಾದ ಹರಿಣಿ, ಇಷ್ಟೇ ಹೊತ್ತು ಹಾಗೆಯೇ ಕುಳಿತಿದ್ದಳೆಂಬುದನ್ನು ನಿಶ್ಚಯಿಸಲಾಗುವುದಿಲ್ಲ. ಹೇಗೂ ಬಲುಹೊತ್ತಿನ ಮೇಲೆ ಪರಿಚಾರಕನೊಬ್ಬನು ಬಂದು ಎಚ್ಚರಿಸಿ ಹೇಳಿದನು,— "ತಾಯಿ! ಹೊತ್ತು ಮೀರುತ್ತಿರುವುದು ; ಎಲ್ಲರೂ ಊಟಕ್ಕೆ ಕುಳಿತು ನಿಮ್ಮನ್ನೇ ಇದಿರುನೋಡುತ್ತಿರುವರು."

ಹರಿಣಿ :— (ತಲೆಯೆತ್ತಿ) ಅಯ್ಯಾ! ನನಗೆ ಊಟವು ಬೇಕಿಲ್ಲ. ಆರೂ ಕಾದಿರಬೇಕಾದ ಕೆಲಸವಿಲ್ಲ.

ಪರಿ :—ತಾಯಿ! ತಾವು ಬರುವವರೆಗೂ ಯಜಮಾನರು ಊಟ ಮಾಡಲಾರರಂತೆ!

ಹರಿಣಿ :—ಅಯ್ಯಾ! ಯಜಮಾನರಿಗೆ ಹೀಗೆ ಹೇಳು—"ಆಹಾರದ ಮೇಲೆ ಇಷ್ಟವಿಲ್ಲದಿರುವಾಗ ಬಲಾತ್ಕಾರವು ಕೂಡದು. ನನಗೆ ಉಪಚಾರೋಕ್ತಿಯೇನೂ ಅವಶ್ಯಕವಿಲ್ಲ. ಬೇರೆಯಾಗಿ ಬಗೆಯದೆ ಎಲ್ಲರೂ ಊಟ ಮಾಡಬಹುದು."

ಪರಿಚಾರಕನು ಹೊರಟುಹೋದನು.

ಹರಿಣಿಗೆ ಕುಳಿತಂತೆಯೇ ಕಣ್ಣಿಗೆ ತೂಕಡಿಕೆ ಹತ್ತಿತು. ಮುಂದಿದ್ದ ಮೇಜಿನಮೇಲೆ ತಲೆಯಿಟ್ಟು ಅರೆಬಾಗಿ ಮಲಗಿದಳು. ಸಂಚಿನಿಂದ ಹೊಂಚುಹಾಕುತ್ತಿದ್ದ ನಿದ್ರಾಂಗನೆಯೂ ಸುಸಮಯವೆಂದು ತನ್ನ ಮಾಯೆಯ ಬಲೆಯನ್ನು ಬೀಸಿದಳು.

ಹರಿಣಿಯು ನಿದ್ರಾವಸ್ಥೆಯಲ್ಲಿಯೇ ಕಿರುಮನೆಯ ಕದವು ಹಿಂದಕ್ಕೆ ತೆರೆದಂತಾಗಿ ಒಡನೆಯೇ ಇಪ್ಪತ್ತೇಳುವರ್ಷವಿರಬಹುದಾದ ಗಂಭೀರಾಕಾರನಾದ ತರುಣನೊಬ್ಬನು ಕಿರುಮನೆಯೊಳಹೊಕ್ಕನು.

ಆತನು ಯಾರೆಂದರೆ ಹಿಂದೆ ಸೂಚಿಸಲ್ಪಟ್ಟಿರುವ ಶ್ರೀಯುತ ಕಾಮಪಾಲಮಹಾಶಯನು. ಕಾಮಪಾಲನು ಬಹುಸಾಧುವೂ, ಸರಸಿಯೂ, ಸ್ನೇಹಪರನೂ, ವಿನಯಜ್ಞನೂ, ದಯಾಳುವೂ ಆದವನು. ಶಮದಮಾದಿಗುಣಗಳೆಲ್ಲವೂ ಆತನ ಹೃದಯಾಂಗಣದಲ್ಲಿಯೇ ಮೂರ್ತೀಭವಿಸಿದ್ದುವು. ಅಷ್ಟೇಅಲ್ಲ, ಗುಣಕ್ಕೆ ತಕ್ಕಂತೆಯೇ ಗೌರವಸ್ಥ, ದೃಢಾಂಗ, ಧೀರೋ

ದಾತ್ತ, ಪೂರ್ಣವಿದ್ಯಾವಂತ, ಇತ್ಯಾದಿಯಾಗಿ, ಸಮಸ್ತಭಾಗಗಳಲ್ಲಿಯೂ ಮನಸ್ಸೈಕಕಲ್ಪಕನೆನಿಸಿದವನು. ಆತನ ರೂಪ, ಗುಣ, ವೈಭವ, ಇವುಗಳಿಗನುಗುಣವಾದ ಆಕರ್ಷಣಾಶಕ್ತಿಯೊಂದು ಅವನಲ್ಲಿ ನೆಲೆಗೊಂಡು ಆತನನ್ನು ಬಹುಜನಪರಿವೇಷ್ಟಿತನನ್ನಾಗಿ ಮಾಡುತ್ತಿರುವುದು.

ಆದರೆ, ಇಂತು ಸಕಲವಿಧಸಹಾಯಸಂಪತ್ತಿಯುಳ್ಳವನಾಗಿದ್ದರೂ, ಆತನಿನ್ನೂ ಅವಿವಾಹಿತಬ್ರಹ್ಮಚಾರಿ! ಏಕೆ? ಆಧುನಿಕ ಮಹಾಶಯರಲ್ಲಿ ಬಗೆಗೊಳ್ಳುತಿರುವ ವಿಲಾಸಿನೀವಿಯೋಗಿನೀಪ್ರಸಾದವಿರಬಹುದೆಂದೆಣಿಸುವಿರೇನು? ಛಿಛಿ, ಛಿಛಿ!! ಅಂತಹ ದುರ್ಭಾವನೆ ಆತನಲ್ಲಿ ಸಲ್ಲದು! ಆತನ ನಿರ್ದುಷ್ಟಭಾವದ ಪಾರಮಾರ್ಥಿಕಪವಿತ್ರಪ್ರೇಮಮಯಚಿತ್ತವು ಇಂತಹ ಅನರ್ಥಗಳಾದ ನೀಚವಿಷಯಗಳಲ್ಲಿ ಎಂದಿಗೂ ಹೋಗಲಾರದು. ಮತ್ತೇನು?

ಅಭಾಗ್ಯದೇವತಾಪ್ರಸಾದಪಾತ್ರರಾಗಿ ಬಾಲ್ಯದಲ್ಲಿಯೇ ಜೀವನ್ಮೃತೆಯರೆಂಬ ಪಟ್ಟಾಂಕನದಿಂದ ನಾನಾವಿಧದ ಕಷ್ಟನಷ್ಟಗಳಿಗೆ ಗುರಿಯಾಗಿ ನರಳುತ್ತಿರುವ ಧರ್ಮಸೋದರಿಯರ ದುಸ್ಸ್ಥಿತಿಯನ್ನೂ ಶೋಕಾರ್ತೆಯರಾಗಿರುವ ಸ್ತ್ರೀಸಂತಾನದಿಂದ ಮನೋಮಾಲಿನ್ಯರೋಗಕ್ಕೆಡೆಯಾಗಿ ಕಂದಿ ಕುಂದುತ್ತಿರುವ ಮಾತೃದೈವದ ದುರ್ಧರಚಿಂತಾಧಿಕ್ಯಸ್ಥಿತಿಯನ್ನೂ ನೋಡಿ, ಆವ ಸತ್ಪುತ್ರನು ತಾನೇ ಸುಮ್ಮನಿರಬಲ್ಲನು? ಸರ್ವಜನಶರಣ್ಯೆಯಾದ, ಸಕಲಜೀವನಾಧಾರೆಯಾದ, ಆ ದಯಾಮಯಿಯ—ಆ ಮಾತೆಯ—ಜೀರ್ಣೋದ್ಧಾರಕ್ಕೆ ಬದ್ಧಕಂಕಣನಾಗಿ ಮುಂದೆ ನಿಲ್ಲದವನು ಪುತ್ರನೆನಿಸಬಲ್ಲನೆ? ಈಗ ನಮ್ಮಲ್ಲಿ, ಆ ನಮ್ಮ ಮಾತೆಯ ಮೇಲ್ಮೆಗಾಗಿ ಮನದಲ್ಲಿಯಾದರೂ ಚಿಂತಿಸುವರಾರಾದರೂ ಇರುವರೋ? ಇದ್ದರೆ ಅವರೇಕೆ ಹಿಂದುಳಿಯುತ್ತಿರುವರು? ಮಾತೆಯ ಅನರ್ಘಗುಣಾಂಶಗಳಲ್ಲಿ ಅಣುಮಾತ್ರವಾದರೂ ಇವರಿಂದ ಧರಿಸಲ್ಪಟ್ಟಿರುವುದೆ? ಹಾಗಿದ್ದರೆ ಮುಂದೆಯಾದರೂ ಸುಖದಾಶೆಯುಂಟು!

ಇರಲಿ. ಪ್ರಕೃತದಲ್ಲಿ ಆ ನಮ್ಮ ಜನನಿಯ ಜೀರ್ಣೋದ್ಧಾರವ್ರತದಲ್ಲಿ ದೀಕ್ಷಾಬದ್ಧನಾಗಿರುವ ಸುಪುತ್ರನು ಈ ನಮ್ಮ ಕಾಮಪಾಲ

ನೆಂದೇ ಪುತ್ತೆ ಮತ್ತೆ ಒತ್ತಿಯೊತ್ತಿ ಹೇಳದಿರಲಾರೆವು. ಏಕೆಂದರೆ, ಆತನು ತನ್ನ ಈ ನವತಾರುಣ್ಯಾವಸ್ಥೆಯಲ್ಲಿಯೂ ತನ್ನ ಸುತ್ತಮುತ್ತಲ ಲ್ಲಿರುವ ಸೋದರಿಯರ ದುಸ್ಥಿತಿಯನ್ನು ನೋಡಿ ಸಹಿಸಲಾರದೆ, ಆ ದೀನಸೋದರಿಯರ ಅಭ್ಯುದಯಕ್ಕಾಗಿಯೇ ಪ್ರಬಲಸಂಸ್ಥೆಯೊಂದನ್ನು ಏರ್ಪಡಿಸಿದನು. ಅದಕ್ಕಾಗಿಯೇ ತನ್ನ ತನುಮನೋಧನಗಳೆಂಬ ಸಕಲ ಸಂಪತ್ತಿಯನ್ನೂ ಧಾರೆಯೆರೆದು ಬಿಟ್ಟನು. ಅನಾಥೆಯರಾದ ಬಾಲವಿತಂತುಗಳನ್ನೂ ಏಯೋಗಿಸಿಯರನ್ನೂ ಸಾದರದಿಂದ ಕರೆತಂದು, ಅವರವರ ಮನೋಧರ್ಮಕ್ಕನುಗುಣವಾದ ವೃತ್ತಿಗಳಿಂದಲೇ ಉತ್ತ ರೋತ್ತರಾಭಿವೃದ್ಧಿಯನ್ನು ಹೊಂದಲನುವಾದ ಅಭ್ಯಾಸವನ್ನು ಸಮಯೋಚಿತವಾದ ಹಿತಬೋಧನಾಪೂರ್ವಕವಾಗಿ ಕೊಡುತ್ತ ಸುಧಾರಿಸುತ್ತಿರುವನು. ಈತನ ಈ ಬಗೆಯ ನಿಸ್ಪೃಹತೆ, ಜಿತೇಂದ್ರಿ ಯತೆ, ದಯಾ ಪರತೆಗಳಿಂದ ಸುಪ್ರೀತರಾದ ಇತರರಾದ ಆರ್ಯ ಬಾಂಧವರೂ ಯಥಾಶಕ್ತಿ ಸಾಹಾಯ್ಯಗಳನ್ನೊದಗಿಸುತ್ತ ಪ್ರೋತ್ಸಾ ಹಿಸಿ, ಸಾಲದುದಕ್ಕೆ ತಮ್ಮ ತಮ್ಮ ಪೋಷಣೆಗೊಳಪಟ್ಟ ಅಭಾಗಿನಿಯ ರನ್ನೂ ಸುಧಾರಣೆಗಾಗಿ ಆತನ ಧರ್ಮಭವನದಲ್ಲಿ ಕರೆತಂದು ಬಿಡು ತ್ತಿದ್ದರು. ಈಗಾಗಲೇ ಆತನ ಧರ್ಮಾಲಯದಲ್ಲಿ ಅನೇಕಾನೇಕರಾದ ಅನಾಥೆಯರು ವ್ಯಾಸಂಗಿಸಿ, ಅಭ್ಯುದಯಶಿಖರವಾದ ಬ್ರಹ್ಮಚರ್ಯ ಯನ್ನು ಸ್ಥಿರಸಂಕಲ್ಪದಿಂದ ಕಯ್ಕೊಳ್ಳುತ್ತಿರುವರು. ಆದರೆ ಅವರಲ್ಲಿ ಪ್ರತ್ಯೇಕವಾಗಿರುವ ವಿತಂತುಗಳಿಬ್ಬರುಮಟ್ಟಿಕ್ಕೇ ತಾವಾಗಿ ತಮ್ಮ ಸರ್ವಸ್ವವನ್ನೂ ಅಮರಗಂಗಾಧರರಿಗೆರೆದು ಬಂದಿದ್ದವರು. ಅವರ ಶೀಲವೃತ್ತಗಳು ಹೇಗಿದ್ದುವೆಂಬುದನ್ನು ಮುಂದೆ ತಿಳಿಯಬಹುದು.

"ಆತ್ಮವತ್ಸರ್ವಭೂತಾನಿ" ಎಂಬುದು ವೇದಾಂತದ ನ್ಯಾಯ ವಾದರೂ, ಸಜ್ಜನರು ತಮ್ಮಂತೆಯೇ ಲೋಕವನ್ನೂ ಸಜ್ಜನರನ್ನಾಗಿ ಭಾವಿಸುವುದರಲ್ಲಿಯೂ, ದುರ್ಜನರು ತಮ್ಮಂತೆಯೇ ಲೋಕವೂ ದುಸ್ಸ್ವಭಾವದಿಂದ ಕಲಂಕಿತವಾಗಿರುವಂತೆ ಭಾವಿಸುವುದರಲ್ಲಿಯೂ ಸರಿ ಹೋಗುವುದು. ಹಾಗೆಯೇ ನಮ್ಮ ಕಾಮಪಾಲನು ಕೂಡ ತನ್ನ ನಿರ್ದುಷ್ಟಚಿತ್ತದಂತೆಯೇ ಎಲ್ಲರನ್ನೂ ಭಾವಿಸುವನು. ಮೇಲಾಗಿ,

ಅಮರಗಂಗಾಧರರು ಅವನ "ಸವಿಶಾಪಬಂಧುಗಳು, ಒಡನಾಡಿಗಳು," ಹೀಗಿದ್ದಮೇಲೆ ಹೇಳುವುದೇನಿರುವುದು? ಅವರಲ್ಲಿ ಒಂದುವೇಳೆ ಸಂದೇಹಾಂಶಗಳು ಕಾಣಬಂದರೂ, ಉತ್ತರಕ್ಷಣದಲ್ಲಿಯೇ ಅದು ದೂರ ಸಾಗುವಂತೆ ಮಾಡಲು ಸಾಕಾದ ಸಟನೆಗಳೂ ಅವರಿಂದ ಪ್ರಕಟೀಕೃತ ವಾಗುವುವು. ಇನ್ನೂ ಹೇಗೆ ನಿರ್ಧರಿಸಲಾಗುವುದು? ಅಲ್ಲದೆ, ಆತನ ದಯಾರ್ದ್ರಹೃದಯವು, ಆರೊಬ್ಬರ ತೇಜೋಭಂಗಕ್ಕೂ ಅವಕಾಶ ಕೊಡದೆ, ಪ್ರತ್ಯಕ್ಷದಲ್ಲಿ ಕಾಣಬರುವ ತಪ್ಪುಗಳನ್ನೂ ಕೂಡ ಕ್ಷಮಿಸಿ, ನೀತಿಬೋಧೆಗಳಿಂದ ಸಂತವಿಟ್ಟು ಕಳಿಹುವಂತಹುದು! ಈ ಕಾರಣದಿಂದ ಅಮರಗಂಗಾಧರರಿಗೆ ಸಾಹಾಯ್ಯವು ದೊರೆಯುತ್ತಿದ್ದುದು ಅತಿಶಯ ವಲ್ಲ! ಆದರೆ, ದುರ್ಜನರಲ್ಲಿ ತೋರಿದ ದಯಾದಾತೃತ್ವಗಳಿಗೆ ಪ್ರತಿಫಲ ವಾಗಿ, ಕಷ್ಟ, ನಷ್ಟ, ನಿಷ್ಠುರತೆ, ಇವುಗಳೇ ಉಂಟಾಗುವುವೆಂಬುದು ಆರಿಗೂ ತಿಳಿಯದುದಲ್ಲ.

ಇರಲಿ. ಕಿರುಮನೆಯೊಳಹೊಕ್ಕ ಕಾಮಪಾಲನ ಆಗಮನವನ್ನು ನಿದ್ರಾಧೀನೆಯಾಗಿದ್ದ ಹರಿಣಿ ತಿಳಿಯಲಿಲ್ಲ. ಕಾಮಪಾಲನು ಹರಿಣಿ ಯನ್ನು ನೋಡುತ್ತ, "ಭಲೆ, ನಿದ್ರೇ! ನಿನ್ನ ಸಾಹಸವೇ ಸಾಹಸವು! ಹರಿಣಿ! ಸೊಗಸು! ಬಲು ಸೊಗಸು!!" ಎಂದು ಹರಿಣಿಯ ಕಯ್ಯಲ್ಲಿದ್ದ ಪತ್ರಿಕೆಯನ್ನು ಕಿತ್ತುಕೊಂಡನು.

ಹರಿಣಿ ಚಕಿತೆಯಾಗಿ ನೋಡಿದಳು. ನಗುತ್ತ ನಿಂತಿದ್ದ ಕಾಮ ಪಾಲನನ್ನು ನೋಡಿ, ಲಜ್ಜಿತೆಯಾಗಿ, ಕುಳಿತಿದ್ದವಳು ಕುರ್ಚಿಯನ್ನು ಬಿಟ್ಟು ಸರಿದುನಿಂತು, ಮೆಲ್ಲನೆ, "ಮಹಾಶಯರು ಕುಳಿತುಕೊಳ್ಳ ಬಹುದು."

ಕಾಮ :—(ವ್ಯಂಗ್ಯಭಾವದಿಂದ ನಗುತ್ತ) ಮಹಾಶಯ? ಎಂತಹ ಆಶಯ? ಹರಿಣಿ! ನಿನ್ನ ಸ್ಥಾನವನ್ನಾಕ್ರಮಿಸಬೇಕೆಂಬ ಆಶಯವು ನನಗಿಲ್ಲ. ಅಂತಹ ಭಾವವನ್ನು ಬಿಡು.

ಹರಿಣಿ :—ಆದರೆ, ಅಭ್ಯಾಗತರಿಗೆ ಸನ್ಮಾನವು ಕೂಡದೇ?

ಕಾಮ :—ಕೂಡದೆಂದು ಹೇಳಿದವರಾರು?

ಹರಿಣಿ :—ಹಾಗಿದ್ದರೆ ನಿಂತಿರಲೇಕೆ?

ಕಾಮು :— (ತಲೆದೂಗಿ) ಹರಿಣಿ ! ನೀನೇಕೆ ನಿಲ್ಲಬೇಕು ? ನಾನು ನಿನ್ನ ಸೋದರನಲ್ಲವೇ ? ಈ ವಿಷಯವಾಗಿ ಹಿಂದೆಯೇ ಎಷ್ಟೋ ಬಗೆಯಿಂದ ಹೇಳಿರುವೆನಲ್ಲವೆ? ಇನ್ನಾದರೂ, ನನ್ನನ್ನು ನಿನ್ನ ಯಥಾರ್ಥ ಸಹೋದರನೆಂದು ತಿಳಿ ; ಸಂಕೋಚಭಾವವನ್ನುಳಿ ; ನಿರ್ಭಯವಾಗಿ ಮಾತನಾಡು ; ಅವುದಿದ್ದರೂ ಮುಚ್ಚಿಡದೆ ಕಟ್ಟುಮಾಡು ; ಈ ನಿನ್ನ ಬಹುವಚನದ ಒಕ್ಕಣೆಯಾಗಲೀ, ಅಪ್ರಕೃತಾರ್ಥದ ಗೌರವವಾಗಲೀ ನನಗೆ ಸಲ್ಲದು ! ನನ್ನಲ್ಲಿ ಕೇಣಕವಡುಗಳಿಲ್ಲದ ಸೋದರಸಹಜವಾದ ಸಲ್ಮೆಯೂ ತಕ್ಕಂತೆ ಸಲುಗೆಯೂ ಒಪ್ಪತಕ್ಕುವು. ಹರಿಣಿ ! ಇನ್ನು ಕುಳಿತುಕೊ.

ಹರಿಣಿ :—ಆಗತರು ನಿಂತು, ನಾನು ಕುಳಿತುಕೊಳ್ಳುವುದೇನು ?

ಕಾಮು :—ಆ ಮರ್ಯಾದೆ ಇತರನೂತನಪರಿಚಿತರಿಗಿರಲಿ. ನನ್ನಲ್ಲಿ ಅಂತಹ ನಿರ್ಬಂಧವಿಲ್ಲ. ಸೋದರರಲ್ಲಿ ಭೇದಭಾವವೋ ? ಸಮಯೋಚಿತ ವಾಗಿ ಒಬ್ಬರ ಇಷ್ಟವನ್ನು ಮತ್ತೊಬ್ಬರು ಅನುಮೋದಿಸುವುದೇ ಭ್ರಾತೃಸ್ನೇಹಕ್ಕೆ ಲಕ್ಷಣವು !

ಹರಿಣಿ :—ಅಹುದೋ ? ನನ್ನ ಇಷ್ಟವನ್ನು ಸೋದರನೇ ಮೊದಲು ಅನುಮೋದಿಸಲಿ !

ಕಾಮು :—"ತಡೆಯಿಲ್ಲ" ಎಂದು ಮುಂದಿದ್ದ ಮೇಜನ್ನು ಹಿಂದಕ್ಕೆಳೆದು ಕುಳಿತುಕೊಂಡು, (ಕಿರುನಗೆಯಿಂದ) "ಇನ್ನು ಸೋದರಿಯೂ ಕುಳಿತುಕೊಳ್ಳಲಿ? ಇಬ್ಬರ ಇಷ್ಟವೂ ನೆರವೇರಿದಂತಾಗುವುದು !"

ಹರಿಣಿ, ಕಾಮುಪಾಲನ ಬಲವನ್ನಿರೋಧವನ್ನು ಮೀರಲಾರದೆ, ಅಂತರ್ಭಾವವನ್ನು ತಿಳಿಯಲುತ್ಸುಕತೆಯಿಂದ ವಿಸ್ಫಾರಿತನೇತ್ರೆಯಾಗಿ ಕುಳಿತಳು. ಮಾತನಾಡಬೇಕೆಂಬ ಅಭಿಲಾಷೆಯಿದ್ದರೂ, ಸ್ತ್ರೀಸಹಜ ವಾದ ಲಜ್ಜೆ ಮುಂದೆನಿಂತು ಅಡ್ಡಗಿಸಿತು. ಮಾತನಾಡದೆ ಹೆಚ್ಚುಹೊತ್ತು ಕುಳಿತಿರಲಾರದೆ ಏಳಹೋದಳು : ಆದರೆ, "ಏಳುವುದೇಕೆ ? ಮುಂದೆಡೆ ಯಲ್ಲಿಯೇ ಬದ್ಧಕಂಕಣನಾಗಿ ಕಾದಿರುವ ಅಣ್ಣನ ನಿರಾಕರಣವೇಕೆ

ಮತ್ತೆ ಮತ್ತೆ ಸಾಹಸಪಡದೆ, ಅಭಿಪ್ರಾಯವನ್ನು ಹೇಳಿಬಿಡಬಾರದೇಕೆ?'' ಎಂದಿಂತು ಕಾಮಪಾಲನಿಂದ ನಿಷೇಧಿಸಲ್ಪಟ್ಟು ತಲೆಬಾಗಿ ಕುಳಿತು ಬಿಟ್ಟಳು.

ಕಾಮ :—(ಕಿರುನಗೆಯಿಂದ) ಪಾಪ! ತಂಗಿ ಬಲುಪೇಚಾಟಕ್ಕೆ ಹಕ್ಕಾದಂತಿರುವುದು!

ಹರಿಣಿ ಮಾತನಾಡದೆ ತಲೆಬಾಗಿದಳು.

ಕಾಮ :—ಏನು? ಮಾತನಾಡಲಿಷ್ಟವಿಲ್ಲವೋ?

ಹರಿಣಿ :—(ಅಸ್ಫುಟಸ್ವರದಿಂದ) ಇಷ್ಟವಿಲ್ಲದಿಲ್ಲ.

ಕಾಮ :—ಇದೇನು! ಇದೆಂತಹ ಸಂಕುಚಿತಭಾವವು? ಅಣ್ಣನೆಡೆಯಲ್ಲಿಯೂ ತಂಗಿಗೆ ಸಂಕೋಚವೇ? ಅಲ್ಲದೆ, ಏನಾದರೂ ಲಜ್ಜೆಯೋ? ಚೆನ್ನಾಯಿತು! ಚೆನ್ನಾಯಿತು!! ಅಬ್ಬ! ಸ್ತ್ರೀಸ್ವಭಾವವೆಂತೂ ನಿಗೂಢವೇ!!! ನಾವು ಎಷ್ಟೆಷ್ಟು ನಿರರ್ಗಳವಾದ ಸ್ವಾತಂತ್ರ್ಯವನ್ನು ಕೊಟ್ಟರೂ, ಅವರ ಕೊಂಕುಬಿಂಕಗಳು ಮಟ್ಟಕ್ಕೆ ನೆಟ್ಟಗಾಗವು!

ಹರಿಣಿ :—ಆ ಮಾತು ಇಬ್ಬರಿಗೂ ಸೇರತಕ್ಕುದೇ; ಆದರೂ ನನ್ನ ಸ್ವಭಾವವು ಗಹನವೇ?

ಕಾಮ :—ಗಹನವೆಂಬುದನ್ನು ಅಂದೇ ತಿಳಿದೆನು! ಅದಿರಲಿ, ಈಗ ನೀನೇಕೆ ಊಟಮಾಡಲಿಲ್ಲ?

ಹರಿಣಿ :—ಮಾಡುವುದಿಲ್ಲವೆಂದು ಆಗಲೇ ಹೇಳಿದ್ದೆನು.

ಕಾಮ :—ಆರಲ್ಲಿ?

ಹರಿಣಿ :—ಅಕ್ಕನಲ್ಲಿ.

ಕಾಮ :—ಮೋದಿನಿಯೋ?

ಹರಿಣಿ :—ಮೋದಿನಿಯಲ್ಲದೆ ಆಪ್ತರಿನ್ನಾರು? ಅವಳೇ ನನ್ನ ಆಪ್ತ ಭಗಿನಿ!

ಕಾಮ :—(ತಲೆದೂಗುತ್ತ) ಸಹಜ! ಆದರೆ ಹರಿಣಿ, ಅಕ್ಕನಿಗೆ ಅಣ್ಣನಾದವನು ತಂಗಿಗೂ ಅಣ್ಣನಲ್ಲವೋ? ಅಣ್ಣನಲ್ಲಿ ಸಂಕೋಚವೂ ನಲ್ಲದ ಬಹುಮಾನವೂ ತಕ್ಕುದೋ?

ಹರಿಣಿ :—ಅಣ್ಣನಲ್ಲವೆಂದು ಎಂದೂ ಹೇಳಲಾರೆನು. ಅಣ್ಣನೇ! ಹಾಗೂ ಮೇಲ್ಮೆಗೆ ಕಾರಣನಾದ ಅಣ್ಣನೇ!! ದೇಹಾನುಬಂಧದಿಂದಲೂ ಧರ್ಮಾನುಬಂಧದಿಂದಲೂ ನೈಜಭ್ರಾತೃವೇ!!! ಈವರೆಗೂ ಪ್ರಕಟವಾದ ಲಜ್ಜಾವನತಭಾವವೂ, ಸಂಕುಚಿತಸ್ವರೂಪವೂ, ಬಹುಮಾನದ ದಾಂಭಿಕತ್ವವೂ, ಕೇವಲವಾಗಿ ಅಬಲಾಸ್ವಭಾಕೊಳ್ಳಪಟ್ಟ ಗುಣ ವಿಶೇಷವೇ ಸರಿ!

ಕಾಮು :—(ತಲೆದೂಗಿ) ಸಾಧು! ಸಾಧು!! ಇದೀಗ ಸಾಧು!! ಹರಿಣಿ! ದೇಹಸ್ಥಿತಿ ಹೇಗಿರುವುದು?

ಹರಿಣಿ :—ಏಕೆ?

ಕಾಮು :—ನಿನ್ನ ಪ್ರೇಮಾರ್ಥಿಯಾದವನು ಬರುವನು.

ಹರಿಣಿ :—ಆರು!

ಕಾಮು :—ನೀನೇ ಊಹಿಸಿ ಹೇಳಬಲ್ಲೆ?

ಹರಿಣಿ :—ಆರಾದರೂ ಬರಲಿ; ಕಲೆಕ್ಟರು ಬಂದರೋ?

ಕಾಮು :—ಆತನು ಬಂದು ಆಗಲೇ ಒಂದು ಸಪ್ತಾಹದ ಮೇಲಾಯ್ತು!

ಹರಿಣಿ :—ಸುಮ್ಮನೆ ಕೇಳಿದೆನು; ಬೇಸರಿಸಬೇಡ!

ಕಾಮು :—(ಕಿರುನಗೆಯಿಂದ) ಬೇಸರವೇಕೆ? ಹರಿಣಿ! ತಂಗಿ ಸುಮ್ಮನೆ ಆಡುವ ಸವಿನುಡಿಯನ್ನು ಕೇಳುವುದೂ, ಅಣ್ಣನಿಗೆ ಒಂದು ಬಗೆಯ ಸವಿಯೇ! ಸಂಶಯವೇನು?

ಹರಿಣಿ :—ನೈಜಭ್ರಾತೃಸ್ನೇಹವೇ ಹೀಗೆ! ಅಣ್ಣ! ಜಯಂತನಿಗೆ ವಿವಾಹವಾಯ್ತಲ್ಲವೇ?

ಕಾಮು :—ಪತ್ನಿ ಗೃಹಸ್ವಾಮಿನಿಯಾಗಿಯೂ ಪ್ರಕಾಶಿಸುತ್ತಿರುವಳು!

ಹರಿಣಿ :—ಕಲೆಕ್ಟರೋ?

ಕಾಮು :—ಆತನು ಸತ್ಯವ್ರತನಲ್ಲವೇ? ಮತ್ತೇಕೆ ಮದುವೆಯಾಗುವನು!

ಹರಿಣಿ :—ದಿಟ ! ನೀನೇ ಸಾಕ್ಷಿಯಾಗಿಲ್ಲವೇ ? ಅದಿರಲಿ; ನಿಮ್ಮಿಬ್ಬರಿಗೂ ಸ್ನೇಹವುಂಟೋ ?

ಕಾಮು :—ಸ್ನೇಹವೆಂಬುದು ಬಾಲ್ಯದಿಂದ ಬೆಳೆದು ಬಂದುದು ; ಸಾಲದುದಕ್ಕೆ ಬಾಂಧವ್ಯವೂ ಉಂಟು.

ಹರಿಣಿ :—ಹೇಗೆ ?

ಕಾಮು :—ಅವನ ಪತ್ನಿಯಾಗಿದ್ದ ಮಣಿಮಾಲೆ ನಮ್ಮ ಚಿಕ್ಕಪ್ಪನ ಮಗಳೇ.

ಹರಿಣಿ: —(ತಲೆದೂಗಿ) ಆ ನಿಷ್ಠುರಹೃದಯಕ್ಕೆ ಸ್ವಾಮಿಸೇವಾ-ಸುಖ-ಸೌಭಾಗ್ಯಾನುಭವದ ಸವಿ ಕಂಡುಬರಲಿಲ್ಲವೇನೋ ?

ಕಾಮು :—ನಿಷ್ಠುರಹೃದಯವೇ ? ಆರಿಗೆ ? ಹರಿಣಿ ! ಮಣಿಮಾಲೆಗೋ ? ವಿಧಿಗೋ ?

ಹರಿಣಿ :—ಮಣಿಮಾಲೆಗೆಂದೇ ಹೇಳಕೂಡದೇಕೆ ?

ಕಾಮು :—ಹಾಗೆಂದೂ ಹೇಳಲಾಗದು ! ನನ್ನ ತಂಗಿ, ಅಂತಹ ನಿಷ್ಠುರತೆಗೆ ಪಾತ್ರಿಯಾಗಿರಲಿಲ್ಲ ! ಅವಳು ಇನ್ನೂ ಬಾಲ್ಯದಲ್ಲೇ ಪತಿಯ ಹೃದಯೇಶ್ವರಿಯಾಗಿ ಪ್ರಕಾಶಿಸುತ್ತಿದ್ದಳು. ಆದರೆ, ನಿಷ್ಠುರನಾದ ವಿಧಿಯ ಸಂಕಲ್ಪಕ್ಕೆ ಅದು ಸಮ್ಮತವಾಗಲಿಲ್ಲ ; ಅವನು ಅಕಾಲ ಮೃತ್ಯುವಿಂದ ಅವಳನ್ನು ಕರೆದುಯ್ದನು.

ಹರಿಣಿ :—ಅಕಾಲಮೃತ್ಯು ! ಆರಿಗೆ ! ಹೇಗೆ ?

ಕಾಮು :—ಮತ್ತಾರಿಗೆ ? ಮಣಿಮಾಲೆಗೇ ! ತಾಯಿಯ ಜೊತೆಯಾಗಿಯೇ !! ಬೆಂಕಿಯಿಂದ ಬೆಂದೇ !—

ಹರಿಣಿ :—(ಕಿರುನಗೆಯಿಂದ) ಬೆಂಕಿಯಿಂದ ? ಹೇಗೆ ?

ಕಾಮು :—ಮತ್ತೇನು ? ಮನೆಗೆ ಬೆಂಕಿಹತ್ತಿ ತಾಯಿಮಗಳಿಬ್ಬರೂ ಸತ್ತರು !

ಹರಿಣಿ :—ನೀನು ಕಣ್ಣಾರೆ ನೋಡಿದೆಯೋ ?

ಕಾಮು :—ಆಗ ನಾನು, ಶಚೀಕಾಂತಜಯಂತರೊಡನೆ ಸೀಮೆಯಲ್ಲಿದ್ದೆನು.

ಹರಣಿ :—ನಿನಗೆ ತಿಳಿದುದೆಂತು ?

ಕಾಮು :—ತಂತಿಯು ವರ್ತಮಾನದಿಂದ.

ಹರಿಣಿ :—ಕೊಟ್ಟವರಾರು ?

ಕಾಮು :—ಗ್ರಾಮಸ್ಥರೂ ಅಮರಗಂಗಾಧರರೂ.

ಹರಿಣಿ :—ಸರಿಯೆ ; ತಾಯಿ ಸತ್ತಳು. ಮಗಳು ಸಾಯಲಿಲ್ಲ !

ಕಾಮು :— (ಚಕಿತನಾಗಿ) ಹ್ಹಾ ! ಏನೆಂದೆ ?

ಹರಿಣಿ :—ಏನೆಂದೆನು ? ದುಷ್ಕಾಮಗ್ರಸ್ತರಾದ ಮಹಾಶಯರ ಪ್ರಭಾವವಲ್ಲವೊ ?

ಕಾಮು :— (ಕುತೂಹಲದಿಂದ) ಹಾಗೆಯೇ ? ಅದೇನು ಹರಿಣಿ ?

ಹರಿಣಿ :—ಹೇಳಲು ಸಂದೇಹಪಡುವೆನು !

ಕಾಮು :—ಅಣ್ಣನಲ್ಲಿಯೂ ಸಂದೇಹವೇ ? ಅಭಿಮಾನಪಾತ್ರನಾದ ಅಣ್ಣನಲ್ಲಿಯೂ ಮರೆಮಾಚತಕ್ಕುದೇ ?

ಹರಿಣಿ :—ಅಹುದು ; ನಿನಗಿಷ್ಟರಾದವರಮೇಲೆ ನಿಷ್ಠುರೋಕ್ತಿಯನ್ನಾಡಿ ನಿನಗೇಕೆ ಸಿಟ್ಟೆಬ್ಬಿಸಬೇಕು ?

ಕಾಮು :—ಹರಿಣಿ ! ಸಿಟ್ಟೆಂಬುದು ನಿನ್ನಣ್ಣನ ಹುಟ್ಟಿಗೇ ಬಂದುದಲ್ಲವೆಂದು ನಂಬು !

ಹರಿಣಿ :—ಹೋಗಲಿ ; ಅಮರನಾಥನು ನಿನಗೆ ಬಂಧುವೋ ?

ಕಾಮು :—ನನ್ನ ಸೋದರತ್ತೆಯ ಮಗನೇ !

ಹರಿಣಿ :—ಗಂಗಾಧರನೋ ?

ಕಾಮು :—ಅವನೂ ಜ್ಞಾತಿವರ್ಗದಲ್ಲಿ ಸೋದರನು.

ಹರಿಣಿ :—ಅಣ್ಣಾ ! ನಿನ್ನ ತಂಗಿಯ ಅನಿಷ್ಟಕ್ಕೆ ಇವರೇ ಕಾರಣರೆಂದೂ, ನಿನ್ನ ಚಿಕ್ಕಮ್ಮನ ಮರಣಕ್ಕೆ ಇವರೇ ಪ್ರೇರಕರೆಂದೂ ನಾನು ಕೇಳಿರುವೆನು.

ಕಾಮು :—ಏನು, ಏನು ? ಅವರೇ ಕಾರಣರು, ಪ್ರೇರಕರೇ ? ಅವರು ಅಂತಹ ದುರ್ಮಾರ್ಗರೇ, ವಂಚಕರೇ, ಹೇಗೆ ? ಹರಿಣಿ ! ಭ್ರಾಂತನಾಗಿರುವೆನು !! ಹೇಳು ! ನೀನೆಂತು ತಿಳಿದೆ ?

ಹರಿಣಿ :—ಭ್ರಾಂತಿಯೇಕೆ ? ನನ್ನ ಸಹವಾತ್ಯಮರಣವೃತ್ತಾಂತವು ನನಗೆ ಮುಟ್ಟಿದೊಡನೆಯೇ ನಾನು ಯಥಾರ್ಥಾಂಶವನ್ನು ತಿಳಿಯಲು ಪ್ರಯತ್ನ ಪಟ್ಟೆನು.

ಕಾಮು :—ಸಹವಾತ್ಯವಾರು ? ನಮ್ಮ ಚಿಕ್ಕಮ್ಮನೋ ?

ಹರಿಣಿ :—ಅದೇಕೆ ? ಈಗಾಗಳೇ ನನ್ನ ಅಂದಿನ ಮಾತು ಮರೆಯಿತೋ ? ನಾನು, ನಿಮ್ಮ ಚಿಕ್ಕಪ್ಪನ ಮಗಳೆಂತಾದೆನೆಂಬುದನ್ನು ಅಂದೇ ಹೇಳಲಿಲ್ಲವೇ ?

ಕಾಮು :—ಸರಿ, ಸರಿ ! ನೆನೆಪಿಗೆ ಬಂದುವು. ಆದರೆ ಈಗ ಹೇಳು ; ಹರಿಣಿ ! ಮಣಿಮಾಲೆಯ ವಿಚಾರವಾಗಿ, ಇವರಿಬ್ಬರೂ ತೋರಿದ ವರ್ತನವು ಕುಟಿಲನಟನೆಯೇ ?

ಹರಿಣಿ :—ಅದೆಂತಾದರೂ ಇರಲಿ ; ಗತಿಸಿದ ವಿಚಾರಕ್ಕೆ ಈಗ ಚಿಂತಿಸಿ ಫಲವೇನು ? " ಗತಂ ನಶೋಚಯೇತ್ ಪ್ರಾಜ್ಞಃ " ಎಂಬ ಆರ್ಯನೀತಿಯುಂಟಲ್ಲವೆ ?

ಕಾಮು :—ಅಷ್ಟೇ ಸರಿ ! ಹರಿಣಿ ! ಎಂತೂ ಅಮರನು ಇಂದೇ ಬರಬೇಕಾಗಿತ್ತು ?

ಹರಿಣಿ :—ಬರಲಿಲ್ಲವೇಕೆ ?

ಕಾಮು :—ಬಂದೂ ಫಲವಿಲ್ಲದೆ ಕೊರಗಬೇಕೆಂಬ ಚಿಂತೆಯಿಂದ !

ಹರಿಣಿ :—ಫಲವೇತರದು ? ಚಿಂತೆಯೇನು ?

ಕಾಮು :—ಉದ್ದೇಶಸಿದ್ಧಿಯೇ ಫಲ ! ಪ್ರತಿಕೂಲತೆಯೇ ದುಃಖ !! ಪ್ರತಿಕೂಲವಾಗುವುದೋ ಹೇಗೆಂಬುದೇ ಚಿಂತೆ !!!

ಹರಿಣಿ :—ಅಮರನೂ ಕೊರಗಬೇಕೇ ?

ಕಾಮು :—ಬೇಡವೆ ? ಹರಿಣಿ ! ಪ್ರೀತ್ಯಾಸ್ಪದರತ್ನವನ್ನು ಧಾರಣ ಮಾಡಲಾಗದಿದ್ದರೆ ಕೊರಗದಿರಲಾಗುವುದೇ ? ಕೇಳಿದಾಗಳೆಲ್ಲಾ ಮೂರು ಮೂರುತಿಂಗಳ ಗಡುವೇ ತಡೆಯಾಗುತ್ತಿದ್ದರೆ ಕೊರಗದೆ ಹೇಗಿರಬೇಕು ?

ಹರಿಣಿ :—ಕೊರಗಬೇಕಾದುದಿಲ್ಲ. ಅಮರನಿಗೆ ಉಪಭೋಗಾರ್ಹವಸ್ತು, ಕೇವಲಸಮೀಪದಲ್ಲೇ ಪ್ರಸಾದಚಿಂತೆಯಲ್ಲೇ ಸಿದ್ಧವಾಗಿರುವುದಲ್ಲವೇ ?

ಕಾಮು :—ಆದರಲ್ಲಿರುವ ಪ್ರೀತಿಗೂ ನಿನ್ನಲ್ಲಿರುವ ಪ್ರೀತಿಗೂ ಅಂತರವೆಷ್ಟೋ ಇರುವುದು.

ಹರಿಣಿ :—ಅಂತರವೇಕೆ ?

ಕಾಮು :—ಕ್ಷಣಿಕವಾದ ಸ್ವಚ್ಛಂದವಸ್ತುವೇ ಅದು. ವಿದ್ಯಾ ವಿವೇಚನೆಗಳಿಂದ—

ಹರಿಣಿ :—(ಹುಬ್ಬುಗಂಟಿಕ್ಕಿ) ಮುಂದೆ ಹೇಳಬೇಡ ! ಅಣ್ಣಾ ! ಅಂತಹ ಸ್ವಚ್ಛಂದವಸ್ತುವಿಂದಾಗುವ ವಿಷಯತೃಪ್ತಿ, ಮತ್ತೊಂದಾದ ಗಹನವಸ್ತುವಿಂದೆಂತೂ ದೊರೆಯದು ! ಇದು ಕೇವಲದುರ್ಲಭವಸ್ತು!!

ಕಾಮು :—(ವಿಸ್ಮಯದಿಂದ) ಹರಿಣಿ ! ಇದೇನಿದು ! ಇಷ್ಟುದಿನಗಳ ಮೇಲೆ, ಇಂದು ಈ ಬಿರುನುಡಿ ? ಅಂದಿನ ಅಭಿಮಾನವೇನಾಯ್ತು ?

ಹರಿಣಿ :—ಅಣ್ಣಾ ! ಅದೇಕೆ ಬೆಚ್ಚರಗೊಳ್ಳುವೆ ?

ಕಾಮು :—ಏಕೆಂದರೆ, ಹರಿಣಿ ! ಆಶಾವಶನಾಗಿ ಹಲುಬುತ್ತಿರುವ ಅಮರನಿಗಾಗಿ !

ಹರಿಣಿ :—(ಸದರ್ಪಸ್ವರದಿಂದ) ಏನು ಹೇಳುವೆ ? ಅಣ್ಣಾ ! ಸ್ವಚ್ಛಂದಗಾಮಿಯು ಆಶಾಪೂರ್ಣತೆಗೆ ವಿರಕ್ತೆಯೇ ಪಾತ್ರವೊ ?

ಕಾಮು :—ಆತನ ಸ್ವಚ್ಛಂದತೆಯೇನು ?

ಹರಿಣಿ :—ಅವುದಾದರೂ ಇರಲಿ ! ಈಗದರ ಪ್ರಸ್ತಾವವೇಕೆ ?

ಕಾಮು :—ಫಲಪ್ರಾಪ್ತಿಗೆಂದು ಹರಿಣೀಕಟಾಕ್ಷನಿರೀಕ್ಷೆಯಲ್ಲಿರುವನು.

ಹರಿಣಿ :—ನಿರೀಕ್ಷೆ ಸ್ವಪ್ನದಲ್ಲಿಯೂ ದುರ್ಲಭವೆಂದು ಹೇಳಿದರಾಯ್ತು !

ಕಾಮು :—ಹರಿಣಿ, ಏನಿದು !! ಮೆಚ್ಚಿಬಂದವರ ಬಾಯಿಂದ ಈ ನುಡಿ ಹೊರಡುವುದೇ ?

ಹರಿಣಿ :—ಮೆಚ್ಚಿಬಂದವರಾರು ? ಹೇಳಿದವರಾರು ?

ಕಾಮು :—ನೀನೇ ಮೆಚ್ಚಿಬಂದಳೆಂದು ಅಮರಗಂಗಾಧರರೇ ಹೇಳಿದರು !

ಹರಿಣಿ :—(ಉದಾಸೀನಭಾವದಿಂದ) ಸರಿಯೆ ! ಮೆಚ್ಚಿಬಂದವಳಲ್ಲವೆಂದು ಈಗಲಾದರೂ ತಿಳಿದುಕೊ !

ಕಾಮು :—(ಕುತೂಹಲದಿಂದ) ಮತ್ತೆ ಹೇಗೆಬಂದೆ ?

ಹರಿಣಿ :—(ದೀರ್ಘನಿಶ್ವಾಸದಿಂದ) ಅಣ್ಣಾ ! ಹೇಗೆ ಬಂದೆನೆಂಬುದನ್ನು ಈಗಲೇ ಹೇಳಲಾರೆನು ! ಮುಖ್ಯವಾಗಿ ಅಕ್ರಮಹರಣದಿಂದ ಅಂತಸ್ತಾಪಕ್ಕೆಡೆಯಾಗಬೇಕಾಯ್ತು !!

ಕಾಮು :—(ವಿಕೃತಸ್ವರದಿಂದ) ಹರಿಣಿ ! ಹೀಗೇಕೆ ಮರೆಮಾಚುವೆ ? ನಾನು ನಿನ್ನ ಅಣ್ಣನಲ್ಲವೆ ? ನಿನ್ನ ಸುಖದುಃಖಗಳನ್ನು ಕೇಳಲರ್ಹನಾದ ಆಪ್ತಬಂಧುವಲ್ಲವೇ ? ಅಣ್ಣನೇ ಎರಡನೆಯ ತಂದೆಯೆಂದರಿಯೆಯಾ? ಹೇಳು ! ತಾಯಿ, ಬೇಗಹೇಳು ! ನಿನ್ನ ಮನದಳಲಿನ ಕಾರಣವನ್ನು ದಯೆಯಿಟ್ಟು ಹೇಳು.

ಹರಿಣಿ :—ಅಣ್ಣಾ ! ಸಂತಾಪಕಾರಣವನ್ನು ಹೇಳಬೇಕೆ ? ಹೇಗೆ ಹೇಳಲಿ ? ಒಂದೆರಡು ಕಾರಣಗಳಲ್ಲ, ಒಂದೆರಡು ಗಂಡಾಂತರಗಳಲ್ಲ; ಅನೇಕಾನೇಕಕಾರಣಗಳು !! ಅಡಿಗಡಿಗೂ ಎಷ್ಟೆಷ್ಟೋ ಗಂಡಾಂತರಗಳು !!! ಆದರೂ, ಒಂದೇ ಮಾತಲ್ಲಿ ಮುಗಿಸುವೆನು. ದೋಷದೃಷ್ಟಿಗಳ ಅಪಲಾಪದಿಂದ ಕಲಂಕಿತವಸ್ತು ! ಸತ್ಯವ್ರತನಲ್ಲಿ ಅನೃತವಾದಿ !! ಸುಹೃತ್ಪಾತ್ರಕ್ಕೊದಪಿದ ಚಿಂತೆಗೆ ಮೂಲ !!! ಮತ್ತೇನು ಹೇಳಲಿ ?

ಕಾಮು :—ಹಿಂದುಮುಂದಲ ಮಾತು ತಿಳಿಯಿತು ; ಆದರೆ, ತಾಯಿ, ಸತ್ಯವ್ರತನಲ್ಲಿ ಅಪಲಾಪಿಯೆಂತೋ ತಿಳಿಯಲಿಲ್ಲ !

ಹರಿಣಿ :—ಅಣ್ಣಾ ಸತ್ಯಸಂಕಲ್ಪಕ್ಕೆ ಸಹಕಾರಿಯಾಗುವೆನೆಂಬ ವಾಗ್ದಾನವೇ ತಿರೋಧಾನವಾದರೆ ಮತ್ತೇನು ?

ಕಾಮು :—ತಾಯಿ ! ಈ ವಿಚಾರವನ್ನು ಆಗಳೇ ಹೇಳಲಿಲ್ಲವೇಕೆ ?

ಹರಿಣಿ :—ಅಣ್ಣಾ ! ಅಕಾಲದಲ್ಲಿ ಬಾಯ್ದೆರೆವುದು ಹೇಗೆ ?

ಕಾಮು :—ಹೋಗಲಿ ; ಈಗಳಾದರೂ ಅಮರನಿಗೆ ತಿರಸ್ಕಾರವನ್ನು ಸೂಚಿಸಲು ತಡೆಯೇನು ?

ಹರಿಣಿ :—ಇನ್ನೂ ಕಾಲವೊದಗಿಲ್ಲ ; ವಿಚಾರವಿಮರ್ಶೆಗೆ ಪರಿಣಾಮ ವನ್ನು ಕಂಡಮೇಲೆ ಹೇಳಬೇಕು !

ಕಾಮ :—ವಿಮರ್ಶಿಸು ; ತಾಯಿ, ಚೆನ್ನಾಗಿ ವಿಮರ್ಶಿಸು !! ಶಚೀಕಾಂತನು ನನ್ನ ಪ್ರಾಣಾಪ್ತಮಿತ್ರನು. ಆತನು ಇಲ್ಲಿಗೆ ಬಂದುದು ಮೊದಲ್ಗೊಂಡು ಬಹುಳವಾದ ಕಾರ್ಯಗಳಲ್ಲಿ ಸಿಕ್ಕಿ ವಿರಾಮವಿಲ್ಲದೆ ಇಲ್ಲಿಗೆ ಬಂದಿಲ್ಲ. ನಾನೇ ಒಂದೆರಡುಬಾರಿ, ಅವನನ್ನು ನೋಡಿ ಬಂದೆನು. ಆದರೆ, ನೀನು ಮೊದಲೇ ಆಣೆಯಿಟ್ಟು ತಡೆದಿದ್ದುದರಿಂದ ನಿನ್ನ ಸಂಗತಿ ಯನ್ನು ಹೊರಗೆಡಹಲಿಲ್ಲ. ನೀನಾಗಿ ಸಮ್ಮತಿಸಿದರೆ, ನಾಳೆಯೇ ಇಲ್ಲಿಗೆ ಕರೆತರುವೆನು.

ಹರಿಣಿ :—ಈಗಲೇ ಅಷ್ಟಕ್ಕೆ ಪ್ರಯತ್ನಿಸಬಾರದು. ಅಣ್ಣಾ ! ಅವ ರಾಗಿ ಇಲ್ಲಿಗೆ ಬಂದರೂ, ನೀನು ಕಾರಣಾಂತರಗಳನ್ನು ಕಲ್ಪಿಸಿ, ಸ್ಥಲಾಂ ತರಕ್ಕೆ ಕರೆದೊಯ್ಯಬೇಕಲ್ಲದೆ, ಇಲ್ಲಿಗೆ ಬರಮಾಡುವುದೊಳ್ಳಿತಲ್ಲ. ಸಾಧ್ಯ ವಾದಮಟ್ಟಿಗೂ ನನ್ನ ವಿಚಾರವನ್ನು ಅವರಿಗಾಗಲೀ, ಇತರರಿಗಾಗಲೀ ತಿಳಿಯದಂತೆಯೇ ನೋಡಿಕೊಳ್ಳಬೇಕು. ಆರಿಗಾದರೂ ಕೊಂಚ ಮಟ್ಟಕ್ಕೆ ತಿಳಿದುಬಂದರೂ ಹಾನಿತಪ್ಪದೆಂದು ಚೆನ್ನಾಗಿ ನಂಬಿರತಕ್ಕುದು.

ಕಾಮ :—ಹರಿಣಿ ! ಇಂದಿನ ವಿಚಾರದಿಂದ ನನ್ನ ತಲೆಯ ಮಿದುಳೇ ಹಾರಿಹೋಗುವಂತೆ ಮಿಡಿಯುತ್ತಿರುವುದು ! ನಿನ್ನ ಪ್ರತಿವಾಕ್ಯವೂ ಅಮರಗಂಗಾಧರರ ನಡೆತೆಯಲ್ಲಿ ಸಂಶಯವನ್ನೇ ಹೆಚ್ಚಿಸುತ್ತಿರುವುದು. ಯಥಾರ್ಥಾಂಶವೇನೆಂಬುದನ್ನು ದಯೆಯಿಟ್ಟು ಹೇಳು ! ತಾಯಿ ! ಅಷ್ಟು ಮಟ್ಟಕ್ಕೆ ಮಾಡು ! ಅವರಲ್ಲಿ ಅತ್ಯಾಚಾರದ ಅಣುಮಾತ್ರವಿರುವು ದೆಂದು ತಿಳಿದರೂ ಸಾಕು, ನಾನು ಅವರನ್ನು ಕೂಡಲೇ ದೂರಸಾಗಿಸು ವೆನು ! ಕುಕರ್ಮಿಗಳ ಸಂಸರ್ಗದಿಂದ ಪಾರಾಗುವೆನು. ಹರಿಣಿ ! ನೀನು ನನ್ನ ಆಪ್ತಸೋದರಿಯಲ್ಲದೆ, ಅವರೆಂದಿಗೂ ನನ್ನ ಆಪ್ತವರ್ಗದವರೆಂದು ಹೇಳಲಾರೆನು. ವಿಳಂಬಿಸದೆ ಹೇಳು ?

ಹರಿಣಿ :—ಅಣ್ಣಾ ! ಈಗಲೇ ಏನೂ ಹೇಳುವಂತಿಲ್ಲ. ಪ್ರತ್ಯಕ್ಷ ವಾದರೂ ಪ್ರಮಾಣಿಸಿ ನೋಡೆಂಬ ನಾಣ್ನುಡಿಯನ್ನು ಮರೆಯಬಾರದು.

'ಸಂಶಯಾತ್ಮಾ ವಿನಶ್ಯತಿ' ಎಂಬ ಭಗವದ್ವಾಕ್ಯವನ್ನು ಇಲ್ಲಿಯೂ ಸ್ಮರಿಸು! ಅವರಲ್ಲಿ ಈಗ ಸಂಶಯಪಟ್ಟವರಂತೆ ತೋರಪಡಿಸಬಾರದು! ಮುನ್ನಿನ ಮಿತ್ರರೆಂದೇ ಹೇಳುತ್ತ ಕಾಲನಿರೀಕ್ಷೆಯಲ್ಲಿರಬೇಕಾದುದು ಪ್ರಕೃತ ಸ್ಥಿತಿಗೆ ತಕ್ಕಮಾರ್ಗವು. ನಾನಾದರೂ ಸುಮ್ಮನಿರುವೆನೆಂದು ತಿಳಿಯಲಾಗದು. ಸಂಶಯನಿವಾರಣೆಗೆ ತಕ್ಕಷ್ಟು ನಿದರ್ಶನಗಳನ್ನು ಕಂಡು ಹಿಡಿಯುತ್ತಿರುವೆನು.

ಕಾಮ:—ಹರಿಣಿ! ಎಂತೂ ನಿನ್ನ ಆತ್ಮಾನಂದಮಾರ್ಗವನ್ನು ಪ್ರಕಾಶಪಡಿಸಬೇಕೆಂಬುದೇ ನನ್ನ ಸಂಕಲ್ಪವು.

ಹರಿಣಿ:—ಅಣ್ಣಾ! ಶಾಂತಿಯೇ ನಿತ್ಯಾನಂದಮಾರ್ಗವಲ್ಲದೆ ಬೇರೆ ಇಲ್ಲ. ಸುಹೃದ್ಭ್ರಾತೃವಾದ ನಿನ್ನ ಸದುಪದೇಶವೂ ಪ್ರಾಣಾಪ್ತಭಗಿನಿಯಾದ ಮೋದಿನಿಯ ಸತ್ಸಹವಾಸವೂ ಸಹಕಾರಿಯಾಗುತ್ತಿರಲು, ಶಾಂತಿರಸಾಸ್ವಾದನೆಗೆ ಕೊರತೆಯೇನು? ಬ್ರಹ್ಮಾನಂದಸಾಮ್ರಾಜ್ಯವೇ ಕಯ್ಗೂಡುವುದೆಂದು ನಂಬಿರುವೆನು. ಅಷ್ಟೇ ಅಲ್ಲ! ಅಣ್ಣಾ! ನನ್ನ ಅಭ್ಯುದಯಕ್ಕೆ ಜಯಂತನೆಂತು ಕಾರಣನೋ, ಅಂತೆಯೇ ನೀನೂ ನನ್ನ ಆತ್ಮೋನ್ನತಿಗೆ ಉತ್ತೇಜಕನಾದವನು. ನಿನ್ನಲ್ಲಿ ನಾನು ಬಯ್ಚಿಡುವುದಾದರೂ ಆವುದಿರುವುದು? ಸುಕಾಲದಲ್ಲಿ ಸಮಯನೋಡಿದಂತೆ ಸೂಚಿಸುವೆನು. ಆದರೆ, ಈಗ ಇಷ್ಟು ಮಟ್ಟಕ್ಕೆ ಹೇಳುವೆನು; ನನ್ನ ಸ್ವಾಮಿ ಸಜೀವನೂ ಉತ್ತಮಪದವೀಧರನೂ ಮತ್ತೆ ಸಮಿಾಪಸ್ಥನೂ ಆಗಿರುವಂತೆ ಅಹರ್ನಿಶೆಯೂ ಬೋಧೆಯಾಗುತ್ತಿರುವುದು. ಆದುದರಿಂದ ನನಗೆ ಮತ್ತಾವ ಕ್ಲೇಶಕ್ಕೂ ಅವಕಾಶವುಂಟಾಗದು.

ಕಾಮ:—(ಗದ್ಗದಸ್ವರದಿಂದ) "ಹರಿಣಿ! ಭವಿತವ್ಯತೆಯನ್ನು ಕಂಡವರಾರು? ನಿನ್ನ ಸ್ವಾಮಿ ಸಜೀವನಾಗಿರುವುದು ಸತ್ಯವಾದರೆ, ಅಲ್ಪನಾದ ನನ್ನ ಅದೃಷ್ಟದಲ್ಲಿ ಸುಯೋಗವಿದ್ದರೆ, ಮತ್ತೆ ಸಂಸಾರಸಾಮ್ರಾಜ್ಯದಲ್ಲಿ ಅಧಿಷ್ಠಾತ್ರಿಯಾಗಿ ಬಗೆಗೊಳ್ಳುವ ನಿನ್ನನ್ನು ದೃಙ್ಮನದಣಿಯೆ ನೋಡುವೆನು! ಅಷ್ಟರ ಸುಯೋಗಕ್ಕೆ ಮಾತೃಕಟಾಕ್ಷವೇ ನೆರವಾಗಿರಬೇಕು!! ಇರಲಿ, ಹರಿಣಿ! ಹೊತ್ತುಮಿಾರಿತು; ಇನ್ನು ಸುಖವಾಗಿ ನಿದ್ರಿಸು" ಎಂದು ಹೇಳಿ ಉತ್ತರವನ್ನು ನಿರೀಕ್ಷಿಸದೆ ಹೊರಟು

ಹೋದನು. ಹರಿಣಿಯೂ ನೈಜಭ್ರಾತೃಚಿತ್ರವು ಸೋದರೀಸಂದೇಶವನ್ನು ಸಂಗ್ರಹಿಸಿತೆಂದು ಬಗೆಬಗೆದು ಹರ್ಷದಿಂದ ನಿದ್ರಾದೇವಿಗೆ ಪರವಶೆಯಾದಳು.

ದ್ವಿತೀಯ ಪರಿಚ್ಛೇದ

(ಸೋದರಿಯರ ಸಮ್ಮೇಲನ)

ಇಂದು ಯೋಗ-ಜ್ಞಾನಗಳ ಮೂಲಸ್ವರೂಪಗಳೆರಡೂ ಸ್ತ್ರೀಪ್ರಕೃತಿಯಂತೆ ಸಾಕ್ಷಾತ್ಕರಿಸಿರುವುವು. ಯೋಗಸ್ವರೂಪವೇ ಜಟಾಧಾರಿಣಿಯಾದ ಸನ್ಯಾಸಿನಿಯಂತೆ ಅಸಾಧಾರಣತೇಜಃಪುಂಜಪಾತ್ರವಾಗಿಯೂ, ಜ್ಞಾನಮೂಲಪ್ರಕೃತಿಯೇ ಕಾಂತಿಪೂರ್ಣವಾದ ಮಂದಸ್ಮಿತವದನಾರವಿಂದದ ಆಕರ್ಷಣಾಯಂತ್ರಸ್ವರೂಪವಾಗಿಯೂ ಸಮಾಸನಯೋಧರ್ಮದಿಂದ, ಏಕಾಸನದಲ್ಲಿ ಮಂಡಿಸಿ ಬಗೆಗೊಳ್ಳುತ್ತಿರುವುವು.

ಈಗ ನಾವು ಹೇಳದಿದ್ದರೂ ಆಕರ್ಷಣಾಯಂತ್ರವೇ ಹರಿಣೀಸ್ವರೂಪವೆಂಬುದು ತಾನಾಗಿಯೇ ಭಾಸವಾಗುವುದು. ಅದೇ ಜ್ಞಾನಮಯಪಾತ್ರವೆಂದು ಆಗಲೇ ಹೊಳೆದಿರುವುದು. ಇನ್ನು ಯೋಗಸ್ವರೂಪವಾವುದೆಂದರೆ ಆರ ಜೊತೆಯಲ್ಲಿ ಆರು ಸೇರುವರೆಂಬ ವಿತರ್ಕವನ್ನು ಕೊಂಚ ಬೆಳೆಯಿಸಿ ಇಬ್ಬರಲ್ಲಿ ಒಬ್ಬರು ಇಂತಹರೆಂದು ತಿಳಿಯಬಂದ ಬಳಿಕ ಮತ್ತೊಬ್ಬರು ಆರಿರಬಹುದೆಂದು ವಿಚಾರಿಸುತ್ತ ಹೋದರೆ ಅದೂ ನೆನಪಿಗೆ ಬಂದೇ ಬರುವುದು. ಹರಿಣಿಗೆ ಪೂಜ್ಯೆಯೂ ಆಪ್ತಭಗಿನಿಯೂ ಆದ ಮೇದಿನಿಯೆಂದು ನಾವೇ ಹೇಳಬೇಕಾದುದಿಲ್ಲ. ಅವಳಲ್ಲದೆ ಮತ್ತಾವ ಮೂರ್ತಿ, ಹರಿಣಿಯೊಡನೆ ಏಕಾಸನದಲ್ಲಿ ಅಧಿಷ್ಠಾತ್ರಿಯಾಗಬಹುದು? ಹಾಗಾದರೆ ಅಂತಹ ಉತ್ಕೃಷ್ಟಪಾತ್ರದ ಪರಿಚಯವಾಗಬೇಕಲ್ಲವೆ? ಸಹಜ! ಆದರೆ, ಸರಿಯಾದ ಉಪಮಾನೋದ್ಗಾರಗಳಿಂದ, ಆ ತೇಜಃಪುಂಜಮೂರ್ತಿಯನ್ನು ಭಾವಫಲಕದಲ್ಲಿ ಯಥಾ

ವತ್ರಾಗಿ ಚಿತ್ರಿಸುವಂತಹ ಕೌಶಲ್ಯವೂ ತಕ್ಕಷ್ಟು ಉಪಕರಣಸಾಹಿತ್ಯವೂ ನಮ್ಮ ಲೇಖಿನಿಗೆ ದೊರೆತಿಲ್ಲವೆಂದು ವಿಷಾದಿಸಬೇಕಾಗಿರುವುದು. ಮಾಡತಕ್ಕುದೇನು? ಒಂದೆರಡು ವಾಕ್ಯಗಳಿಂದಲೇ ತೃಪ್ತರಾಗಬೇಕು.

ರೂಪ, ಗುಣ, ಸ್ವಭಾವ, ಇತ್ಯಾದಿ ಸಮಸ್ತಭಾಗಗಳಿಂದಲೂ ಯೋಗಿನಿ, ಕಾಮಪಾಲನ ಪ್ರತಿಬಿಂಬವೆಂಬ ಭ್ರಮೆಯನ್ನುಂಟುಮಾಡಿ, ಆತನ ಅನುಜಾತೆಯೇ ತಾನೆಂಬುದನ್ನು ವ್ಯಕ್ತಪಡಿಸುತ್ತಿರುವಳು. ಅವಳಲ್ಲಿ ಬೀಡುಗೊಂಡಿದ್ದ ದಮಾಶಕ್ತಿಯೂ ಅತ್ಯುಚ್ಚವೆನ್ನಿಸುವುದು. ಅವಳ ದೇಹದ ಸೌಂದರ್ಯಲಾವಣ್ಯಗಳಿಗೆ ಉತ್ತೇಜಕವಾಗಿ, ಅವಳ ಕೆಂಗಾವಿಯ ಸೀರೆಯೂ, ಏಕವೇಣೀರೂಪದಿಂದ ಬಂಧಿತವಾಗಿದ್ದ ಆಸರಳ ದೀರ್ಘಕೇಶಭಾರವೂ, ಸಂಧ್ಯಾಲಂಕೃತೆಯಾದ ದಿವಾಂಗನೆಯ ಮುಖಬಿಂಬದಂತೆ ಪ್ರಭಾಪೂರ್ಣವಾಗಿರುವುದು. ಯೋಗರೂಪಿಣಿಯಾದ ಮೇದಿನಿಯೂ ಹರಿಣಿಯೂ ಕಿರುಮನೆಯಲ್ಲಿ ಮಂಚದ ಮೇಲೆ ಕುಳಿತಿರುವರು.

ಹರಿಣಿ:—(ತಲೆಯೆತ್ತಿ ಮೇದಿನಿಯ ಮುಖವನ್ನು ನೋಡಿದಳು.)

ಮೇದಿನಿ:—(ಉತ್ತರವನ್ನು ಕೊಡದೆ ನಕ್ಕುಬಿಟ್ಟಳು.)

ಹರಿಣಿ:—(ಅಪ್ರತಿಭೆಯಾಗಿ) ಮೇದಿನಿ! ಮಾತಿಲ್ಲದೆ ಮೂಕರಂತೆ ನಗುವುದೇಕೆ?

ಮೇದಿನಿ:—(ಮತ್ತೊಮ್ಮೆ ಗಹಗಹಿಸಿ ನಕ್ಕಳು.)

ಹರಿಣಿ:—(ಕೃತ್ರಿಮಕೋಪದಿಂದ) ಇನ್ನೂ ನಿನ್ನ ನಗೆ....

ಮೇದಿನಿ:—(ನಗೆಯನ್ನು ತಡೆದು) ಹರಿಣಿ! ಅದೇನಿಂದು ಇಷ್ಟು ಕೋಪವು?

ಹರಿಣಿ:—ಸನ್ಯಾಸಿನಿಗೆ ಇಷ್ಟು ಉನ್ಮಾದವಿಂದೇಕೆ?

ಮೇದಿನಿ:—ನನ್ನ ಸ್ವಾಮಿ, ನನ್ನನ್ನು ಗಾಢಾಲಿಂಗನವಿಧಿಯಿಂದ ಮುದ್ದಿಸುತ್ತಿದ್ದರೆ, ನನಗೆ ಉನ್ಮಾದವು ಸ್ವಾಭಾವಿಕವಲ್ಲವೊ?

ಹರಿಣಿ:—ಅವನಾರು? ನಿನ್ನ ಸ್ವಾಮಿ!

ಮೇದಿನಿ:—ಇನ್ನು ಆರು ಕಾಣೆಯಾ?

ಹರಿಣಿ:—ಏನು ಯಮನೋ?

ಮೇದಿನಿ :—ಏನೆಂದೆ? ಯಮುನೇ? ನೀನೆಲ್ಲಿಯೋ ಮರುಳೆಯಾಗಿರುವೆ. ಯಮುನಿಗೂ ಯಮುನೆನ್ನು. ಅವನು ಆರೆನ್ನುವೆ? ದಿವ್ಯ ಪುರುಷನು. ಆವಾಗಲೂ ನನ್ನ ಹೃತ್ಕುಹರವನ್ನು ಬಿಟ್ಟು ಅಗ್ಲಾಡನು.

ಹರಿಣಿ :—ಅದಾರು ಅವನು?

ಮೇದಿನಿ :—ಏಕೆ? ಕೇಳಿ, ಬಿದ್ದು ಬಿದ್ದು ನಗಬೇಕೆಂದೋ?

ಹರಿಣಿ :—ಇಲ್ಲ, ನಗುವುದಿಲ್ಲ; ದಿಟವಾಗಿಯೂ ಇಲ್ಲ.

ಮೇದಿನಿ :— (ಕೊರಳನ್ನು ಕೊಂಕಿಸಿ) ಹಾಗಾದರೆ, ಹೇಳಲೋ, ನನ್ನ ಸ್ವಾಮಿಯ ಹೆಸರನ್ನು ಸಂಕೋಚವಿಲ್ಲದೆ, ನಿರ್ಲಜ್ಜೆಯಿಂದ, ಹೇಳಿಯೇ ಬಿಡಲೋ? ಕೇಳು, ಕೇಳು, ಪಾಪ! **ಶ್ರೀಯುತ ಜ್ಞಾನಸಾರ ಚಕ್ರವರ್ತಿ.**

ಹರಿಣಿ :—ಅಬ್ಬಬ್ಬಾ! ಅವನೇ! ಎಷ್ಟುದ್ದದ ಹೆಸರು? ಬಲು ದೊಡ್ಡವನೇಸರಿ!

ಮೇದಿನಿ :—ಮೊದಲೇ ಹೇಳಲಿಲ್ಲವೆ, ನೀನು ಮರುಳೆಯೆಂದು! ನನ್ನ ಸ್ವಾಮಿಯ ಹೆಸರು ಇಷ್ಟೇ ಅಲ್ಲ; ಇನ್ನೂ ಎಷ್ಟೆಷ್ಟೋ ಇರುವುವು! ಅವನ್ನೆಲ್ಲಾ ವಿವರಿಸಿದರೆ, ನಿನ್ನ ತಲೆಯೇ ಹಾರಿ ಹೋಗುವುದು.

ಹರಿಣಿ :—ಹೋಗಲಿ ಅವನನ್ನು ನಾನೂ ನೋಡಲಾಗುವುದೇ?

ಮೇದಿನಿ :—ಅದೇಕದೇಕೆ?

ಹರಿಣಿ :—"**ವಂದನೀಯಾಃ ಖಲುಗುರವಃ**" ಎಂಬ ನ್ಯಾಯವಿರುವುದಲ್ಲವೇ? ನಿನ್ನ ಸ್ವಾಮಿ ನನಗೂ ಪೂಜ್ಯನೇ!

ಮೇದಿನಿ :—ಅದೇನೆನ್ನುವೆ, ಜಗತ್ತೇ ಪೂಜಿಸುತ್ತಿರುವುದು; ಆದರೂ ನಿನಗೀಗಳೇ ಗೋಚರವಾಗಲಾರನು!

ಹರಿಣಿ :—ಕಾರಣವೇನು?

ಮೇದಿನಿ :—ನನ್ನ ಸ್ವಾಮಿ ಲೋಕಾರಾಮನು; ನಿತ್ಯಯೌವನಸಂಪನ್ನನು, ನಿಷ್ಕಲಂಕನು, ಮತ್ತೆ ಆನಂದಸ್ವರೂಪನು! ಪವಿತ್ರ ಹೃದಯವೆಂದು ತಿಳಿವವರೆಗೂ ಆತನು ಆರಿಗೂ ಕಾಣಲಾರನು.

ಹರಿಣಿ :—(ಕುತೂಹಲದಿಂದ) ನನ್ನ ಮನವೊ? ಹೇಗಿರುವುದು? ಅಪವಿತ್ರುವೇ? ನನ್ನ ಸ್ವಭಾವವು ಹೇಗಿರುವುದು? ಅದೂ ಕಲಂಕಿತವೇ?

ಮೇದಿನಿ:—(ಅಸ್ಫುಟಾಕ್ಷರಗಳಿಂದ)ಇನ್ನೂ.. ಸಂಸ್ಕಾರ..ಬೇಕು.

ಹರಿಣಿ :—ಏನು, ಏನೆಂದೆ? ಸಂಸ್ಕಾರ! ಆವ ಭಾಗದಲ್ಲಿ?

ಮೇದಿನಿ :—ಇಂದ್ರಿಯದಮನವಿಚಾರದಲ್ಲಿ—

ಹರಿಣಿ :—(ಕಂಪಿತಸ್ವರದಿಂದ) ಏನು ಹೇಳಿದೆ? ಅಕ್ಕಾ! ಇಂದ್ರಿಯದಮನವಿಚಾರದಲ್ಲಿ ನನ್ನ ಚಿತ್ತವು ಇನ್ನೂ ಅಸಂಸ್ಕೃತವೇ? ನನ್ನನ್ನು ವಿಷಯಾಧೀನೆಯೆಂದರಿತೆಯಾ?

ಮೇದಿನಿ :—ಹಾಗೆ ಹೇಗೆ ಹೇಳಲಿ? ಹೂ! ಅಮರನಲ್ಲಿ ಪ್ರೀತಿಯೇಕೆ?

ಹರಿಣಿ :—ಮತ್ತಾರಲ್ಲಿ ನನಗೆ ದ್ವೇಷವಿರುವುದು? ಈ ವಿಶ್ವವೇ ನನಗೆ ಪ್ರೀತ್ಯಾಸ್ಪದವಾಗಿ ಕಾಣುವುದು! ನಾನು ಆರನ್ನೂ ಅನಾದರಿಸಲಾರೆನು; ಪ್ರತಿಪ್ರಾಣಿಯೂ ನನಗೆ ಪರಮಾತ್ಮಸ್ವರೂಪವಾಗಿಯೇ ಕಾಣುತ್ತಿರಲು ನಾನೆಂತು ಅವನನ್ನು ಕಡೆಗಣಿಸಲಿ? ಅಕ್ಕಾ! ವಿಚಾರ ಮಾಡು; ನೀನು ಗಂಗಾಧರನನ್ನು ಪ್ರೀತಿಸುವಂತಲ್ಲವೇ ನಾನೂ ಅಮರನನ್ನು?

ಮೇದಿನಿ :—ಗಂಗಾಧರನು ಶುದ್ಧಮೂರ್ಖನು; ಅವನ ವಿರೋಧಭಾವನೆಗೆ ತಿರಸ್ಕಾರವೂ ನೈಜಭ್ರಾತೃಸ್ನೇಹಕ್ಕೆ ಪುರಸ್ಕಾರವೂ ಇದ್ದೇ ಇರುವುವು.

ಹರಿಣಿ :—ಅಹುದೋ? ಅವರಿಬ್ಬರಲ್ಲಿ ಭೇದವೇಕೆ? ನಿನಗೀ ವಿಪರೀತಕಲ್ಪನೆಗೆ ಹೇತುವಾವುದು?

ಮೇದಿನಿ :—ಬೇಸರಿಸಬೇಡ! ಹರಿಣಿ! ಇಹಜೀವನವೇ ಅಸ್ಥಿರವು; ಪಾರತ್ರಿಕವು ಸರ್ವರಿಂದಲೂ ಸಂಗ್ರಹಿಸಲ್ಪಡಬೇಕು. ಆದುದರಿಂದ ಕೇಳು. ಅಮರನು ನಿನ್ನಲ್ಲಿ ಪ್ರಣಯಿ! ಆತನ ಪ್ರಣಯೋನ್ಮಾದರೋಗಕ್ಕೆ ನೀನೇ ಹೇತು!! ಅಷ್ಟೇ ಅಲ್ಲ! ನೀನು ಆ ನಿಷ್ಕಂಟಕವಾದ ಆನಂದಧಾಮವನ್ನುಳಿದು ಮಾಯಾಜಾಲದಲ್ಲಿ ಸಿಕ್ಕಿರುವ ಮರುಳೆ!!! ಹೀಗಾದುದೇಕೆ?

ಹರಿಣಿಗೆ ಕಣ್ಣುಗಳಲ್ಲಿ ನೀರು ಸುರಿಯತೊಡಗಿತು. ವಾಕ್ಛಕ್ತಿ ಲೋಪವಾಯ್ತು. ನಿಟ್ಟುಸಿರುಬಿಟ್ಟು ನೆಲವನ್ನೇ ನೋಡುತ್ತ ಕುಳಿತಳು.

ಮೇದಿನಿ :—(ಹರಿಣಿಯ ಕೈಯನ್ನು ಹಿಡಿದುಕೊಂಡು ಕಾತರ ಸ್ವರದಿಂದ) ತಂಗಿ! ಇದೇಕಿಷ್ಟು ವ್ಯಥೆಪಡುವೆ? ನನ್ನ ನಿಷ್ಠುರ ವಾಕ್ಯವನ್ನು ಸಹಿಸದೆ ಅಳುವೆಯಾ? ತಾಯಿಾ! ಕ್ಷಮಿಸು! ನನ್ನ ಅಪರಾಧವೆಷ್ಟಿದ್ದರೂ ಕ್ಷಮಿಸು!! ನಿನ್ನ ಸುಖದುಃಖಗಳಲ್ಲಿ ಸಹಭಾಗಿನಿಯಾದ ಅಕ್ಕನೆಂದು ನನ್ನನ್ನು ಭಾವಿಸು !

ಹರಿಣಿ :—(ನಿಟ್ಟುಸಿರುಬಿಟ್ಟು) ಭಗಿನಿ! ನನ್ನ ಸ್ಥಿತಿ, ಗತಿ, ವಿಚಾರ, ಇವುಗಳೆಲ್ಲವೂ ಶೋಚನೀಯವೇ ಸರಿ! ನಾನು ಇಲ್ಲಿಗೆ ಹೇಗೆ ಬಂದೆನೆಂಬುದೂ ಆನಂದಧಾಮತ್ಯಾಗವೇತರಿಂದಾಯ್ತೆಂಬುದೂ ಈಗಳೇ ಹೊರಪಡುವಂತಿಲ್ಲ. ಅಜ್ಞಾತವಾಸದಲ್ಲಿ, ಅಂತಸ್ತಾಪದಲ್ಲಿ, ಅಹೋರಾತ್ರಿಯೂ ಕಳವಳಿಸುತ್ತಿರುವ ನನ್ನ ಅವಸ್ಥೆ, ಅಂತರ್ಯಾಮಿಯಾದ ಆ ಭಗವಂತನಿಗೆ ಮಟ್ಟಕ್ಕೇ ತಿಳಿದಿರುವುದು. ತಾಯಿಾ! ದುಷ್ಕಾಮುಹತರಿಂದ ವಂಚಿತೆಯಾಗಿ ಸ್ಥಾನಭ್ರಷ್ಟತೆಯನ್ನು ಹೊಂದಿದರೂ, ಭಗವತ್ಕೃಪೆಯಿಂದ ಧರ್ಮಾನುಬಂಧದಲ್ಲಿಯೂ ದೇಹಾನುಬಂಧದಲ್ಲಿಯೂ ಕೇವಲವಾಗಿ ಆಪ್ತರಾದ ಭಗಿನೀಭ್ರಾತೃಗಳ ಮಹಾಶ್ರಯವೇ ದೊರೆತಿರುವುದಕ್ಕಾಗಿ ನಾನು ಆನಂದಿಸುವೆನು. ನಿಮ್ಮ ಆಶ್ರಯವು ದೊರೆಯದೆ, ನಾನು ಮಾಯಾಜಾಲದಲ್ಲೇ ಸಿಕ್ಕಿ ಬೀಳುವಂತಾಗಿದ್ದರೆ, ಜೀವನು ನನ್ನೀ ದೇಹವನ್ನು ಎಂದೋ ಬಿಟ್ಟುಹೋಗುತ್ತಿದ್ದನು! ಇಷ್ಟಾದರೂ, ಶಾಂತವಾಗದಾ ದುಷ್ಟಚಿತ್ತವು, ಮತ್ತಾವಾವ ಕಷ್ಟನಷ್ಟಗಳನ್ನು ತಂದೊಡ್ಡುವುದರಲ್ಲಿರುವುದೋ ತಿಳಿಯೆನು! ಆಗಲಿ; ನನ್ನ ಅಭ್ಯಾಸಬಲದಿಂದ ಸ್ಥಿರೆಯಾಗಿ, ಬರುವ ಕಷ್ಟಸುಖಗಳನ್ನು ನಿರೀಕ್ಷಿಸುತ್ತಿರುವೆನು.

ಮೇದಿನಿ :—ತಾಯಿಾ! ನನ್ನಲ್ಲಿ ಅಮರ್ಷವನ್ನು ತೋರಬೇಡ! ನನಗೆ ಅವರ ಸ್ವಭಾವವು ಚೆನ್ನಾಗಿಯೂ ತಿಳಿದಿರುವುದು. ಆದರೆ, ಅವರಲ್ಲಿ ಸಂಪೂರ್ಣವಾದ ನಂಬುಗೆಯನ್ನಿಟ್ಟಿರುವ ಅಣ್ಣನಿಗೆ ಇದನ್ನು ಹೇಳಿದರೂ ನಂಬಲಾರನೆಂದೇ ಶಂಕಿಸುತ್ತಿರುವೆನು.

ಹರಿಣಿ :—ಮೇದಿನಿ! ನೀನು ನನಗೆ ಹಿತವನ್ನು ಕೋರುವಳಾದರೆ, ಆವುದನ್ನೂ ಹೊರಗೆಡಹದಿರಬೇಕು! ಅವರಲ್ಲಿ ನಮಗೆ ಸ್ವಲ್ಪಸಂದೇಹವುಂಟಾದಹಾಗೆ ತಿಳಿದರೂ ನಮಗೆ ಅವರಿಂದ ಹಾನಿ ತಪ್ಪದು. ತಿಳಿದಿರಲಿ!

ಸೌದಾಮಿನಿ :—ಹರಿಣಿ ! ತಿಳಿದುತಿಳಿದೂ ಆ ಅತ್ಯಾಚಾರಿಗಳನ್ನು ಬಳಿಗೇಕೆ ಬರಗೊಡಿಸುವೆ? ತಿರಸ್ಕರಿಸಿ ದೂರದಿಂದಲೇ ತೊಲಗಿಸ ಬಾರದೇ?

ಹರಿಣಿ :—(ಮನೋವ್ಯಥೆಯನ್ನು ಸೂಚಿಸುವಂತೆ ನಗುತ್ತ) ಅಕ್ಕಾ! ನೀನು ಹೇಳುವುದು ಅಬಲಾಸ್ವಭಾವಕ್ಕೆ ತಕ್ಕುದೇ ಸರಿ! ಪರಪುರುಷರನ್ನು ಬಳಿಗೆ ಬರಗೊಡಿಸಬಾರದೆಂಬುದನ್ನು ಎಲ್ಲರೂ ಒಪ್ಪಿಯೇ ತೀರಬೇಕು. ಆದರೆ ನೋಡು! ನನ್ನ ಮನಸ್ಸು ದೃಢವಾಗಿರುವುದು; ಅದಾವಾಗಲೂ, ಆರಿಂದಲೂ ಹೇಗೂ ಕದಲುವಂತಿಲ್ಲ. ಅಲ್ಲದೆ ಜನರ ಸ್ವಭಾವವನ್ನೂ ಗತಿಯನ್ನೂ ಚೆನ್ನಾಗಿ ಗ್ರಹಿಸುವಷ್ಟು ಶಕ್ತಿ ನನ್ನಲ್ಲಿ ಆವಾಗಲೂ ಜಾಗ್ರದವಸ್ಥೆಯಲ್ಲಿಯೇ ಇರುವುದು. ಆ ಶಕ್ತಿಯೇ ಈಗ ನನ್ನನ್ನು ಇಷ್ಟು ಅನರ್ಥಪರಂಪರೆಗಳಿಂದ ಪಾರಾಗಿಸಿಯೂ, ಎಷ್ಟು ಗಂಡಾಂತರಗಳಲ್ಲಿದ್ದಾಗಲೂ ಸ್ಥಿರಭಾವನೆಯಿಂದಿರುವಂತೆಯೂ ಮಾಡುತ್ತಿರುವುದು. ನನ್ನ ಆತ್ಮರಕ್ಷಣೆಗೂ ಧರ್ಮಪ್ರತಿಪಾಲನೆಗೂ ತಕ್ಕ ಆಯುಧವು ನನ್ನಲ್ಲಿ ಸುರಕ್ಷಿತವಾಗಿಯೇ ಇರುವುದು. ವಿಾರಿ ಬಂದವರನ್ನು ಅದು ಶಿಕ್ಷಿಸುವುದಕ್ಕೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವುದಕ್ಕೂ ಸಿದ್ಧವಾಗಿರುವುದೆಂದು ದೃಢವಾಗಿ ನಂಬು!

ಅಕ್ಕಾ! ಹೆಂಗಸಿಗೆ ಇಷ್ಟರ ಸಾಹಸವು ಕೂಡದೆಂದು ಹೇಳುವೆ? ಆದರೆ ಆಲೋಚಿಸಿನೋಡು! ನಾನು ವಿದ್ಯಾವ್ಯಾಸಂಗದ ನೆಪದಿಂದ ಮತ್ತೆಲ್ಲಿಗಾದರೂ ಹೋಗದೆ, ಇದ್ದಲ್ಲಿಯೇ ಇದ್ದುಕೊಂಡಿದ್ದಪಕ್ಷವಲ್ಲಿ ನನಗೀ ಪ್ರಾಪಂಚಿಕಸ್ಥಿತಿಯೇ ತಿಳಿಯುತ್ತಿರಲಿಲ್ಲ! ಈಗ ಹಾಗಲ್ಲ; ನನ್ನ ವ್ಯಾಸಂಗಕಾಲದಲ್ಲಿ ಸಹಾಧ್ಯಾಯಿನಿಯರ ಸ್ಥಿತಿ ಹೇಗಿದ್ದಿತೆಂಬುದನ್ನೂ, ಅವರ ಸ್ಥಿತಿಯೂ ಪ್ರಕೃತಿಧರ್ಮವೂ ಆವ ಬಗೆಯಲ್ಲಿದ್ದುವೆಂಬುದನ್ನೂ ಅವಿಚಾರಿಗಳಾದವರ ಸಹವಾಸಬಲವು, ಆವಾವ ಹಾನಿಯನ್ನುಂಟು ಮಾಡುವುದೆಂಬುದನ್ನೂ ಆಗಲೇ ನಾನು ಚೆನ್ನಾಗಿ ಪರಿಶೀಲಿಸಿರುವೆನು. ನಾನು ಅಲ್ಲಿ ಕೇವಲಭಾಷಾಭ್ಯಾಸಕ್ಕಾಗಲೀ ಕಲಾಭ್ಯಾಸಕ್ಕಾಗಲೀ ಪರಗೃಹವಾಸಮಾಡುತ್ತಿದ್ದೆನೆಂದೆಣಿಸಬೇಡ! ಅಲ್ಲಿಗೆ ನಾನು ಹೋಗು

ವಾಗಲೂ, ಹೋದಮೇಲೆಯೂ, ನನ್ನನ್ನು ಜಯಂತನು ಅಡಿಗಡಿಗೆ ಪತ್ರಮೂಲಕವಾಗಿ ಎಚ್ಚರಿಸುತ್ತಿದ್ದಂತೆ, ನಾನು ವಿದ್ಯಾವಿಚಾರದಲ್ಲಿ ಎಷ್ಟು ಶ್ರದ್ಧೆಯನ್ನು ವಹಿಸಿದ್ದೆನೋ, ಅದಕ್ಕೆ ದ್ವಿಗುಣವಾಗಿ, ವಸ್ತು ವಿಚಾರವಿಮರ್ಶೆಯಲ್ಲಿಯೂ ಮನವನ್ನು ನೆಲೆಗೊಳಿಸಿದೆನು. ಪ್ರತಿವಸ್ತುವಿನ ಮೂಲಸ್ವರೂಪ, ಪರಿವರ್ತನಾಕ್ರಮ, ಸಹವಾಸಫಲ, ಇತ್ಯಾದಿಗಳನ್ನರಿಯಲು, ಹೆಚ್ಚುಹೆಚ್ಚಾಗಿ ಪ್ರಯತ್ನಿಸಿದೆನು. ಎಂತಹ ಉತ್ಕಟಾವಸ್ಥೆಯುಂಟಾದ ವೇಳೆಯೂ ಮುಖವಿಕಾರವಾಗದಂತೆ ಎಚ್ಚತ್ತೇ ಮಂದಸ್ಮಿತದಿಂದಿರುವುದನ್ನು ಅಭ್ಯಸಿಸಿದೆನು. ಈ ಅಭ್ಯಾಸವೇ ನನಗೀ ಜ್ಞಾನಪ್ರಪಂಚಸ್ವರೂಪಜ್ಞತೆಗೆ ಮೂಲಾಧಾರವು. ತಾಯಿ! ಹಾಗೆ ನಾನು ಪ್ರಯತ್ನಪಡದೆ, ಜಯಂತನ ಹಿತಸೂಚನೆಗೆ ಒಳಪಡದೆ, ದುಸ್ಸಹವಾಸದಲ್ಲಿ ಬಿದ್ದು ವಿಷಯವಾಸನಾವೇಗಗಳಿಗೆ ಒಳಗಾಗಿದ್ದ ಪಕ್ಷದಲ್ಲಿ, ನನ್ನ ಸಹಾಧ್ಯಾಯಿನಿಯರಲ್ಲಿ ನಾಸ್ತಿಕೆಯರಾಗಿ ಅಡ್ಡಹಾದಿಯನ್ನು ಹಿಡಿದಿರುವ ಕೆಲವರಂತೆಯೇ ಮದಾಂಧತೆಯಿಂದ, ನಮ್ಮ ವಿದ್ಯಾಭ್ಯಾಸವನ್ನೇ ಹೇಯವೆನ್ನಿಸಿ, ವಿದ್ಯಾವತಿಯರೆಲ್ಲರೂ ಅವಿಚಾರಾಂಧೆಯರೆಂಬ ಅಪಕೀರ್ತಿಗೂ ಪಕ್ಕಾಗಿ ಸ್ತ್ರೀಜನ್ಮವನ್ನೇ ಹಾಳುಮಾಡಿಕೊಳ್ಳುತ್ತಿದ್ದೆನು.

ಮೋದಿನಿ! ಇನ್ನು ಅಮರಗಂಗಾಧರರನ್ನು ನಾನು ನಿಷ್ಠುರೋಕ್ತಿಯನ್ನಾಡಿ ದೂರತೊಲಗಿಸದಿರುವುದರ ಕಾರಣವನ್ನೂ ಹೇಳುವೆನು ಕೇಳು. ಅವರ ಸ್ಥಿತಿಯನ್ನು ನೀನು ತಿಳಿದಿರುವುದಕ್ಕೂ ಹೆಚ್ಚಾಗಿ ನಾನು ಬಲ್ಲೆನು. ಕಾಲವೂ ಕರಣವೂ ಕೈಗೂಡದೆ, ಪ್ರತ್ಯಕ್ಷಪ್ರಮಾಣಕ್ಕೆ ಸಮಯವುಂಟಾಗದೆ, ದುಡುಕಿದರೆ ಹಾನಿಯಲ್ಲದೆ ಅಭ್ಯುದಯವಿಲ್ಲ! ಒಂದುವೇಳೆ ನಾನು ಪಾರಾಗುವೆನಾದರೂ, ದುಷ್ಕರ್ಮಿಗಳಿಂದ ನನ್ನ ಆಪ್ತೇಷ್ಟರಾದ ಪೂಜ್ಯವರ್ಗವು ಹಾನಿಗೆ ಗುರಿಯಾಗದೆ ಇರಲಾರದೆಂದು ಭಾವಿಸುವೆನು. ಹಾಗಾಗುವುದನ್ನು ನಾನು ನೋಡಿ ಹೇಗೆ ಸಹಿಸಲಾಗುವುದು? ಅಲ್ಲದೆ, ಇಂದು ನಾನು ಅವನನ್ನು ಆಶಾಭಂಗದಿಂದ ಕೆರಳಿಸಿ ಹೊರಸಾಗಿಸಿದೆನಾದರೆ, ನಾಳೆಯೇ ಆ ಕಾಮಮೋಹಿತರು ಉನ್ಮಾದಗ್ರಸ್ತರಾಗಿ ಉಚ್ಚನೀಚವೆಂದೆಣಿಸದೆ ಆವಾವ ಪರಿಯಲ್ಲಿ ನುಗ್ಗಿಬೀಳು

ವರೋ ಎಷ್ಟು ಅಬಲೆಯರ ಆಪತ್ತಿಗೆ ಕಾರಣರಾಗುವರೋ ಎಂಬ ಶಂಕೆ! ಇದಲ್ಲದೆ ನನ್ನಲ್ಲಿ ಅತ್ಯಧಿಕವಾಗಿ ವಿಶ್ವಾಸವನ್ನಿರಿಸಿರುವದರಿಂದ ಅದೇ ವಿಶ್ವಾಸವನ್ನೇ ಮುಂದಿಟ್ಟು ಅದನ್ನು ಸ್ಥಿರಪಡಿಸಲು ಅಡ್ಡದಾರಿಯಲ್ಲಿ ತಿರುಗುವುದನ್ನು ಬಿಡಬೇಕೆಂದೂ ಸರಿಯಾದ ದಾರಿಗೆಬಂದು ವಿಹಿತ ಮಾರ್ಗದಲ್ಲಿ ಗೃಹಸ್ಥಧರ್ಮವನ್ನು ಕೈಗೊಳ್ಳಬೇಕೆಂದೂ ಅವನಿಗೆ ಉಪದೇಶಿಸುವೆನು. ಇದಕ್ಕೆಂದೇ ನಾನು ಅವನಿಗೆ ಅವಧಿಯನ್ನು ಕೊಡುವುದು; ಆಶಾಪಾಶದಿಂದ ಬಿಗಿದು ಹಾಕಿ, ಅವಧಿಯೊಳಗಾಗಿ ನಡೆನಳಿ ಶುದ್ಧರೂಪಕ್ಕೆ ಬರಬೇಕೆಂದೂ, ಹೃದಯವು ಶಾಂತಸ್ಥಿತಿಗೆ ಬಂತೆಂಬ ನಂಬುಗೆಯುಂಟಾಗುವಂತೆ ಮಾಡಬೇಕೆಂದೂ ಹೇಳುವುದು. ಮತ್ತೆ ಬಂದವನಲ್ಲಿ ಏನಾದರೊಂದು ಶಂಕಾಪವಾದವನ್ನು ಹೊರಿಸಿ, ಮತ್ತೆ ಹೊರಡಿಸಿ ಕಾಲವನ್ನು ದೂಡುತ್ತಿರುವೆನು.

ಮೇದಿನಿ :—ಹರಿಣಿ! ನನಗಷ್ಟರ ಧೈರ್ಯಸಾಹಸಗಳೂ ಅಭ್ಯಾಸ ಬಲವೂ ಇಲ್ಲ. ನಿನ್ನ ಅಭಿಮತವು ನ್ಯಾಯವಾದುದು. ಆವುದನ್ನೂ ತಾಳ್ಮೆಯಿಂದಲೇ ಕೊನೆಗಾಣಿಸುವುದು ಮೇಲು. ಕಾಲವು ಬಂದಲ್ಲದೆ ಅಕಾಲದಲ್ಲಾವುದೂ ಫಲಿಸಲಾರದು. ಅದಿರಲಿ, ಆ ಕುಲಟೆಯರಲ್ಲಿ ಪ್ರಸಂಗವನ್ನಾದರೂ ಬಿಡಬಾರದೇ ?

ಹರಿಣಿ :—ಕುಲಟೆಯರಾಗಲು ಕಾರಣರಾರು ? ಅವರೇ ಕುಲಟೆಯರಾದರೋ ? ಅವಿಚಾರಿಗಳಾದ ಪುರುಷರ ದುರ್ಬೋಧೆಯಿಂದ ಹಾಗೋ ? ಅವರು ವಿವೇಕಿಗಳಾಗಿರುತ್ತಿದ್ದರೆ, ಅವರಲ್ಲಿ ವಿದ್ಯಾಗಂಧವು ಸುಶಿಕ್ಷಿತವಾಗಿರುತ್ತಿದ್ದರೆ, ಅವರೇಕೆ ತಮ್ಮ ಭಗಿನಿಯರ ಜೀವನಸರ್ವಸ್ವವನ್ನೂ ಅತಲಜಲದಲ್ಲಿ ಕೆಡಹುತ್ತಿದ್ದರು ? ಅವರ ದುರಾಶಯದ ಮಹಾಫಲವೇ ಅಲ್ಲವೇ, ನಮ್ಮ ಸತೀಕುಲದ ಯಶಶ್ಚಂದ್ರಿಕೆಗೆ ರಾಹುವಾಗಿ ಪರಿಣಮಿಸಿರುವುದು. ಅಕ್ಕಾ! ಇಂದು ನೀನು ನನ್ನನ್ನು ಮಾಸವೀವ್ಯಕ್ತಿಯೆಂದು ಹೇಳಲಾರೆ! ದಿಟ, ನಾನು ಭಯಂಕರವಾದದಾಸವೀವ್ಯಕ್ತಿಯಾಗಿರುವೆನೆಂದೇ ಭಾವಿಸಬಹುದು! ಆಗಲಿ, ನೀನು ವಿರಕ್ತೆಯಾಗಿ ಸರ್ವಸಂಗಪರಿತ್ಯಾಗಮಾಡಿರುವೆ! ನಿನಗೆ ಇತರರ ವಿಚಾರವಾವುದೂ ಬೇಡವಾಗಿರುವುದು! ಆದರೆ, ನನಗೆ ಹಾಗಲ್ಲ; ಈ ನಮ್ಮ ಮಾತೃಭೂಮಿ

ಯಲ್ಲಿ ಆವ ಮಹಾಕಾರ್ಯಕ್ಕೆಂದು ನಾನು ನಿಯಮಿತೆಯಾಗಿ ಜನ್ಮ ಧಾರಣಮಾಡಿರುವೆನೆಂಬುದೂ, ಈಗ ನಾನು ಮಾಡತಕ್ಕ ಕೆಲಸಗಳಾ ವಾವುವೆಂಬುದೂ ನನ್ನ ಮನದಲ್ಲಿ ಚೆನ್ನಾಗಿ ನರ್ತನಮಾಡುತ್ತಿರುವುವು.

ಮೋದಿನಿ :—(ಸಂಕುಚಿತಸ್ವರದಿಂದ) ಹೇಗೆ ?

ಹರಿಣಿ :—ಹೇಗೂ ? ಅಕ್ಕಾ ! ನಮ್ಮ ಸೋದರಿಯರ ಸೌಜನ್ಯ ದೌರ್ಜನ್ಯಗಳಿಗೆ ಮೂಲಸ್ಥಾನವಾವುದು ? ಜನ್ಮದೊಡನೆಯೇ ಸೌಜನ್ಯ ದೌರ್ಜನ್ಯಗುಣಗಳೂ ಸೇರಿಬರುವುವೆಂಬೆಯೋ ? ಹಾಗೆ ಹೇಳುವೆ ಯಾದರೆ ಅಜ್ಞಾತ್ವವೆಂದೇ ನನ್ನ ಭಾವನೆ ! ಅವರ ಹುಟ್ಟಿನೊಡನೆಯೇ ದುಷ್ಟತೆಯೂ ಹುಟ್ಟಲಿಲ್ಲ. ಅವರ ಒಳವಿಯಲ್ಲಿ, ಅವರಿಗಾದ ತಾಯ್ತಂದೆ ಗಳ ಶಿಕ್ಷಣಾಶಿಕ್ಷಣಗಳ ಅಧ್ಯವಸಾಯದಲ್ಲುಂಟಾದ ಫಲಾನುಭವವೇ, ಅವರಿಗಾದ ಸಹವಾಸಬಲವೇ, ಸೌಜನ್ಯದೌರ್ಜನ್ಯಗಳಿಗೆ ಕಾರಣವಲ್ಲದೆ ಬೇರೆಯಿಲ್ಲ. ಬಾಲ್ಯದಿಂದಲೂ ಮತ್ತರಾಗುವಂತೆ ಮುದ್ದಿಸಿ, ಮನಸ್ಸು ಬಂದಂತೆ ಬಳೆಯಿಸಿ, ಆಮೇಲೆ ಅವರು ಕೆಟ್ಟು ಅವಿಧೇಯರಾಗಿ ತಿರುಗು ವಂದು ಮಿಡುಕುವುದೇಕೆ ? ಅಂತಹರನ್ನು ದ್ವೇಷಿಸಿ, ಶಪಿಸಿ, ಹೊಂದುವ ಲಾಭವೇನು ? ಅವರ ಪಾಪಾಚರಣೆಗೆ ಕಾರಣರಾರು ? ಆರು ಪಾತಕದಲ್ಲಿ ಪ್ರಥಮಸನ್ಮಾನಕ್ಕೆ ಪಾತ್ರರು ? ತಾಯಿಯಾ ! ಅದೂ ಇರಲಿ, ಅದು ಆರ ದೌರ್ಭಾಗ್ಯವಿಶೇಷವೇ ಆಗಿದ್ದರೂ, ಹೇಗೇ ಇದ್ದರೂ ಇರಲಿ ; ಪೂರ್ವದ ನಮ್ಮ ಆರ್ಯರಮಣಿಯರ ಆಶ್ರಯಸ್ಥಾನವೆನ್ನಿಸಿ, ದಿಜ್ಮಂಡಲವನ್ನೇ ಬೆಗೆಗೊಳ್ಳುವಂತೆ ಮಾಡಿದ್ದ ಪೂಜ್ಯಭಾವನಾಲೋಕವು ಕ್ಷಯರೋಗ ದಿಂದ ಮಲಿನವಾಯ್ತು !! ಅಶಿಕ್ಷಣದ ಪ್ರತಿಫಲಸ್ವರೂಪೆಯರಾದ ಮತ್ತ ಯುವತಿಯರ ದೆಸೆಯಿಂದ ನಮ್ಮ ಸ್ತ್ರೀಜನತೆಯೇ ಮಿಥ್ಯಾಲಾಪದ ದೌರ್ಜನ್ಯಕ್ಕೆ ಗುರಿಯಾಗುವ ದುಷ್ಕಾಲವೆನ್ನಿಸಿತು !!! ಮಾಡುವು ದೇನು ? ಮುಂದಾದರೂ ಆ ಅವಿಚಾರಿಣಿಯರೆಚ್ಚತ್ತು ಭೂಭಾರಭೂತ ವಾಗಿರುವ ತಮ್ಮ ಗತಜೀವಿತಕ್ಕಾಗಿ ಅನುತಾಪಹೊಂದಿ ತಮ್ಮ ಮುಂದಣ ಮಾರ್ಗವನ್ನಾದರೂ ಸಮಾಧಾನ ಸ್ಥಿತಿಯಿಂದ, ಸಾರ್ಥಕ ಪಡಿಸಿಕೊಳ್ಳಬೇಕೆಂಬುದೊಂದೇ ನನ್ನ ಮುಖ್ಯಾಶಯವು. ಇದಕ್ಕಾಗಿ ಆದಷ್ಟು ಶ್ರಮಪಡುವುದೂ ನನ್ನ ಕರ್ತವ್ಯವು.

ಮೋದಿನಿ:—ಉನ್ಮಾದಗ್ರಸ್ತೆಯರನ್ನು ಸನ್ಮಾರ್ಗಕ್ಕೆ ತರುವೆನೆಂಬುದು ಸ್ವಪ್ನಾವಸ್ಥೆಯೇ ಸರಿ!

ಹರಿಣಿ:—(ಆಟೋಪದಿಂದ) ಸ್ವಪ್ನಾವಸ್ಥೆಯೆಂದು ಸಲ್ಲದ ನೀತಿಯುಂದಿರುವುದು ಯುಕ್ತವೇ? ಭಗಿನಿ! ನಿದ್ರಾಯೋಗದಿಂದ ಎಚ್ಚರವಿಲ್ಲದೆ ಮಲಗಿರುವವರು ಜಡರಾಗಿರಬಹುದಾದರೂ, ಎಚ್ಚರವಾಗಿದ್ದೂ ಜಡರಂತಿರುವುದು ನಿಂದನೀಯವಲ್ಲವೇ? ಅವಿವೇಕಾಂಧತೆಯಿಂದ ಪತಿತೆಯರಾಗುವರೆಂದರಿತೂ, ಶಕ್ತ್ಯುಚಿತಪ್ರಯತ್ನದಿಂದ ಅವರನ್ನು ಉದ್ಧರಿಸದೆ ಉಪೇಕ್ಷಿಸಿದೆವಾದರೆ, ಭಗವದಾಜ್ಞೆಗೆ ಪ್ರತಿಕೂಲರಾದ ದೋಷವು, ತಿಳಿವುಳ್ಳ ನಮ್ಮನ್ನಲ್ಲವೇ ಸೇರತಕ್ಕುದು? ಪ್ರವಾಹದಲ್ಲಿಬಿದ್ದು ಅಕಾಲಮೃತ್ಯುವಶರಾಗುತ್ತಿರುವವರನ್ನು ನೋಡಿಯೂ, ಬಲಸಂಪತ್ತಿಯುಂಟಾಗಿದ್ದೂ, ಅಲಸರಾಗಿ ನೋಡುತ್ತಿರುವವರನ್ನು ಆರೂ ಸತ್ಪುರುಷಸಮಾಜದಲ್ಲಿ ಗಣಿಸಲಾರರು! ಆ ನಿರ್ಭಾಗ್ಯೆಯರ ಅಂಧಹೃದಯದಲ್ಲಿ ಅನುತಾಪಜ್ಯೋತಿಯುಂಟಾಗುವವರೆಗೂ ಮಾಡಬೇಕಾದ ಪ್ರಯತ್ನಗಳೆಷ್ಟಿರುವುವೋ ಅಷ್ಟನ್ನೂ ಮಾಡುವೆನು! ಬೇಸರವಿಲ್ಲ; ತಾಯಿ! ಮತ್ತೆಮತ್ತೆ ಹೇಳುವೆನು. ಮುಳಿಯದಿರು! ಇಹಸೌಖ್ಯವೇ ಮುಖ್ಯವಲ್ಲ; ಸ್ವಸುಖವೇ ಪರಮಾರ್ಥವಲ್ಲ!! ದುರಾಚಾರದಿಂದ ಸ್ತ್ರೀಸಂತಾನವನ್ನೇ ಮುಸುಕಿರುವ ಅಪವಾದಾಪದಗಳನ್ನು ನೋಡಿ ಆವ ಮಾತೃಭಕ್ತರು ಸುಮ್ಮನಿರಬಲ್ಲರು?

ಮೋದಿನಿ:—ಹರಿಣಿ! ನಾಯಿಬಾಲಕ್ಕೆ ದಬ್ಬೆಯನ್ನು ಕಟ್ಟುವೆ? ಹುಟ್ಟುಗುಣ ಸುಟ್ಟರೂ ಹೋಗದು!

ಹರಿಣಿ:—(ಕ್ಷುಬ್ಧೆಯಾಗಿ) ಭಗಿನಿ! ಈ ನಿನ್ನ ಮೌಢ್ಯಕ್ಕೇನು ಚಿಕಿತ್ಸೆ? ಹುಟ್ಟುವಂದೇ ನಡೆನುಡಿಯನ್ನೂ ಕಲಿತುಬಂದಿರುವರೇನು? ಆಲೋಚಿಸಿ ಹೇಳು! ಸ್ತ್ರೀವಿಚಾರವಾಗಿ ಕೈಕೇಯಿಯನ್ನೂ ಬಗೆದು ನೋಡು, ಸುಮಿತ್ರೆಯನ್ನೂ ಬಗೆದು ನೋಡು. ಕೈಕೇಯಿಯಲ್ಲಿ ರಾಮನನ್ನು ತಾಪಸನನ್ನಾಗಿ ಮಾಡುವೆನೆಂಬ ಹಠವು ಮೊದಲಿಂದಲೂ ಬಂದುದೋ, ಮಂಥರೆಯ ದುರ್ಬೋಧೆಯಿಂದ ಬಂದುದೋ? ಆ

ದುಸ್ಸಂಕಲ್ಪದ ಬೀಭತ್ಸರೋಗವು ದುಸ್ಸಹವಾಸವಿಲ್ಲದಿದ್ದರೆ ಹುಟ್ಟು ತ್ತಿತ್ತೆ? ಕೈಕೇಯಿಯಲ್ಲಿ ಕರ್ಕಶಸ್ವಭಾವವು ಮಾತೃದ್ವಾರದಿಂದ ಪ್ರಾಪ್ತ ವಾಗಿದ್ದರೂ ಮೊದಲೇಕೆ ಅವಳಿಗೆ ಆ ವಿಧದ ವರ್ತನವೇ ಇರಲಿಲ್ಲ? ಮೊದಲು ರಾಮನಾಗಲೀ ಭರತನಾಗಲೀ ಏನೂ ಹೆಚ್ಚುಕಡಿಮೆಯನ್ನು ಕಾಣೆನು ಎಂದೇಕೆ ಮಂಥರೆಗೆ ಹೇಳುವಳು? ಹಾಗೇನಾದರೂ ಇದ್ದರೆ ರಾಮಾಭಿಷೇಕಸಂಕಲ್ಪವನ್ನು ಅವನ ಜನನಿಯಾದ ಕೌಸಲ್ಯೆಗೆ ಹೇಳದೆ ಕೈಕೇಯಿಗೆ ಹೇಳುವೆನೆಂದು ದಶರಥನೇಕೆ ಹೋದನು? ಸುಮಿತ್ರೆಯಲ್ಲಿ ನೆಲೆಗೊಂಡಿದ್ದ ಶಾಂತಿರಸಪೆತ್ತಲಿಂದ ಬಂದುದು? ಈಗಲಾದರೂ ಹೇಳು! ಶಿಕ್ಷಣೆ, ಅಭ್ಯಾಸ, ಸಹವಾಸ, ಇವುಗಳಲ್ಲವೇನು? ಪುರುಷರ ವಿಚಾರಕ್ಕೆ ವಿಶ್ವಾಮಿತ್ರರನ್ನು ಭಾವಿಸು. ಅವರ ಪೂರ್ವಸ್ಥಿತಿ ಹೇಗಿದ್ದುದು? ಅನಂತರದ ಪರಿವರ್ತನಾಸ್ವರೂಪವೆಂತಾದುದು? ಅವರ ಜನ್ಮಧಾರಣ ವೆಲ್ಲಿ? ಅವರ ನೈಷ್ಠಿಕಕ್ರಿಯೆಯೆಲ್ಲಿ? ಪರಿಭಾವಿಸು. ಹೇಗೆ? ವಿತರಿಂದ? ಅಭ್ಯಾಸ, ಸ್ಥಿರಸಂಕಲ್ಪ, ಸಾಹಸ, ಇವುಗಳೇ ಕಾರಣವಲ್ಲವೇ? ವಸಿಷ್ಠರ ಮೇಲಪಂಕ್ತಿಯೇ ಮೂಲವೆಂದಾಗಲಿಲ್ಲವೇ? ಆ ದೀರ್ಘಪ್ರಯತ್ನ ಫಲದಿಂದಲ್ಲವೇ, ಶಾಪಗ್ರಸ್ತನಾದ ಚಂಡಾಲನೂ ಸಶರೀರಸ್ವರ್ಗಗಾಮಿ ಯಾದುದು? ಇನ್ನೇನನ್ನು ಹೇಳಲಿ? ಭಗೀರಥನ ಬಲವದುದ್ಯಮ ವನ್ನು ಸ್ಮರಿಸು. ಗಂಗಾವತರಣತತ್ತ್ವವನ್ನಾದರೂ ಸಂಗ್ರಹಿಸು. ಅಕ್ಕಾ! ಈಗಳಾದರೂ ತಿಳಿಯಿತೇ? ಮಾನವಪ್ರಯತ್ನಕ್ಕೆ ಅಸಾಧ್ಯ ವಾವುದೂ ಪ್ರಾಯಕವಾಗಿ ಇರಲಾರದೆಂದೂ, ಎಲ್ಲವೂ ಅವರವರ ಉದ್ಯಮಸಂಕಲ್ಪಗಳಲ್ಲಿಯೇ ಪ್ರತಿಫಲಿಸತಕ್ಕುವುಗಳೆಂದೂ ಹೇಳಬಹು ದಲ್ಲವೇ? ಹಾಗೆ ಪುರುಷಪ್ರಯತ್ನವು ಸಹಜಭಾವದಲ್ಲಿದ್ದರೆ, ದೈವ ಪ್ರಯತ್ನವೂ ಸ್ವತಸ್ಸಿದ್ಧವೆಂದೇ ನಂಬಬಾರದೇಕೆ?

ಮೇದಿನಿ ಎದ್ದುನಿಂತಳು; ಅವಳ ನೇತ್ರಯುಗ್ಮಗಳಿಂದ ಹರ್ಷ ಬಾಷ್ಪಗಳಿಳಿಯುತ್ತಿದ್ದುವು. ಹರಿಣಿಯ ಕೈಯನ್ನು ಹಿಡಿದುಕೊಂಡು ಗದ್ಗದಸ್ವರದಿಂದ ಹೀಗೆ ಹೇಳಿದಳು. "ಹರಿಣಿ! ನನ್ನ ಮೂಢಭಾವನೆ ದೂರವಾಯ್ತು! ಸ್ವಾಭಿಮಾನದ ಜಡರೋಗವಿಂದು ನನ್ನನ್ನು ಬಿಟ್ಟು ಹಾಯವಾಯ್ತು!! ಇಂದಿನ ನಿನ್ನ ವಿಚಾರವಿಮರ್ಶನವು ನನ್ನ ಪ್ರತ್ಯಂಗ

ಗಳಲ್ಲಿಯೂ ವ್ಯಾಪಿಸಿ, ಅತ್ಯಾನಂದವನ್ನುಂಟುಮಾಡುತ್ತಿರುವುದು. ಪ್ರಿಯಸಹೋದರಿ! ನೀನೇ ದಿಟವಾದ ಜ್ಞಾನಪಾತ್ರವೆಂದು ಪ್ರಮಾಣ ಮಾಡುವೆನು. ಭಗವಂತನು ಎಲ್ಲೋ ಒಬ್ಬೊಬ್ಬರಿಗೆಂಬಂತೆ ಇಂತಹ ಶಕ್ತಿಸಾಮರ್ಥ್ಯಗಳನ್ನು ಕೊಟ್ಟು ಅವರನ್ನು ಬಲವದುದ್ಯಮದಲ್ಲಿ ತೊಡಗಿಸುವನೆಂದೂ ಅಂತಹ ಯೋಗವು ಎಲ್ಲರಿಗೂ ಬರಲು ಸಾಧ್ಯವಲ್ಲವೆಂದೂ ಈಗ ತಿಳಿದೆನು. ಇನ್ನು ವಿಳಂಬವೇಕೆ? ನಿನ್ನ ಪ್ರತಿಕಾರ್ಯಗಳಲ್ಲಿಯೂ, ನಿನ್ನ ಸಹಚಾರಿಣಿಯಾಗಿರತಕ್ಕವಳೆಂದು ಭಾವಿಸಿ, ನನ್ನನ್ನು ಕಾರ್ಯದಲ್ಲಿ ನಿಯೋಜಿಸು! ದೇಶಸೇವಾವ್ರತದಲ್ಲೇ ಈ ಜೀವನವನ್ನು ಕೊನೆಗಾಣಿಸುವೆನೆಂದು ಈಗಳಿದೋ ಮಾತೃಸಾಕ್ಷಿಯಾಗಿ ಪ್ರಮಾಣ ಮಾಡುವೆನು.

ಹರಿಣಿ, ಎದ್ದು ಉನ್ಮಾದಿನಿಯಂತಾಗಿ ಮೋದಿನಿಯನ್ನಪ್ಪಿಕೊಂಡಳು; ಪ್ರೀತಿವ್ಯಂಜಕಸ್ವರದಿಂದ "ಅಕ್ಕಾ! ಆದರೆ, ಇಂದೇ ಸುದಿನವು! ಈಗಳೇ ಸುಸಮಯವು!! ಈ ಸಂಕಲ್ಪವೇ ಸಾರ್ಥಕವು!!! ದೃಢವಾಗಿರಲಿ, ನಿನ್ನ ಇಂದಿನ ಪ್ರತಿಜ್ಞೆ! ಬಲವಾಗಿ ಕಟ್ಟು ಭಕ್ತಿಕಂಕಣವನ್ನು!! ತಾಯೀ! ಇನ್ನು ನಡೆ; ಒಮ್ಮೆ ಆ ನಿರ್ಭಾಗ್ಯಸೋದರಿಯರನ್ನು ನೋಡಿ ಬರುವ!" ಎಂದು ಹೇಳಿ ಮೋದಿನಿಯೊಡನೆ ಹೊರಟಳು.

ತೃತೀಯ ಪರಿಚ್ಛೇದ

(ತತ್ತ್ವಬೋಧೆ)

"ಭಲೆ! ಸನ್ಯಾಸಿನಿ, ಭಲೆ!! ಬಲವಾದ ಯೋಗವು! ಏನು ಧೈರ್ಯವೋ? ಈ ಅಲ್ಪವಾಸನೆಗೇ ಹೀಗೆ ತಲ್ಲಣಿಸುವ ನಿನ್ನಿಂದ ಪತಿತೋದ್ಧಾರಮಹಾಕಾರ್ಯವೆಂತು ಸಾಧಿಸಲ್ಪಡಬೇಕು? ಛಿಃ! ಅಧೀರಭಾವವಿನ್ನು ಸಾಕು! ಒಮ್ಮೆ, ಸಂಕಲ್ಪವನ್ನು ಸ್ಮರಿಸು; ಸ್ಥಿರಪ್ರತಿಜ್ಞೆಯಿಂದ ಕಂಕಣವನ್ನು ಕಟ್ಟು!"

"ಇದೋ ತಂಗಿ! ಕಂಕಣವನ್ನು ಬಿಗಿದೆನು. ಇನ್ನೆಂದೂ ಅಸ್ಥಿರೆಯಾಗೆನು. ಇನ್ನು ನಡೆ; ಇದಿರಾಗಿ ನಿಲ್ಲುವ!"

"ಹೋ, ತಾಳು! ಕೂಗದೆ ಇಲ್ಲಿಯೇ ಕೆಲಹೊತ್ತು ನಿಂತು ನೋಡು! ಅವರ ಸ್ವಭಾವಪ್ರಕೃತಿಗಳನ್ನು ತಿಳಿದು ಇದಿರಾಗುವ."

"ಅದೂ ಒಂದು ಕ್ರಮವೇ ಸರಿ."

ಈ ಬಗೆಯ ಉತ್ತರಪ್ರತ್ಯುತ್ತರಗಳು ಮೇಲುಮಾಳಿಗೆಯ ಹಂತದ ಮೇಲೆ ನಿಂತಿದ್ದ ಹರಿಣೀಮೋದಿನಿಯರಿಗೆ ನಡೆಯುತ್ತಿದ್ದುವು. ಮೇಲು ಮಾಳಿಗೆಯ ಕಡೆಯಲ್ಲಿ ದೃಷ್ಟಿಯಿಟ್ಟು ಇಬ್ಬರೂ ನೋಡುತ್ತಿದ್ದರು.

ಮೇಲುಮಾಳಿಗೆಯಮೇಲೆ, ಬೀದಿಯ ಕಡೆಗೆ, ಬೀದಿಯಲ್ಲಿ ತಿರುಗುವರು ಚೆನ್ನಾಗಿ ಕಂಡುಬರುವೆಡೆಯಲ್ಲಿ, ಕುರ್ಚಿಯಮೇಲೆ ಸಮಾನ ವಯಸ್ಕೆಯರಾದ ಕೃಷ್ಣವರ್ಣದ ಸ್ತ್ರೀವ್ಯಕ್ತಿಗಳಿಬ್ಬರು ಕುಳಿತಿದ್ದರು. ಯೌವನಸಮುದದಿಂದ ಹೆಣ್ಣಾನೆಗಳಂತೆ ಮೆರೆಯುತ್ತಿದ್ದ ಆ ಯುವತಿಯರು ಧರಿಸಿದ್ದ ಮಣಿಹೇಮಖಚಿತಾಭರಣಗಳು, ತಮ್ಮ ತಮ್ಮ ಪ್ರಭೆಯಿಂದ ಯುವತಿಯರ ಕೃಷ್ಣತ್ವವನ್ನು ಮರೆಮಾಡಲೆಳಸಿ, ಕೃಷ್ಣಪಕ್ಷದ ತಾರಾರಾಜಿಯಿಂದೆಸೆವ ಗಗನದೇಶವನ್ನು ನೆನೆಪಿಗೆ ತರುತ್ತಿದ್ದುವು. ವಿಶೇಷವರ್ಣನೆಯಿಂದೇನು? ಯುವತಿಯರಲ್ಲಿ ಮೊದಲನೆಯವಳು ಹೆಚ್ಚುಬೆಲೆಬಾಳುವ ಉಡುಗೆತೊಡುಗೆಗಳಿಂದ ಬಗೆಗೊಳ್ಳುತ್ತಿದ್ದಳು. ಎರಡನೆಯವಳು ಕಡಮೆಬೆಲೆಬಾಳುವ ಉಡುಗೆತೊಡುಗೆಗಳಿಂದ ಮೆರೆಯುತ್ತಿದ್ದಳು. ಇಬ್ಬರ ಅಧರಪ್ರದೇಶವೂ ಅಪರಿಮಿತ ಸೇವಿತವಾದ ತಾಂಬೂಲರಾಗದಿಂದ ಕರಿಯಬಣ್ಣಕ್ಕೆ ತಿರುಗಿದ್ದಿತು. ಕೇಶರಾಶಿ ಸುವಾಸಿನಿಯ ತೈಲದಿಂದ ಹದಗೊಳಿಸಲ್ಪಟ್ಟು, ಸೊಗಸಾಗಿ ಕಬರೀಬಂಧವನ್ನು ಹೊಂದಿ ಸರ್ಪಾಕೃತಿಯನ್ನು ತಾಳಿದ್ದಿತು. ಕಬರಿಯ ಸುತ್ತಲೂ ಪರಿಮಳಪುಷ್ಪಮಾಲೆಗಳು; ಇಬ್ಬರ ಹಣೆಯಲ್ಲಿಯೂ ಸಾದಿನ ಚುಕ್ಕೆಗಳು ಇದ್ದು ಕರಿಯ ಹಲಗೆಯಮೇಲೆ ಹೊಡೆದ ಕಬ್ಬುನದ ಮೊಳೆಗಳಂತೆ ಕಾಣುತಿದ್ದುವು. ಇಷ್ಟಾದರೂ, ಇಬ್ಬರ ಮುಖದಲ್ಲಿಯೂ ಆವುದೋ ದುರ್ದಮನೀಯವಾದ ಚಿಂತೆ ನಟ್ಟಿರುವಂತೆ ಕಾಣುತ್ತಿದ್ದಿತು.

ಯುವತಿಯರು ಲೇಪಿಸಿಕೊಂಡಿದ್ದ ಗಂಧವೇ ಪ್ರೇಯಸಿಯನ್ನು ಅಸ್ಥಿರೆಯನ್ನಾಗಿ ಮಾಡಿತೆಂದೂ, ಅದಕ್ಕಾಗಿ ಹರಿಣಿಯ ಪರಿಹಾಸವುಂಟಾಯ್ತೆಂದೂ ಮತ್ತೆ ಹೇಳಬೇಕಾದುದಿಲ್ಲವಷ್ಟೆ?

ಯುವತಿಯರಲ್ಲಿ ಮೊದಲನೆಯವಳು, ತನ್ನ ಸಖಿಯನ್ನು ಕುರಿತು, "ವಿಲಾಸಿನಿ! ನಿನ್ನೆಯೇ ಬರಬೇಕಾಗಿದ್ದಾತನು ಇಂದೂ ಬರಲಿಲ್ಲವೇಕೆ?"

ವಿಲಾಸಿನಿ:—ಭ್ರಮರವಾಲೆ! ಆತನು ಆವುದೋ ತೊಡಕಿನಲ್ಲಿರುವನಂತೆ! ನೀನರಿಯೆಯೇನು?

ಭ್ರಮರೆ:—ಅದಾವುದು?

ವಿಲಾಸಿನಿ:—ಆತನ ಮನಸ್ಸು, ಇಲ್ಲಿರುವವರಲ್ಲೇ ಒಬ್ಬಳಲ್ಲಿ ತಿರುಗಿರುವುದೆಂದೂ, ನಿನ್ನ ಮೇಲೆ ಅವನ ಮನಸ್ಸಲ್ಲಿ ಅಭಿಮಾನವಿಲ್ಲವೆಂದೂ, ತನ್ನ ಇಷ್ಟವಸ್ತು ಕಯ್ಸೇರುವವರೆಗೂ ಇಲ್ಲಿಗೆ ಬರಲಾರನೆಂದೂ ತಿಳಿದೆನು.

ಭ್ರಮರೆ:—(ಅಸೂಯೆಯಿಂದ) ಗಂಗಾಧರನ ಕಣ್ಣು ಮಹಾಶಯರ ತಂಗಿಯ ಸೌಂದರ್ಯದಲ್ಲಿರುವುದು; ಆತನ ಕಣ್ಣು ಮಾತ್ರರಲ್ಲಿ? ಆ ಕೊಂಕುನುಡಿಯ ಬೆಡಗಿಯಲ್ಲೇ ಅಲ್ಲವೇ?

ವಿಲಾಸಿನಿ:—ಅಹುದು, ಆಕೆಯಲ್ಲಿಯೇ—

ಭ್ರಮರೆ:—(ನಿಟ್ಟುಸಿರುಬಿಟ್ಟು) ವಿಲಾಸ! ನಾವು ಊರು ಬಿಟ್ಟು ಬಂದುದೇ ಹೆಡ್ಡತನವು. ಅಲ್ಲಿಯೇ ಇರುತ್ತಿದ್ದರೆ, ಎಷ್ಟೋ ಸುಖವಿದ್ದಿತು. ಇವರ ಕುಟಿಲನಟನೆಗೆ ಹಿಗ್ಗಿ, ಮಾತನ್ನು ನಂಬಿ ಬಂದು, ನಮ್ಮ ಸರ್ವಸ್ವವನ್ನೂ ತೆತ್ತುಬಿಟ್ಟೆವು. ಇನ್ನು ಮುಂದೆ ನಮಗೆ ಬೇಗೆಪಟ್ಟು ಸಾವುದೊಂದಲ್ಲವೇ ಉಳಿದುದು.

ವಿಲಾಸಿನಿ:—ಸುಮ್ಮನೆ ಏಕೆ ಚಿಂತಿಸಬೇಕು? ಭ್ರಮರೆ! ಎಲ್ಲವೂ ನಮ್ಮ ಮನಸ್ಸಿನ ಮೇಲಿರುವುವು. ನಾನು ಇಲ್ಲಿಗೆ ಬಂದುದು ಮೊದಲು, ನನ್ನ ಮನಸ್ಸು ಮಹಾಶಯರಲ್ಲಿ ನಟ್ಟಿತ್ತು; ಆದರೇನು? ಚಿರಬ್ರಹ್ಮಚರ್ಯೆಯ ನಿರ್ಮಲಹೃತ್ಕುಸುಮವು, ವಿಷಮವಿಷಯವಾಸನಾಕೀಟಗಳಿಗೆ ಸಾಧ್ಯವೆ? ಪುರಸ್ಕಾರವು ಹಾಗಿರಲಿ; ಆವಾಗಳೂ ಭರ್ತ್ಸನಾ

ರೂಪಕವಾದ ನೀತಿಬೋಧೆಯಲ್ಲದೆ, ಸರಸದ ಮಾತನ್ನಾದರೂ ಕೇಳಿ ದುದಿಲ್ಲ.

ಭ್ರಮರೆ:— (ಭ್ರೂಭಂಗವನ್ನು ಮಾಡಿ ಸಾಟೋಪಸ್ವರದಿಂದ) ತೆಗೆತೆಗೆ! ಅದೆಷ್ಟರ ಕೆಲಸವೊ? ನಾನು ಪ್ರಯತ್ನವೊಂದುಪಡಲಿಲ್ಲ; ಇನ್ನಾದರೂ ನೋಡು! ಅವರ ಪ್ರೀತಿಗೆ ಇಂದು ತಿಲೋದಕ ವಾಯಿತು!

ವಿಲಾಸಿನಿ:—ನೀನು ಹೇಗಾದರೂ ಮಾಡು; ಮಹಾಶಯರು ಕಾಮಮೋಹಿತರಾಗರೆಂದು ಹೇಳುವೆನು. ಅದು ಹೇಗಾದರೂ ಇರಲಿ. ನನಗೇನೋ ಈಗ ಗಂಗಾಧರರಲ್ಲೇ ದೃಢವಿಶ್ವಾಸವಿರುವುದು. ಅವರ ಪ್ರೀತಿಗೌರವಗಳಿಗೆ ನಾನು ಬಹುಳವಾಗಿ ಋಣಿಸಿಯಾಗಿರುವೆನು. ಅವರ ಬೋಧನಾಕ್ರಮದಿಂದಲೇ ನಾನು ವ್ಯಾಸಂಗದಲ್ಲಿ ತೊಡಗಿರುವೆನು. ಹಿಂದೆ ಮಹಾಶಯರ ವಿಷಯದಲ್ಲಿ ಮನಸ್ಸು ವಿಕಾರಗೊಂಡುದಕ್ಕಾಗಿ ಪಶ್ಚಾತ್ತಾಪಪಡುವೆನಲ್ಲದೆ, ಮುಂದೆಯಾದರೂ ಅವರ ವಿಷಯವಾಗಿ ವಿಕಸಿಷ್ಠೆಯಲ್ಲಿರಲೆಂದು ಆಶಿಸುತ್ತಿರುವೆನು.

ಭ್ರಮರೆ:—ಬಿಡು, ಬಿಡು! ಇಬ್ಬರೂ ಒಂದೇ ಬಗೆಯವರೇ! ಪುರುಷರೆಲ್ಲರೂ ಚಪಲರೇ! ಅವರ ಮಾತಿಗೆ ಮರುಳಾಗತಕ್ಕವರೇ ಯಥಾರ್ಥವಾಗಿ ಮರುಳರು.

ವಿಲಾಸಿನಿ:—ಭ್ರಮರೆ! ಹಾಗೆಂದೂ ಹೇಳಲಾಗದು. ಪುರುಷರೆಲ್ಲರೂ ಒಂದೇ ಬಗೆಯವರೆಂದರೂ, ಸ್ತ್ರೀಯರೆಲ್ಲರೂ ಒಂದೇ ವೃತ್ತಿಯವರೆಂದರೂ ಸರಿಯಾಗಿರಲಾರದು. ಗಂಗಾಧರರೊಲ್ಮೆ ತಪ್ಪಿಹೋಗಿ ಅವರು ಬೇರೊಬ್ಬಳಲ್ಲಿ ಅನುರಕ್ತರಾದರೂ ನಾನು ದುಃಖಿಸಿಯಾಗಲೊಲ್ಲೆನು. ಮುಖ್ಯವಾಗಿ ಅವರ ಅಭಿಮಾನವೊಂದೇ ನನಗೆ ಸಾಕಾಗಿರುವುದು.

ವಿಲಾಸಿನಿಯ ಮಾತಿನೊಡನೆ ಮರೆಯಾಗಿ ನಿಂತು ಕೇಳುತ್ತಿದ್ದ ಹರಿಣೀಕಂಠವೂ ಸೇರಿತು; "ನಿಜ! ಸಾಕು! ಅಷ್ಟೇ ಸಾಕು!!" ಎಂದು ಹೇಳುತ್ತ ಆಸ್ಫೋಟನಮಾಡುತ್ತಿದ್ದ ಯೋಗಿನಿಯೊಡನೆ ಬಂದು

ಮುಂದೆ ನಿಂತಳು. ಭ್ರಮರೆಗೆ ದಿಂಗುಬಡಿದಂತಾಗಿ, ನೋಡುತ್ತ ಕುಳಿತಳು. ಹರಿಣೀದರ್ಶನದಿಂದ ಆವಳು ಅಗ್ನಿಜ್ವಾಲೆಯಲ್ಲಿ ನಿಂತು ತಪಿಸುವಂತಾದಳು. ಮುಖವು ಮತ್ತಷ್ಟು ಕಪ್ಪೇರಿತು. ವಿಲಾಸಿನಿ ವಿಸ್ಮಯಕೌತುಕಗಳಿಂದ ನೋಡುತ್ತ ಕುಳಿತಳು.

ಹರಿಣಿ :—(ಮತ್ತೊಮ್ಮೆ ನಕ್ಕು) 'ವಿಲಾಸಿನಿ, ಸಾಕು ; ಅಷ್ಟೇ ಸಾಕು.'

ವಿಲಾಸಿನಿ :—ಇದೇಕೆ ಹರಿಣಿ ! ಸನ್ಯಾಸಿನಿ !! ನಿಂತಿರುವುದೇಕೆ ?

ಹರಿಣಿ, ಮೇದಿನಿಯೊಡನೆ ಮತ್ತೆ ಬೇರೆ ಕುರ್ಚಿಗಳಲ್ಲಿ ಕುಳಿತಳು.

ಹರಿಣಿ :—(ಮೇದಿನಿಯ ಕಡೆಗೆ ತಿರುಗಿ, ವಿಲಾಸಿನಿಯ ಕಡೆಗೆ ಕೈನೀಡಿ) ಭಗಿನಿ ! ಇವಳಾರು ಬಲ್ಲೆಯೊ ?

ಮೇದಿನಿ :—ನೀನೇ ಹೇಳು.

ಹರಿಣಿ :—ಇವಳೇ ನಮ್ಮ ಗಂಗಾಧರರಾಯನ ಬೇಗಮ ಸಾಹೇಬಾ ವಿಲಾಸಿನೀದೇವಿ ! ಅವಳೇ ನಮ್ಮ ಅಮರನಾಥಮಹಾಶಯರ ರಾಣೀಸಾಹೇಬಾ "ಭ್ರಮರಮಾಲಾದೇವಿ." ಇವರಿಬ್ಬರೂ ಪುನರಾಶ್ರಮಸ್ವೀಕೃತೆಯರು !

ಮೇದಿನಿ :—ಹಾಗಾದರೆ ಇವರೂ ನಮ್ಮ ಸಮಾಪಬಂಧುಗಳೇ!

ಹರಿಣಿ :—(ವಿಲಾಸಿನಿಯನ್ನು ನೋಡಿ) ವಿಲಾಸ ! ನಿನ್ನ ಮನೋರಮಣನ ಗೌರವಕ್ಕೆ ಪಾತ್ರರು, ನಿನಗೂ ಸನ್ಮಾನ್ಯರಲ್ಲವೆ !

ವಿಲಾಸಿನಿ :—ಅದಕ್ಕೆಂದೇ ಅಭಿನಂದನವಿತ್ತುದು !

ಹರಿಣಿ :—(ಭ್ರಮರೆಯನ್ನು ಕುರಿತು) ತಂಗಿ ! ಇದೇಕೆ ಮಾತಾಡಲೊಲ್ಲೆ? ಇಂದೇನಿಷ್ಟುರ ಮುಳಿಸು ?

ಭ್ರಮರೆ :—ನನಗೇಕೆ ಮುಳಿಸು ? ಮಾತು ಬಲ್ಲವರಿರುವಲ್ಲಿ ನನ್ನದೇನು ?

ವಿಲಾಸಿನಿ :—ಹರಿಣಿ ! ಅವಳು ನನ್ನಂತೆ ನಾಣ್ಗೆಟ್ಟ ಹೆಂಗಸಲ್ಲ; ಬಹುಗಂಭೀರೆ !

ಮೇದಿನಿ:—ಹಾಗಲ್ಲ; ತನ್ನ ಸುಖಸಂಗತಿಗೆ ತಡೆಯಾಗಿರುವ ರಲ್ಲಿ ಮಾತೇಕೆಂದು.

ಭ್ರಮರೆ:—(ಬೆದರಿನೋಡುತ್ತ) ಹೀಗೆ ಹೇಳುವುದೇಕೆ?

ಮೇದಿನಿ:—ಏಕೆಂಬುದನ್ನು ನೀನೇ ತಿಳಿಯಬಲ್ಲೆ! ಹೇಗೂ ಅಮರನ ಕಣ್ಣು ಹರಿಣೀಕಟಾಕ್ಷದಲ್ಲೇ!

ವಿಲಾಸಿನಿ:—ಆಗಲಿ, ಅದರಿಂದಿವಳಿಗೇಕೆ ಕೊರತೆ?

ಹರಿಣಿ:—ನಿನಗೆ ಕೊರತೆಯಾಗಲಾರದು! ನಿನ್ನ ಮನಸ್ಸು ಗಂಗಾಧರನ ಪ್ರೀತಿಗೆ ಅರ್ಧವೂ, ಕಲಾಭ್ಯಾಸನಕ್ಕರ್ಧವೂ ವಿಭಾಗಿಸಲ್ಪಟ್ಟಿರುವುದು. ಅದರಲ್ಲಿ ಗಂಗಾಧರನ ಪ್ರೀತಿ ತಪ್ಪಿದರೂ, ಕಲಾಭ್ಯಾಸನವೇ ಆಕ್ರಮಿಸುವುದು. ಭ್ರಮರೆಯ ವಿಚಾರವು ಹಾಗಿಲ್ಲವಷ್ಟೆ!

ಮೇದಿನಿ:—ಹರಿಣಿ! ಚೆನ್ನಾಗಿ ಹೇಳುವೆ! ವಿಲಾಸಿನಿಯಂತೆ ಆವಾಗಲೂ ಓದುಬರೆಹಕ್ಕೆಂದೇ ಅಳುತ್ತಿದ್ದರೆ, ಭ್ರಮರೆಗಾಗುವ ಬಾಧ ವೇನು! ಇವಳ ಈಗಳಿನ ವೃತ್ತಿಯೇ ಚೆನ್ನಾಗಿರುವುದು. ಅವಳು ಆರ ಅಡ್ಡಿಗೂ ಒಳಗಾಗುವ ದಡ್ಡೆಯಲ್ಲ? ಇವಳಂತೆ ಸ್ವಾತಂತ್ರ್ಯಪ್ರಿಯೆಯನ್ನು ನಾನಾವಾಗಳೂ ನೋಡಿದುದಿಲ್ಲ. ಅಷ್ಟೇ ಅಲ್ಲ! ಆರ್ತತ್ರಾಣ ಪರಾಯಣತೆಯಲ್ಲಿಯೂ, ಪ್ರತಿಕೂಲರನ್ನೂ ಕ್ಷಮಿಸುವುದರಲ್ಲಿಯೂ ಇವಳಿಗೆ ಸಮಾನರಾರೂ ಇರಲಾರರು?

ವಿಲಾಸಿನಿ:—ಅಹುದು, ಅದೆಲ್ಲವೂ ನಿಜವೇ! ಆದರೆ, ನಾನೇ ವಿದ್ಯಾವತಿಯೆಂದಾಗಲೀ, ಭ್ರಮರೆಗೆ ಏನೂ ಬಾರದೆಂದಾಗಲೀ ಹೇಳಲಾಗುವುದೇ?

ಮೇದಿನಿ:—ನಿನ್ನನ್ನು ವಿದ್ಯಾವತಿಯೆನ್ನಲಾರೆನು! ನೀನು ಕಲಾವತಿ! ಆದರೆ, ಕಲಾನೈಪುಣ್ಯದಲ್ಲಿಯೂ ಭ್ರಮರೆಯಷ್ಟು ಪರಿಶ್ರಮವೂ, ಸಾಹಸವೂ ನಿನಗೆಲ್ಲಿಯದು? ಓದುಬರೆಹದ ಮಾತ್ರನ ನೀತಿ ಅವಳಿಗಂತೂ ಸೊಗಯಿಸದು?

ಭ್ರಮರೆ:—ಅದೇನು? ಬ್ರಹ್ಮವಿದ್ಯೆಯೊ? ನಾನು ಮನಸ್ಸು ಮಾಡಿದರೆ ಬರಲಾರದೊ?

ಮೇದಿನಿ:—(ವ್ಯಂಗ್ಯವಾಗಿ) ಬ್ರಹ್ಮವಿದ್ಯೆ!! ಭಲೆ! ಭ್ರಮರೆ! ಬ್ರಹ್ಮವಿದ್ಯೆಯನ್ನೂ ಬಲ್ಲೆಯಾ? ಅದೇನೋ ಇರಲಿ, ವಿಲಾಸಿನಿಯಂತೆ ಒರಿಯು ಓದುಬರೆಹದ ಅಲ್ಪಸ್ವಲ್ಪವಾದ ತಿಳಿವಾದರೂ ನಿನ್ನಿಂದ ಹೊಂದ ಲಾಗಲಾರದು. ಹಾಗೆಯೇ ನಮ್ಮ ಹರಿಣಿಯು ದೀರ್ಘಾಧ್ಯವಸಾಯದಲ್ಲಿ ಕೊಂಚಮಟ್ಟಿನ ವ್ಯಾಸಂಗವಾದರೂ ವಿಲಾಸಿನಿಗೂ ಲಭಿಸಲಾರದು.

ವಿಲಾಸಿನಿ:—(ತಲೆದೂಗಿ) ಅಹುದು; ದಿಟವೇ! ಹರಿಣಿಯು ಪಾಂಡಿತ್ಯಪ್ರಭೆಯಲ್ಲಿ ಎಳ್ಳಷ್ಟಾದರೂ ನನಗುಂಟಾಗುವಂತೆ ಮಾಡೆಂದು ಭಗವಂತನನ್ನೇ ಕೇಳುತ್ತಿರುವೆನು. ಆದರೆ ಅದೂ ಅತ್ಯಾಶೆಯೇ!

ಹರಿಣಿ:—(ವಿಲಾಸಿನಿಯ ಬೆನ್ನುತಟ್ಟುತ್ತ) ವಿಲಾಸ! ನಾನೇ ಪ್ರತಿಭಾಸಂಪನ್ನೆಯಲ್ಲವೇ?

ಭ್ರಮರೆ:—(ಅಸೂಯೆಯಿಂದ) ಸಂಪನ್ನೆಯಲ್ಲದಿದ್ದರೆ ಅಲ್ಲಗಳೆವುದು ಹೇಗೆ? ತಿಳಿವು ಹೇಳುವುದೇತರಿಂದ?

ಮೇದಿನಿ:—ಓಹೋ! ತಿಳಿವಿಗೆ ಅಳಿವುಂಟೇ? ವೇದಾಂತಸಾರವೇ ನಾಲಗೆಯ ತುದಿಯಲ್ಲಿ! (ಹರಿಣಿಯನ್ನು ನೋಡಿ) ತಂಗಿ! ಸ್ತ್ರೀಯರ ಮುಖ್ಯಧರ್ಮವಾವುದೆಂಬುದೇ ಒಗೆಹತ್ತದಿದ್ದರೆ ಮತ್ತಿನ ಭಾಷಾ ಪಾಂಡಿತ್ಯವೆಷ್ಟಿದ್ದರೂ ಬರುವ ಲಾಭವೇನು? ಕುರುಡನ ಮುಂದಾಡುವ ಸೋಗೆಯಾಟವಲ್ಲವೆ? ಆದರೆ 'ನೀನೇ ಧರ್ಮಿಷ್ಠೆಯೊ?' ಎಂದು ಆಕ್ಷೇಪಿಸಬಹುದು? ಆಗಲಿ; ನಾನಾರ ಸುಖಕ್ಕೂ ಕಂಟಕವಾಗಿ ಬಂದಿಲ್ಲವೆಂದು ಹೇಳುವೆನು. ಮತ್ತೇನು? ವಿಯೋಗಿನೀಧರ್ಮವು ಸುರಕ್ಷಿತವಾಗಿರುವ ಮಟ್ಟಕ್ಕೆ ಈ ನಿನ್ನ ಭಾಷಾಪಾಂಡಿತ್ಯವೂ, ಪರತತ್ತ್ವವಿಚಾರ ವಿಮರ್ಶೆಯೂ, ಸುವರ್ಣಪುಷ್ಪಕ್ಕೆ ಪರಿಮಳವಿಟ್ಟಂತೆ ಬಗೆಗೊಳ್ಳುತ್ತಿರುವುವು.

ಹರಿಣಿ:—(ಕಿರುನಗೆಯಿಂದ) ಅಕ್ಕ! ನನಗಷ್ಟರ ವಿರಕ್ತಿಯೆಲ್ಲಿಯದು? ಯೋಗವಿದ್ಯೆಯೆಂತಿರುವುದೋ ಅದು ತಿಳಿಯದೇ ತಿಳಿಯದು. ನಾನು ಕೇವಲಸ್ತ್ರೀಸಮುದಾಯದಲ್ಲಿ ಒಬ್ಬಳಾಗಿರುವೆನು. ದಯೆ

ಯಿಟ್ಟು ವಿಯೋಗಿನೀಧರ್ಮವನ್ನೂ ಸತೀಕರ್ತವ್ಯವನ್ನೂ ತಿಳಿಸಿಗೆ ತಂದೆಯಾದರೆ ಆಗಲೀಗ ನೀನೆನ್ನ ಸುಹೃದ್ವಗಿನಿ!

ಮೇದಿನಿ:—ಇಲ್ಲ; ಹೇಳಲಾಗುವುದಿಲ್ಲ.

ವಿಲಾಸಿನಿ:—ಏಕೆ? ನಮ್ಮ ಕಿವಿಗೆ ಬೀಳಲಾಗದೆಂದೋ?

ಮೇದಿನಿ:—ಅಹುದು; ಕಿವಿಗಿಂಪಾಗುವುದಾದರೆ ಹೇಳಬೇಕು! ಬರಿದೆ ಕಾಲನಷ್ಟ, ಕಾರ್ಯನಷ್ಟ, ಕಂಠಶೋಷಣ, ಇವುಗಳಿಂದೇನು? ವೃಥಾಶುಷ್ಕ ಭಾಷಣವಲ್ಲವೆ?

ಭ್ರಮರಿ:—(ಮೊಗದಿರುಹಿ) ಅಮ್ಮ! ನೀವು ಹೇಳುವರು, ಅವರು ಕೇಳುವರು. ನನ್ನನ್ನು ಮಾತ್ರಕ್ಕೆ ಆವ ಗುಂಪಿಗೂ ಸೇರಿಸಬೇಡಿರಿ!

ಹರಿಣಿ:—(ಕಿರುನಗೆಯಿಂದ) ಅಕ್ಕ! ಹೇಳು. ಆರ ಕಿವಿಗೆ ಹೇಗಾದರೂ ಆಗಲಿ. ನನಗಾಗಿ ನಿನ್ನ ಕರ್ತವ್ಯವನ್ನು ನೀನು ಗಮನಿಸು.

ಮೇದಿನಿ:—ಹಾಗಿದ್ದರೆ ಕೇಳು. ಹರಿಣಿ! ಮೊದಲು ನನ್ನ ಅನುಕಂಪನಕ್ಕೆ ಕಾರಣರಾದ ವಿಧವೆಯರನ್ನೇ ಕುರಿತು ಹೇಳುವೆನು. ವಿಧವಾ ಕರ್ತವ್ಯಬೋಧೆಯಾದಮೇಲೆ ವಿಯೋಗಿನೀವಿಚಾರವಾಗಬೇಕು.

ವಿಲಾಸಿನಿ:—ಹಾಗೆಯೇ ಮಾಡಿರಿ.

ಮೇದಿನಿ:—ತಂಗಿಯಿರಾ! ಕೇಳಿರಿ; ವಿಧವೆಯಾದವಳು ದಿವಂಗತನಾದ ತನ್ನ ಸ್ವಾಮಿಗಾಗಿ ಸರ್ವಸ್ವವನ್ನೂ ತ್ಯಾಗಮಾಡುವುದು ಪ್ರಥಮಕರ್ತವ್ಯವು. ಪತಿಯ ಮರಣವೃತ್ತಾಂತವು ಕಿವಿಗೆ ಬಿದ್ದೊಡನೆಯೇ ಹಾಗೆಯೇ ಪ್ರಾಣವು ಉತ್ಕ್ರಮಿಸಿದ ಮಹಾನುಭಾವೆಯರ ವೃತ್ತಾಂತಗಳೂ ಇರುವುವು. ಅದೇ ಯಥಾರ್ಥವಾದ ಸಹಗಮನವು. ಅಷ್ಟು ಶಕ್ತಿಯಿಲ್ಲದೆ ಪ್ರಾಣಕ್ಕೆ ದೇಹದ ವಿಯೋಗವು ತಾನಾಗಿ ಆಗದಿರಲು ಚಿತಾರೋಹಣದಿಂದ ದೇಹವನ್ನು ಪರಿತ್ಯಾಗಮಾಡುವುದೂ ಸಹಗಮನವಾಗಿ ಭಾವಿಸಲ್ಪಡುತ್ತ ಬಂದಿರುವುದು. ದೇಹಾಭಿಮಾನವಿಲ್ಲದಿದ್ದರೆ ಜೀವಿಸಿದ್ದರೂ ಸತ್ತಂತೆಯೇ; ಆದುದರಿಂದ ಬದುಕಿಕೊಂಡೇ ಇದ್ದು ಮೃತನಾದ ಪತಿಗೆ ಹಿತವಾಗುವಂತಹ ಕಾರ್ಯಗಳನ್ನು ಮಾಡುವುದು ಲೇಸೆಂದು ದೊಡ್ಡವರು ಹೇಳುವರು. ಎಂದರೆ, ಪ್ರಾಣವನ್ನೇ

ತೊರೆಯಲೇಬೇಕೆಂದು ಹೇಳಿದಹಾಗಾಗಲಿಲ್ಲ. ಮರಣವು ನಮ್ಮ ಇಚ್ಛೆಗೆ ಬರುವುದಿಲ್ಲ, ಒಂದುವೇಳೆ, ಬಲಾತ್ಕಾರದಿಂದ ಸತ್ತರೆ ಅದು ಆತ್ಮ ಹತ್ಯೆಯೇ ಹೊರತು ಬೇರೆಯಲ್ಲ. ಅದರಿಂದ ದೋಷವಲ್ಲದೆ ಪುತ್ತಾವ ಸಾಧನೆಯೂ ಆಗುವುದಿಲ್ಲ. ದುರ್ಮರಣದಿಂದ ನಾವು ವೇದಪುರುಷ ನಾಜ್ಞೆಗೆ ವಿರೋಧವಾಗಿ ನಡೆದ ಪಾಪಕ್ಕೆ ಪಕ್ಕಾಗಿ ನಿರಂತರವೂ ನರಳ ಬೇಕಾಗುವುದು.

ಹರಿಣಿ:—ಸುಖವೂ ಸಲ್ಲದು, ಸಾಯಲೂಬಾರದು! ಮತ್ತೇನು? ವಿಧವೆಯರಿಗೆ ಅಳುವುದೊಂದೇ ಉಳಿದಿರುವುದೋ?

ಮೇದಿನಿ:—ಅಳುವುದಾರಿಗೆ? ಹರಿಣಿ! ಆಳುವುದು ತಿಳಿವಿಲ್ಲದ ಒಳೆಯರಿಗಲ್ಲದೆ ಮತ್ತಾರಿಗೂ ಸಲ್ಲದು. ಸುಖವಾವುದು ದುಃಖ ವಾವುದು? ಎರಡೂ ಭಾವನಾಮಾತ್ರವಾದ ದ್ವಂದ್ವಗಳು; ಸುಖವೇ ದುಃಖವು, ದುಃಖವೇ ಸುಖವು; ಇದೂ ಭ್ರಮೆ, ಅದೂ ಭ್ರಮೆ. ಲೋಕ ದಲ್ಲಿ ತಮಗೆ ಹಿತವಾದರೆ ಸುಖವೆನ್ನುವರು, ಅಹಿತವಾದರೆ ದುಃಖವೆನ್ನು ವರು; ವಸ್ತುಗತಿಯಿಂದ ಆತ್ಮನಿಷ್ಠತೆಯೊಂದೇ ಸುಖವಲ್ಲವೇ?

ಹರಿಣಿ:—ಹಾಗೆಂದರೇನು?

ಮೇದಿನಿ:—ಹಾಗೆಂದರೇ—ನೀನೂ ಆತ್ಮ, ಅವನೂ ಆತ್ಮ; ನಿಮ್ಮಿಬ್ಬರಿಗೂ ದೇಹವೆಂಬ ಜಡಕೋಶವಿತ್ತು. ಅವನು ದಿವಂಗತನಾದ ನೆಂದರೆ, ಜಡದೇಹವನ್ನು ತ್ಯಜಿಸಿ ಶುದ್ಧರೂಪದಿಂದ ಆತ್ಮನಲ್ಲೇ ಸೇರಿರ ತಕ್ಕವನೆಂದು ಅಭಿಪ್ರಾಯವು. ಅಂತಹ ಸ್ವಾಮಿಗೆ ಹಿತವಾಗಬೇಕೆಂಬು ದೊಂದೇ ಚಿಂತೆಯಿಂದ ತಮ್ಮ ಭೋಗ ಭಾಗ್ಯ ಯೌವನ ಇತ್ಯಾದಿ ಸಮಸ್ತವನ್ನೂ ನಿರಾಕರಿಸಿ ಪಾರಮಾರ್ಥಿಕ ವೃತ್ತಿಯನ್ನು ಅನುಸರಿಸಿ ತದನುರೂಪವಾದ ಕಾರ್ಯವನ್ನೇ ಮಾಡಬೇಕು. ಲೌಕಿಕವಾಗಿ ಹೇಳ ಬೇಕಾದರೆ ದೇಹವೂ, ತದುಪಾಶ್ರಿತಗಳಾದ ಅವಯವಗಳೂ ಮನಸ್ಸೂ ನನ್ನವೆಂಬ ಲೋಭವನ್ನು ಬಿಟ್ಟುಬಿಡಬೇಕು. ಇವುಗಳು ತಮ್ಮನ್ನು ಅಗ್ನಿಸಾಕ್ಷಿಕವಾಗಿ ಪಾಣಿಗ್ರಹಣ ಮಾಡಿದ ತಮ್ಮ ಸ್ವಾಮಿಯ ಸ್ವತ್ವಕ್ಕೆ ಒಳಪಟ್ಟಿರುವುವೆಂದೂ, ತಾವು ಆತನಲ್ಲಿ ಪಾರತಂತ್ರ್ಯ ಸ್ವರೂಪರೆಂದೂ

ಆತ್ಮಾವಲಂಬನೆಯಿಂದ, ಧರ್ಮಪ್ರತಿಪಾದನೆಗೆಂದು, ಆತನಿಂದ ಪ್ರೇರಿತೆಯರಾಗಿ ದಾಸವೃತ್ತಿಯನ್ನು ಕಯ್ಕೊಂಡಿರುವೆವೆಂದೂ, ಭಾವಿಸಬೇಕಾದುದೇ ಪ್ರಥಮಪ್ರಯತ್ನವು. ಹೀಗೆ ಆತ್ಮಾರ್ಪಿತಗಳಾದ ಇಂದ್ರಿಯಗಳನ್ನೂ ಮನಸ್ಸನ್ನೂ ಆತ್ಮಸೇವೆ, ಧ್ಯಾನ, ಸಾಕ್ಷಾತ್ಕಾರ, ಇವುಗಳಲ್ಲಿ ಮಟ್ಟಕ್ಕೆ ಉಪಯೋಗಿಸುತ್ತಿರಬೇಕಲ್ಲದೆ, ಕ್ಷುಲ್ಲಕ ವಿನೋದದ ವಿಷಮವಿಷಯಗಳಲ್ಲಿ ವಿನಿಯೋಗಿಸಬಾರದು.

ಹರಿಣಿ :—(ತಲೆದೂಗಿ) ಚೆನ್ನಾಗಿರುವುದು! ಹಾಗಲ್ಲವೇ? ಒಪ್ಪಬೇಕು! ಸತ್ತುಹೋದವರಲ್ಲಿ ಚಿತ್ತವನ್ನಿಡಬೇಕೆಂಬುದಿದೆತ್ತಣ ಉಪದೇಶವು? ವಿಷಯವಾಸನೆಯಿಂದ ಮನವನ್ನು ವಿಕಸನಗೊಳಿಸದೆ ಇಂದ್ರಿಯತೃಪ್ತಿಯಾಗುವುದೆಂತೋ?—

ಮೇದಿನಿ :—(ಕೃತಕಕೋಪದಿಂದ) ಛಿಃ, ಹರಿಣಿ! ಏನಿದು ನಿನ್ನೀ ಅಲಸಭಾವನೆ! ಇಂದ್ರಿಯತೃಪ್ತಿಯೆಂಬುದೊಂದೇ ಉದ್ದೇಶದಿಂದಲೇ ಈ ಮಾನವಜನ್ಮವುಂಟಾಯ್ತಲ್ಲವೇ? ಅಹುದಹುದು!! ಸಹಜ! ಆದರೆ ಹೇಳಿರಿ? ವಿಷಯಲಾಲಸೆಯೇ ಮಾನವನಿಗೆ ಮುಖ್ಯಾಧ್ಯವಸಾಯವೆಂದೂ ತತ್ಸಾಧನೆಯೇ ಪರಮಪುರುಷಾರ್ಥವೆಂದೂ ತಿಳಿದಿರುವಿರಲ್ಲವೆ? ಇಂದ್ರಿಯತೃಪ್ತಿಯಾದರೂ ಆವ ಕ್ರಿಯಾಭಿನಿವೇಶದಲ್ಲಿರುವುದೆಂದು ಭಾವಿಸುವಿರಿ? ಆವ ಕಾರ್ಯಸಾಧನೆಗೆಂದೇ ನಮಿನ್ನಾ ಕರಣಗಳುಂಟಾಗಿರುವುವೆಂಬುದನ್ನೂ ಹೇಗೆ ವಿಮರ್ಶಿಸುವಿರಿ?

ಹರಿಣಿ :—(ಕಿರುನಗೆಯಿಂದ) ವಿಮರ್ಶೆಯೋ ವಿಚಾರವೋ ಅದೊಂದೂ ತಿಳಿಯದು. ಎಂತೂ ನಿನ್ನ ಮಾತುಗಳು ಸಂದಿಗ್ಧವಾಗಿರುವುವು. ಜನ್ಮಸಹಜಗುಣಗಳನ್ನು ಅಳಿದವರ ಸಂಗಡಲೇ ಅಳಿಸಬೇಕೆಂಬ ತತ್ತ್ವವೇನೋ? ಜೀವಿಸಿರುವವರೆಗೂ ಸತೀಪತಿಗಳೆಂಬುದು ಸಹಜ ವಿಷಯವು. ಸತ್ತಹೋದರೂ ಅದೆತ್ತಣ ಕಟ್ಟಳೆಯೋ? ಏನು ಅವಿಚಾರವೋ?

ಮೇದಿನಿ :—(ವ್ಯಂಗ್ಯವಾಗಿ ನಕ್ಕು) ತಂಗಿ! ಇಂದೇನೋ ನಿನಗೆ ಬುದ್ಧಿ ವಿಪರೀತವಾಗಿ ಕುದುರುತ್ತಿರುವುದು. ಇರಲಿ, ಜನ್ಮಸಹಜ

ಗುಣಗಳಾವುವು? ವಿಲಾಸಾದಿಗಳೇ? ಅವು ಸ್ವೈಜಗುಣಗಳಲ್ಲ; ಕೃತಕಗಳು. ಅವು ಅತೀಕ್ಷ್ಣತೆಯು ಸ್ವಚ್ಛಂಧತೆಯಲ್ಲಿ ಹುಟ್ಟುವ ಪಶುವೃತ್ತಿಯೇ? ಇವು ನೈಜಸುಖಕ್ಕೆ ಆತಂಕ ಸ್ವರೂಪಗಳಲ್ಲದೆ ಉತ್ತೇಜಕಗಳಲ್ಲ. ಇನ್ನಾದರೂ ಮುಖ್ಯತತ್ತ್ವವನ್ನು ಮನನಮಾಡಿಕೊಳ್ಳಬಾರದೆ? ಹರಿಣಿ ! ಏನು ಹೇಳುವೆ? ಸತ್ತುಹೋದನೆಂದರೆ ಅರ್ಥವೇನು? ಎಲ್ಲಿಗೆ ಹೋಗುವನು? ಸತೀಪತಿಗಳು ಸೇರಿ ಒಂದು ಸಾಮಾನ್ಯ ಶರೀರವಾಗಿರುವುದು. ಅದರಲ್ಲಿ ಪುರುಷನು ಅಂಗಿಯಾಗಿರುವನು, ಸ್ತ್ರೀ ಅಂಗಿಯಾಗಿರುವಳು. ಅಂಗಿಯಲ್ಲಿ ಅಂಗವು ತಿರೋಹಿತವಾಗುವುದು. ಅವನು ಸತ್ತನೆಂದರೆ ತನ್ನ ಅರ್ಧಾಂಗವೆನ್ನಿಸುವ ಸ್ತ್ರೀದೇಹವನ್ನು ಹಿಂದೆಬಿಟ್ಟು, ತಾನು ದೇಹಪಂಜರವನ್ನು ಬಿಡುವನು; ನೆಲಹುಳು ಅರ್ಧ ಖಂಡಿಸಲ್ಪಟ್ಟರೂ ಇನ್ನರ್ಧವೂ ನೆಲಹುಳುವೆಂದೇ ಭಾವಿಸಲ್ಪಟ್ಟು ಸಜೀವವಾಗಿರುವಂತೆ ಹಿಂದುಳಿದ ಸ್ತ್ರೀದೇಹದಲ್ಲಿ ಅವನಿದ್ದೇ ಇರುವನು. ಸ್ತ್ರೀದೇಹದ ಪರಮಾವಧಿ ಅದನ್ನು ಬಿಟ್ಟು ಹೋಗಲಾರನು. ಇದರಿಂದಲೇ ಸತೀಪತಿಗಳೆಂಬ ಸಿಬಂಧವೂ ಅಭೇದ್ಯವೆನಿಸುವುದು! ಅಸತಿಯ ದುರಾಚಾರವು ಪತಿಯು ಅಧೋಗತಿಗೆ ಕಾರಣವಾಗುವುದೂ ಇದರಿಂದಲೇ.

ಹರಿಣಿ ! ಸ್ವಾಮಿಯು ಸಮಾಸೀನತೆಯಿಂದ ಪೂರ್ಣಾತ್ಮರೆನ್ನಿಸುವ ಸತಿಯರು, ಆ ತಮ್ಮ ದಿವಂಗತಸ್ವಾಮಿಯಿಂದ ಮಾಡಲ್ಪಡಬೇಕಾಗಿದ್ದ ಧರ್ಮಪ್ರತಿಪಾದನೆಯನ್ನು ಪೂರ್ಣಗೊಳಿಸಬೇಕಾದುದೇ ಕರ್ತವ್ಯವು. ಇದೇ ಅವರಿಂದ ಮೊದಲು ಕಲಿಯಬೇಕಾದ ಪಾಠವು. ಈ ತಮ್ಮ ಅಭ್ಯಾಸದಲ್ಲಿ ತಮ್ಮ ಸ್ವಾಮಿಯೇ ಮುಖ್ಯ ಗುರುಪೀಠದಲ್ಲಿರತಕ್ಕವನೆಂದೂ, ಆತನ ಪ್ರೇರಣೆಯಿಂದೀ ತಮ್ಮ ಉಚ್ಚಶಿಕ್ಷಣಕ್ಕೆ ಸಹಾಯಕರಾಗಿರುವವರು ತಮ್ಮ ಸುಹೃದಾಭ್ರಾತೃಗಳೆಂದೂ ನಮ್ಮ ಭಾವನೆಯನ್ನು ಸ್ಥಿರಪಡಿಸಬೇಕು.

ತಂಗಿ! ಮೇಲೆ ಹೇಳಿದಂತೆ ತಮ್ಮ ವಿದ್ಯಾಭ್ಯಾಸಕಾಲದಲ್ಲಾದರೂ ಗುರ್ವರ್ಪಿತವಾದ ತಮ್ಮ ಮನವನ್ನು ಚದರಿಸುವ ವಿಲಾಸವಿಭ್ರಮಾದಿಗಳನ್ನೂ ಅಂತಹ ಕರ್ಮೇಂದ್ರಿಯ ವ್ಯಾಪಾರಗಳನ್ನೂ ದೂರಮಾಡಿರ

ಬೇಕು. ಇಲ್ಲವಾದರೆ, ಬ್ರಹ್ಮಚರ್ಯೆಗೆ ಹಾನಿತಟ್ಟುವುದು. ಬ್ರಹ್ಮಚರ್ಯೆಯಿಲ್ಲದೆ ನಮ್ಮ ಪ್ರಯತ್ನವು ಸಾಂಗವಾದ ವ್ಯಾಸಂಗವೆನ್ನಿಸದು. ವ್ಯಾಸಂಗವೂ ವಿದ್ಯೆಯಾಗಿರದು. ಈ ನಿಯಮವೇ ಅಳಿದವರೊಡನೆ ಅಳಿಸಬೇಕೆಂಬುದರ ಮುಖ್ಯಾಶಯವು. ಇದಕ್ಕಾಗಿ ಅವರನ್ನು ದಾರುಣ ಶಿಕ್ಷೆಯಿಂದ ನಿರೂಪಿಸುವುದಲ್ಲ.

ಹರಿಣಿ :—(ತಲೆದೂಗುತ್ತಾ) ಇರಬಹುದು ; ಆದರೆ, ತತ್ತ್ವಮಯನಾದ ಆತ್ಮಾರಾಮನನ್ನು ನೋಡುವುದು ಹೇಗೆ ?

ಮೇದಿನಿ :— ಇತರ ಕ್ಷುದ್ರವಿಷಯಗಳಲ್ಲಿ ಹೋಗುವ ಮನಸ್ಸನ್ನು ತಡೆದು, ಬುದ್ಧಿಯವಶದಲ್ಲಿಡಬೇಕು ; ಆ ಬಳಿಕ, ಆತನ ಸ್ಥೂಲದೇಹವನ್ನೂ, ವಾಗ್ರೂಪವನ್ನೂ, ಕಟಾಕ್ಷಚಂದ್ರಿಕೆಯನ್ನೂ, ಕ್ರಮಕ್ರಮವಾಗಿ ಧ್ಯಾನಪಾತ್ರದಲ್ಲಿ ನೆಲೆಗೊಳಿಸಬೇಕು. ನಮ್ಮ ಕಾರ್ಯಗಳಾವುದಾದರೂ ಮನೋವಾಕ್ಕರ್ಮಗಳೆಂಬ ತ್ರಿಕರಣಸಾಕ್ಷಿಕವಾದ ಏಕಭಾವನೆಯಲ್ಲಿರಬೇಕು. ಹೀಗೆ ಮಾಡುತ್ತಬರುವ ಅಭ್ಯಾಸಬಲದಿಂದಲೇ ಆತ್ಮಾರಾಮನ ಸಾಕ್ಷಾತ್ಕಾರವು ಸುಲಭವಾಗಿರತಕ್ಕದೆಂದು ನಂಬಬೇಕು.

ತಂಗಿ ! ಆತ್ಮಾನಂದವೆಂಬುದೇ ಶಾಂತಿಯಿಲ್ಲಿರುವುದು ; ಈ ಆತ್ಮಾನಂದದಿಂದಲೇ ಇಂದ್ರಿಯಸಾರ್ಥಕತೆಯುಂಟಾಗಬೇಕಲ್ಲದೆ ಮತ್ತೇತರಿಂದಲೂ ದೊರೆಯದು. ಕ್ಷಣಿಕಗಳಾದ ವಿಷಯಗಳಿಂದ ಇಂದ್ರಿಯತೃಪ್ತಿಯಾಗುವದೆಂಬ ಭಾವನೆ ಮಾನ್ಯವೆನಿಸದು. ಆತ್ಮಾನಂದಕ್ಕೆ ಮೂಲಮಂತ್ರವೇ ಬ್ರಹ್ಮಚರ್ಯೆ.

ಹರಿಣಿ :— ಮಂತ್ರಸಿದ್ಧಿಗೆ ನಿಯಮವುಂಟೊ ?

ಮೇದಿನಿ :—ನಿಯಮವಿಲ್ಲವೆ? ಅಂತರಂಗಮಿತ್ರರಂತಿದ್ದು ಅಹಿತವನ್ನೇ ಉಂಟುಮಾಡುವ ಶತ್ರುಗಳಾರೆಂಬುದನ್ನು ನಾವು ತಿಳಿಯಬೇಕು. ಅವರೇ ನಮ್ಮ ತಪಸ್ಸಿಗೆ ವಿಘ್ನವನ್ನುಂಟುಮಾಡುವ ಪಿಶಾಚರೂಪರು. ಅವರನ್ನು ನಮ್ಮ ಅಭ್ಯಾಸಬಲದಿಂದ ಜಯಿಸಿ, ಪ್ರಜ್ಞಾಬದ್ಧರನ್ನಾಗಿ

ಮಾಡಿದರೆ, ಆಗಳೇ ನಾವು ಶಾಶ್ವತಸುಖಾಧಾರವಾದ ಜಯಲೇಖಗೆ ಪಾತ್ರರಾಗುವೆವು. ಈ ನಮ್ಮ ಸಾಹಸೋದ್ಯಮದಲ್ಲಿ ನಮಗೆ ಸತ್ಯ, ವಿನಯ, ಕ್ಷಮೆ, ದಮೆ, ಇತ್ಯಾದಿಗಳ ಸಹಾಯಸಂಪತ್ತಿ ಪೂರ್ಣವಾಗಿರಬೇಕು. ಇನ್ನೇನು ಹೇಳಲಿ? ಹರಿಣಿ! ಒಟ್ಟಿನಲ್ಲಿ ಇಷ್ಟೇ ಹೇಳುವುದು.

ನಮ್ಮ ಸ್ತ್ರೀವರ್ಗಕ್ಕೆ ಕ್ಷಮಾದಮಾದಿ ಸದ್ಗುಣೋಪೇತವಾದ ಶೀಲವೇ ಯಥಾರ್ಥಭೂಷಣವು; ಕ್ಷಣಿಕವಾದೀ ಬಾಹ್ಯಾಡಂಬರದ ಪಟ್ಟೆಪೀತಾಂಬರವು ಆಹಾರ್ಯಮಾತ್ರವು. ಗುರುಭಕ್ತಿ, ಕರ್ತವ್ಯನಿಷ್ಠತೆ, ವಸ್ತುವಿಚಾರ, ಭೂತದಯೆ ಎಂಬೀ ತೆರದ ವಿವೇಕವೇ ಅನರ್ಘ್ಯಾಭರಣವು. ಕಿಲುಬು ಸುತ್ತಿ ನಾಶವಾಗುವೀ ಲೋಹಮಯಶೃಂಖಲೆಗಳು ಅಲಂಕಾರವೆನಿಸವು. ಶಾಂತಿರಸವೇ ಸರ್ವಾವಯವ ಶೋಭೆಯನ್ನುಂಟುಮಾಡುವ ಸುಗಂಧಾನುಲೇಪವು; ತುಚ್ಛವೂ, ಮನೋವಿಕಾರಹೇತುವೂ ಆದ ಮದಕರವಸ್ತು ಲೇಪನಾರ್ಹವಲ್ಲ. ಪ್ರೇಮಪರಾಕಾಷ್ಠತೆ, ಸರ್ವಭೂತಸಮತೆ, ದೇಶವತ್ಸಲತೆ, ಇಂತಿರುವವೇ ಅವಶ್ಯವಾಗಿ ಮುಡಿಯಲ್ಪಡಬೇಕಾದ ದಿವ್ಯಪುಷ್ಪಗಳು; ಬಿಸಿಲ ಜಳಕ್ಕೆ ಕಂದಿ ಕಂದುವ ಈ ದಳಗಳಲ್ಲ. ವಿಲಾಸಾದಿಗಳು ಹೆಚ್ಚಿದಷ್ಟೂ ಆತಂಕವಲ್ಲದೆ ನೈಜಸುಖವಲ್ಲ. ಇದೇ ಧರ್ಮವೇ ವಿಯೋಗಿನಿಯರಿಗೂ ವಿಧವೆಯರಿಗೂ ಅನುಷ್ಠೇಯವಾದುದು.

ಹರಿಣಿ:— ಅಕ್ಕ! ಲೋಭಮೋಹಾದಿಗಳು ಮಾನವಸಾಮಾನ್ಯಕ್ಕೆ ಸಹಜ ಗುಣಗಳು. ಅಂತಿರುವವನ್ನು ಬಿಡಬೇಕೆಂದರೆ ಹೇಗೆ?

ಮೇದಿನಿ:—ಹರಿಣಿ, ಪ್ರಯತ್ನಪಡದೆ ಏವುದೂ ಸಾಧ್ಯವಾಗದು! ಪ್ರಯತ್ನವೆಂಬುದೂ ಶ್ರಮಸಹಿಷ್ಣುತೆಯಲ್ಲಿರತಕ್ಕುದು! ಶ್ರಮವೆಂದು ಬಿಟ್ಟರೆ ನರಕವೂ ಮುಂದೆಯೇ ನಿಂದಿರುವುದು! ಕೇಳು ತಂಗಿ! ಹಿಂದೆ ವಿವರಿಸಲ್ಪಟ್ಟಂತೆ ಇಂದ್ರಿಯಗಳನ್ನು ಅವುಗಳ ನಿಯಮಿತಕಾರ್ಯಗಳಲ್ಲಿ ನಿಲ್ಲಿಸಿದೆವಾದರೆ, ಎಲ್ಲವೂ ಸುಲಭವೇ ಆಗುವುದು.

ಹರಿಣಿ:—ಆದರೆ,

ಮೋದಿನಿ:—ಬಲ್ಲೆನು! ವಿಧವೆಯಲ್ಲವೆಂದಮಟ್ಟಕ್ಕೆ ಈ ನಿಷ್ಕೃತಿಯೂ ಕೂಡದೆಂದೇ? ವಿರಹಿತೆಯಾದವಳು ಮತ್ತೆ ನಿಜಪತಿಯಿಂದ ಪುರಸ್ಕೃತೆಯಾಗುವವರೆಗೂ ಆತ್ಮದ್ರೋಹಕ್ಕೆಡೆಗುಡದೆ ನಿಶ್ಚಲಚಿತ್ತದಲ್ಲಿ, ವಿರಾಗಿಣಿಯಾಗಿ ಧರ್ಮವನ್ನೇ ಹಿಡಿದಿರತಕ್ಕುದು! ಈ ಮಹಾತಪಸ್ಸಿದ್ಧಿಯಿಂದಲೇ ನಾನು ಆತ್ಮಾನಂದದಲ್ಲಿ ಚಿರಸುಖಿಯಾಗಿರುವೆನು! ಇಲ್ಲದೆ, ನಾನೇನಾದರೂ ವಿಲಾಸಾದಿಗಳಿಗೆ ಮರುಳಾಗುವಂತಿದ್ದರೆ, ಅಮರಗಂಗಾಧರರು ನನ್ನನ್ನು ನಾಯಿಗೂ ಕೀಳಾಗಿ ಮಾಡುತ್ತಿದ್ದರು. ಈಗಲಾದರೂ, ನನ್ನ ಅನುಭವೈಕವಿಚಾರಗಳು ಮನನವಾದುವೇ? ಹರಿಣಿ!

ಹರಿಣಿ:—(ಕಿರುನಗೆಯಿಂದ) ಈ ಬ್ರಹ್ಮವಿದ್ಯಾಬೋಧನದ ಸಾರಾಂಶವೇ ಹಿಡಿಯಲಿಲ್ಲ. ನಾನೇನು ಮಾಡಬೇಕು?

ಮೋದಿನಿ:—(ವ್ಯಂಗ್ಯವಾಗಿ ನಗುತ್ತ) ಹರಿಣಿಚಿತ್ತವು ಅಮರನಾಮದಲ್ಲೇ ವಿಲೀನವಾಗಿದ್ದರೆ ಬೋಧೆಯೆಂತು ಸೊಗಯಿಸುವುದು?

ಹರಿಣಿ:—(ಕಿರುನಗೆಯಿಂದ ಕೊರಳನ್ನು ಕೊಂಕಿಸಿ ಭ್ರಮರಿಯನ್ನೇ ನೋಡುತ್ತ) ಅದೇಕೆ? ಭಗಿನಿ! ಅಮರನಾಮದಲ್ಲಿ ಮಟ್ಟಕ್ಕೋ? ವಿಶ್ವಪ್ರೀತಿಯಿಂದರಾಗದೋ?

ಮೋದಿನಿ:—ಹೇಗೆ? ಅಮರನಲ್ಲವೇ ಪ್ರೇಮಾಕಾಂಕ್ಷಿ?

ಹರಿಣಿ:—ಆಗಲಿ; ಗಂಗಾಧರನೇನು ಮಾಡಿದನು? ಅಷ್ಟೆಲ್ಲಾ ಏಕೆ? ನಿಜವಾದ ಪ್ರೇಮವನ್ನು ಕಂಡವನು ನಿನ್ನ ಅಣ್ಣನೆಂದೇ ತಿಳಿಯಲಿಲ್ಲವೋ?

ಭ್ರಮರಮಾಲೆಗೆ ಮುಖವು ಕಪ್ಪೇರಿತು. ಕಣ್ಣುಗಳು ಕೆಂಪೇರಿ ಭಯಂಕರವಾದುವು! ಹರಿಣಿಯನ್ನೇ ತೀಕ್ಷ್ಣದೃಷ್ಟಿಯಿಂದ ಎವೆಯಿಕ್ಕದೆ ನೋಡುತ್ತಿದ್ದಳು. ವಿಲಾಸಿನಿಯೂ ವಿಸ್ಮಯಕೌತುಕಗಳಿಂದ ನೋಡುತ್ತ ಕುಳಿತಳು.

ಮೋದಿನಿ:—(ತಲೆದೂಗುತ್ತ) 'ಭಲೆ! ಹರಿಣಿ! ಚೆನ್ನಾಗಿ ಹೇಳಿದೆ! ನಿಜಾಂಶವನ್ನೇ ಮುಂದಿಟ್ಟುದರಿಂದ ನಿರ್ಮಲಹೃದಯೆಯೆಂದೇ ಹೇಳ

ಬೇಕಲ್ಲವೇ ?' ಎಂದು ಹೇಳುತ್ತಿದ್ದಂತೆಯೇ ಒಮ್ಮೆ ಮೋದಿನೀ ದೃಷ್ಟಿ ಕೆಳಗೆ (ಬೀದಿಯಲ್ಲಿ) ಬರುತ್ತಿದ್ದ ರಥದ ಕಡೆಗೆ ತಿರುಗಿತು; ಮೋದಿನಿ ಸಖೇದಾಶ್ಚರ್ಯದಿಂದ ಹರಿಣಿಯ ಕೈಹಿಡಿದು, ತಂಗಿ! ಇತ್ತನೋಡು! ಎಷ್ಟು ಸಹಾಯಸಂಪತ್ತಿಯುಂಟಾಗಿದ್ದರೂ, ಇಹಸೌಖ್ಯವನ್ನನುಭವಿಸ ದಾತನು ಈತನೊಬ್ಬನೇ ಅಲ್ಲವೇ ?''

ಹರಿಣಿಯು ರಥದ ಕಡೆಗೆ ನೋಡಿದಳು; ರಥಿಕನಾಗಿದ್ದ ಶಚೀ ಕಾಂತನನ್ನು ಕಂಡು ಕುಳಿತಂತೆಯೇ ಒಮ್ಮೆ ಬೆದರಿದಳು; ಮೈಯ್ನವಿ ರೆದ್ದು ಮುಖದಲ್ಲಿ ಬೆವರ್ವನಿಗಳುಕ್ಕಿದವು. ದೃಷ್ಟಿ ಮಲಿನವಾಗಿ ವಿವರ್ಣ ಮುಖವನ್ನು ಮೇಲಕ್ಕೆತ್ತಿದಂತೆ ಮಾಡಿತು. ಅಂಗಚಲನೆಯಿಲ್ಲದೆ ಕುಳಿತಳು.

ಮೋದಿನಿ:—(ಹರಿಣಿಯ ಬೆನ್ನುತಟ್ಟಿ) ಇದೇನಿದು!! ಹರಿಣಿ! ಹೀಗಾಯ್ತೇಕೆ?

ಹರಿಣಿ:—(ಚೇತರಿಸಿಕೊಂಡು) ಅಕ್ಕ! ಮತ್ತೇನೂ ಇಲ್ಲ. ಈತ ನನ್ನು ನೋಡಿದೊಡನೆಯೇ, ನನಗಾಪಾಲಕಪಿತೃವಿನ ಅವ್ಯಾಜವಾತ್ಸ ಲ್ಯವೂ, ನನಗಾಪ್ರೇಮಪಿತೃಗೃಹಾವಾಸಸೌಖ್ಯವೂ, ಪಪಿತ್ರಸ್ನೇಹ ಪ್ರೇರಿತನಾದ ಜಯಂತನ ಸಹೃದಯವೂ ನೆನೆಪಿಗೆ ಬಂದು ಹೀಗಾಯ್ತು! ಅಕ್ಕ !

ಭ್ರಮರಿ:—(ಕುತೂಹಲದಿಂದ) ಈತನಾರು ?

ಮೋದಿನಿ:—ಈತನೇ, ಇಲ್ಲಿಯ ಅಸಿಸ್ಟೆಂಟ್ ಕಲೆಕ್ಟರನಾದ ಶಚೀಕಾಂತ ಮಹಾಶಯನು !

ವಿಲಾಸಿನಿ:—ನಿಮಗೇನಾದರೂ ಸಂಬಂಧವೊ?

ಮೋದಿನಿ:—ಅಹುದು; ನನ್ನ ಕಿರಿಯ ತಂದೆಯ ಮಗಳು, ಆ ಮಣಿಮಾಲೆಯೇ ಈತನ ಪತ್ನಿಯಾಗಿದ್ದವಳು. ಆ ಮಂದಭಾಗ್ಯೆ ತಾನೂ ಅಳಿದು ತನ್ನ ಸ್ವಾಮಿಯನ್ನೂ ಸನ್ಯಾಸಿಯನ್ನಾಗಿ ಮಾಡಿರುವಳು.

ಭ್ರಮರಿ:—ಅದೇನು ? ಅವಳು ಹೋದಮಾತ್ರಕ್ಕೆ ಮತ್ತೆ ಮದುವೆ ಯಾಗಲಾಗದೊ ?

ಮೇದಿನಿ:—ಈತನ ಮನಸ್ಥೈರ್ಯ, ಪಾರಮಾರ್ಥಿಕಜ್ಞಾನ, ಅಭ್ಯಾಸಬಲ, ಇವುಗಳ ಘನತೆಯೇ, ಈತನನ್ನು ವಿಷಯಲೋಭದಿಂದ ಪಾರಾಗಿಸಿ ಬಿಟ್ಟಿರುವುವು. ಜಿತೇಂದ್ರಿಯತೆಯಲ್ಲಿ ಈತನೂ, ನನ್ನ ತಣ್ಣನೂ, ಮೂರನೆಯವನಾಗಿ ಜಯಂತನೂ ಮಾತ್ರಕ್ಕೇ ಸಮಾನರಲ್ಲದೆ ಮತ್ತಾರೂ ಇರಲಾರರು?

ಹರಿಣಿ:—ನಾನಿನ್ನು ಹೊರಡಲೆ? ಅಕ್ಕಾ!

ಮೇದಿನಿ:—ನಾನೂ, ನಿನ್ನ ಹಿಂದೆಯೇ ಇರುವೆನಲ್ಲವೆ? ನಡೆ!

ವಿಲಾಸಿನಿ:—ಯೋಗಿನಿ! ಮತ್ತೆ ನಾಳೆಯೂ ನೋಡಲಾಗುವುದೋ?

ಮೇದಿನಿ:—'ಆಗಬಹುದು' (ಭ್ರಮರೆಯ ಕಡೆಗೆ ತಿರುಗಿ) ಭ್ರಮರಾ! ನಾವಿನ್ನು ಹೊರಡುವೆವು!

ಭ್ರಮರೆ:—ನಿಮ್ಮ ದಾರಿಗೆ ತಡೆಯಿಲ್ಲ.

ಹರಿಣಿ:—(ತಲೆದೂಗಿ ನಗುತ್ತ). "ನಮ್ಮ ದಾರಿಗೆ ತಡೆಯಿಲ್ಲ, ನಿಮ್ಮ ವಿದುಳಿಗೆ ಬಿಡುವಿಲ್ಲ. ತತ್ತ್ವಕ್ಕೆ ನಾಶವಿಲ್ಲವೇ ಇಲ್ಲ" ಎಂದು ಹೇಳುತ್ತ ಮೇದಿನಿಯೊಡನೆ ನಡೆದಳು.

ಚತುರ್ಥ ಪರಿಚ್ಛೇದ

(ಪಾಪಪಂಕ)

ತಾಮಸಿಯರನ್ನು ಕಟಾಕ್ಷಿಸಲೊಲ್ಲದೆ ಕರ್ಮಸಾಕ್ಷಿ ಕೆಮ್ಮರೆಯಾದನು! ದಿನನಾಥನ ವಿಯೋಗದಿಂದ ನಿಶಾಂಗನೆಯೂ ಘೋರಕೃಷ್ಣರೂಪವನ್ನು ಧರಿಸಿದಳು. ಭ್ರಮರೆಯು ಬಗೆಗಾವರಿಸಿದ ಮೋಹಾಂಧಕಾರದಂತೆ ಜಗತ್ತೇ ಅಂಧಕಾರಾವೃತವಾಯಿತ್ತು. ಭ್ರಮರೆಯ ಹೃದಯಾಂಧಕಾರದ ಮಧ್ಯದಲ್ಲಿ ತೋರುತ್ತಿದ್ದ ದುರ್ಭಾವನಾಗ್ರಹಗಳಂತೆ, ಗಗನಮಂಡಲ ಮಧ್ಯವರ್ತಿಗಳಾದ ತಾರಾಗಣಗಳೂ ಮಿಣುಮಿಣುಗುತ್ತ ಅಲ್ಲಲ್ಲಿ ಕಾಣು

ತ್ತಿದ್ದುವು. ಆದರೆ, ಚಂದ್ರನು ಮಟ್ಟಕ್ಕೆ ಜಾರೆಯರ ದೆಸೆಯಿಂದ 'ಕಲಂಕಿ'ಯೆಂಬ ಅಪವಾದಕ್ಕೆ ಪಕ್ಕಾದೇನೆಂದು ಶಂಕಿಸಿ, ಮುಗಿಲ ಸಂದಣಿಯಲ್ಲಿ ಮರೆಯಾದನು! ಮೇದಿನೀಹರಿಣಿಯರು ಹೊರಟು ಹೋದ ಬಳಿಕ, ವಿಲಾಸಿನಿಯೂ ಅಲ್ಲಿ ನಿಲ್ಲಲಿಲ್ಲ. ಭ್ರಮರೆಯೊಬ್ಬಳೇ ಮೊದಲಿದ್ದೆಡೆಯಲ್ಲೇ ಕುಳಿತಿದ್ದಳು. ಅವಳ ಆಗಳಿನ ಸ್ಥಿತಿಯನ್ನು ವರ್ಣಿಸುವಂತಿಲ್ಲ! "ರಾತ್ರಿ ಇಷ್ಟು ಹೊತ್ತಿನಲ್ಲಿ ನಾನು ಎಲ್ಲಿರುವೆನು? ಏನುಮಾಡುತ್ತಿರುವೆನು? ಆರೊಡನಿರುವೆನು?" ಎಂಬ ವಿಚಾರವೇ ಅವಳ ಬಗೆಹತ್ತುವಂತಿರಲಿಲ್ಲ. ಅಗಾಧಚಿಂತೆ! ಅನಿವಾರ್ಯ ಶೋಕ!! ದಾರುಣಯಾತನೆ!!! ಆ ಭೀಕರಾರುಣನೇತ್ರಗಳಿಂದ ಸಂತತಾಶ್ರುಧಾರಾ ಪಾತ! ನೀರವರೋದನ! ನಿಸ್ತಬ್ಧತೆ! ಇತ್ಯಾದಿ, ಇತ್ಯಾದಿ.

ಪಾಪ! ಎಷ್ಟುಹೊತ್ತು ಕುಳಿತು ಅತ್ತರೂ ಸಂತವಿಸುವರಾರೂ ಬೇಡವೇ? ಹೇಗೆ ತಡೆಯಬೇಕು? ಅಳುತಳುತ್ತ ಮನದಳಲು ಮಿತಿ ಮಿಾರಿತು. ದಳ್ಳುರಿಯಮಧ್ಯದಲ್ಲಿ ನಿಂತು, ತಪಿಸುವಂತೆ ತಪಿಸಿದಳು. ಕಡೆಗೆ ತಡೆಯಲಾರದೆ ಎರಡು ಕಯ್ಗಳಿಂದಲೂ ತಲೆಯನ್ನು ಬಿಗಿಹಿಡಿದು, ಊರ್ಧ್ವದೃಷ್ಟಿಯಿಂದ ಉನ್ಮಾದಿನಿಯಂತೆ ವಿಕೃತಸ್ವರದಿಂದ ಚೀರಿದಳು;- "ಏನು? ಈ ನನ್ನ ದುರಂತಚಿಂತೆಗೆ ಕೊನೆಯಿಲ್ಲವೆ? ನನ್ನೀ ಶೋಕಕ್ಕೆ ಪ್ರತೀಕಾರವಿಲ್ಲವೆ? ಈ ನನ್ನ ಅಪಾರವಾದ ಆಶೆಗೆ ಫಲವೇ ಇಲ್ಲವೆ? ಇದೇಕೆ, ಆವುದೂ ಹಿತವಿಲ್ಲ? ಆವುದೂ ಪ್ರಿಯವಲ್ಲವೆ! ಆಶೆಗೆ ಫಲ ವಿಲ್ಲವೆ! ಇಲ್ಲವೆ!! ಇಲ್ಲವೆ!!! ಏಕೆ?"

ಭ್ರಮರೆಯ ಉನ್ಮಾದಪ್ರಲಾಪಕ್ಕೆ ಉತ್ತರವು ಹೊರಟಿತು. "ಇಲ್ಲ! ಇಲ್ಲ!! ಎಲ್ಲವೂ ನಿಷ್ಫಲ!!! ನಿನ್ನ ಭಾವನೆ, ಶುದ್ಧವಾಗಿದ್ದರೆ ಮಟ್ಟಕ್ಕೆ ಶೋಕಕ್ಕೆ ಪ್ರತೀಕಾರವುಂಟು! ತಾಪಕ್ಕೆ ಶಾಂತಿಯುಂಟು!! ಆಶೆಗೆ ಫಲವೂ ಉಂಟು!!! ವಿಷಮವಾದರೆ ಏನೊಂದೂ ಇಲ್ಲ! ಇಲ್ಲ!! ಸತ್ಯವಾಗಿಯೂ ಇಲ್ಲ!!!"

ಭ್ರಮರೆ ಚೀತ್ಕಾರಮಾಡುತ್ತ ತಿರುಗಿ ನೋಡಿದಳು. ಬಗೆಬಗೆ ಯಾದ ಭಾವನೆಗಳಿಂದ ಬೆರಗಾಗಿ ನಿಂತಳು. ದೀಪಹಸ್ತನಾದ ಕಾಮ

ಪಾಲನ ಸ್ವಯಂಸಾಕ್ಷಾತ್ಕಾರ! ಮತ್ತೇನು? ನೋಡಿದಳು; ಉಬ್ಬೇರಿದಳು; ಮತ್ತೊಮ್ಮೆ ನೋಡಿದಳು; ತಣಿಯಲಿಲ್ಲ; ಮತ್ತೆಮತ್ತೆ ನೋಡಿದಳು. ಎಷ್ಟೆಷ್ಟು ನೋಡಿದರೂ ಅಷ್ಟಷ್ಟು ತೃಷೆಯೂ ಹೆಚ್ಚುತ್ತ ಬಂತಲ್ಲದೆ ಸಾಕೆಂದೆನಿಸಲಿಲ್ಲ. ಕಾಮಪಾಲನ ಕಮನೀಯಾನನವನ್ನೇ ನಡನೋಡುತ್ತ, ಮಾತಿಲ್ಲದೆ, ಕದಲದೆ, ಎವೆಯಿಕ್ಕದೆ ನಿಂತಳು.

ಕಾಮ:—(ವಿಸ್ಮಿತನಾಗಿ) ಭ್ರಮರೆ! ಈ ವಿಜಾತೀಯಕಟಾಕ್ಷದ ಉದ್ದೇಶವೇನು?

ಭ್ರಮರೆಗೆ ಕಾಮೋದ್ರೇಕದಿಂದ ವಾಕ್ಶಕ್ತಿ ಕುಂಠಿತವಾಗಲು, ದೇಹಸ್ಮೃತಿಯಿಲ್ಲದೆ ಕಾಮಪಾಲನ ಬಲದ ಕಯ್ಯನ್ನು ಬಲವಾಗಿ ಹಿಡಿದಳು.

ಕಾಮಪಾಲನು ಚಕಿತನಾದನು; ಉನ್ಮಾದಿನಿಯ ಹಿಡಿತವನ್ನು ಬಿಡಿಸುವುದೇನು ಆತನಿಗೆ ಕಷ್ಟವಾಗಿರಲಿಲ್ಲ; ಆದರೂ, ಪ್ರಮಾಣಿಸಬೇಕೆಂದು ತಡೆದು, ಎಡದ ಕಯ್ಯಲ್ಲಿದ್ದ ಸೀಮೆಯ ದೀವಟಿಗೆಯನ್ನು ಭ್ರಮರೆಯ ಕೃಷ್ಣಾನನಕ್ಕೆ ಹಿಡಿದು ನೋಡಿ, ತಲೆದೂಗುತ್ತ "ಏನಿದು? ಭುಜಂಗ ಬಲದ್ವಾರ"

ಭ್ರಮರೆಯ ಸ್ಥಿತಿಗತಿಗಳು ಆಗಳೇನಾಯ್ತೆಂದು ಹೇಳಲಾರಿಗೆ ಸಾಧ್ಯವು? ಗ್ರಾಹಕರ ಶಕ್ತಿಯಿದ್ದಷ್ಟೂ ಅವರವರೇ ಅವರ ಬಗೆಗೊಪ್ಪುವಂತೆ ಬಗೆಯಲಿ! ಎಂತೂ ಭ್ರಮರೆಯ ಕೃಷ್ಣಾಂಗವೇನೋ ಕಾಮಪಾಲನ ವ್ಯಂಗೋಕ್ತಿಗೆ ಗಡಗಡಿಸಿತು. ಕೆಂಪಡರಿದ ಕಣ್ಗಳಿಂದ ಬಿಸಿ ನೀರ್ವನಿಗಳು ಉದುರುತಿದ್ದುವು.

ಕಾಮ:—(ಕರುಣೆಯಿಂದ) ಇದೇಕೆ? ಭ್ರಮರೆ! ಹೀಗೇಕೆ ಅಳಬೇಕು? ಏನಾಗಿರುವುದು?

ಭ್ರಮರೆ:—(ಬಹುಕಷ್ಟದಿಂದ ಕಣ್ಣೀರನ್ನು ತಡೆದು ವಿಕೃತಸ್ವರದಿಂದ) ಅಳಬೇಡವೆ?

ಕಾಮ:—ಏಕೆ?

ಭ್ರಮರೆ:—ತಡೆಯಲಾರದೆ.

ಕಾಮು :—ಏನನ್ನು ?

ಭ್ರಮರೆ :—ಯಾತನೆಯನ್ನು—

ಕಾಮು :—ಏತರಿಂದ ?

ಭ್ರಮರೆ:—ಇಷ್ಟು ದಿನಗಳನ್ನೂ ಅತ್ತು ಅತ್ತು ಕಳೆದುದಾಯಿತು. ಇನ್ನೆಷ್ಟು ಮಟ್ಟಿಕ್ಕೂ ತಡೆಯಲಾರೆನು. ಎಷ್ಟಾದರೂ, ಪ್ರತಿಫಲವಾಗಿ ಸವಿನುಡಿಯೊಂದನ್ನಾದರೂ ಕೇಳಿದುದಿಲ್ಲ ?

ಕಾಮು :—(ಕೈಬಿಡಿಸಿಕೊಂಡು) ಸವಿನುಡಿಯಾವುದು ? ಬಿರುನುಡಿಯಾಡಿದುದೇನು? ನಿನ್ನ ಮನೋಲ್ಲಾಸಕ್ಕೆ ತಕ್ಕ ವಿದ್ಯಾವ್ಯಾಸಂಗದಲ್ಲಿ ಕೊರತೆಯಾದುದೇನು ?

ಭ್ರಮರೆ:—ವಿದ್ಯೆ ಹಾಳಾಗಲಿ ! ಅದಾರಿಗೆ ಬೇಕು ?

ಕಾಮು :—(ಚಕಿತನಾಗಿ) ಮತ್ತೇನು ಬೇಕು ?

ಭ್ರಮರೆ:—ಮೊದಲು ವಾಗ್ದಾನವಾಗಲಿ ! ಸಲ್ಲಿಸುವೆನೆಂದು !

ಕಾಮು :—ಅದೆಂದೂ ಆಗದು. ಅವುದೊಂದನ್ನೂ ಪೂರ್ವಾಪರ ವಿಚಾರಮಾಡದೆ ದುಡುಕಿ ಕೆಟ್ಟುಹೋಗುವ ಆಧುನಿಕ ಸುಧಾರಕನು ನಾನಲ್ಲ. ಕರ್ತವ್ಯಕ್ಕೆ ವಿರೋಧವಾಗದ ಮಾತ್ರಾವ ಕಾರ್ಯವನ್ನಾದರೂ ಶಕ್ತ್ಯುಚಿತವಾಗಿ ನಡೆಯಿಸುವೆನು.

ಭ್ರಮರೆ :—ಹಾಗಿದ್ದರೆ ಹೇಳಬೇಕಾದುದಿಲ್ಲ. ಹೋಗಬಹುದು ! ನನಗೀಗಳೇ ಮರಣವೂ ಸಿದ್ಧವಾಗಿರುವುದು !

ಕಾಮು :—ಅದಾವುದೋ ಹೇಳಬಾರದೆ? ಭ್ರಮರ! ಉಚಿತವಾದುದಾದರೆ ಮಾಡುವೆನು. ಅನುಚಿತವಾದರೆ ಬಿಡುವೆನು. ಅಷ್ಟಕ್ಕೇ ನಿನಗಾಗುವ ಕುಂದೇನು ? ಎಂತೂ ನಿನಗೆ ಹಿತವನ್ನು ಮಾಡಬಲ್ಲೆನು.

ಭ್ರಮರೆ:—ಮಹಾಶಯ ! ನಾನಿಂದು ಉನ್ಮಾದಿನಿ ! ನನ್ನನ್ನು ಸಂತಾಪಾಗ್ನಿ ಸುಡುತ್ತಿರುವುದು ; ಅದನ್ನು—

ಕಾಮು :—ನಿನಗೇಕೆ ಇಷ್ಟರ ಉನ್ಮಾದವು ?

ಭ್ರಮರೆ :—(ವಿಕಾರವಾಗಿ ನಕ್ಕು) ಏಕೆಂದು ಕೇಳುವುದು ಅಲ್ಲವೆ? ನಿಮ್ಮ ನಿಷ್ಠುರತೆಯಿಂದಲ್ಲವೆ ?

ಕಾಮು :—ಏನು, ಏನು ? ನನ್ನ ನಿಷ್ಠುರತೆ ?

ಭ್ರಮರೆ:—ಮತ್ತೇನು? ನನ್ನ ಸುಖಸಂಗತಿಗೇಕೆ ತಡೆಯಾಗುವುದು?

ಕಾಮು:—ನನ್ನನ್ನೇಕೆ ನಿಷ್ಠುರಪಡಿಸುವೆ? ಭ್ರಮರೆ! ಅಮರನನ್ನು ನಾನು ತಡೆಯಲಿಲ್ಲ?

ಭ್ರಮರೆ:—ನಿಮ್ಮಲ್ಲಿ ನಿಷ್ಠುರತೆ ಇಲ್ಲ, ನನಗೆ ಅಮರನ ಮಾತು ಬೇಡ!

ಕಾಮು:—ಮೆಚ್ಚಿ ಬಂದವನನ್ನೇ ಬೇಡವೆನ್ನುವುದೇನು?

ಭ್ರಮರೆ:—ಅವನ ದ್ರೋಹಚಿಂತನೆಯೇ! ಅವನೇ ನನ್ನನ್ನು ಈ ಉನ್ಮಾದಕ್ಕೆ ಗುರಿಮಾಡಿದವನು. ಇನ್ನಾತನಲ್ಲಿ ಪ್ರೀತಿ ಸಲ್ಲದು.

ಕಾಮು:—ಮರುಳೆ! ವಿಷಯಾತುರತ್ವದ ಫಲಾನುಭವವೇ ಇದಲ್ಲದೆ ಅಮರನೊಬ್ಬನ ದೋಷವಲ್ಲ. ನಿನ್ನ ಕಾಮಾಂಧತೆಯೇ ನಿನ್ನೀ ತಾಪಕ್ಕೆ ಕಾರಣವಲ್ಲದೆ ಇತರರು ಕಾರಣರಲ್ಲ! ಕಾಮಮೋಹಿತರ ನಡೆಯೇ ಇದು! ಆತ್ಮದ್ರೋಹಿಗಳಿಗಾಗುವ ಅಲಂಘ್ಯಫಲವೇ ಇದು!!

ಭ್ರಮರೆ:—ಮಹಾಶಯ! ಕ್ಷಮಿಸಿರಿ; ಕಟಾಕ್ಷಿಸಿರಿ!! ನನಗೆ ಲಜ್ಜೆಯಿಲ್ಲ! ಭಯವಿಲ್ಲವೇ ಇಲ್ಲ!! ಈಗಳಾದರೂ ಆರ್ತೆಯನ್ನು ಕೈಹಿಡಿದೆತ್ತಿ ಕಾಪಾಡಿರಿ!

ಕಾಮು:— (ಕ್ರೋಧಕ್ಲೇಶಗಳಿಂದ) ಛಿ! ತೊಲಗತ್ತ!! ಪಾಪಿಷ್ಠೆ! ನಿನ್ನೀ ಕುಲಟಾವರ್ತನದಲ್ಲಿ ಸ್ವಲ್ಪವನ್ನು ತಿಳಿದಿದ್ದರೂ ನಾನು ನಿನ್ನನ್ನು ಈ ಮನೆಗೆ ಸೇರಿಸುತ್ತಿರಲಿಲ್ಲ. ನಿನ್ನನ್ನು ಅನಾಥೆಯೆಂದೂ, ನಿಜವಾದ ವಿದ್ಯಾರ್ಥಿನಿಯೆಂದೂ, ಅಮರನನ್ನು ಮಟ್ಟಕ್ಕೆ ಪುನರ್ವಿವಾಹವಿಧಿಯಿಂದ ವರಿಸಿದವಳೆಂದೂ ಹೇಳುಕೇಳಿಕೆಯಿಂದ ನಂಬಿ, ನಿನಗಿಲ್ಲಿ ಸ್ಥಳವನ್ನು ಕೊಟ್ಟೆನಲ್ಲದೆ, ನಾನು ನನ್ನ ವಿಷಯತೃಪ್ತಿಗಾಗಿ ಕೊಟ್ಟುದಲ್ಲ. ಹಾಗೆ ನಾನು ವಿಷಯಾಸಕ್ತನಾಗಿದ್ದರೆ, ನರಕಕ್ಕೆ ಹೆಬ್ಬಾಗಿಲಾಗಿರುವ ನಿನ್ನಲ್ಲೇ ಬರಬೇಕೆ? ನ್ಯಾಯಧರ್ಮನೀತಿಗಳಿಂದ ನನಗನುಕೂಲೆಯಾಗಿರುವ ಕನ್ಯೆಯೇ ಸಿಕ್ಕಲಾರಳೇ? ಮರುಳೆ! ಏನೆಂದು ಬಗಳುವೆ? ಕಾಮಪಾಲನನ್ನು ಆರೆಂದು ತಿಳಿದಿರುವೆ? ಸುಖಬಾಹಿರನಾದ ವಿಧವೆಯೆಂದೆಣಿಸಿದೆಯೊ? ಈತನಲ್ಲಿ, ದೀನರೂ,

ವಿದ್ಯಾರ್ಥಿಗಳೂ, ಕರ್ತವ್ಯತತ್ಪರರೂ ಆದವರಿಗೆ ಮಟ್ಟಕ್ಕೇ ಆಶ್ರಯವು ದೊರೆವುದಲ್ಲದೆ, ನಿನ್ನಂತಹ ವಿಷವಿಗ್ರಹಗಳಿಗೆ ಸಿಕ್ಕಲಾರದು. ನಿನ್ನನ್ನು ಇಂತಹಳೆಂದರಿಯದೆ ಸೇರಿಸಿದುದಕ್ಕೆ ವಿಷಾದಪಡುತ್ತಿರುವೆನು.

ವಿಚಾರಶೂನ್ಯೆ!

ಅನಾಥಭಗಿನಿಯರ ಭವಿಷ್ಯಜ್ಜೀವನನೌಕೆ ಆನಂದಸಾಗರದಲ್ಲಿ ನಡೆವಂತಾಗಲೆಂದೇ ಈ ಸಂಘವನ್ನು ವಿರ್ಮಿಸಿದೆನಲ್ಲದೆ, ನನ್ನ ವಿಷಯ ತರ್ಪಣತೆಗೆ ಮಾಡಿದ ಹೂಟವೆಂದು ಭಾವಿಸಬೇಡ! ಈ ವಿಶ್ವದಲ್ಲಿ ಸ್ತ್ರೀ ಸಂತಾನವೆಲ್ಲವೂ ನನ್ನ ಪವಿತ್ರಸೋದರಸ್ನೇಹದಿಂದ ಸಂಭಾವಿತವೆಂದು ತಿಳಿ! ಅವರಲ್ಲಿ ನಾನೆಂದೂ ವಿಕಲ್ಪವನ್ನೆಣಿಸಲಾರೆನು. ನಿನ್ನೀ ದುರಭಿಮಾನವನ್ನು ದೂರಮಾಡು. ಎಂದೆಂದಿಗೂ ನಾನು ನಿನಗೊಳಗಾಗೆನು. ಅದೋ ಆ ವಿಲಾಸಿನಿಯನ್ನು ನೋಡು; ಅವಳು ನಿನ್ನ ಸಖಿಯೇ. ಪುನರ್ವಿವಾಹಿತೆಯಾದರೂ ಒಂದೇ ಕಡೆಯಲ್ಲೇ ದೃಷ್ಟಿಯಿಟ್ಟಿರುವಳಲ್ಲದೆ ನಿನ್ನಂತೆ ಅತಿಕಾಮುಯಾಗಿಲ್ಲ; ಅಲ್ಲದೆ, ತನ್ನ ಮುಂದಿನ ಮಾರ್ಗಕ್ಕೆ ಸಹಕಾರಿಯಾದ ವಿದ್ಯಾಧನವನ್ನೂ ಅವಳು ನಿರಾಕರಿಸುವುದಿಲ್ಲ. ನೀನೇಕೆ ಹೀಗೆ ತಪಿಸಬೇಕು?

ಸುಬಾಹಿರೆ!

ನಮ್ಮ ಮೇದಿನಿಯನ್ನಾದರೂ ನೋಡಬಾರದೆ? ಅದಲ್ಲವೇ ಸ್ತ್ರೀ ಜನ್ಮದ ಸಾರ್ಥಕತೆ! ಅದಲ್ಲವೇ ವೈಧವ್ಯಾನುಭವದ ಕೃತಾರ್ಥತೆ!! ಈ ನಮ್ಮ ಅಬಲಾಸಮಾಜವು ಆರಿಂದ ಸುಧಾರಿಸಲ್ಪಡುವುದೆಂದು ಬಲ್ಲೆ? ಆ ನನ್ನ ಮೇದಿನಿಯ ಸುಬೋಧಾಮೃತವಲ್ಲವೇ ಆ ದೀನಸೋದರಿಯರ ಉತ್ತೇಜನಕಾರಿ? ಅವಳ ಮಾತೂ ಹಾಗಿರಲಿ; ಈ ನಮ್ಮ ಹರಿಣಿಯನ್ನಾದರೂ ನೋಡು! ಧನಸಂಪತ್ತಿಗೆ ಕೊರತೆಯಿಲ್ಲ; ಗುಣಕ್ಕೆ ಮಿತಿಯಿಲ್ಲ; ವಿದ್ಯಾ, ಸಾಹಸ, ಕೌಶಲ, ಇತ್ಯಾದಿಗಳಿಗೆ ಪಾರವೇ ಇಲ್ಲ. ಇಷ್ಟಿದ್ದರೂ, ಅವಳು ಒಮ್ಮೆಯಾದರೂ ಮೆಯ್ಮರೆದು ಮಲೆತು ನಡೆದುದಿಲ್ಲ. ಸತೀಧರ್ಮಕ್ಕೆ ಅವಳೆಂದೂ ಪ್ರತಿಕೂಲೆಯಾಗುವಂತಿಲ್ಲ. ವಿಷಯ ಲಾಲಸೆಯೆಂಬ ವಿಷಮಸನ್ನಿಪಾತಜ್ವರವು, ಅವಳನ್ನು ಕನಸಿನಲ್ಲಿಯೂ

ಮುಟ್ಟುವಂತಿಲ್ಲ. ಹೆಚ್ಚೇಕೆ? ಅವಳ ನಡೆನುಡಿಗಳಿಂದಲೇ, ಹಿಂದೆ ಕಳೆದುಹೋದವರ ನೆನೆಪು ಮುಂದಾಗಿ ಬಂದು ನಿಲ್ಲುವಂತಿರುವುದು. ಅವಳಲ್ಲಿ ನೆಲೆಗೊಂಡಿರುವ ಗುಣಸಮೂಹಗಳಲ್ಲಿ ಒಂದೊಂದು ಗುಣವೇ ಜಗನ್ಮೋಹಕವೆಂಬಲ್ಲಿ ಎಲ್ಲಾ ಗುಣಗಳಿದ್ದೂ ಕೇಳತಕ್ಕುದೇನು! ಆದರ್ಶರಮಣಿಯೆಂದರೆ ಹರಿಣಿಯೇ! ಕರ್ತವ್ಯಕ್ಷಮತೆಯೆಂದರೆ, ಅವಳಲ್ಲಿಯೇ! ಇನ್ನುಮುಂದಾದರೂ ಅವಳ ಹಿತಸೂಚನೆಗೆ ಕಿವಿಗುಡು. ಅಕಾರ್ಯಕ್ಕಾಗಿ ಪಶ್ಚಾತ್ತಾಪಪಡು. ಇದನ್ನು ಚೆನ್ನಾಗಿ ನಂಬು. ಸಾರಿಸಾರಿ, ಇದೇ ಮೊದಲನೆಯಸಾರಿ, ಇದೇ ಕಡೆಯಸಾರಿಯಾಗಿ ಹೇಳುವೆನು. ಎಚ್ಚತ್ತುಕೊಳ್ಳು; ಸುಖಮಾರ್ಗವನ್ನು ಕಂಡುಹಿಡಿ!

ಭ್ರಮರೆ:—(ಕಯ್ಮುಗಿದು, ವಿಕೃತಸ್ವರದಿಂದ) ಮಹಾಶಯ! ಕ್ಷಮಿಸಿರಿ! ನನಗೀ ಶ್ರೀರಂಗನೀತಿ ಬೇಕಾಗಿಲ್ಲ. ಆ ಹರಿಣಿಯೇ ನನ್ನ—

ಕಾಮ :— ಏನು, ಏನೆಂದೆ? ಧೂರ್ತೆ? ಹರಿಣಿಯೇ ಮೂಲ!! ಅಲ್ಲವೆ?

ಭ್ರಮರೆ :—ಮಹಾತ್ಮರು! ಆವನನ್ನು ಪ್ರಿಯನೆಂದು ನಂಬಿದ್ದೆನೋ ಈಗ ಅವನೇ ನನಗೆ ಅಪ್ರಿಯನಾಗಿರುವುದಾರಿಂದ? ಆವಾತನು ನನ್ನ ಸರ್ವಸ್ವವನ್ನೂ ಸೂರೆಗೊಂಡನೋ, ಅವನೇ ಈಗ ಕೃತಘ್ನನಾಗಿರುವುದಾರಿಂದ? ಅವಳಿಂದಲ್ಲವೇ? ಅವಳ ಆ ಮೋಹಿನೀವಿದ್ಯೆಯಿಂದಲ್ಲವೇ? ಮಹಾಶಯ! ನಾನೆಂತೂ ಸಹಿಸಲಾರೆನು. ನನಗೀಗ ಆರ ಮಾತೂ ಬೇಕಾಗಿಲ್ಲ. ಈಗ ನನ್ನನ್ನು ಕೊಲ್ಲುವುದೂ ಕಾವುದೂ ನಿಮ್ಮಲ್ಲೇ. (ಎಂದು ಹೇಳಿ ಮುಂದೆ ಹೇಳಲಾರದೆ, ಅಳುತಳುತ್ತ ಕಾಮಪಾಲನ ಕಾಲಮೇಲೆ ಬಿದ್ದಳು.)

ಕಾಮಪಾಲನ ಕಣ್ಣಲ್ಲಿ ನೀರು ತಡೆಯಿಲ್ಲದೆ ಸುರಿಯಿತು. ವ್ಯಾಕುಲಿತಹೃದಯದಿಂದಲೂ ಅಡಿಗಡಿಗೆ ಹೊರಡುವ ನಿಟ್ಟುಸಿರಿಂದಲೂ ಕೂಡಿ ಸಾನುಕಂಪಸ್ವರದಿಂದ ಹೀಗೆ ಹೇಳಿದನು. "ನಿರ್ಭಾಗ್ಯೆ! ಕತ್ತೆಗೇಕೆ ತತ್ತ್ವಬೋಧೆ? ನೀನಾದೆ ಮೃತಜೀವಿನಿ; ನಿನ್ನಿಂದಾಯ್ತು ಮಹಿಳಾ ಜಗತ್ತಿಗೇ ಕೊರತೆ? ಇನ್ನು ಚಿಂತಿಸಿ ಫಲವೇನು? ನಿನ್ನ ಅವಿಚಾರಾಂಧ

ತೆಗೆ ಔಷಧವಿಲ್ಲ! ನಿನ್ನ ಉನ್ಮತ್ತತೆಗೆ ಪ್ರತೀಕಾರವಿಲ್ಲ!! ನೀನೂ ಕೆಟ್ಟು, ನಿನಗಾಗಿ ಇತರ ಸೋದರರನ್ನೂ ಕೆಡಿಸುತ್ತಿರುವ ನಿನ್ನ ಕೆಟ್ಟ ನಡತೆಗಾಗಿ ನಾನು ವ್ಯಥೆಪಡುವೆನು. ಪಾಪಿಷ್ಠೆ! ನಿನಗೆಂತೂ ಕಾಮುದಮನಶಕ್ತಿ ಯಿಲ್ಲದಿದ್ದಪಕ್ಷದಲ್ಲಿ ಬಹಿರಂಗವಾಗಿ ಒಬ್ಬನಲ್ಲೇ ನೆಲೆಗೊಂಡು ನಿನ್ನಿಚ್ಛೆ ಬಂದಂತೆ ಸುಖಿಸು. ಬ್ರಹ್ಮಚಾರಿಗಳನ್ನೂ, ತರುಣವಿದ್ಯಾರ್ಥಿಗಳನ್ನೂ, ಅವ್ಯವಸ್ಥಿತಗೃಹಸ್ಥಾಶ್ರಮಿಗಳನ್ನೂ ಏಕೆ ನರಕಕೂಪಕ್ಕೆಳೆಯುತ್ತಿರುವೆ? ಅವರ ನೈಜಸುಖಕ್ಕೆ ನೀನೇಕೆ ವಿಘ್ನಕಾರಿಣಿಯಾಗುವೆ? ನೀನೆಂತಾದರೂ ಹಂಬಲಿಸು, ಹೇಗಾದರೂ ನರಳುತ್ತಿರು, ನಾನೆಂತೂ ನಿನಗೊಳಗಾ ಗುವ ಕಾಮುಕನಲ್ಲ. ಈವರೆಗೆ ನನ್ನೀ 'ವಿದ್ಯಾಶ್ರಮ'ದಲ್ಲಿ ನಿನಗೆ ಆಶ್ರಯ ವಿತ್ತು ವಂಚಿತನಾಗಿದ್ದುದಕ್ಕಾಗಿ ಪಡುವ ಅನುತಾಪವೇ ನನಗೆ ಸಹನಾ ತೀತವಾಗಿರುವುದು. ಉನ್ಮತ್ತೆ! ಇನ್ನಾದರೂ ಅಸೂಯೆಯನ್ನು ದೂರ ಮಾಡು; ವಿವೇಕವನ್ನು ಹಿಡಿ. ಹರಿಣೀಚಿತ್ತಾಪಹರಣವು ಅಮರನಂತಹ ಕುತ್ಸಿತರಿಂದಾಗಲೀ, ಇಲ್ಲವೆ ಮತ್ತಾವ ನಿಪುಣಕಲಾವಿದರಿಂದಾಗಲೀ ಸಾಧ್ಯವಾಗತಕ್ಕುದಲ್ಲ. ಅವಳಾರೆಂದು ತಿಳಿದೆ? ಪ್ರತ್ಯಕ್ಷಶಕ್ತಿ ದೇವತೆಯೇ ಅವಳೆಂದರಿತು ಅವಳ ಹಿತಸೂಚನೆಗೆ ಕಿವಿಗೊಡು. ಅವಳ ಸತ್ಸಹವಾಸದಿಂದಾದರೂ ಆತ್ಮಾವಲಂಬಿನಿಯಾಗಿ ಸುಖಿಸು. ಹಾಗೆ ನೀನು ಮಾಡದಿದ್ದರೆ, ನಿನಗೆಂದೆಂದಿಗೂ ನರಕಕೂಪದ ಅಗಾಧಪಂಕದಿಂದ ನಿಷ್ಕೃತಿಯಿಲ್ಲ. ಇದೇ ಕಡೆಯಮಾತು" ಎಂದು ಹೇಳಿ ಕಾಮಪಾಲನು ನಿಲ್ಲದೆ ಹೊರಟುಹೋದನು.

ಏನೆನ್ನುವ? ಕಾಮಪಾಲನನ್ನು ಆವ ನಾಮಾವಳಿಯಿಂದ ಸ್ತುತಿಸಿ ಧನ್ಯರಾಗುವ? ಇಕ್ಷ್ವಾಕುವೇ? ಹರಿಶ್ಚಂದ್ರನೇ? ಇವರಿಬ್ಬರಲ್ಲಿ ಆರೆಂದು ಹೇಳಬೇಕು! ಇಕ್ಷ್ವಾಕು, ದೇವನಾರಿಯರನ್ನೂ ಮದನೇಂದ್ರರನ್ನೂ ಧಿಕ್ಕರಿಸಿ ಸಂಕಲ್ಪಸಿದ್ಧಿಯಿಂದ ಶಾಶ್ವತಕೀರ್ತಿಗೆ ಪಾತ್ರನಾದ ಪುಣ್ಯ ಪುರುಷನು. ಹರಿಶ್ಚಂದ್ರನೂ ವಿಶ್ವಾಮಿತ್ರನ ಮಾನಸಕನ್ಯೆಯರನ್ನು ಕಡೆಗಣಿಸಿ ತನಗೊದವಿದ ಎಡರೆಲ್ಲವನ್ನೂ ಸಾಹಸದಿಂದ ದಾಟಿ, ಅಜರಾ ಮರವಾದ ಯಶಶ್ಶರೀರದಿಂದ ಬೆಳಗುತ್ತಿರುವ ಮಹಾನುಭಾವನು!!! ಇವರಿಬ್ಬರೂ ಬಹುಕಾಲದವರೆಂದರೆ, ಇತ್ತಲೀಚೆಗೆ ಮತ್ತಾರು? ದೇವ

ವ್ರತನಾದ ಭೀಷ್ಮನಲ್ಲವೆ? ಅಹುದಹುದು !! ತಡೆಯೇಕೆ? ಆತನೇ ಆ ಪುಣ್ಯಪುರುಷನೇ, ಈ ನಮ್ಮ ಕಾಮಪಾಲನೊ !!! ಧನ್ಯ! ಕಲಿಭೀಷ್ಮ! ಧನ್ಯಧನ್ಯ!! ನಿನಗಿದೊ ಇದೊ ಕೋಟಿಕೋಟಿ ಧನ್ಯವಾದಗಳು !!! ಆದರೆ ಒಮ್ಮೆ ಹೇಳು,—ಈ ನಮ್ಮ ಆಧುನಿಕ ಭ್ರಾತೃವರ್ಗದಲ್ಲಿ ನಿನ್ನಂತಹರೆಷ್ಟು ಮಂದಿಯಿರಬಹುದು? ನಿನ್ನಂತೆ ತಂದೆಯ ವಿಷಯತೃಪ್ತಿಗಾಗಿ ಸತ್ಯವತಿಗೆ ಮಾತಿತ್ತು, ರಾಜ್ಯದ ಹಂಗುದೊರೆದು, ಅಂತಹ ಅಂಚಿಯ ಆಳ್ತಿಯನ್ನು ಜರೆದು, ಭೋಗಾಶೆಯನ್ನು ತೊರೆದು, ಆಜನ್ಮಬ್ರಹ್ಮ ನಿಷ್ಠನಾಗಿರುವ ಘೋರವ್ರತಕ್ಕೆ ಕೈಸೇಡಿದ ಧೀರನಾವನು? ಅಂದಿನ ಫಲಾನುಭವವೇ ಸಾಲದೆಂದು, ಇಂದು ಈ ಬಗೆಯಿಂದ ಇದಿರೆಸಿಂದು, ಕಾಡಿ ಬೇಡಿ ಕಾಲ್ಗೆರಗಿದ ಕಾಮಿನಿಯನ್ನು ಕಡೆಗಣಿಸಿ, ಕರ್ತವ್ಯದಲ್ಲಿ ಜಾಗ್ರತನಾಗಿರುವ ನಿನ್ನಂತೆ ನಿಶ್ಚಲರಿನ್ನಾರಿರುವರು? ಧನ್ಯ! ಕಾಮ ಪಾಲ! ನೀನಲ್ಲವೇ ಪುಣ್ಯಪುರುಷ? ನಿನ್ನ ಇಂದಿನ ಗುಣಕಥನದಿಂದೀ ಪರಿ ಚ್ಛೇದಕ್ಕೂ ಧನ್ಯವಾದವಿರಲಿ! ಆಗಲಿ; ಧನ್ಯಾತ್ಮ! ಈ ನಮ್ಮ ಭ್ರಾತೃ ವರ್ಗದಲ್ಲಿ, ಆಧುನಿಕ-ತರುಣವಿದ್ಯಾರ್ಥಿಗಳೆನ್ನಿಸುವ ಕೆಲವಂದಿ ಅನ್ಯಾವ ಸ್ಥಿತರಲ್ಲಿ, ಅಸಂಸ್ಕೃತಪಾತ್ರಗಳಲ್ಲಿ ನೀನು ಈ ನಿನ್ನ ಅಮೋಘವಾದ ಅಂಶರೂಪದಿಂದ ನೆಲೆಗೊಂಡು ನಿರಂತರವೂ ಶತಮುಖದಿಂದ ಧನ್ಯವಾದ ವನ್ನು ಹೊಂದುತ್ತಿರು! ನಿನ್ನೀ ವೀರಸತ್ವದ ಬಲದಿಂದಾದರೂ ಅಸ್ಥಿರಚಿತ್ತರಾದ ವಿಲಾಸಪ್ರಿಯರು, ವಿಷಮಸನ್ನಿಪಾತಕ್ಕೆ ಪಕ್ಕಾಗದಂತೆ ಮಾಡು! ಲೀಲಾವತಿಯರ ಮಾಯಾಜಾಲಕ್ಕೆ ಮರುಳಾಗಿ, ಮಡದಿ ಮಕ್ಕಳನ್ನೂ ಒಡಲುಗುಡಿಸಲನ್ನೂ ಕಡೆಗಣಿಸಿ, ಕುಲಗೇಡಿಗಳಾಗು ತ್ತಿರುವ ನಿರ್ಭಾಗ್ಯರಿನ್ನಾದರೂ ತಲೆಯೆತ್ತಿಕೊಳ್ಳುವಂತೆ ಮಾಡು! ಅಶಿಕ್ಷಣದಿಂದ, ಅವಿವೇಕಾಂಧರಾಗಿ ಲೋಕವನ್ನೀ ಲಯಮಾಡು ತ್ತಿರುವ ನಾರೀವ್ಯಕ್ತಿಗಳನ್ನು ದುಃಖಾರ್ಣವದಿಂದ ಪಾರುಮಾಡು! ಅನಾಥೆಯರಾಗಿ, ಅಭಿಮಾನಪರರ ಅಪವಾದಕ್ಕೆ ಪಕ್ಕಾಗಿ, ಆರ್ತನಾದ ಮಾಡುತ್ತಿರುವ ನಿನ್ನೀ ದೀನಭಗಿನಿಯರ ಅಭ್ಯುದಯಕ್ಕೆ ತಕ್ಕ ದಾರಿ ಯನ್ನು ಹೂಡು! ಅಬಲೆಯರನ್ನು ಆಕ್ರಮಿಸಿರುವ ಮಾಲಿನ್ಯವನ್ನು ಪರಿಹರಮಾಡು !! ಮಾಡುಮಾಡು !!! ಮಹಾತ್ಮನೇ! ಅವಿಶ್ರಾಂತ

ಶ್ರಮದಿಂದ ನಿನ್ನೀಮಾತೃಭೂಮಿಯನ್ನು ಉದ್ಧರಿಸು; ಸತೀಧರ್ಮ ಪ್ರಕಾಶಕ್ಕೆ ವಸತಿಯನ್ನು ಕಲ್ಪಿಸು; ಆಗಳಲ್ಲವೇ ನಮ್ಮಲ್ಲಿ ನಿತ್ಯಾನಂದ ಸಾಮ್ರಾಜ್ಯವು ಸ್ಥಿರವಾಗಬೇಕು! ಅಂತಾಗಲಿ!!

ಪಂಚಮ ಪರಿಚ್ಛೇದ

(ನವಜ್ಯೋತಿ)

ನವಜ್ಯೋತಿ! ವಿದ್ಯುತ್ಪ್ರಕಾಶ!! ಇದೇ ಶುಕ್ರೋದಯ!! ಗಗನಮಂಡಲದಲ್ಲಿ ಮೂಡಿರುವುದೊಂದು ನೂತನಪ್ರಕಾಶ! ಇಂದು ಹರಿಣೀಹೃದಯಾಕಾಶದಲ್ಲಿ ಮುಸುಕಿದ್ದ ಚಿಂತಾಮೇಘಮಧ್ಯದಲ್ಲಿ ನವಜ್ಯೋತಿ ಪ್ರಕಾಶವಾಗಿರುವುದು! ಸುಕ್ಕುಹಿಡಿದುಹೋಗಿದ್ದ ಮುಖಬಿಂಬದಲ್ಲಿ ಇಂದು ಕೌತುಕದ ಸೂಚನೆಗಳು ಹೊರಬೀಳುತ್ತಿರುವುವು! ಮತ್ತೇನು? ಹರಿಣಿ ಕಿರುಮನೆಯಲ್ಲಿ ಕುರ್ಚಿಯಮೇಲೆ ಕುಳಿತು, ಕೈಬೆರಲುಗಳನ್ನು ಆಡಿಸುತ್ತ ಅದಾವುದನ್ನೋ ಗುಣಿಸುತ್ತಿರುವಳು. ಅವಳ ಆ ಸ್ಮೇರಾನನದಿಂದ ಹೊರಬೀಳುವ ಕಾಂತಿಲಹರಿ ಅವಳ ಆ ಕಟಾಕ್ಷಚಂದ್ರಿಕೆಯಿಂದ ಮತ್ತಷ್ಟು ಸಳಸಳದಾಡುತ್ತ ಈ ಕತ್ತಲೆಯ ವೇಳೆಯಲ್ಲಿಯೂ ಕಿರುಮನೆಯನ್ನು ಆಹ್ಲಾದದಾಯಕವಾದುದನ್ನಾಗಿ ಮಾಡಿ ಬೆಳಗಿಸುತ್ತಿರುವುದು.

ಇದೇನು? ನಿಶ್ಶಬ್ದವಾಗಿದ್ದ ಆ ಕಿರುಮನೆ; ಒಮ್ಮೆಂದೊಮ್ಮೆಯೇ ವಿಕೃತಕಂಠದಿಂದ ತಲೆಕೆಳಗಾಗುತ್ತಿರುವುದೇಕೆ? ಹರಿಣಿ ಚಕಿತೆಯಾಗಿ ತಲೆದೂಗಿದಳು; ತಿರುಗಿ ನೋಡಿದಳು; ಮುಖವು ಗಂಭೀರವಾಯಿತು! ಅಮರನಾಥನ ಭೀಮದರ್ಶನ!!! ಭೀಕರಕೃಷ್ಣದೇಹ! ಉನ್ಮಾದಗ್ರಸ್ತವಾದವಿಕೃತಾನನ! ಭ್ರೂಭಾಗಗಳ ಅಶ್ವವೇಗಲಂಘನ! ಅಷ್ಟೇ ಅಲ್ಲ; ವಿಜಾತೀಯಕಟಾಕ್ಷ, ವಿಕೃತಚಲನೆ; ಸಾಲದುದಕ್ಕೆ ಹಸ್ತಗಳೂ ಕಟಿ

ಪ್ರದೇಶದಲ್ಲಿ ನೆಲೆಗೊಂಡಿರುವುವು! ಬಾಯಿ ತೆರೆಯಲ್ಪಟ್ಟು ಬಿಲದ್ವಾರದಂತೆ ತೋರುತ್ತಿರುವುದು! ಇಂತಹ ರೂಪದರ್ಶನದಿಂದ ಹರಿಣಿಯು ಮನಸ್ಸು ಎಷ್ಟು ಆನಂದಿಸಿರಬಹುದೆಂಬುದನ್ನು ಸತೀಜನಕೋಮಲಹೃದಯೆಯು ರಾದ ನಮ್ಮ ಸೋದರಿಯರೇ ಭಾವಿಸಿ ತಿಳಿಯಲಿ. ಎಂತೂ ಹರಿಣಿ ಪರಾ ಙ್ಮುಖಿಯಾಗಿ ಕುಳಿತಳು. ಆದರೇನು? **"ನೀ ಕೊಡೆ ನಾ ಬಿಡೆ ಕೇಳಯ್ಯಾ"** ಎಂಬಂತೆ ಅಮರನಾಥನು ಅಷ್ಟಕ್ಕೆ ಸುಮ್ಮನಾಗುವನೇ? ಹರಿಣಿಯ ಮುಂಗಡೆಯಲ್ಲಿಯೇ ಬಂದು ನಿಂತು, ಮತ್ತೆ ನಗೆಯ ಕೋಲಾಹಲವನ್ನೆಬ್ಬಿಸಿದನು.

ಹರಿಣಿ:—(ಉದಾಸೀನಭಾವದಿಂದ) ಹೀಗೇಕೆ ನಕ್ಕು ನಾಯ ಬೇಕು?

ಅಮರ:—(ತ್ವರಿತದಿಂದ) ನಾವುದೇ ನಿನ್ನ ಇಷ್ಟವೇ ಹರಿಣಿ?

ಹರಿಣಿ:—(ಶಾಸ್ತ್ರೆಯಾಗಿ) ನಾಯುದಿರಬೇಕೆಂದೇ ಹೇಳಿದುದು.

ಅಮರ:—ಭಲೆ! ಹರಿಣಿ! ಇಂದು ಪ್ರಸನ್ನೆಯಾಗಿರುವೆಯಲ್ಲವೆ? (ಹೇಳುತ್ತ ಹೇಳುತ್ತ ಅನುಮತಿಯನ್ನು ಕೇಳದೆಯೇ ಮುಂದಿದ್ದ ಮೇಜದ ಮೇಲೆ ಕುಳಿತುಕೊಂಡನು.)

ಹರಿಣಿ:—(ಕುಳಿತಿದ್ದ ಕುರ್ಚಿಯೊಡನೆ ಹಿಂದಕ್ಕೆ ಸರಿದು) ಆವಾ ಗಳೂ ಪ್ರಸನ್ನೆಯೇ!

ಅಮರ:—ಅದನ್ನು ಮಟ್ಟಕ್ಕೆ ನಂಬಲಾರೆನು! ಇಂದೇನು ಇಷ್ಟು ಲಾಘವವು ಹರಿಣಿ?

ಹರಿಣಿ:—ಲಾಘವವೋ, ಗೌರವವೋ ನಾನರಿಯೆನು. ಮಹಾ ಶಯ, ಕ್ಷಮೆಯಿರಲಿ?

ಅಮರ:—ಇಲ್ಲ, ಇಲ್ಲ! ನಿನ್ನ ಸಲುಗೆಯೇ ನನಗೆ ಬೇಕಾದುದು! ಸಲುಗೆಯಿಂದಲೇ ಕರೆ! ಆದರೆ, ಹರಿಣಿ! ಇಂದಿನವರೆಗೆ ಈ ಮೌನ ವಾವರಿಸಿತ್ತೇಕೆ?

ಹರಿಣಿ:—ಮಾನವಪ್ರಕೃತಿ; ಮೇಲೆ ಅಬಲಾಸ್ವಭಾವ!

ಅಮರ:—ಆಗಲಿ, ಆ ಅಬಲಾಸ್ವಭಾವವೇ ಈವರೆಗೂ ನನ್ನನ್ನು ದೂರಸ್ಥನನ್ನಾಗಿ ಮಾಡಿದ್ದುದು; ಈಗಲೂ ಅದೇ ದೂರಭಾವವೋ?

ಹರಿಣಿ :—(ಕಿರುನಗೆಯಿಂದ) ಏಕೆ? ಆತ್ಮೀಯನೇ !

ಅಮರ :—(ತನು ಪುಳುಕಾಂಕುರಿತವಾಗುತ್ತಿರಲು ತೊದಲು ನಾಲಗೆಯಿಂದ) ಹೇಗೆ ಹೇಗೆ ? ಹರಿಣಿ ! ಆತ್ಮೀಯನು ಹೇಗೆ ?

ಹರಿಣಿ :—ಕಾಮಪಾಲನಿಗೆ ಹೇಗೋ....?

ಅಮರ :—ಕಾಮಪಾಲನೆಂದರೆ ನನ್ನ ಸೋದರಮಾವನ ಮಗನೇ !

ಹರಿಣಿ :—ನಾನೂ ಆತನ ತಂಗಿಯೇ, ಆತನ ಚಿಕ್ಕಪ್ಪನ ಮಗಳೇ !

ಅಮರ :—(ಸಂಭ್ರಾಂತತೆಯಿಂದ) ಏನು ? ದಾಮೋದರಮಾವನ ಮಗಳು ?

ಹರಿಣಿ :—ಅಹುದು, ಏಕೆ ಚಕಿತನಾಗುವೆ ?

ಅಮರ :—ಹೇಗೆ ? ದಾಮೋದರನಿಗೆ ಮಣಿಮಾಲೆಯಲ್ಲದೆ ಮಕ್ಕಳಿನ್ನಾರಿದ್ದರು ?

ಹರಿಣಿ :—(ತಲೆದೂಗಿ) ನಿಜ ! ಮುಂದಿರುವ ವಸ್ತುವನ್ನೇ ತಿಳಿಯಲಾರದ ಕುರುಡನಿಗೆ ಹೊರಗಣ ವಿಚಾರವೇನು ಗೊತ್ತು ? ಪಾಪ ! ನೀನು ಕಂಡಂತೆ ಮಣಿಮಾಲೆಯೊಬ್ಬಳೇ ಮಗಳೆಂದು ತಿಳಿದುದರಿಂದಲ್ಲವೇ ನೀನು ಆತನ ಧನಕ್ಕೆಲ್ಲಕ್ಕೂ ಕೈಚಾಚಿದುದು ? ಅದಕ್ಕೆಂದಲ್ಲವೇ ಮಣಿಮಾಲೆಯನ್ನು ಕದ್ದೊಯ್ದು ಕಾಮಪಾಲು ಮಾಡಿದುದು ?

ಅಮರ :— ಹಾ ! ಏನು ? ನಾನೇನು ಮಾಡಿದುದು ?

ಹರಿಣಿ :—ಮತ್ತೇನೂ ಮಾಡಲಿಲ್ಲ ! ಮಣಿಮಾಲೆಗೊಂದು ಬಗೆಯಾಗಿಯೂ, ಅವಳ ತಾಯಿಗೊಂದು ಬಗೆಯಾಗಿಯೂ ಗತಿಕಾಣಿಸಿದೆ ! ಅಷ್ಟೆ !

ಅಮರ :—(ವಿವರ್ಣಮುಖವನ್ನು ಮೇಲಕ್ಕೆತ್ತಿ) ಇದೇನು ಹೊರೆ ? ನಾನೇನು ಮಾಡಿದೆನು ? ನನಗೇಕೆ ದೂರು ? ಮನೆಗೆ ಬೆಂಕಿಹತ್ತಿ ತಾಯಿ ಮಗಳು ಸತ್ತರೆ ನಾನದಕ್ಕೆ ಹೊಣೆಯೆ ?

ಹರಿಣಿ :—(ವ್ಯಂಗ್ಯಸ್ವರದಿಂದ) ಪಾಪ ! ದೊಡ್ಡ ಹೊರೆ !! ಬರಿದೆ ದೂರು !!! ಹೇಗೆ ಸಹಿಸಬೇಕು ? ಅಮರನಾಥ ! ನೀನೇಕೆ ಹೊಣೆಯಾಗುವೆ ? ಬೆಂಕಿಗೆ ಹೊಣೆಯಾದವಳು ಮಣಿಮಾಲೆಯ ತಾಯಿಯೇ ;

ಅಲ್ಲದೆ ನೀನಾಗಲಿಲ್ಲ ! ಆದರೇನು ? ಮನೆಯೂ ಹೋಯಿತು ; ತಾಯಿಯೂ ಸತ್ತಳು ; ನಿನ್ನ ಆಶಾಪೂರ್ತಿಗಾಗಿ ಆ ಮಣಿಮಾಲೆಯಾದರೂ ನಿನಗೆ ದಕ್ಕದಾದಳು ; ಅಲ್ಲವೆ ?

ಅಮರ :—(ಗದ್ಗದಸ್ವರದಿಂದ) ಹರಿಣಿ ! ನಾನು . . ನಾನು ನಿರಪರಾಧಿ ! ನನ್ನ ಮೇಲೇಕೆ ಬರಿದೆ ನಿಷ್ಠುರೋಕ್ತಿಯಾಡುವೆ ? ಇಲ್ಲದ ಸಲ್ಲದಮಾತನ್ನು ನಿನಗಾರು ಹೇಳಿದವರು ?

ಹರಿಣಿ :— (ನಕ್ಕು) ನನಗಾರಾದರೂ ಹೇಳುವುದೇಕೆ ? ನಿನ್ನ ಕರ್ಮದೇವತೆಯೇ ಕುಣಿದಾಡುತ್ತಿಲ್ಲವೇನು ? ಅಮರ ! ನಿರಪರಾಧಿ ? ಅಹುದಹುದು ! ನೀನು ನಿಜವಾಗಿಯೂ ನಿರಪರಾಧಿಯೇ !! ಅತ್ತೆಯನ್ನು ಮೃತ್ಯುದೈವಕ್ಕೊಪ್ಪಿಸಿದ ನಿರಪರಾಧಿ ! ಅನ್ಯಸತಿಯಾದ ಮಣಿಮಾಲೆಯ ಸತೀತ್ವವನ್ನು ಸೂರೆಗೊಳ್ಳಲೆಳಸಿದ್ದ ನಿರಪರಾಧಿ !! ಕಾಮಾಂಧತೆಯಿಂದ ಕಲೆಕ್ಟರಿಗೆ ಪತ್ನೀಮರಣದ ಮಿಥ್ಯಾಪವಾದವನ್ನಿಟ್ಟಿದ್ದ ನಿರಪರಾಧಿ !!! ಎಷ್ಟೆಷ್ಟು ಬಗೆಯಲ್ಲಿ ಗಣಿಸಿದರೂ, ಅಷ್ಟಷ್ಟು ಬಗೆಯಿಂದಲೂ ನಿನ್ನ ನಿರಪರಾಧಕ್ಕೆ ಗಣನೆಯೇ ಇಲ್ಲ ! ನೀನು ಇನ್ನೇನನ್ನು ಮಾಡಿದರೂ ಎಷ್ಟೆಷ್ಟು ಬೊಂಕಿದರೂ ನಿನ್ನ ಕಲಂಕವು ಮರೆಯಾಗುವುದೇನು ? ಅಮರ ! ಯಾರಲ್ಲಿ ನಿನ್ನೀ ಪ್ರಮಾಣವಾಕ್ಯ ? ನಿನ್ನ ಪ್ರಕೃತಿ, ಸ್ವಭಾವ, ಮನೋಗತ, ಇವುಗಳನ್ನೆಲ್ಲಾ ಆದ್ಯಂತವಾಗಿ ತಿಳಿದಿರುವ ನನ್ನಲ್ಲಿಯೂ ಬಯಿತ್ತಿಡುತ್ತಿರುವೆಯಲ್ಲವೆ ? ನಿನ್ನ ಸತ್ಯಸಂಧತೆಯನ್ನು ನೀನೇ ಕೊಚ್ಚಿಕೊಳ್ಳಬೇಕಲ್ಲದೆ ಮತ್ತಾರೂ ಹೊಗಳಲಾರರು !

ಅಮರನು ಕುಳಿತಂತೆಯೇ ಗದಗದಿಸಿದನು. ದೈನ್ಯದಿಂದ ಕೈನೀಡಿ ಹೀಗೆ ಕೇಳಿದನು. "ಹರಿಣಿ ! ದಯವಿಟ್ಟು ಕ್ಷಮಿಸು ! ಕಾಠಿಣ್ಯದಿಂದ ಕೊಲ್ಲಬೇಡ."

ಹರಿಣಿ:—ಕಾಠಿಣ್ಯವೇಕೆ ? ಅಮರ ! ಕಾಠಿಣ್ಯಕ್ಕೆ ನೀನು ಯೋಗ್ಯನೆ ? ದೀನವಾನರನಲ್ಲಿ ಮಾನಾಭಿಮಾನಗಳೇ ! ನಿನ್ನ ಕೆಟ್ಟ ನಡತೆಗಾಗಿ ದುಃಖಿಸುವೆನು ! ಆ ನನ್ನ ತಂಗಿಯನ್ನೂ ಮಿಥ್ಯಾಲಾಪದ ವೈಧವ್ಯರೋಗಕ್ಕೆ ತುತ್ತಾಗಿಸಿದುದಕ್ಕಾಗಿ ಬೇಸರಪಡುವೆನು ! ಅವಳ ಸ್ವಾಮಿಯನ್ನು ವಂಚಿಸಿ ಘಾತಿಸಿದ ನಿನ್ನ ಮಿತ್ರದ್ರೋಹಕ್ಕಾಗಿ ನಿನ್ನನ್ನು

ವಿಷದಂತೆ ಕಾಣುವೆನು. ಇನ್ನೇನು ಹೇಳಬೇಕು? ಅಮರ! ಇಂದಿಗೇ ನನಗೀ ಅಜ್ಞಾತವಾಸವು ಸಾಕಾಗಿರುವುದು. ಇಂದೇ ಮನದಲ್ಲಿದ್ದುದನ್ನೇ ಹೊರತೆಗೆದಿಟ್ಟು ನಾನೂ ಹೊರಹೊರಡುವೆನು!

ಅಮರನು ಹುಚ್ಚನಂತಾದನು. ಎದ್ದುನಿಂತು, ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿ, ಬಿಕ್ಕಿ ಬಿಕ್ಕಿ ಅತ್ತನು. ಉಬ್ಬಸವು ಕಡಿಮೆಯಾದ ಬಳಿಕ ಹರಿಣಿಯ ಕಡೆಗೆ ಕೈಚಾಚಿ ಗದ್ಗದಸ್ವರದಿಂದ ಹೀಗೆ ಮೊರೆಯಿಟ್ಟನು: 'ಹರಿಣಿ! ಕ್ಷಮಿಸು! ನೀನು ನನಗೆ ಸೋದರಮಾವನ ಮಗಳೆಂತಾದೆಯೋ ನಾನರಿಯೆನು. ಹೇಗೂ ನೀನು ನನ್ನ ಯಾವದ್ವೃತ್ತಾಂತವನ್ನೂ ತಿಳಿದಿರುವೆ? ಇನ್ನು ನಿನ್ನಲ್ಲಿ ಮರೆಮಾಡುವಂತಿಲ್ಲ. ಎಲ್ಲವನ್ನೂ ಹೇಳುವೆನು. ಹರಿಣಿ! ನಾನು ಹಾಗೆ ಮಾಡಿದುದೇತರಿಂದೆನ್ನುವೆಯೋ? ಮಣಿಮಾಲೆ ಹುಟ್ಟಿದಾಗಳೇ ಅವಳನ್ನು ನನಗೆ ಕೊಡುವುದಾಗಿ ನನ್ನ ಮಾವನು ಮಾತುಕೊಟ್ಟಿದ್ದನು; ಅವಳು ನನ್ನವಳಾಗುವಳೆಂಬ ಆಶೋತ್ತರದಿಂದಲೇ ನಾನು ನನ್ನ ವಿದ್ಯಾವ್ಯಾಸಂಗದ ಮಧ್ಯದಲ್ಲಿಯೇ ಮಣಿಮಾಲೆಯ ವ್ಯಾಸಂಗಕ್ಕೂ ಪ್ರಯಾಸಪಟ್ಟೆನು! ಅವಳಲ್ಲಿ ಬಹಳವಾದ ಸಲುಗೆಯನ್ನಿಟ್ಟೆನು. ಇಷ್ಟಾಗಿದ್ದರೂ, ನನ್ನ ಮಾವನು ಸತ್ತುಹೋದುದರಿಂದ ನಮ್ಮ ಅತ್ತೆ ನನ್ನನ್ನು ಕುರೂಪಿಯೆಂದೂ ಕುತ್ಸಿತನೆಂದೂ ಅಲ್ಲಗಳೆದು, ರೂಪಕ್ಕೂ, ಧನಾಢ್ಯತೆಗೂ, ವಿದ್ಯೆಗೂ ಬೆರಗಾಗಿ ಶಚೀಕಾಂತನಿಗೆ ಮಗಳನ್ನು ಕೊಟ್ಟು ಪುರಸ್ಕರಿಸಿದಳು. ಇದರಿಂದ ನನಗೇನಾಯ್ತೆಂಬುದನ್ನು ನಾನು ಹೇಗೆ ಹೇಳಲಿ? ಹರಿಣಿ! ಆವ ಹರಿಗೋಲಿಂದ ಆಶಾನದಿಯನ್ನು ದಾಟಬೇಕೆಂದು ಸಂಕಲ್ಪಿಸಿದ್ದೆನೋ ಅದೇ ಹರಿಗೋಲು, ಅನ್ಯನ ಕಯ್ಯ ವಶವಾದಂದು ನಾನು ಉಂಡ ಊಟವು ಎಂತಿದ್ದುದೆಂದು ಹೇಳಬೇಕು? ಅಂದಿನಿಂದ ನನ್ನ ಮನಸ್ಸು ನನ್ನದಲ್ಲವಾಯ್ತು. ಆಶಾಭಂಗದಿಂದ ಕ್ಲೇಶವೂ, ಅಪಮಾನಕ್ಕಾಗಿ ರೋಷವೂ, ನನ್ನದಾಗಬೇಕಾಗಿದ್ದ ವಸ್ತು ಅನ್ಯರ ಪಾಲಾದುದಕ್ಕಾಗಿ ದ್ವೇಷವೂ, ಈ ಮೂರು ಬಗೆಯ ಪ್ರಬಲಾವೇಶವೇ ನನ್ನ ವಿದ್ಯಾವ್ಯಾಸಂಗ, ಕಲಾಕೌಶಲ, ಸಾಹಸೋದ್ಯಮ, ಸ್ಥಿರಸಂಕಲ್ಪ, ಇವುಗಳೆಲ್ಲವನ್ನೂ ವಿಕಾರರೂಪಕ್ಕೆ ತಂದುಬಿಟ್ಟಿತು. ಈ ತ್ರಿವಿಧಸಂತಾಪಾಗ್ನಿಗೆ ತಕ್ಕ ಪ್ರತೀ

ಕಾರವನ್ನು ಮಾಡದಿರೆನೆಂದು ಹಠವನ್ನು ತೊಟ್ಟೆನು. ಹಠಸಾಧನೆಗೆಂದೇ ಶಚೀಕಾಂತನು ಸತ್ತನೆಂಬ ಸುಳ್ಳು ಸುದ್ದಿಯನ್ನು ಮೊದಲು ಮಣಿಮಾಲೆಗೂ ಅವಳ ತಾಯಿಗೂ ಮುಟ್ಟಿಸಿದೆನು. ಆ ಬಳಿಕ, ಮನೆಗೆ ಬೆಂಕಿಯನ್ನು ಹತ್ತಿಸಿ ಅವಳನ್ನು ನನ್ನ ಕೋಪಾಗ್ನಿಗೆ ಬಲಿಯಾಗಿ ತೆಗೆದುಕೊಂಡೆನು; ಮಣಿಮಾಲೆಯನ್ನು ಅಪಹರಿಸಿದೆನು; ಶಚೀಕಾಂತನಿಗೂ ಯಥಾರ್ಥವಾಗಿ ತೋರುವಂತೆ ಮಣಿಮಾಲಾಮರಣವೃತ್ತಾಂತದ ಮಿಥ್ಯಾಲಾಪವನ್ನು ತಲಪಿಸಿದೆನು! ಇಷ್ಟಾದರೂ, ನನ್ನ ಅಭಿಸಂಧಿಯೇ ಭೇದಿಸಲ್ಪಟ್ಟಿತು!

ಹರಿಣಿ:—ನಿನ್ನ ದುರಾಶೆಯೇ ನಿನ್ನ ಸುಖಕ್ಕೆ ಮೃತ್ಯು! ನೀನೇ ಮಣಿಮಾಲೆಗೆ ಮೊದಲು ಮಾಡಿದ ವಿದ್ಯಾದಾನಕ್ಕಾಗಿ ನೀನೆಂತಹ ಪ್ರತೀಕಾರವನ್ನು ಮಾಡಿರುವೆ? ಅವಳನ್ನು ನೀನು ಮನ್ನಿಸಿದ್ದ ಪಕ್ಷದಲ್ಲಿ ನಿನಗೆ ಅವಳು ಎಷ್ಟು ಕೃತಜ್ಞೆಯಾಗಿರುತ್ತಿದ್ದಳು? ನೀನು ಅದನ್ನು ಬಗೆಯದೆ, ಒಗಗಾಣದೆ, ಬೇಗೆಗೊಳಗಾದೆ! ಆರೇನು ಮಾಡಲಾಗುವುದು? ಅಮರ! ಚೆನ್ನಾಗಿ ನೋಡಿಹೇಳು! ನೀನೆಷ್ಟರ ಅನರ್ಥಕರನೆಂಬುದನ್ನು ತಿಳಿದು ಹೇಳು! ನನ್ನ ಪಾಲಕಪಿತೃವಾದ ಆ ದಯಾಪರ ಗೋಪೀನಾಥರಾಯರನ್ನು ಶೋಕಕ್ಕೀಡುಮಾಡಿದವನಾರು? ಆ ನನ್ನ ಪ್ರಾಣಾಪ್ತಭ್ರಾತೃವಾದ ಜಯಂತನನ್ನು ಚಿಂತಾರ್ಣವದಲ್ಲಿ ಮುಳುಗಿಸಿದವನಾರು? ಸತ್ಯವ್ರತರಾದ ಕಲೆಕ್ಟರನ್ನು ಸಂತಾಪಾಗ್ನಿಗೆ ಆಹುತಿಯಾಗಿತ್ತಿರುವನಾರು? ಅಮರ! ಇಷ್ಟುಮಾಡಿದೆಯಾದರೂ ತಣಿಯದೆ ಪವಿತ್ರಪ್ರೇಮಮಯನಾದ ನನ್ನ ಅಣ್ಣನನ್ನು ನೀನೆಷ್ಟು ವಂಚಿಸಿರುವೆ? ನಿಮ್ಮನ್ನು ಯಥಾರ್ಥಪುತ್ರರೆಂದೇ ನಂಬಿರುವಾತನಲ್ಲಿ ನೀನೆಷ್ಟು ಬೊಂಕಿರುವೆ? ಇದಕ್ಕೆ ನಿನಗಾಗುವ ಪ್ರಾಯಶ್ಚಿತ್ತವೇನು ಹೇಳಬಲ್ಲೆಯಾ? ಮರುಳೆ! ನಾನು ನಿನ್ನ ಸೋದರ ಮಾವನ ಮಗಳೆಂತಾದೆನೆಂದು ಕೇಳಿದೆಯಲ್ಲವೆ? ನನ್ನ ತಂದೆ ನಿನ್ನಂತೆ ಜಾರನಲ್ಲ, ಚೋರನಲ್ಲ, ಪರಸ್ವಾಪಹರಣವನ್ನು ಮನದಲ್ಲಿಯೂ ಚಿಂತಿಸಿದಂತಹನಲ್ಲ. ಎಣಿಕೆಯಿಲ್ಲದ ದುರ್ಗುಣದ ಗಣಿಕೆಯರಿಗಾಗಿ ಆತನೆಂದೂ ಮನಮಾರಿದುದಿಲ್ಲ. ದಕ್ಷಿಣಕರ್ಣಾಟಕದಲ್ಲಿ ಕಲಾಶೋಧನಕ್ಕೆಂದು ಹೋಗಿದ್ದ ಕಾಲದಲ್ಲಿ, ನನ್ನ ತಾಯನ್ನು ಮದುವೆಯಾದನು.

ನನ್ನ ತಾಯಿ, ಪತಿಯೊಡನೆ ಹೊರಟುಬರಲಿಚ್ಛಿಸಿದರೂ ತನ್ನ ತಾಯಿಯ ಬಲಾತ್ಕಾರದಿಂದ ಅಲ್ಲಿಯೇ ನಿಲ್ಲಬೇಕಾಯಿತು. ನಮ್ಮ ತಂದೆಯಾದರೂ ಪತ್ನಿಯನ್ನು ಬಿಟ್ಟುಬರಬೇಕೆಂದಿರಲಿಲ್ಲ; ನಿರ್ವಾಹವಿಲ್ಲದೆ ಗರ್ಭವತಿಯಾಗಿದ್ದವಳನ್ನು ಬಿಟ್ಟು ಹೊರಟು ಬಂದರು. ಅವರ ಕಾಲಾವಧಿಯಾದರೂ ಅನಿರೀಕ್ಷಿತವಾಗಿ ಸಂಘಟಿಸಿದುದರಿಂದ ಅತ್ತಲಿನವರನ್ನು ಕರೆಯಿಸಿಕೊಳ್ಳಲಾಗಲಿಲ್ಲ. ಎಂತೂ, ನನಗೆ ತಾಯ್ತಂದೆಗಳ ವಿಯೋಗವು ಬಾಲ್ಯದಲ್ಲೇ ಉಂಟಾದುದರಿಂದ ಹೆರವರನ್ನು ಆಶ್ರಯಿಸಿ ಜೀವಿಸಬೇಕಾಯಿತು. ಆಶ್ರಯದಾತರ ಸಾಹಾಯ್ಯದಿಂದಲೇ ಅಲ್ಲಿಂದ ಹೊರಟುಬಂದು ಜಯಂತನ ಮಹಾಶ್ರಯವನ್ನು ಹೊಂದಿ ಮುಂದಕ್ಕೆ ಬಂದೆನು. ಇಲ್ಲದಿದ್ದರೆ, ಏನಾಗುತ್ತಿದ್ದೆನೋ ಹೇಳಲಾರೆನು. ಹೆಚ್ಚಾಗಿ ಹೇಳಲೇಕೆ? ಜಯಂತನಲ್ಲಿಗೆ ಬಂದಮೇಲೆ ನಿನ್ನ ನಡೆ, ನುಡಿ, ಬಗೆ, ಮುಂತಾದುವುಗಳನ್ನು ಪ್ರತ್ಯಕ್ಷಪರೋಕ್ಷವಿಚಾರಗಳಿಂದ ತಿಳಿದುಕೊಂಡೆನು. ಇನ್ನೂ ಹೇಳುವುದುಂಟೇನು?

ಅಮರ:—(ಕಂಪಿತನಾಗಿ) ನನಗಿನ್ನೇನು ಗತಿ? ಹರಿಣಿ! ಕೊಲ್ಲುವೆಯಾ! ಇವೆಲ್ಲವೂ ಕಾಮಪಾಲನಿಗೂ ತಿಳಿದುಹೋಯಿತೇ?

ಹರಿಣಿ:—ಗತಿಯಾವುದು? ಪ್ರಾರಬ್ಧವೊಂದೇ ಗತಿ! ನಾನೇಕೆ ಹೇಳಲಿ! ನಿನ್ನಲ್ಲಿ ನನಗೆ ದ್ವೇಷವೇನು? ಅವನಿಗೆ ಎಳ್ಳಷ್ಟು ತಿಳಿದಿದ್ದರೂ ಇಷ್ಟರಲ್ಲಿಯೇ ನಿಮ್ಮಿಬ್ಬರಿಗೂ ಪರಿಣಾಮವಾಗುತಿದ್ದಿತು. ನನಗದಲ್ಲ ಬೇಕಾದುದು! ನೀನು ಹೇಗಾದರೂ ಸುಖಿಯಾಗಬೇಕೆಂಬುದೊಂದೇ! ಇರಲಿ; ಗಂಗಾಧರನು ಬರಲಿಲ್ಲವೊ?

ಅಮರ:—ಬಂದು ವಿಲಾಸಿನಿಯಲ್ಲಿರುವನು?

ಹರಿಣಿ:—ನೀನೇಕೆ ವಿಳಂಬಿಸುವೆ? ಹೋಗು; ಬೇಗ ಹೋಗು! ನಿನಗಾಗಿ ಭ್ರಮರೆ ಕಾತರಿಸುತ್ತಿರುವಳು. ಈಗಲೇ ಹೋಗಿ ಸಂತವಿಸು!

ಅಮರ:—ಕ್ಷಮಿಸು! ಹರಿಣಿ! ನಾನಿನ್ನು ಅವಳನ್ನು ವಿವಾಹಿಸಲಾರೆನು.

ಹರಿಣಿ:—ಏಕೆ? ಅವಳಲ್ಲಿದ್ದುದೆಲ್ಲವೂ ಮುಗಿಯಿತೆಂದೋ? ಹಾಗೆ ಮಾಡಕೂಡದು; ಅಮರ! ಅನ್ಯಾಯವಾಗಿ ಅವಳನ್ನು ದುರ್ಬೋಧೆ

ಯಿಂದ ಕೆಡಿಸಿದುದಕ್ಕಾಗಿ ಅವಳಲ್ಲಿ ಕ್ಷಮೆಬೇಡು; ಮುಂದೆಯಾದರೂ ಅವಳು ಎಚ್ಚತ್ತುಕೊಳ್ಳುವಂತೆ ಅವಳನ್ನು ಸಲ್ಮೆಯಿಂದಲೇ ತಿದ್ದುಪಡಿ ಮಾಡು. ಅವಳ ಆರ್ತತೆಯನ್ನು ಹೋಗಲಾಡಿಸಿ ವಿಷಯಲಾಲಸೆಯನ್ನು ಪೂರ್ಣಮಾಡು. ಸುಮ್ಮನೇಕೆ ಹೊತ್ತುಕಳೆವೆ?

ಅಮರ:—ಹರಿಣಿ! ಈ ನಿಷ್ಠುರವಾಕ್ಯವನ್ನು ನಾನು ತಡೆಯಲಾರೆನು. ದಯೆಯಿಟ್ಟು ಹೇಳು? ಕೈಹಿಡಿದು ಕಾಪಿಡುವೆಯೊ? ಕಡೆಗಣಿಸಿ ಕೊಲ್ಲುವೆಯೊ?

ಹರಿಣಿ:—ಆಜನ್ಮಬ್ರಹ್ಮಚಾರಿಣಿಯಾಗಿರುವ ಹರಿಣಿಯಲ್ಲೇಕೆ ಮೋಹಗೊಳ್ಳುವೆ? ನಿನಗೆ ಬೇರೆ ಕನ್ಯೆಯರಾರೂ ದೊರೆಯರೇ? ಕನ್ಯಾಭಾವವಾದರೂ ಕೊರತೆಯೇನು? ವಿರಹಿಣಿಯರಾದರೂ ದೊರೆಯದಿರಲಾರರಲ್ಲವೆ? ಬರಿದೇಕೆ ದುರಾಶೆ?

ಅಮರ:—ಹೇಗಾದರೂ ಜರಿದಾಡು; ಹರಿಣಿ! ನಾನಂತೂ ನಿನ್ನ ಗುಣ, ನಡೆ, ನುಡಿ, ಜಾಣ್ಮೆ, ಮುಂತಾದವುಗಳಿಗೆ ಮನಸೋತು ಮರುಳಾಗಿ ಹೋಗಿರುವೆನು. ಈ ಪೃಥ್ವಿಯಲ್ಲಿ ನಿನಗೂ ಮಿಕ್ಕಿನ ಸುಖದಾಯಕವಸ್ತುವಿಲ್ಲವೆಂದು ನಂಬಿರುವೆನು.

ಹರಿಣಿ:—ಒಂದುವೇಳೆ ಹರಿಣಿ ತಿರಸ್ಕರಿಸಿದರೆ?

ಅಮರ:—ಅದೇ ಅವಳ ಇಷ್ಟವಾದರೆ ನಾನು ಮಾಡತಕ್ಕುದೇನು? ಸನ್ಯಾಸಿಯಾಗಿ ವನಾಂತರವನ್ನು ಹೊಗುವುದೊಂದೇ ಅಲ್ಲದೆ ನನಗೆ ಮತ್ತೆಲ್ಲಿ ನೆಲೆ?

ಹರಿಣಿ:—(ಕಿರುನಗೆಯಿಂದ) ಏಕೆ? ನೆಲೆಗೇನು ಕೊರತೆ! ಕಲೆಗೇನು ಕುಂದು? ವಿಲಾಸಿನಿಯನ್ನು ಲೀಲಾಮಾತ್ರದಿಂದ ದಾರಿ ತಪ್ಪಿಸಿದುದನ್ನು ನೆನೆ! ಭ್ರಮರೆಯನ್ನು ಕುಲಗೆಡಿಸಿ, ಸುಖಬಾಹಿರೆಯನ್ನಾಗಿ ಮಾಡಿ ಅವಳ ಸರ್ವಸ್ವವನ್ನೂ ಸುಲಿದುಕೊಂಡು, ಈಗಲೀಗ ಉನ್ಮತ್ತೆಯಾಗಿ ತಪಿಸುವಂತೆ ನಿರ್ಘೃಣನಾಗಿರುವುದನ್ನು ನೆನೆ! ಇದೇ ಅಲ್ಲವೇ ನಿನ್ನ ಸನ್ಯಾಸಧರ್ಮ? ಇದಲ್ಲವೇ ನಿನ್ನ ಯೋಗವೃತ್ತಿ? ಆಗಲಿ; ಮಾಡು! ಅಮರ! ಈವರೆಗೂ ನೀನೆಷ್ಟು ಮಂದಿ ಗಣಿಕಾಂಗನೆಯರ ನಯನೋತ್ಪಲಗಳಲ್ಲಿ ತುಂಬಿಯಾಗಿದ್ದು ನರಳಿ ಬಂದಿರುವೆ? ಇನ್ನೆಷ್ಟು ಮಂದಿ

ಯನ್ನು ಹೊಂದಲಿರುವೆ? ನಿನ್ನ ದೇಹದಲ್ಲಿ ದುಷ್ಟರೋಗದ ಬಾಧೆಯೆಷ್ಟಿಷ್ಟಿರುವುದು? ಆಲೋಚಿಸಿಹೇಳು. ಮೂರ್ಖ! ವಿದ್ಯೆಯೆಲ್ಲಿರುವುದು? ಭಾಷಾಪರಿಶ್ರಮಮಾತ್ರದಲ್ಲಿಯೋ? ಸುಶಿಕ್ಷಣೆಯಲ್ಲಿಯೋ? ನಿನ್ನ ಪಾಂಡಿತ್ಯಪ್ರಭೆಯನ್ನು ಸುಡು! ನಡೆ; ನಿಲ್ಲದೆ ಹೊರಟುಹೋಗು! ನಿನ್ನ ಚಾಕಚಕ್ಯವನ್ನು ಮತ್ತಷ್ಟು ಪ್ರಕಟಮಾಡು! ಇನ್ನೆಷ್ಟುಮಂದಿ ಅನಾಥಭಗಿನಿಯರ ಸತೀತ್ವವನ್ನು ಅತಲಜಲದಲ್ಲಿ ಕೆಡಹುವೆಯೋ, ಎಷ್ಟುಮಂದಿ ನಿರ್ಭಾಗ್ಯೆಯರು ನಿನ್ನ ದುರ್ಬೋಧನೆಗೆ, ಇಲ್ಲವೇ, ನಿನ್ನ ದುರಭಸಂಧಿಗೆ ಪಕ್ಕಾಗಿ ಶೋಕಾಗ್ನಿಯಿಂದ ಮಾತೃಭೂಮಿಯನ್ನು ಶೋಷಿಸುವರೋ, ನೋಡುತ್ತಿರುವೆನು; ಮಾಡುಹೋಗು! ನಿನ್ನೀ ವಿಡಂಬನೆಗೆ ಹರಿಣೀಚಿತ್ತವು ಕರಗಲಾರದು. ಏಕೆ ನಿಂತಿರುವೆ? ಮುಂದೆ ಬಂದು ಅಪಾಯಕ್ಕೆ ಗುರಿಯಾಗದೆ ಹಿಂದಕ್ಕೆ ಸರಿದು ಹೊರಟುಹೋಗು.

ಅಮರ:—(ಭಯಕಾತರನಾಗಿ ಕಂಪಿಸುತ್ತ ಹಿಮ್ಮೆಟ್ಟಿ) ಹರಿಣಿ! ಕುಸುಮಕೋಮಲವಾದ ಸ್ತ್ರೀಹೃದಯದಲ್ಲಿ ಇಷ್ಟು ಕಾಠಿನ್ಯವೆಲ್ಲಿಂದ ಬಂದುದು? ಈ ಕ್ರೂರವಾಗ್ಬಾಣಗಳಿಂದ ಇರಿದು ಕೊಲ್ಲಬೇಕೆಂದು ಎಷ್ಟು ದಿನಗಳಿಂದಲೂ ಚಿಂತಿಸುತ್ತಿದ್ದೆ? ಈ ಮಾತನ್ನು ಅಂದೇ ಹೇಳದೆ ಬಚ್ಚಿಟ್ಟಿದುದೇಕೆ? ನನ್ನ ಮರಣವೇ ನಿನಗೆ ವರವೇ? ಹೇಳು.

ಹರಿಣಿ:—ಅಮರ! ಹೆಂಗಸರಂತೆ ಬರಿದೆಯೇಕೆ ಗಳಗಳನಳುತ್ತಿರುವೆ? ಅತ್ತಮಟ್ಟಕ್ಕೆ ಕಲೆಕ್ಟರಲ್ಲಿ ಮಾಡಿದ ದ್ರೋಹಕ್ಕೆ ಫಲವು ತಪ್ಪಿಹೋಗುವುದೇನು? ಮಣಿಮಾಲೆಯನ್ನು ಬ್ರಹ್ಮಚರ್ಯಯಿಂದ ಜಡಚೇತನವನ್ನಾಗಿ ಮಾಡಿರುವ ನಿನಗೀ ದಂಡನೆಯು ಸಾಕೆ?

ಅಮರ:—ಏನು? ಮಣಿಮಾಲೆಯಿರುವಳೆ?

ಹರಿಣಿ:—ಏಕೆ? ಮತ್ತೆ ಕದ್ದೊಯ್ಯಬೇಕೆಂದೊ?

ಅಮರ:—ಹರಿಣಿ! ಮತ್ತೆಮತ್ತೆ ಹೊಡೆದು ಕೊಲ್ಲುವೆಯೇಕೆ? ನಿನ್ನ ದಾಸ್ಯವೊಂದಲ್ಲದೆ ನನಗಿನ್ನಾವುದೂ ಅಪೇಕ್ಷಣೀಯವಾದುದಲ್ಲ; ಮಣಿಮಾಲೆಯಲ್ಲಿದ್ದ ದ್ವೇಷವನ್ನು ಅಂದೇ-ನಿನ್ನನ್ನು ನೋಡಿದಂದೇ-

ಬಿಟ್ಟುಬಿಟ್ಟೆನು. ಈಗ ಅವಳು ಜೀವಿಸಿರುವುದಾದರೆ ಸಂತೋಷದಿಂದ ಕರೆತಂದು ಅವಳ ಪತಿಯಲ್ಲಿ ಒಪ್ಪಿಸಿ ಕ್ಷಮೆಯನ್ನು ಕೇಳುವೆನು.

ಹರಿಣಿ :—ಹುಚ್ಚ ! ನಿನ್ನಂತಹ ಕ್ಷುಲ್ಲಕವಾನರನ ನೆರವನ್ನು ಕೋರುವಳೇ ಮಣಿಮಾಲೆ? ಅವಳು ನಿನ್ನಂತಹ ನೂರಾರು ಮಂದಿ ಅಮರರನ್ನಾದರೂ ಲೀಲಾಮಾತ್ರದಿಂದ ಜಯಿಸಿ, ಪತಿಯನ್ನು ಸೇರ ಬಲ್ಲವಳು. ಅವಳು ಇಷ್ಟರಲ್ಲೇ ಪತಿಸಾನ್ನಿಧ್ಯವನ್ನು ಸೇರುವಳು. ಏನು ಮಾಡುವೆ?

ಅಮರ :—ಸತ್ಯವಾಗಿಯೂ ನನ್ನ ಅಪರಾಧವೆಲ್ಲವನ್ನೂ ಹೇಳಿ ಕ್ಷಮೆಯನ್ನು ಬೇಡುವೆನು. ಮತ್ತೇನು?

ಹರಿಣಿ :—ಹೇಗೆ ನಂಬಲಿ? **"ದನವನ್ನು ತಿನ್ನುವನಿಗೆ ಗೊಬ್ಬರದಾಣೆಯೇ"** ಎಂದಾಡುವುದುಂಟು. ಅಮರ! ಕಾಮಾಂಧ ನಿಗೆ ಸತ್ಯವೇನು? ಪರಸ್ತ್ರೀಲೋಲನಿಗೆ ಪ್ರಮಾಣದಿಂದೇನು?

ಅಮರ :—ಹರಿಣಿ! ಹಂಗಿಸಿ ಭಂಗಿಸುವುದೇ ನಿನ್ನಿಷ್ಟವೇ? ಪ್ರಕೃತಿಯೊಂದೆಂದೂ ಒಂದೇ ಬಗೆಯಲ್ಲಿರುವುದೆಂದು ಬಗೆಯ ಲಾಗುವುದೇ?

ಹರಿಣಿ :—ಹಾಗಿದ್ದರೆ ಇನ್ನು ಹಂಗಿಸಲಾರೆನು. ಆದರೆ, ಹರಿಣಿ ಯನ್ನು ಬಿಟ್ಟು ಮತ್ತಾರನ್ನೂ ಮುಟ್ಟಲಾರೆಯೋ?

ಅಮರ :—ಎಂದೆಂದಿಗೂ ಇಲ್ಲ. ಇನ್ನಾದರೂ ತೃಪ್ತಿಯಾಯಿತೆ?

ಹರಿಣಿ :—ಇನ್ನೂ ಎಲ್ಲಿ? ಭ್ರಮರೆಯನ್ನು ಬಿಟ್ಟುದೇಕೆ?

ಅಮರ :—ಬರಿಯ ಕಾಮಪೂರ್ತಿಯಲ್ಲದೆ ಮತ್ತಾವ ಮನಸ್ಸಂ ತೋಷವೂ ದೊರೆಯದ ಸ್ಥಳದಲ್ಲಿ ಎಲ್ಲಿಯ ಮಮತೆ? ಹರಿಣಿ! ನಿನ್ನ ಸಹವಾಸಸಂಭಾಷಣಾದಿಗಳಿಂದಲಾದರೂ ನಾನು ಅತೀಂದ್ರಿಯ ಸುಖವನ್ನೇ ಹೊಂದಬಲ್ಲೆನು? ಇನ್ನೂ ಏನನ್ನು ಹೇಳಲಿ? ಹರಿಣಿ! ಭ್ರಮರೆಯ ಭೀಕರ-ವಿಕೃತ-ಕರಾಳವದನವನ್ನು ನೋಡಲಿಕ್ಕೂ ಬೇಸ ರವಾಗಿರುವುದು.

ಹರಿಣಿ :—ಹರಿಣಿ ನಷ್ಟವಾದರೂ ನೀನು ಮತ್ತೆ ಅಧಮ ಕಾರ್ಯದಲ್ಲಿ ಬೀಳಬಾರದು!

ಅಮರ:—ಹರಿಣಿ ನಷ್ಟವಾದಂದೇ ಈ ನಿರ್ಭಾಗ್ಯನಿಗೂ ವನವಾಸಪ್ರಾಪ್ತಿಯಾಗುವುದೆಂದು ನಂಬು! ಇನ್ನು ಇದಕ್ಕೂ ಹೆಚ್ಚಿನ ಮಾತು ನನಗೆ ತಿಳಿಯದು? ಇದಕ್ಕೆ ಲೋಕಮಾತೆಯೇ ಸಾಕ್ಷಿ.

ಹರಿಣಿ:—ಇನ್ನು ಹೆಚ್ಚಾಗಿ ಬೇಕಾಗಿಲ್ಲ. ಇಷ್ಟೇ ಸಾಕು! ಇನ್ನು ಕಲ್ಯಾಣವು ಜಾಗ್ರತೆಯಾಗಬಹುದು!

ಅಮರ:—(ರೋಮಾಂಚದಿಂದ ಕಂಪಿಸುತ್ತ) ದಿಟವಾಗಿಯೂ ಸಮ್ಮತಿಸುವೆಯಾ? ನನ್ನನ್ನು ಪ್ರೀತಿಸುವೆಯಾ? ನಂಬಲೆ? ಸಂದೇಹ ಇಲ್ಲವೆ?

ಹರಿಣಿ:—ಸತ್ಯವಾಗಿಯೂ ಪ್ರೀತಿಸುವೆನು. ಮನಃಪೂರ್ವಕವಾಗಿಯೂ ಕಲ್ಯಾಣವನ್ನು ಇದಿರುನೋಡುತ್ತಿರುವೆನು. ದೃಢವಾಗಿ ನಂಬು. ಸಂಶಯವೇಕೆ?

ಅಮರ:—ಬಹಿರಂಗಪಡಿಸಲೆ? ಕಾಲನಿರ್ಣಯವೆಂದು?

ಹರಿಣಿ:—ಅಗತ್ಯವಾಗಿಯೂ ಬಹಿರಂಗಪಡಿಸಬೇಕು! ನಾಡಿದ್ದರ ರಾತ್ರಿಯೇ ಬಹಿರಂಗವಾಗಿ ಕಲ್ಯಾಣಕಾರ್ಯವು ನಡೆಯಬೇಕು! ವಿಳಂಬಿಸಬಾರದು. ಕಲ್ಯಾಣೋತ್ಸವಕ್ಕಾಗಿ ಕಲೆಕ್ಟರನ್ನೂ ಅಗ್ರಾಸನದಲ್ಲಿ ನಿಲಿಸಬೇಕು! ಇಷ್ಟಮಿತ್ರರೊಡನೆ ವಿನೋದದ ಕೂಟವೂ ಕಲ್ಪಿಸಲ್ಪಡಬೇಕು! ಇನ್ನು ನಡೆ; ಹೊತ್ತು ಮೀರಿತು. ಇಲ್ಲಿ ನಿಲ್ಲದೆ ಬೇಗ ಹೊರಡು. ನಾನೂ ಬಲುಬಳಲಿರುವೆನು.

ಅಮರ:—(ಭುಜಾಸ್ಫಾಲನ ಮಾಡುತ್ತ, ಉನ್ಮತ್ತನಂತೆ ಉಚ್ಚಸ್ವರದಿಂದ) 'ಧನ್ಯ! ಅಮರನಾಥ! ಈಗಲೀಗ ನೀನು ಧನ್ಯ!!!' ಎಂದು ಹೇಳುತ್ತ ಹೇಳುತ್ತ ಹೊರಟುಹೋದನು.

ಹರಿಣಿಯೂ ಕಿರುನಗೆಯಿಂದ ಸಮಜ್ಯೋತಿಪ್ರಭಾವದಿಂದ ಅಮರನನ್ನು ವಂಚಿಸಿದೆನೆಂದುಬ್ಬಿ, ನಿದ್ರಾದೇವತೆಯ ಉತ್ಸಂಗವನ್ನಾಶ್ರಯಿಸಿ ಮಲಗಿದಳು.

———

ಷಷ್ಠ ಪರಿಚ್ಛೇದ

(ವಿಶೇಷಸೂಚನೆ)

ಕರ್ತವ್ಯತತ್ಪರರು, ಹೇಗೂ ಕಾಲಧನವನ್ನು ಕಳೆದುಕೊಳ್ಳಲಾರರು. ಒಂದಕ್ಕೆ ನಾಲ್ಕರ ಬಡ್ಡಿಯನ್ನು ಹೊಂದುವಂತೆಯೇ ಕಾಲಧನವನ್ನು ಉಪಭೋಗಿಸುವರು. ಆದರೆ ಕುತ್ಸಿತರು ಕಾಲಮಹಿಮೆಯನ್ನರಿಯಲಾರದೆ ಕಲಹಾದಿಗಳಿಂದಲೇ ನಷ್ಟಪಡಿಸಿಕೊಳ್ಳುವರು. ಕಳೆದುಹೋದಕಾಲವು ತಲೆಕೆಳಗಾಗಿ ನಿಂತು ತಪಿಸಿದರೂ ಮರಳಿ ಬರಲಾರದು! ಅಂತಹ ಅಮೂಲ್ಯವಾದ ಕಾಲಧನವನ್ನು ಸರಿಯಾಗಿ ವಿನಿಯೋಗಿಸುವರೇ ಧನ್ಯರು! ಸದ್ಯಸ್ಥಿತಿಯಲ್ಲಿ ಅಂತಹ ಧನ್ಯವಾದವು ನಮ್ಮ ಕಲಿಭೀಷ್ಮನಾದ ಕಾಮಪಾಲನಿಗೆ ಮಟ್ಟಕ್ಕೇ ಸಲ್ಲತಕ್ಕುದು. ಹೇಗೆಂದರೆ, ಈ ಪ್ರಾತಃಕಾಲದಲ್ಲಿ ನಿರ್ಣೀತವಾದ ಕಾರ್ಯದಲ್ಲಿ ನಿರತನಾದ ಕಾಮಪಾಲನು ತನ್ನ ಕಾರ್ಯಾಲಯದಲ್ಲಿ ಕುಳಿತು, ಏಕಾಗ್ರಚಿತ್ತತೆಯಿಂದಿರುವುದೇ ಸಾಕಾಗಿರುವುದು. ಕಾಮಪಾಲನು ಪತ್ರಿಕಾಪರಿಶೋಧನಕಾರ್ಯದಲ್ಲಿ ಕುಳಿತಿರುವಾಗಲೇ, ಅಲ್ಲಿಗೆ ಮೇದಿನಿಯೊಡಗೊಂಡು ಹರಿಣಿ ನಡೆತಂದಳು. ಬಂದವಳು ಬಾಗಿಲಲ್ಲೇ ನಿಂತು ಬಲುಹೊತ್ತು ನೋಡಿದಳು; ಕಾರ್ಯಾಸಕ್ತನಾಗಿದ್ದ ಅಣ್ಣನ ಗಮನವು ತಂಗಿಯರ ಕಡೆಗೆ ತಿರುಗಲಿಲ್ಲ. ಹರಿಣಿ, ನಸುನಗುತ್ತ ಕೇಳಿದಳು, 'ಅಣ್ಣಾ! ಏನು, ಪತ್ರಿಕೆಯಲ್ಲಿ ವಿಶೇಷಾಂಶಗಳೇ ತುಂಬಿರಬಹುದು!'

ಕಾಮ:—(ಚಕಿತನಾಗಿ ತಿರುಗಿನೋಡಿ, ತಲೆದೂಗುತ್ತ) ಭಲೆ! ಭಲೆ!! ಒಮ್ಮೆಯೇ, ಸೋದರೀದ್ವಯದ ಸಾಕ್ಷಾತ್ಕಾರ!! ಆಗಲಿ, ಕುಳಿತುಕೊಳ್ಳಿರಿ?

ಮೇದಿನಿ-ಹರಿಣಿ:—"ಬಂದಿರುವುದೂ ಅದಕ್ಕೆಂದೇ!" ಎಂದಿಬ್ಬರೂ ಕುಳಿತರು.

ಮೇದಿನಿ:—ಅಣ್ಣಾ! ಹರಿಣಿಯ ಮಾತು ಕೇಳಲಿಲ್ಲವೋ?

ಕಾಮ:—ಕೇಳಿದೆನು! ವಿಶೇಷವನ್ನು ಕೇಳಿದಳು.

ಹರಿಣಿ :—ಉತ್ತರವಿಲ್ಲವೇಕೆ ? ಇಷ್ಟವಿಲ್ಲವೊ ?

ಕಾಮು :— ಇಷ್ಟವಿಲ್ಲದೆಯುಂಟೆ ? ಅಮರನ ಅದೃಷ್ಟದೇವತೆ ಪ್ರಸನ್ನವಾದಂತಿರುವುದು. ಇನ್ನು ವರಲಾಭವಾಗುವುದೊಂದೇ ಉಳಿದಿರುವುದು ಮತ್ತೇನು ?

ಮೇದಿನಿ :—ಅದರ ತತ್ತ್ವವೇನು ?

ಕಾಮು :—ನೀನೇನು ಬಲ್ಲೆ ? ಹರಿಣಿಯೇ ಹೇಳಬೇಕು.

ಹರಿಣಿ:–ಅದಂತಿರಲಿ, ಇಂದಿನ ಪತ್ರಿಕೆಯುಲ್ಲಿ ವಿಶೇಷವಿದ್ದರೆ ಹೇಳು ?

ಕಾಮು :—ಇರುವುದು ; ಆದರೆ, ನಿನಗೆ ಬೇಕಾದುದೋ-ಅಲ್ಲವೋ ?

ಹರಿಣಿ :—ನೋಡಿದ ಮೇಲಲ್ಲವೇ ತೀರ್ಪು.

ಕಾಮು :—ಹಾಗಿದ್ದರೆ, ನೋಡಿ, ನಿನು ತೀರ್ಪು ಹೇಳುವೆಯೋ ಹೇಳು. (ಎಂದು ಒಂದು ಬಿಡಿಪತ್ರಿಕೆಯುನ್ನು ಮುಂದಿಟ್ಟನು.)

ಹರಿಣಿ :—(ಪತ್ರಿಕೆಯುನ್ನು ಕಯ್ಗೆಕೊಂಡು, ಪ್ರಕಟನೆಯ ಕಡೆಯುಲ್ಲಿದ್ದ ವಿಶೇಷಸೂಚನೆಯುನ್ನೇ ಒಂದೆರಡು ಬಾರಿ ನೋಡಿ, ತಲೆದೂಗಿದಳು.)

ಮೇದಿನಿ :—ಅದೇನು ? ಹರಿಣಿ ! ನೀನೊಬ್ಬಳೆಯೇ ನೋಡಿ ತಣಿಯಬೇಕೊ ?

ಕಾಮು :—ಓಹೋ ! ಅವಳಿಗೊಬ್ಬಳಿಗೇ ಬೇಕಾದುದು ; ಮಿಕ್ಕವರಿಗೇಕೆ ?

ಹರಿಣಿ :—ಏನು ? ಅಣ್ಣನೂ ತಂಗಿಯೂ ಸೇರಿ, ಹರಿಣಿಯುನ್ನು ಹಾಸ್ಯತರಂಗದಲ್ಲಿ ಮುಳುಗಿಸುವಿರೋ ? ದೇವರು ಕಣ್ಣು, ಕಿವಿ, ಬಾಯಿ, ಇವುಗಳನ್ನು ಕೊಟ್ಟಿರುವುದೇಕೆ ? ಓದಿ, ಕೇಳಿ, ಹೇಳಿ, ತಿಳಿಯಲಿ ಎಂದಲ್ಲವೇ ?

ಮೇದಿನಿ :—ನನಗೆ ಓದಲು ಬಾರದು ; ನೀನೇ ಹೇಳಿದರೆ ಕೇಳಬಲ್ಲೆನು ; ಇಲ್ಲದಿದ್ದರೆ ನಿನ್ನಲ್ಲೇ ಗೂಣಗುಟ್ಟಿಕೊಳ್ಳು !

ಹರಿಣಿ :—" ಇದೊಂದು ಬಗೆಯ ಸನ್ಯಾಸದ ಬಿಂಕವೇ ! ಇರಲಿ, ಅಕ್ಕ ! ಕನಲದೆ ಕದಲದೆ ಕಿವಿಗೊಟ್ಟು ಕೇಳು !" ಎಂದು ವಾಚಿಸ ತೊಡಗಿದಳು.

"ನಮ್ಮ ಆನಂದಕ್ಕೆ ಉಕ್ಕಂದವಾಗಿದ್ದ ವಿದ್ಯುಲ್ಲತೆ, ಕೆಲಕಾಲದಿಂದ ಕಣ್ಮರೆಯಾಗಿ, ಕಳವಳವುಂಟಾಗಿರುವುದು. ನಮ್ಮ ಸುಹೃದ್ವರ್ಗದಲ್ಲಿ ಆರಾದರೂ ವಿದ್ಯುಲ್ಲತಾಪರಿಚಿತರಾದವರಿದ್ದರೆ, ಲತೆಯ ನೆಲೆಯನ್ನು ತಿಳಿಸುವುದಾದರೆ, ಚಿರಕೃತಜ್ಞರಾಗಿರುವೆವು!"

ಮೇದಿನಿ:—ಇದಾವ ಕಠಿನ ಸಮಸ್ಯೆಯೋ? ಪೃಚ್ಛಕರಾರೋ? ಉತ್ತರದಾತರಾರೋ? ಉದ್ದೇಶವೇನೋ? ನಾನಂತೂ, ಇದರ ತತ್ತ್ವವನ್ನು ತಿಳಿಯೆನು! ಇವೆಲ್ಲವೂ ನನಗೆ ಅಖಂಡಬ್ರಹ್ಮಾಂಡತತ್ತ್ವದಂತೆಯೇ ಇರುವುದು!

ಹರಿಣಿ:—ವಿರಕ್ತರಿಗೆ ತೋರತಕ್ಕುದು ಹಾಗೆಯೇ! ಸನ್ಯಾಸಿಗಳಿಗೆ ನಾಗರಿಕತೆಯ ಗಂಧವೆಲ್ಲಿ?

ಕಾಮು:—ದಿಟ, ದಿಟ!

ಮೇದಿನಿ:—ಸನ್ಯಾಸಿನಿಗೆ ಸಾರಗುಣೆಯಾದ ನೀನೇ ತಿಳಿಸಬಾರದೇಕೆ?

ಹರಿಣಿ:—ತಿಳಿಸುವುದೇನು? ಇದು, ವಿರಹಿಯ ಬಾಯಿಂದ ಹೊರಬಿದ್ದ ಆತನ ಮನಸದಸ್ನೆಯನ್ನು ಕುರಿತ ವಿಯೋಗಪ್ರಲಾಪವೇ! ವಸ್ತ್ವನ್ವೇಷಣೆಗೆಂದು ಮಾಡಿದ ಹೂಟವೇ!!!

ಮೇದಿನಿ:—(ಕುತೂಹಲದಿಂದ) ಅಂತಹ ವಿರಹಿಯಾವನೋ ತಿಳಿಯಬೇಕಲ್ಲವೆ?

ಕಾಮು:—ವಿರಹಿಯನ್ನೂ ತಿಳಿದಿರಬಹುದು, ವಸ್ತುವನ್ನೂ ಪ್ರದರ್ಶಿಸಬಹುದು! ಅಲ್ಲವೇ ಹರಿಣಿ? ಇದಕ್ಕೆ ನೀನೇನಾದರೂ ಉತ್ತರವನ್ನು ಕೊಡುವೆಯೋ?

ಹರಿಣಿ:—ಆಗಬಹುದು; ಅಣ್ಣಾ! ಇಂದಿನ ಪೃಚ್ಛೆಗೆ ನೀನೇ ಪ್ರೇರಕನು; ಆದಕ್ಕಿದೇ ನನ್ನ ಉತ್ತರವು—"ಚಿನ್ತಿಸಬೇಕಾದುದಿಲ್ಲ. ವಿದ್ಯುಲ್ಲತೆ ನಷ್ಟವಾಗಿ ಹೋಗಿಲ್ಲ. ಸಮೀಪದಲ್ಲೇ—ಗುಪ್ತಾರಾಮದಲ್ಲಿಯೇ ಇತರಜಾತಿಲತೆಗಳಿಂದಾಚ್ಛಾದಿತವಾಗಿರುವುದು. ಸಮಯ ದೊರೆತಂದು ಅಜ್ಞಾತವಾಸದಿಂದ ಹೊರಪೇಳುವುದು!"

(ಕಾಮಪಾಲನು ಒಮ್ಮೆ ಹರಿಣಿಯ ಮುಖವನ್ನೇ ನೋಡಿ ನಸುನಗುತ್ತ ತಲೆದೂಗಿದನು.)

ಹರಿಣಿ:—ಅಣ್ಣಾ! ಇದೇಕೆ? ನುಡಿಯಿಲ್ಲದ ನಸುನಗೆ?

ಕಾಮ:—ಮತ್ತೇನು? ಹರಿಣಿ! 'ನಂಟರನ್ನೂ ಸಂತವಿಸುವೆ, ಗಂಟನ್ನೂ ಕಾಪಿಡುವೆ!' ಈ ಜಾಣ್ಮೆ ನನ್ನ ತಂಗಿಗಲ್ಲದೆ ಮತ್ತಾರಲ್ಲಿರುವುದು? ಇದಕ್ಕೆಂದೇ ನನ್ನ ನಸುನಗೆ.

(ಕಾಮಪಾಲನ ಕಂಠದಿಂದ ಹೊರಬಿದ್ದ 'ನಂಟ......' ಎಂಬ ವಾಕ್ಯವು ಮತ್ತೊಮ್ಮೆ ಮತ್ತೆರಡು ಕರ್ಕಶಧ್ವನಿಗಳಿಂದ ಉದ್ಘೋಷಿತವಾಯ್ತು! ಕುಳಿತಿದ್ದವರು ತಿರುಗಿ ನೋಡುವುದರೊಳಗಾಗಿಯೇ ಅಮರ ಗಂಗಾಧರರೂ ಬಂದು ಮುಂದೆ ನಿಂತರು.)

ಕಾಮ:—ಬನ್ನಿರಯ್ಯಾ! ಅಪೂರ್ಣಭಾಗವೂ ಪೂರ್ಣವಾಗಿರುವುದು. ಕುಳ್ಳಿರಿ.

(ಅಮರ ಗಂಗಾಧರರೂ ಕಾಮಪಾಲನ ಬಳಿಯಲ್ಲಿ ಕುಳಿತರು.)

ಅಮರ:—(ಮೇದಿನಿಯನ್ನು ನೋಡಿ) ಏನಮ್ಮಾ? ಯೋಗಿನಿ! ನಿನ್ನ ತಂಗಿಯನ್ನು ಕೇಳಿ ತಿಳಿದುದೇನು?

ಮೇದಿನಿ:—ತಿಳಿವುದೇನು? ಅಬಲಾಸ್ವಭಾವವನ್ನು ಒಂದೇ ಮಾತಿಂದ ತಿಳಿಯಲಾಗುವುದೇ! ನಾನೀ ಕಲಾಕೌಶಲವನ್ನೇನನ್ನೂ ತಿಳಿದವಳೂ ಅಲ್ಲವಷ್ಟೆ! ಇಲ್ಲಿಯೇ—ನಿಮ್ಮೆದುರಾಗಿಯೇ—ಮತ್ತೆ ಕೇಳುವೆನು; ಅಲ್ಲದೆ, ನೀವೇ ಕೇಳಿ ತಿಳಿಯಲಿಕ್ಕೂ ಸಮಯವುಂಟು. (ಹರಿಣಿಯನ್ನು ನೋಡಿ) ತಂಗಿ! ದಿಟವಾಗಿ ಹೇಳಿಬಿಡು! ಒಂದೇ ಮನದಲ್ಲಿ ತಿಳಿದುಹೇಳು. ಸಂಶಯವೂ ಚಾಪಲ್ಯವೂ ಆರಿಗೂ ಆವಾಗಲೂ ಬಳಿ ಸೇರಬಾರದು! ಅಮರನ ಮದುವೆಗಾಗಿ ನೀನು ಇಷ್ಟಪಡುವೆಯೋ! ಹೇಗೆ?

ಹರಿಣಿ:—(ಕಿರುನಗೆಯಿಂದ) ಅಕ್ಕ! ಕಲ್ಯಾಣವನ್ನು ಬೇಡವೆನ್ನುವರಾರು? ಕಯ್ಯ ಹುಣ್ಣಿಗೆ ಕನ್ನಡಿಯೂ ಬೇಕೋ? ಅಮರನಿಗೆ ಮದುವೆಯಾಗಲೆಂದು ಒಪ್ಪಿರುವೆನು. ನಾನೂ ಸಂಶಯವಿಲ್ಲದೆ, ಚಾಪಲ್ಯಕ್ಕೆಡೆಗುಡದೆ ಕಲ್ಯಾಣವನ್ನು ಕಯ್ಕೊಳ್ಳುವುದರಲ್ಲಿರುವೆನು! ಇನ್ನೂ

ಹೇಳಬೇಕೆ? ಅಕ್ಕ! ಈ ಕಲ್ಯಾಣದ ಸಂಬಂಧವಾದ ಕಾರ್ಯಗಳಾವುವಿದ್ದರೂ ಬಹಿರಂಗವಾಗಿಯೇ ಬೇಗನೆಯೇ ನಡೆಯಬೇಕೆಂದೂ ಕೇಳುವೆನು.

ಕಾಮು :—ಹ-ಹ-ಹಾ!!! ಕಾಲಚಕ್ರಗತಿಯೇ! ಕುಲಾಚಲ ಪರ್ಯಟನವೇ!! ಏನಿದು? ಕಲ್ಪನಾವೈದುಷ್ಯಸಂಗತಿ! ಆಶ್ಚರ್ಯ!! ಪ್ರಕೃತಿಸ್ವಭಾವವೆಷ್ಟು ನಿಗೂಢವಾಗಿರುವುದು. ಅದೇತರಿಂದ?

ಅಮರ :—ನನ್ನ ಪ್ರಾರ್ಥನೆಯೂ ಇದೇ. ಈಗ ನಿರ್ಧರವಾಗಿ ಹೇಳಬೇಕು?

ಹರಿಣಿ :—ಪ್ರಕೃತಿಸ್ವಭಾವವು ಶುದ್ಧವಾಗಿ ಸಂಸ್ಕೃತವಾಗಿರುವುದೆಂದರಿತು ಪ್ರೀತಿಸಬೇಕಾಯ್ತು!

ಗಂಗಾಧರ :—ಹಾಗಿದ್ದರೆ ಉತ್ಸವಕ್ಕೆ ತಡೆಯಿಲ್ಲವಲ್ಲವೆ?

ಹರಿಣಿ :—ತಡೆಯಾದಷ್ಟೂ ಎಡರೂ ತಪ್ಪದಿರುವುದು. ಆವುದಾಗ ಬೇಕೆಂದರೂ ನಾಡಿದ್ದರ ರಾತ್ರಿಯೇ ನಡೆಯುತಕ್ಕುದು. ಆ ಬಳಿಕಾಗದು!

ಗಂಗಾಧರ :—ಕಲೆಕ್ಟರಿಗೂ ಆಮಂತ್ರಣವಾಗಬೇಕೋ? ಅದರಲ್ಲಿ ನಿರ್ಬಂಧವೋ?

ಹರಿಣಿ :—ನಿರ್ಬಂಧವೇ! ಮುಖ್ಯ ಪಾತ್ರದ ಮನಸ್ತೃಪ್ತಿಗಾಗಿಯೇ ಅವರಿಗೆ ಆಮಂತ್ರಣವಾಗಬೇಕು. ಅಷ್ಟೇ ಅಲ್ಲ! ಅದರಿಂದ, ನಿಮ್ಮಿಬ್ಬರ ಸಾಹಸ, ಧೈರ್ಯ, ಸ್ನೇಹಬಾಂಧವ್ಯ, ಇವುಗಳೂ ವ್ಯಕ್ತವಾಗಬಹುದು; ನಮ್ಮ ಅಣ್ಣನ ಉದಾತ್ತತೆಯೂ ಪ್ರಕಾಶಕ್ಕೆ ಬರಲನುವಾಗುವುದು!

ಕಾಮು :—(ತಲೆದೂಗಿ) ಒಪ್ಪಿದೆನು, ಹರಿಣಿ! ಒಪ್ಪಿದೆನು!! ಅಗತ್ಯವಾಗಿ ನನ್ನ ಪ್ರಾಣಾಪ್ತಮಿತ್ರನನ್ನು ಮುಂದಾಗಿ ಕರೆಯಿಸಿ, ಮುಖ್ಯ ಪೀಠದಲ್ಲಿ ನಿಲ್ಲಿಸುವೆನು. ಮತ್ತೇನು ನಿನ್ನಿಚ್ಛೆ?

ಹರಿಣಿ :—"ಇಂದಿನ ವಿಶೇಷ ಸೂಚನೆಯೇ ನನ್ನಿಚ್ಛೆ!" ಎಂದು ಹೇಳಿ ನಿಲ್ಲದೆ ಹೋದಳು.

———

ಸಪ್ತಮ ಪರಿಚ್ಛೇದ

(ಸಂಭ್ರಮಮಧ್ಯದಲ್ಲಿ ಸರ್ವನಾಶ)

ಅಂದು ಪೂರ್ಣಿಮಾ ಚಂದ್ರನ ವಿಜಯಧ್ವಜವು ದಿಙ್ಮಂಡಲವನ್ನೇ ಬೆಳಗಿಸುತ್ತಿರುವುದು. ಚಂದ್ರಿಕಾವೇಶದಿಂದ, ಸಮಸ್ತತರುಲತಾಗುಲ್ಮಗಳೂ ರಜತಮಯವಾಗಿಯೇ ರಂಜಿಸುತ್ತಿರುವುವು. ಅದರಮೇಲೆ, ಕಾಮಪಾಲನ ಧರ್ಮಭವನದ ಉದ್ಯಾನವೂ ಭವನದ ಬಾಹ್ಯಾಂಗವೂ ಮನೋಹರ ಚಂದ್ರಿಕೆಯಿಂದಲೂ ಪ್ರಕಾಶಮಾನ ದೀಪಗಳಿಂದಲೂ ಕುಶಲಕಲಾಪ್ರದರ್ಶಕ ವಸ್ತುಗಳಿಂದಲೂ ಸರ್ವಾಲಂಕಾರ ಶೋಭಿತೆಯಾದ ಶಾರದಾ ದೇವಿಯಂತೆಯೇ ರಮಣೀಯವಾಗಿರುವುದು. ಭವನದ ಮಧ್ಯಭಾಗವೇ ಕಲ್ಯಾಣಮಂಟಪವಾಗಿರುವುದು; ಹರಿಣಿಯ ಪುನರ್ವಿವಾಹಸಂಭ್ರಮ! ಕೇಳಬೇಕೆ? ಮಂಟಪದ ಸೊಬಗೆಂತಿದ್ದುದೆಂಬುದನ್ನು! ಸಾಲು ಕುರ್ಚಿಬೆಂಚುಗಳಿಂದಲೂ ಮೆತ್ತನೆಯ ಹಾಸಿಂದಲೂ ನೆಲವು ಸೊಗಯಿಸುತ್ತಿರುವುದು; ಚಿತ್ರಪಟಗಳಿಂದಲೂ, ಮುತ್ತಿನ ತೆಂಡೆಗಳಿಂದಲೂ, ವಿಕ್ಕಿನ ಮಣಿಖಚಿತವಸ್ತುಗಳಿಂದಲೂ ಗೋಡೆ, ಬಗೆಬಗೆಯ ಸಿಂಗರದಿಂದ, ನೋಡುವರ ಬಗೆಯನ್ನೇ ಬಗೆಗೊಳ್ಳುತ್ತಿರುವುದು! ಬಾಲಸೂರ್ಯನಂತೆ ಬೆಳಗುವ ದೀಪಗಳಿಂದ, ಎತ್ತೆತ್ತ ನೋಡಿದರೂ ಕತ್ತಲೆಯೆಂಬ ಕುತ್ತವೇ ಕಾಣದಂತಿರುವುದು. ಹೆಚ್ಚಿಗೆಯಿಂದೇನು? ಕಲ್ಯಾಣಮಂಟಪವು ನೇತ್ರಾನಂದಕರವಾಗಿತ್ತೆಂದರೆ ಸಾಕಾಗಿರುವುದು. ಮಂಟಪದೊಳಗೆ ಹಸೆಯ ಜಗುಲಿ ಜರತಾರಿಯ ಬಟ್ಟೆಯಿಂದ ಹೊದಿಸಲ್ಪಟ್ಟು ಸಿದ್ಧವಾಗಿರುವುದು. ಜಗುಲಿಯ ಮುಂಗಡೆಯೇ ಫಲ, ಪುಷ್ಪ, ಮೊದಲಾದವುಗಳ ಪಾತ್ರಗಳಿಡಲ್ಪಟ್ಟಿರುವುವು. ಹಸೆಗೆ ಬಲಗಡೆಯಲ್ಲಿ ಮೊದಲ ಕುರ್ಚಿಯ ಮೇಲೆ ಶಚೀಕಾಂತನೂ, ಆತನ ಬಲಗಡೆಗೆ ಕಾಮಪಾಲನೂ, ಕುಳಿತು ಸರಸಪ್ರಸಂಗದಲ್ಲಿರುವರು. ಅವರ ಇದಿರಾಗಿ ಸಾಲು ಕುರ್ಚಿಗಳ ಮೇಲೆ ಗಣ್ಯರಾದ ಸಂಟರಿಷ್ಟರಾದ ಪುರುಷ

ವರ್ಗವೂ, ಪುರುಷವರ್ಗಕ್ಕೆ ಇದಿರಾಗಿ ಹಸೆಗೆ ಎಡಗಡೆಯಲ್ಲಿ ಗುಂಪು ಕೂಡಿದ ಅಬಲಾವರ್ಗವೂ, ಸ್ತ್ರೀಪುರುಷ ವರ್ಗಕ್ಕೆ ಮಧ್ಯದಲ್ಲೇ ಬಾಲಕರೂ ಬಾಲಿಕೆಯರೂ ಕುಳಿತು ವಿನೋದವನ್ನು ನೋಡುವ ತವಕದಲ್ಲಿರುವರು. ನೋಡುತ್ತಿದ್ದಂತೆಯೇ ಮದುಮಗನೆಂದೆನ್ನಿಸುವ ಅಮರನಾಥನು, ಶೀವಿಯಿಂದ ಗಂಗಾಧರನ ಕೈಹಿಡಿದು ಜಗುಲಿಗೆ ಬಂದು, ಕಾಮಪಾಲ–ಶಚೀಕಾಂತರ ಮುಂದೆ ನಿಂತನು.

ಶಚೀ :—ಏನಯ್ಯಾ! ಕುಶಲಿಯೋ? ಗಂಗಾಧರನಂತೆ ಮಾಡದೆ ನೀನಾದರೂ ನಮ್ಮನ್ನು ನೆನೆದೆಯಲ್ಲವೆ?

ಗಂಗಾಧರ :—ಶಚೀಕಾಂತ! ಮುಖ್ಯಪಾತ್ರದ ಇಷ್ಟಾನಿಷ್ಟವನ್ನು ತಿಳಿದು ಮಾಡಬೇಕಲ್ಲವೆ? ಈ ವಿಚಾರವಾಗಿ ಅಂದೇ ಕ್ಷಮೆಯನ್ನೂ ಕೇಳಿರುವೆನು!

ಶಚೀ :—ಹೋಗಲಿ; ಅಂದಿನ ಮಾತು ಇಂದೇಕೆ? ಕಾಮಪಾಲ! ಹೊತ್ತುಮೀರುತ್ತಿರುವುದು.

ಕಾಮ :—"ಈಗಲೇ ನೆರವೇರುವುದು" ಎಂದು ಸ್ತ್ರೀಸಮಾಜದ ಕಡೆಗೆ ತಿರುಗಿ—"ಮೇದಿನಿ! ಹರಿಣಿಯೆಲ್ಲಿ?"

"ಹಾ! ಇದೇನು! ಎಂತಹ ಮರ್ಮಾಹತ ಶಬ್ದ!! ನನ್ನ ಪ್ರೇಮಾಸ್ಪದ ವಸ್ತು,—ಆ ವಿದ್ಯುಲ್ಲತೆ! ಅದೇವಸ್ತು ಅಪಾತ್ರದಲ್ಲಿ ಬೀಳುವುದೇ!! ಹಿಂದಿನ ನಂಬುಗೆಯ ನುಡಿಯೇನಾಯ್ತು? ಇದಕ್ಕಿನ್ನು ಸಮಾಧಾನವೇನು?" ಎಂದು ಶಚೀಕಾಂತನು ವಿಚಾರಗ್ರಸ್ತನಾದನು. ಮೊದಲು, ಆತನ ಮನವು ಪುಡಿಪುಡಿಯಾದಂತೆ ಚದರಿತು. ಆ ಬಳಿಕ, ಕಳವಳ, ಕೋಪ, ಪರಿತಾಪ, ಇವುಗಳು ಆವಿರ್ಭವಿಸಿದುವು. ಆದರೆ, ಧೀರನಾದಾತನು ಪ್ರಯತ್ನಬಲದಿಂದ ಅಷ್ಟಕ್ಕೇ ತಡೆದು, ಮುಂದುಗೊಡದೆ ಕಾಮಪಾಲನನ್ನು "ಹರಿಣಿ–ನಮ್ಮ ವಿದ್ಯುಲ್ಲತೆ—ಇಲ್ಲಿ!" ಎಂದು ಕೇಳಿದನು.

ಕಾಮ :—ಅಹುದು! ನಿನ್ನ ವಿದ್ಯುಲ್ಲತೆಯೇ! ಅವಳೇ ನಿನ್ನ ಪತ್ನಿಯಾದ ಮಣಿಮಾಲೆಗೆ ಅಕ್ಕನಾದ ಹರಿಣಿ! ನನ್ನ ಕಿರುತಂದೆಯ ಮಗಳಾದ ನನ್ನ ನಚ್ಚಿನ ತಂಗಿ, ಅವಳೇ ಇಲ್ಲಿರುವಳು.

ಶಚೀ :—ಹೀಗೆಂದು ನನಗೆ ಆಗಲೇ ಹೇಳಲಿಲ್ಲವೇಕೆ ?

ಕಾಮು :—ಅವಳ ಕಟ್ಟಳೆಯನ್ನು ಮೀರುವುದಕ್ಕಾಗದಿದ್ದುದರಿಂದ !

ಶಚೀ :—ಇಂದಿನ ಪತ್ರಿಕಾಪ್ರಕಟನೋತ್ತರವೂ ಅವಳದೆಯೋ ?

ಕಾಮು :—ಅಹುದು. ಅವಳು ತಾನಾಗಿ ಮನವೊಲ್ದು ಹೇಳಿದ ಮಾತೇ ?

ಶಚೀ :—(ವಿಸ್ಮಿತನಾಗಿ) ಇಂದಿನ ವಿದ್ಯುನ್ಮಾನವೋ ! ಇದೂ ಅವಳ ಇಷ್ಟವೋ ?

ಕಾಮು :—ಇಷ್ಟವೊಂದೇ ಅಲ್ಲ, ತ್ವರಿತದ ಬಲಾತ್ಕಾರವೂ ಆಗಿರುವುದು. ಇದರಲ್ಲಿ ನಾನು ತಿಲಮಾತ್ರವೂ ಪ್ರೇರಕನಲ್ಲ.

ಶಚೀಕಾಂತನು ಮುಂದೆ ಮಾತನಾಡದೆ ಆಲೋಚನೆಯಲ್ಲಿ ಕುಳಿತನು. ಆಗಳಿನ ವೇಳೆಯಲ್ಲಿ ಆತನ ಮನೋಭಾವವೆಂತಿದ್ದುದೆಂಬುದನ್ನು ಭಾವಿಸಿದರೇ ಹೇಳಬೇಕು.

ಕಾಮುಪಾಲನು ನೋಡಿದನು; ಸ್ತ್ರೀಮಂಡಲಿಯಲ್ಲಿ ಕೋಲಾಹಲ! ಎತ್ತೆತ್ತಲೂ ಹಾಹಾಕಾರ!! ಅವಕಡೆಯಲ್ಲಿಯೂ 'ಸರ್ವನಾಶ! ವಸ್ತ್ರ ಪಲಾಯನ!' ಎಂಬುದೊಂದೇ ಕಲಕಲ! ಕ್ಷಣಮಾತ್ರದಲ್ಲಿ ಕಲ್ಯಾಣಮಂಟಪವು 'ಕಾಳೀಘಟ್ಟ'ವಾಗಿ ಪರಿಣಮಿಸಿರುವುದು. ಕಾಮುಪಾಲನು ಎದ್ದು ನಿಂತನು; ಮುಂದಕ್ಕಡಿಯಿಡುವುದರಲ್ಲೇ ತಲೆಸುತ್ತಿ ಕಣ್ಣು ಕಾಣದಂತಾಗಲು ಕುಳಿತನು. ಶಚೀಕಾಂತನೂ ಸಂಭ್ರಾಂತನಾಗಿ ನೋಡುತ್ತಿದ್ದನು. ಆಮೇರ ಗಂಗಾಧರರ ಸ್ಥಿತಿಯನ್ನೇಕೆ ಹೇಳಬೇಕು? ನೆಲದಮೇಲೆ ಕುಳಿತು ತಲೆಯನ್ನು ಹಿಡಿದು ಕಣ್ಣುಮುಚ್ಚಿರುವರು. ಸ್ತ್ರೀಮಂಡಲಿಯಿಂದ ಮ್ಲಾನಮುಖಿಯಾದ ಮೇದಿನಿ ಬಂದು ಕಾಮುಪಾಲನ ಮುಂದೆ ನಿಂತಳು.

. ಕಾಮು :—ಮೇದಿನಿ ! ವಿಚಾರವೇನು ?

ಮೇದಿನಿ :—ಅಣ್ಣಾ! ಕಿರುಮನೆ ಬರಿದು ! ಹಾಸುಗೆ ಬರಿದು ! ಎಲ್ಲಿಯೂ ಹರಿಣಿಯಿಲ್ಲ!

ಕಾಮಪಾಲನು ಸ್ತಬ್ಧನಾದನು. ಅಮರನು ನಿಶ್ಚೇಷ್ಟಿತನಾದನು. ಗಂಗಾಧರನು ಅಮರನನ್ನು ಉಪಚರಿಸುತ್ತ ಕುಳಿತನು. ಪುರುಷ ವರ್ಗದಲ್ಲಿಯೂ ಹಾಹಾಕಾರವೆದ್ದಿತು. ಹೇಳುವುದಿನ್ನೇನು ?

ಶಚೀ :—ತಾಯಿ! ಶಾಂತಿಯನ್ನು ವಹಿಸು; ನಿಧಾನಿಸು; ಹೀಗಾಗಲು ಕಾರಣವೇನೆಂಬುದನ್ನು ತಿಳಿಸು.

ಮೇದಿನಿ:—ಹೆಚ್ಚನದೇನೂ ತಿಳಿಯದು. ಮೂರುದಿವಸಗಳಿಂದಲೂ ಹರಿಣಿಯ ಮುಖದಲ್ಲಿ ನೂತನಪ್ರಕಾಶವುಂಟಾಗಿತ್ತು. ಅವಳ ಪ್ರತಿವಾಕ್ಯವೂ ಉತ್ಸಾಹಯುಕ್ತವಾಗಿಯೇ ಇದ್ದಿತು.

ಶಚೀ :—(ಏನನ್ನೋ ವಿಚಾರಮಾಡುತ್ತ ತಲೆದೂಗಿ) ಕಣ್ಮರೆಯಾದುದಕ್ಕೆ ಕುರುಹೇನಾದರೂ ಉಂಟೋ ?

ಮೇದಿನಿ :—" ಇದೊ, ಮೇಜಿನ ಮೇಲೆ ದೀಪದ ಮುಂದಿದ್ದ ಈ ಮೂರು ಪತ್ರಗಳಲ್ಲದೆ ಮತ್ತಾವುದೂ ಇಲ್ಲ " ಎಂದು ಪತ್ರಗಳನ್ನು ಶಚೀಕಾಂತನ ಕಯ್ಯಲ್ಲಿತ್ತಳು.

ಶಚೀಕಾಂತನು ಕುತೂಹಲದಿಂದ ಪತ್ರಗಳನ್ನು ವಾಚಿಸಿದನು. ಪ್ರಥಮಪತ್ರವೇ ಅಮರನಾಥನಿಗೆ ಬರೆಯಲ್ಪಟ್ಟಿದ್ದುದು. ಪಾಠಕರ ತಿಳಿವಿಗಾಗಿ ಪತ್ರ ಕ್ರಮಗಳನ್ನು ಕೊಟ್ಟಿರುವುದು.

" ಅಮರ !

ನೀನು ನನಗೆ ಅಣ್ಣನು. ನಿನ್ನನ್ನು ಒಡಹುಟ್ಟಿದೆಂದೇ ತಿಳಿದಿರುವ ನಿನ್ನ ತಂಗಿಯೇ ನಾನು. ಇದೇ ದಿಟದ ಮಾತು. ಇಂದಿನವರೆಗೆ ಆಡಿದುದೆಲ್ಲವೂ ನಿನ್ನನ್ನು ದಾರಿಗೆ ತರಬೇಕೆಂಬ ಉದ್ದೇಶದಿಂದಲೇ! ಇದೋ ಈಗ ನಾನು ಅಂದು ನಿನಗೆ ಹೇಳಿದ್ದಂತೆ ಅಜ್ಞಾತವಾಸವನ್ನುಳಿದು ಹೊರಹೊರಟು ಬಿಟ್ಟೆನು. ಹರಿಣಿಯನ್ನು ನೀನಿನ್ನು ಕಾಣಲಾರೆ! ಮುಂದೇನನ್ನೂ ದುಡುಕಿ ಮಾಡಿ ಕೆಡಬೇಡ. ಹರಿಣಿ ನಿನ್ನ ತಂಗಿಯಲ್ಲದೆ ಅರ್ಧಾಂಗಿಯಾಗುವಳಲ್ಲ. ಅವಳು ತನ್ನ ಸ್ವಾಮಿಸಾಕ್ಷಾತ್ಕಾರಕ್ಕೆಂದೇ ಇಂದಿನ ಕೂಟದ ಮಾಟವನ್ನು ಹೂಡಿದಳಲ್ಲದೆ, ಮೋಹಜಾಲಕ್ಕೆ ಕಟ್ಟುಬಿದ್ದು ಮಾಡಿದಳಲ್ಲ. ಇದನ್ನು ಸಾರಿಸಾರಿ ಹೇಳುವೆನು. ಗಟ್ಟಿಯಾಗಿ ನಂಬಿರು; ಚೆನ್ನಾಗಿ ತಿಳಿದಿರು. ಹಿಂದಿನ

ದ್ರೋಹಕ್ಕಾಗಿ ಕಲೆಕ್ಟರ್‌ಪ್ರಭುಗಳ ಕಾಲನ್ನು ಹಿಡಿದು, ಅಪರಾಧ ಕ್ಷಮೆಯನ್ನು ಯಾಚಿಸು. ಇಷ್ಟವಿದ್ದಲ್ಲಿ—ಚಿತ್ತಸ್ವಾಸ್ಥ್ಯವಿದ್ದಲ್ಲಿ,—ಕುಲೀನಕನ್ಯಾಪರಿಗ್ರಹವಮಾಡಿಕೊಂಡು ಸುಖಿಸು. ಮತ್ತೆಂದಿಗೂ ಕೆಟ್ಟನಡೆತೆಗೊಳಗಾಗಬೇಡ. ನಿನಗೆ ಇದಾವುದೂ ಸಮ್ಮತವಾಗಿಲ್ಲದಿದ್ದರೆ, ನಿನಗಿನ್ನು ವನವಾಸವೇ ವರವಾಗಿರುವುದು. ಎಂತೂ ನಿನ್ನ ದುರಭಿಮಾನಾಗ್ನಿ ಶಾಂತಿಹೊಂದಲಿ !

ಇಂತಾಶಿಸುವ ಹಿತೈಷಿಣಿ.''

ಅಮರನು ಉನ್ಮತ್ತನಂತೆ ಎದ್ದು ನಿಂತನು. ಕಲೆಕ್ಟರನ್ನು ನೋಡಿದನು. ಭಯಶೋಕರೋಷಗಳಿಂದ ನಡುನಡುಗಿದನು. ನಿಲ್ಲಲಾರದೆ ಚೀತ್ಕಾರಮಾಡುತ್ತ ಧರ್ಮಭವನವನ್ನುಳಿದು ಓಡಿಹೋದನು. ಗಂಗಾಧರನೂ ಅಮರನ ಹಿಂದೆಯೇ ಓಡಿದನು. ಇಬ್ಬರನ್ನೂ ಹಿಡಿಯಲು ಶಚೀಕಾಂತನ ಆಜ್ಞೆಯಾಯ್ತು. ಸೇವಕರೂ ಹಿಂಬಾಲಿಸಿದರು.

ಶಚೀಕಾಂತನು ಮತ್ತೂ ಕುತೂಹಲದಿಂದ ದ್ವಿತೀಯಪತ್ರವನ್ನು ವಾಚಿಸಿದನು. ಅದು ಕಾಮಪಾಲನಿಗಾಗಿ ಬರೆಯಲ್ಪಟ್ಟಿದ್ದುದು.

'' ಅಣ್ಣಾ !

ಈಗ ನಿನ್ನನ್ನು ನಾನು ಆವ ವಿಶೇಷಣದಿಂದ ಕರೆಯಬೇಕೋ ತಿಳಿಯೆನು. ಮುಖ್ಯವಾಗಿ ನೀನು ನನಗೆ ಪೂಜ್ಯನಾದ ತಂದೆಯೂ ಹಿತೈಷಿಯಾದ ಅಣ್ಣನೂ ಆಗಿರುವೆ. ನಿನ್ನಲ್ಲಿ ಬಯ್ತಿಡುವುದಾವುದೂ ಇಲ್ಲವಾದರೂ ಕಾಲಸ್ಥಿತಿ ಅನುಕೂಲವಾಗಿಲ್ಲ. ಈಗಲೇ ಹೇಗೆ ಬಾಯ್ದೆರೆಯಲಿ ? ಆವ ಕೆಲಸವು ಮುಂದಾಗಿ ಹೇಳುವುದರಿಂದ ಕೆಡುವುದೋ, ಆವುದನ್ನು ಪ್ರತ್ಯಕ್ಷಪ್ರಮಾಣದಿಂದ ಮುಂದೆ ತಂದಿಡುವುದೇ ಮೇಲೋ, ಅಂತಹುದನ್ನು ಈ ನಿನ್ನ ತಂಗಿ ಮಾಡಬೇಕಾಗಿರುವುದು ! ಇದಕ್ಕಾಗಿ ನಿನ್ನಲ್ಲಿ ಕ್ಷಮೆಯನ್ನು ಪ್ರತ್ಯೇಕವಾಗಿ ಪ್ರಾರ್ಥಿಸಲೇಕೆ ? ಅಣ್ಣಾ ! ನನಗಾಗಿ ನೀನು ಕಳವಳಪಡಬೇಕಾದುದಿಲ್ಲ ! ಹಂದೆತನವು ನನ್ನ ಅಣ್ಣನಲ್ಲಿ ಎಂದೆಂದಿಗೂ ಕಾಣಬಾರದು. ಅಂದಿನ ಸಂಕಲ್ಪವೇನೆಂಬುದನ್ನು ನೆನೆನೆನೆದು ಸ್ಥಿರನಾಗಿರಬೇಕು. ಈ ನಿನ್ನ ತಂಗಿ ತನ್ನ ಸ್ವಾಮಿಸಾನ್ನಿಧ್ಯದಲ್ಲಿ

ಸುಖಿನಿಯಾಗುವುದನ್ನು ಇಷ್ಟರಲ್ಲೇ ನೀನು ನೋಡಿ ನಲಿಯಬಹುದು! ಇದನ್ನು ನಿನಗೀಗ ಸಾರಿ ಸಾರಿ ಹೇಳಿ ಹೊರಟಿರುವೆನು. ಕಲೆಕ್ಟರಿಗೂ ಹೇಳು; ಅವರು ಮಣಿಮಾಲೆಯನ್ನು ಸಂಪೂರ್ಣವಾಗಿಯೂ ಮರೆತಿರಲಾರರು! ಮರೆತಿದ್ದರೂ ನೆನೆಪಿಗೆತಂದುಕೊಳ್ಳಲಿ! ಆದರೆ ಅಮರನನ್ನು ದಯಾದಂಡಗಳಿಂದ ತಕ್ಕಮಟ್ಟಿಗೆ ನಿರ್ಬಂಧಿಸಲಿ; ಅಧಿಕವಾಗಿ ಏಕೆ?

ಇಂತಾಶಿಸುವ ನಿನ್ನ ತಂಗಿ.''

ಸ್ತಬ್ಧನಾಗಿ ಕುಳಿತಿದ್ದ ಕಾಮಪಾಲನ ಮುಖವು ಕಳೆಗೂಡಿತು. ಕುತೂಹಲದಿಂದ ಕೇಳುತ್ತ ಕುಳಿತನು. ಶಚೀಕಾಂತನ ಹೃದಯವು ಆನಂದ ಭರದಿಂದ ಉಕ್ಕೇರುತಿದ್ದಿತು! ದೇಹವಾದ್ಯಂತವೂ ರೋಮಾಂಚಿತವಾಗಿ ಕಂಪಿಸಿತು! ಪ್ರೀತ್ಯಾಸ್ಪದವಸ್ತುವಿನ ಕುಶಲೋದಂತಶ್ರವಣವಾದಂದು ಆರಿಗಾದರೂ ಹೀಗಾಗುವುದು ಆಶ್ಚರ್ಯವಲ್ಲವಷ್ಟೆ! ಇರಲಿ; ತೃತೀಯ ಪತ್ರವನ್ನು ಗಮನಿಸುವ! ಅದು ಮೋದಿನಿಗಾಗಿ ಬರೆಯಲ್ಪಟ್ಟಿದ್ದುದು.

''ಅಕ್ಕ!

ನನ್ನನ್ನು ಕಾಣದೆ ನೀನೆಂತು ತಲ್ಲಣಿಸುವೆಯೋ ತಿಳಿಯದೆ ಮಿಡುಕುವೆನು. ಆದರೆ, ಸನ್ಯಾಸಿನಿಯಾಗಿದ್ದು, ಧೃತಿಗೆಟ್ಟು, ಕರ್ತವ್ಯ ಪರಾಙ್ಮುಖಿಯಾಗಬಾರದೆಂದು ಹೇಳುವೆನು. ನಾನು ನಿಮ್ಮೆಲ್ಲರನ್ನೂ ಬಿಟ್ಟುಹೊರಟುಬಂದೆನಾದರೂ, ಎಲ್ಲಿಗೂ ಹೊರಟು ಹೋಗುವುದಿಲ್ಲ, ನಾವುದೂ ಇಲ್ಲ. ಸಮೀಪದಲ್ಲಿಯೇ ಇದ್ದು, ಸತೀಕರ್ತವ್ಯವನ್ನು ಕೈಕೊಳ್ಳುವೆನು. ಸ್ವಾಮಿಗೆ ಸಹಚಾರಿಣಿಯಾಗಿ, ಗೃಹಾಧಿಪತಿಗೆ ಗೃಹಿಣಿಯಾಗಿ, ಪತಿಗೆ ಪತ್ನಿಯಾಗಿ, ಸಮಸ್ತಭಾಗದಲ್ಲಿಯೂ ಸಹಭಾಗಿನಿಯಾದ ಛಾಯೆಯೆನ್ನಿಸಲು, ಈ ನಿನ್ನ ತಂಗಿ ಇಂದು ಅಜ್ಞಾತವಾಸವನ್ನುಳಿದು ಹೊರಹೊರಟಿರುವಳು. ಹೊರಟಮಟ್ಟಕ್ಕೇ ನಿನ್ನನ್ನು ಬಿಟ್ಟು ಹೋಗುವಳಲ್ಲ. ಎಲ್ಲಿದ್ದರೂ, ಹೇಗಿದ್ದರೂ, ಆವವೃತ್ತ್ಯವಲಂಬನದಲ್ಲಿದ್ದರೂ, ನಿನ್ನನ್ನು ಅಡಿಗಡಿಗೆ ಕಂಡು, ನುಡಿದು, ನುಡಿಯಿಸಿ ಹೋಗದಿರಲಾರಳು. ಇದನ್ನೇ ಬಲವಾಗಿ ನಂಬಿ ಎಚ್ಚತ್ತಿರು. ಅಣ್ಣನನ್ನು ಕಳವಳಿಸುವಂತೆ ಮಾಡಬೇಡ. ಅಕ್ಕಾ! ಆ ನಿರ್ಭಾಗ್ಯೆಯರನ್ನು ತಕ್ಕಮಟ್ಟಿಗೆ ಎಚ್ಚರಿಸಿ

ಶಾಂತಿಮಾರ್ಗಕ್ಕೆ ನಿಲ್ಲಿಸುವ ಸಂಕಲ್ಪವನ್ನು ಮರೆಯದಿರಬೇಕೆಂದು ಬೇಡುತ್ತಿರುವ,

ನಿನ್ನ ನಚ್ಚಿನ ತಂಗಿ."

ಮೇದಿನಿ ಹರ್ಷಕ್ಲೇಶಗಳಿಂದ ಕಂಪಿಸಿದಳು. ಪ್ರಯತ್ನದಿಂದ, ತಡೆಯಿಲ್ಲದೆ ಸುರಿಯುತ್ತಿದ್ದ ಕಣ್ಣೀರನ್ನು ತಡೆದು ನಿಲ್ಲಿಸಿದಳು. ಮೇಲೆ ನೋಡಿ, "ಎಲ್ಲಿರುವೆ? ಭಗವಂತ! ಈಗ ಹರಿಣಿಗೆ ನೀನಲ್ಲವೇ ಅಂಗರಕ್ಷಕನು? ಆಶ್ರಿತಪಾಲನವಲ್ಲವೇ, ನಿನ್ನ ಮುಖ್ಯವ್ರತವು! ನೆನೆಪಿರಲಿ" ಎಂದು ಹೇಳುತ್ತ ಹೇಳುತ್ತ ಹೊರಟುಹೋದಳು.

ಮುಂದಿನ ವಿದ್ಯಮಾನವೇನು? ಶಚೀಕಾಂತನು ಆಶಾಪಾಶದಿಂದ ಬಂಧಿತನಾದನು! ನೂತನಶಕ್ತಿಯಿಂದ ಪ್ರಕಾಶಿಸಿದನು! ಮೂರು ಪತ್ರಗಳನ್ನೂ ತೆಗೆದು ತನ್ನ ಅಂಗಿಯ ಕಿಸೆಯಲ್ಲಿಟ್ಟನು. ಕಾಮಪಾಲನನ್ನು ಎಚ್ಚರಿಸಿ, ಬಂದಂತೆ ಮನೆಗೆ ಹೊರಟುಹೋದನು.

ಕಾಮಪಾಲನೂ ಶೋಕವನ್ನು ತಡೆದು ಕರ್ತವ್ಯದಲ್ಲಿ ಕಣ್ಣಿಟ್ಟನು.

"ದೈವೀ ವಿಚಿತ್ರಾಗತಿಃ" ಎಂಬಂತೆ ಅರೆಗಳಿಗೆಗೆ ಮೊದಲು ಜನಮನೋರಂಜಕವೆನ್ನಿಸಿದ್ದ ಕಲ್ಯಾಣಮಂಟಪವಾವುದೋ ಅದೇ ಈಗ ಭಯಕೌತುಕಗಳಿಂದ ಗ್ರಸ್ತವಾಗಿರುವುದು. ಆರ ಬಾಯಲ್ಲಿಯೂ "ಸಂಭ್ರಮ ಮಧ್ಯದಲ್ಲಿ ಸರ್ವನಾಶ" ಎಂಬೊಂದು ವಾಕ್ಯವೇ ಹೊರ ಹೊರಡುತ್ತಿರುವುದು. ಕಲ್ಯಾಣೋತ್ಸುಕರಾಗಿ ಬಂದಿದ್ದವರಾರಿಗೂ ಸನ್ಮಾನದ ಹೆಸರೇ ದೊರೆಯಲಿಲ್ಲ. ಎಲ್ಲರೂ ಕಳವಳಿಸುವವರೇ ಆದರೆ, ಆರನ್ನು ಆರು ಸಲವಡಿಸಬೇಕು? ಎಂತೂ, ಬಂದಿದ್ದವರೆಲ್ಲರೂ ದುಗುಡದಿಂದ ಹೊರಟುಹೋದರು. ತಂದಿದ್ದ ಸಾಮಗ್ರಿಗಳೆಲ್ಲವೂ ಸಿಕ್ಕಿದವರ ಪಾಲಾದುವು. ಇನ್ನೂ ಹೇಳಬೇಕೆ?

ವಿಚಾರಪರರಾದ ದೇಶಬಾಂಧವರೇ! ಸುಹೃತ್ಪ್ರೇಮಲೆಯರಾದ ಸೋದರಿಯರೇ! ಕಾಲಗತಿಯೇ ಅದೃಷ್ಟರೂಪವು!! ಕಾಲಪ್ರೇರಣೆಯಿಂದಲೇ ಹರಿಣಿಯ ಚಿತ್ತದಲ್ಲಿ ಇಷ್ಟರ ಕೌತುಕಪ್ರದರ್ಶನೋತ್ಸವವು ದ್ಯೋತಿತವಾದುದು. ಅದರಿಂದಲೇ ಅಮರನಾಥನ ಅವಸ್ಥೆಯಿಂತಾ

ಡುದು. ಅದೇ ಕಾಲಪ್ರೇರಣೆಯೇ ಮುಂದೆಯೂ ಎಂದೆಂದೂ ಹಿಂದೆ ಮುಂದಿದ್ದ ಎಷ್ಟೆಷ್ಟೋ ವಿದ್ಯಮಾನಗಳನ್ನು ತಂದೊಡ್ಡುತ್ತಿರುವುದು! ಆ ಕಾಲಪಾಶಕ್ಕೆ ಕಟ್ಟುಬೀಳದಿರುವ ಪ್ರಾಣಿ ಆವುದೂ ಇರುವುದಿಲ್ಲ. ಇದೇ ಸೃಷ್ಟಿನಿಯಮವಾಗಿರುವುದು. ಹೀಗಿರುವಾಗ ಕಾಲವನ್ನೇ ಅನುಸರಿಸಿ ನಡೆಯುತ್ತಿರುವ ನಾವು, ಅಕಾಲದಲ್ಲಿ ದುಡುಕದೆ, ಸುಕಾಲವನ್ನೇ ನಿರೀಕ್ಷಿಸಬೇಕಲ್ಲವೆ? ಭಗವತ್ಕೃಪೆಯೂ, ಕಾಲಪುರುಷನ ಸಾಹಾಯ್ಯಸಂಪತ್ತಿಯೂ, ಒದಗಿದಂತೆ ತಕ್ಕಷ್ಟು ಬೇಗದಲ್ಲಿಯೇ ಹರಿಣಿಯ ಮುಂದಿನ ವಿಚಾರವನ್ನು ತಿಳಿಯಲಾಗುವುದು. ಅಂದಿನವರೆಗೂ ತಾಳ್ಮೆಯಿಂದ ನಮ್ಮನ್ನು ಬೀಳ್ಕೊಟ್ಟು, ಮುಂದಿನ ಸಂಗತಿಯನ್ನು ಮುಂಪಾಗಿ ತಂದಿಡುವಂತೆ ಅನುಗ್ರಹಿಸುತ್ತಿರಿ! ಜಗನ್ಮಾತೃಕೃಪಾಚಂದ್ರಿಕೆಯಿಂದ, ನಮ್ಮ ಸಂಕಲ್ಪ ಸಿದ್ಧಿಯಾಗುವಂತೆ ಮಾಡಿರಿ! ಪ್ರೇಮಮಯಿಯಾದ ಈ ನಮ್ಮ ಭಾರತಮಾತೃಸ್ತವವನ್ನು ಆವಕಾಲದಲ್ಲಿಯೂ ಭಜಿಸುತ್ತಿರಬೇಕೆಂಬುದನ್ನು ಮರೆಯದಿರಿ !!! (ಅಸ್ತು)!

ಪ್ರತ್ಯುದರ್ಕ್ಷಿಣ ಪಾಣಿಪಂಕಜಪುಟೀ ವಿನ್ಯಸ್ತಪಾದಾಂಬುಜಾ।
ವಾಮಂ ಪನ್ನಗಸಾರ್ವಭೌಮಸದೃಶಂ ಪರ್ಯಂಕಯಂತೀ ಭುಜಮ್।
ಸ್ರೋತಸ್ಪರ್ಶಲಸತ್ಕಪೋಲಫಲಿಕಾ ಫುಲ್ಲಾರವಿಂದೇಕ್ಷಣಾ।
ಸಾ ಮೇ ಪುಷ್ಯತು ಮಂಗಲಾನ್ಯನುದಿನಂ ಸರ್ವಾಣಿ ಸರ್ವಂಸಹಾ॥

(ಭೂಸ್ತುತಿ, ೩.೨)

ಸಂಪೂರ್ಣಂ.

Some of the opinions on the works published by "Sathihithaishini Granthamala"

BALLABROOIE,
High Ground,
BANGALORE.
17ನೆಯ ಆಗಸ್ಟ್, 1914.

"......ನೀವು ಕಳೆದ ತಿಂಗಳ 27 ನೆಯ ತಾರೀಖಿನ ನಿಮ್ಮ ಲೇಖನದ ಜೊತೆಯಲ್ಲಿ ಕಳುಹಿಸಿಕೊಟ್ಟ **"ಸತೀತ್ವರಕ್ಷಿಣಿ"** ಎಂಬ ನಿಮ್ಮ ದ್ವಿತೀಯ ಗ್ರಂಥವನ್ನು ದಿವಾನ್ ಸಾಹೇಬರವರು ವಂದನಪೂರ್ವಕವಾಗಿ ಸ್ವೀಕರಿಸಿರುತ್ತಾರೆ. ಅಲ್ಲದೆ, ನಮ್ಮ ಸ್ತ್ರೀಯರಿಗೆ ಉಪಯುಕ್ತಗಳಾದ ಇದೇ ತರಹೆಯ ಇತರ ಗ್ರಂಥಗಳನ್ನು ಪ್ರಕಟಿಸುತ್ತಾ ಬರುವುದರಮೂಲಕ ಭಾಷಾಭಿಮಾನಿಗಳ ಪ್ರೋತ್ಸಾಹಕ್ಕೆ ಪಾತ್ರರಾಗುವಿರೆಂದು ಭಾವಿಸುತ್ತಾರೆ.

(Sd.) **Hiriyannaiya,**
ದಿವಾನರವರ ಪ್ರೈವೇಟ ಸೆಕ್ರೆಟರಿ.

From

R. Tata, Esq., M.A., L.T.
Lecturer, Government College,
RAJAHMUNDRY.

(ಕವಿತೆ) 1—8—1914.

ತರಿಸಂದಿದುರ್ಗ ನಭಾಮಣಿ।
ಯರನಂ ಕಾಪಿಟ್ಟ ಚರಿತಮಂ ನೀನಣ್ಣಂ ॥
ಗುರೆ ನಲಿದು ಕಳಿಪೆ ಪೊಗಳ।
ಲ್ಕರಿಯುದನೆಂ ತಂಗೆ! ಒಂದೆ ನಾಲಿಗೆಯಿಂದಂ ॥ ೧ ॥
ಅದರಿಂದೆನ್ನರಿವನಿತಂ।
ಪದದಪ್ಪಿದೊಡಂ ನಮಂತು ನವಿತವುತರೆಯುಂ ॥
ಮುದವಿನಿತುಂ ಕುಂದದೆ ಕ–।
ಬ್ಬದ ಗುಣದಿಂ ಮರೆತು ನುಡಿಯಲಾನೊಡರಿಸುವೆಂ ॥ ೨

ುಸಿತೆಡರಡಸಿದೊಡಂ ವಾ।
ಸಿಸಿಯುಸಿತಂ ಧೈರ್ಯದಿಂದೆ ತೊಲಗಿಸಿ ಬಗೆದ ॥
ಸ್ನಸ ಪೇಳ್ದರಸಂ ಧರೆ ಜೀ।
ಯೆನೆ ಕಾಪಿಡೆ ನಭೆಯುದೆತ್ತ ಪೋದಳೊ ಪೇಳಿಂ ॥ ೩ ॥

ಮಗನೆನ್ನದೆ ಮಗಳೆನ್ನದೆ।
ಬಗೆದನ್ನಂ ಬಳಿಕಮೆನ್ನದಾರೊಳಮುರಿದು ॥
ಜ್ಞಗದಿಂ ಪಣಕ್ಕೆ ಕುದಿವಾ।
ಕೆಗೆ ಬರೆಕುತ್ತಂ ಶರಾವತಿಯುದೇನಾದಳ್ ? ॥ ೪ ॥

ಅರಸೆನ್ನದೆ ತೆರಸೆನ್ನದೆ।
ಸರಿದೆಲ್ಲಾ ತೊಡರನಾತ್ಮವಲ್ಲಭೆಯೊಳ್ ಜೆ ॥
ಕ್ಕರಿಗೊಂಡಿರತ್ರಿಯೊಳ್ ಸುಖ।
ಮರಿಯುದೆ ಕಂಡನೊ ಪರತ್ರೆಯುಂ ಶಂಕರನೇಂ ॥ ೫ ॥

ಅಳಲಂ ಪೆರರೆಡೆಯೊಳ್ ಕಂ।
ಡಳುತುಂ ಪೆರರುಕ್ಕೆವಕ್ಕೆ ನಲಿಯುತುತು ಮರೆಪೋ ॥
ಪುಳಿತಾವೋರೆಯು ಕಲ್ಗೆರ್ದ।
ಗಳದಿರ್ದ್ದ ನಿರಂಜನಂಗೆ ಕರೆಪತ್ತುಗುಮೇಂ ॥ ೬ ॥

ತನ್ನವರೆನ್ನವರೆನ್ನದೆ।
ನನ್ನುತಮತಿಯಾಗಿ ಧರ್ಮಮುಂ ಕಾಪಿಡುತುಂ ॥
ನಿನ್ನಂತೆ ಚಿದಾನಂದರ್।
ಮುನ್ನಿಲ್ಲತ್ತರೆ ಭರತ ರಾಜ್ಯದುನ್ನತಿ ಪಿರಿದೇ ॥ ೭ ॥

ಇಂದಿರೆ ಪುರುಷೋತ್ತಮನಂ।
ಪಂದಂತಿರೆ ನಂದಳಾ ರಮಾಮಣಿಗೆ ರಮಾ ॥
ನಂದಂ ಭಗವಾನಂದಂ।
ಕಂದರ್ಪನ ತೆರದೆ ತನಯುರಪ್ಪುದು ಸಾಜಂ ॥ ೮ ॥

ಆ ಮಣಿಯು ರಮಾಮಣಿಯು ನ।
ಭಾಮಣಿಗೊಲ್ದೊಪ್ಪಿಯಾಗೆಯೊಡವುಟ್ಟಿದನಾ ॥

ವ್ಯೋಮದೊಳಲೆವಾಪೆರವೋಲ್ ।
ಕಾಮಾಂಧಂ **ರಾಜಶೇಖರಂ** ದುರ್ಣ್ಯಯದಿಂ ॥ ೯ ॥
ಇವರ್ಗಳ ಮುಂದಣ ಕಥೆಯಂ।
ಸವಿತವದಂತೊರ್ಮೆ ಕೇಳಲೆಳಸುವ ಮನದು ।
ಕ್ಕವಮಂಕೆಮ್ಮನೆ ನೀಂ ಕಂ।
ಡವಯುವದಿಂ ಪೇಳೆ ಕೇಳ್ದು ಮೆಚ್ಚುದರೊಳರೇ ॥ ೧೦ ॥
ಮುಂದಟ್ಟೆ ಸುಶೀಲೆಯು ನಾ।
ನಂದದಿ ನೀಕ್ಷಿಸಿಯು ಏಸಿತು ಬೇಗಂ ಕಜ್ಜಂ ॥
ಬಂದಿರೆ ತಡೆದೆಂ ತಳ್ವಿದೆ।
ನೆಂದೆನ್ನೊಳ್ ತಂಗೆ ! ಮುನಿಯದಿರ್ಪುದು ಮನದೊಳ್ ॥ ೧೧ ॥
ಪೆರಗಂ ಕಂಡೊಡೆ ತಾಂ ಮೆ।
ಯ್ಮರೆಪಂ ನಿವಿಸ್ಮಾ ಸುಶೀಲೆಯುಂ ಬಳಿಕೊಳವೊ ॥
ಕ್ಕರಸಿಯೆ ನವರಸ ಪೊಸವೊರ್ಗಂ।
ದರತೆಯು ಕಂಡಾಗಳಪ್ಪುಕೆಯ್ಯುದನಾವಂ ॥ ೧೨ ॥
ಭಗವತಿಯುಪ್ಪುದರಿಂದಂ ಮೆ।
ಯ್ಮಗೆ ಬಲ್ಮೆಗೆ ಕೂರ್ಮೆಗುನ್ನತಿಕ್ಕೆಗೆ ಧಾಳ ।
ಕ್ಕಗಲದ ಸುಶೀಲೆಯೆಂಬೀ ।
ಕೆಗೆ ಪಡೆ ತುಲಜಾಭವಾನಿ ಯೆಣೆತ್ರೊಣೆ ನಾಜಂ ॥ ೧೩ ॥
ಕಯ್ಮುಗಳೇಕೆ ಸುಶೀಲೆಗೆ।
ಮೆಯ್ದುಗಮೊಂದೊಂದೆ ಗುಣಮೆ ಬುಧರೆರ್ದೆಯೊಳವೊ ॥
ಕ್ಕಯ್ದು ಯತೀಂದ್ರಿಯ ಸುಖಮೆನ।
ಲಯ್ದುಂ ಗುಣಮುಲ್ಲಿ ನೆರೆದೊಡಾವುದೊ ಗಹನಂ ॥ ೧೪ ॥
ಸುಗುಣದಿನಾ ಸುಭಗತೆಯಿಂ।
ನೆಗಳ್ದಾ ಸೌಶೀಲ್ಯದಿಂದೆ ಸರಸೋಕ್ತಿಯುಸಿ ॥
ಕೆಗೆ ಪೊಗ್ಗೆ ಸುಶೀಲಾಪ್ಪುಯು ।
ಮೊಗೆವುದುಮಂತಾ ಸತೀಪಿತ್ರೈಷಿಣಿಪೆಸರುಂ ॥ ೧೫ ॥

ಪರಿತಪ್ಪರ್ ಪೊನಲವೊಲ್ ಸುರಿ।
ತರೆ ಸುಡಿಯೊಂ ಸೊಬಗೊ ಪುರುಳನೊಳಕೊಂಡಿಪ್ಪರ್ ॥
ಪರಿಯ ಸುಶೀಲೆಯ ನತ್ತ್ಯಾ।
ದರದಿಂ ಕಿವಿವೇಟವಾಗೆ ಕೇಳದರೊಳರೇ ॥ ೨೭ ॥

ಬಗೆವುದು ನೀಂ ಕನ್ನಡಕಾ।
ನೊಗೆದೆಂ ಪುಣ್ಯಾಸ್ರವಕ್ಕಮತಿ ಚತುರತೆಯಿಂ ॥
ಬಗೆಯೆಂ ಕನಸಿನೊಳಂ ನೆ।
ಯ್ಮೆಗೆಸುತ್ತುಂ ಧರ್ಮಕಾರ್ಯಕೊಲ್ಲದ ಪೆರವಂ ॥ ೨೮ ॥

ನಿನಗಕ್ಕೆ ತಂಗೆ ! ಸರಸತಿ।
ಯುನಿವಾತುಂ ನೆಗಳ್ವನಂತಮತಿಯೊಳ್ಪಸಮುಂ ॥
ವನಜಾಕ್ಷನ ದಯೆಯಿಂ ಮು।
ನ್ನಿನ ಸಾವಿತ್ರಿಯ ನೆಗಳ್ತೆಗರಸುಂ ತೆರಸುಂ ॥ ೨೯ ॥

ಕನ್ನಡದೆ ತಂಗೆ ! ಪಡೆಸೀ !
ಸುನ್ನತಿಯುಂ ಪಿರಿದುಮೋದಿಸಾಧಪೂರ್ತೆಯಿಂ ॥
ಕನ್ನಡಿಗರ್ ನಲವೆಚ್ಚರ್ಗೆ।
ನಿನ್ನಯ ಶೀಲಕ್ಕಮುರಕದೊಳ್ಗುಣಪಣಕಂ ॥ ೩೦ ॥

ವ್ಯೋಮಮುದಿಪ್ಪರ್ನಮಕ್ಕರ್ನ।
ಭಾಮಿಣಿ ನಿಲ್ಕಾ ಸುಶೀಲೆಯುರನುಳ್ಳನೆಗಂ ॥
ಭೂಮಂಡಲವೆಲ್ಲಂ ತಣಿ।
ದಾವೋದಂ ತಳಿಗೆ ತುಳುಗೆ ನಿನ್ನಾಕೃತಿಗಳ್ ॥ ೩೧ ॥

ಪಡೆವುದು ಪುತ್ರಿಯರಂ ಮುಂ।
ಪಡೆದಂದದೊಳೊಂದು ತಿಂಗಳಿಂಗೊಮ್ಮೆ ಗಡಂ ॥
ಪಡೆದಳ್ಗೊಳ್ಪಸದೊದವಂ।
ಪಡೆವಿನೆಗಂ ಪಡೆಯೆ ತಂಗೆ ! ಪಡೆಯಾರ್ ನಿನಗಂ ॥ ೩೨ ॥

ಇಂತು ತ್ರೈಲೋಕ್ಯ ಭದ್ರಾಕಾಂಕ್ಷಿ,

R. Tata, M.A., L.T.

ವಿದ್ಯುಲ್ಲತಾ-ವಿರಾಗಿಣಿಯರ ವಿಷಯವಾಗಿ

(ಕವಿತೆ)

ಕಂಡೆಂ **ಸುಶೀಲೆ**ಯುಂ ಮುಂ।
ಕಂಡೆಂ **ನಭೆ**ಯುಂ **ವಿರಾಗಿಣಿ**ಯುಮಂ, ಬಳಿಕಂ ॥
ಕಂಡೆಂ **ವಿದ್ಯುಲ್ಲತೆ**ಯಂ।
ಕಂಡಿನ್ನವಳಾವಲೋಕನೋತ್ಸುಕನಾದೆಂ ॥ ೧ ॥

ಎನಿತೆನಿತಂ ನಿಟ್ಟಿಸಿದೊಡ।
ವನಿತನಿತಂ ತಣಿಯಲರಿಯದಿರೆ ಕಣ್ ಕುಡಿವಿಂ ॥
ಚಿಸ ಝಳದಿಂ ಕಳ್ತಲೆ ಕಂ।
ಗೆಸಿಕುಂ ವಿದ್ಯುಲ್ಲತಾ ರಮಾಝುಲ್ಲಮಲಂ ॥ ೨ ॥

ಹರಿಣಿ, ಶಚೀನಾಥ ಮನೋ।
ಹರೆಯೆನೆ ಮಣಿಮಾಳೆ, ಶೀಳಗುಣಮಾಳೆಯೆನೋ ॥
ಯರದೊಲ್ಲದಮರಸಂ ಪೊ।
ಯ್ವಿರವಿಂ ವಿದ್ಯುಲ್ಲತಾ ರಮಾಝುಲ್ಲಮಲಂ ॥ ೩ ॥

ಪೊಲ್ಲರಕೆಯ್ತಮಂ ಕಿಡಿಸಿ, ತನ್ನವರಂ ಬಗೆಗುಂದದಂತೆ ಪೇ।
ಳ್ದಲ್ಲರುಮೊರ್ಮೆ ಪೇರೊಸಗೆ ಗೆಯ್ತಿರೆ ಜೀಯೆನಲೆತ್ತಪೋದೆ ವಿ ॥
ದ್ಯುಲ್ಲತೆಯಂತೆ ನಿಃಕರುಣದಿಂದಮೆ ಪೆಣ್ಗಳೊಳಿಂತುಟಲ್ತೆ ಕೇ।
ಳ್ಮಲ್ಲರ್ದೆಯುಂ ವಿಯೋಗಿಜನದೊಳ್ ಗಡ ಕಲ್ಲೆರ್ದೆಯಾಗದಿರ್ಕುಮೇ ? ॥ ೪ ॥

ಪಿರಿದೋದುಂ ಸದ್ಗುಣಮುಂ।
ವರಪದಮುಂ ಚಾಕಚಕ್ಯಮುಂ ಖಳರಂ ಚ ॥
ಪ್ಪರಿಪುರ್ಕುಂ ಸಮನಿಸುಗುಂ।
ಪರಸುತ್ತಿರೆ ಶುದ್ಧಮನದೆ **ಗೋಪೀನಾಥಂ** ॥ ೫ ॥

ಪೆರನಾಡೊಳ್ ಪಲದೆವಸಂ।
ಪೆರವರೊಳೋದುತ್ತುಮಿರ್ದು ಮತಿಚಾರಂಗ ॥

ಳ್ಗೆರಗದೆ ನಾಡಾಡಿಗಳೇ ।
ನರನಂ ಪಾಳಿಸುವರೇಂ **ಶಚೀನಾಥ**ನವೋಲ್ || ೬ ||

ಅಣ್ಣನ ನಮ್ಮನ ತಂಗಿಯ ।
ಕಣ್ಣಂತಿರೆ ಕಂಡು ತಕ್ಕ ನಡೆನುಡಿಯಿಂದಂ ॥
ನುಣ್ಣನೆ ಪಗೆಯುಂ ನೋಣಯ ।
ಲ್ಕಣ್ಣಂ ತಾನೆನೆ **ಜಯಂತ**ನನ್ನರುಮೊಳರೇ ? || ೭ ||

ತನುವಂ ಪೊರೆಯದೆ, ಸಾವೋ ।
ದನದಿಂ, ವಿಷಯಕ್ಕೆ ಸೋಲದಾಸಂಘದೆ, ನಾ ।
ಡಿನ ಸೊಬಗಿಂಗೆಸಕದೆ ಪೂ ।
ಣ್ದ ನರಂ ಗಡ ! **ಕಾಮಪಾಲ**ನಾ ಮಾನಧನಂ || ೮ ||

ಲೀಲೆಯ ವಿನ್ನಾಣಗಳಿಂ ।
ಸೋಲಿಸಿದಂ ಗ್ರಾಮರಕ್ಷಕರುಮಂ ಸೀರಂ ॥
ಪಾಲಂ ಬೆರಸುವ ಪರಿಜಿಂ ।
ಸೋಲವೆ ? **ಜಯಚಂದ್ರ**ನುದಯದೊಳ್ ವಿಪ್ಪ್ರಳುಗಳ್ || ೯ ||

ಪೆರವನೆಯನುರಿಪಿ, ಪೆರವೆ ।
ಣ್ಗೆರಗಿ ಬಸಿವೊರ್ಗೇದಿ ಮಡಿಪಿನಂ ಗುಣಕರುಗೊಂ ॥
ಡರನಂ ಕಿಡಿಸು **ವಮರ**ನುಂ ।
ಬರಸಿಡಿಲೆರಕಕ್ಕೆ ಬಾಯ್ವಿಡುವುದಚ್ಚರಿಯೇ ? || ೧೦ ||

ಕುಲಮುಂ ತಕರ್ಕ್ಕಮರ್ಯಯುಮುಂ ।
ಪೊಲೆಗೆಡಿಸುವ ಪೊಲ್ಲರೆಸಕದಿಂದಂ ಕಿಡುವಂ ॥
ತಲೆದಲೆದು ದುರ್ಗತಿಗಳೊಳ್ ।
ನೆಲೆಗಿಡೆ **ಗಂಗಾಧರಂಗೆ** ಪೆಸರೊಚ್ಚತವೋ ? || ೧೧ ||

ಇನಿಯನನಗಲ್ದ ಒಳಿಕೀ ।
ತನುಮನಕಳಲಲ್ಲದಿಲ್ಲ ಪೆರತೊಂದು ಮನು ॥
ತ್ತನುವಳಿಯದೆ ಪೆಣ್ಗಳ್ಗೊಳ ।
ವೆನಿತಾನುಂ ಕಜ್ಜಮೆಂದು **ಮೇದಿನಿ** ತಿಳಿಗುಂ || ೧೨ ||

ಸಯೆಂ ಗಂಡಂ ಪೆಂಡಿತಿಯುಂ।
ಸಯುಲೇಕೆಯೊ? ಒಬ್ಬರ್ಗಸಳಿಯೆ ಪಲರೊಳರೆಂಜೇ ॥
ಸಯುಲೊಲ್ಲದ ಪೆಣ್ಬಡೆಗಂ।
ಜಿಯಂ '**ಪತಿರನ್ಯೋವಿಧೀಯತೇ**' ಎಂದುಲಿವರ್ ॥ ೧೩ ॥

ಸರಕದ ಸೆರೆವಸೆಯಿಂದೋ।
ಸರಿಸಿದರೆಂತಾಸು ಪೊರ್ಪುರ್ಗ ವಹಾಸವಗತಿಗೆ ॥
ಯ್ತ್ರರಲಾರ್ಪರರಿವಿಸೆಂಬಂ।
ತಿರೆ ಕಂಡರಿಯಾ **ವಿಳಾಸಿನೀ** ವಿಭ್ರಮಮಂ ॥ ೧೪ ॥

ಸಲ್ಲದ ಸಂದೆಗಪೊಳಕೊಳೆ।
ತಲ್ಲಳದಿಂ ಭ್ರಮರಕೀಟವೆಂಬೀ ನ್ಯಾಯಂ ॥
ಪಲ್ಲಟಿಸಿತ್ತೊವಿರ್ಗಂಗೆಸೆ।
ಪೊಲ್ಲಮೆಯುಂ **ಭ್ರಮರೆ** ಕೀಟದಿಂ ಕಡೆಯೆಸಿಕುಂ ॥ ೧೫ ॥

ಮನೆಗಾವಿನಾಳ್ಗಳಿಂ ತಿಂ।
ತೆಸಲಿಕ್ಕುರ್ಗಂ ಸುಂದರ ಪ್ರಸಾದರ **ಮನೆಯಾಳ್** ॥
ಮನವಂ ಗೆಲ್ದಂ ಜವದಿಂ।
ದೆಸೆ ದೀವಿಗೆ ವಿಡಿದ **ಕೇಶಿಯುಂ** ಪೆಚ್ಚಿದರಾರ್ ॥ ೧೬ ॥

ದಾಂಗುಡಿವಿಟ್ಟುದಂಬರದೊಳೀ ಪೊಸಥಾಳದ ಮಿಂಚು ಮಿಂಚಿದ।
ತ್ತ್ರಂಗನೆಯರ್ಗೆ ಕಣ್ಬೊಲನಿದೆಂಬಸೆಗಂ ಸಡೆತಂದು ಮೋದಿಸೀ ॥
ಸಂಗತಿಯೊಂದೆಯುಂ ಪರಶಚೀಪರಸಳ್ಳೈರ್ದೆವೊಕ್ಕು ಕೂಡಿ ಮುಂ।
ತಾಂಗಡವೆಂಬಸಿಂ ಸೆಲಸಿನಿಲ್ಕೆ ತಟಿತ್ಪ್ರಭೆ ಥಾಳಥಳ್ಯದಿಂ ॥ ೧೭ ॥

ಇಂತು ತ್ರೈಲೋಕ್ಯಹಿತದಾಕಾಂಕ್ಷಿ,
R. Tata, M.A., L.T.

15-3-1915.

J. S. CHAKRAVARTI, Esq., M.A., F.R.A.S.,

Comptroller to the Government of Mysore.

DEAR MADAM,

I am much obliged to you for your kindness in sending me a copy of '*Viragini*', the fourth work of your Granthamala. I have read some of your previous books and though I have found the language difficult in some places and the syntax somewhat hard to follow··········due, no doubt, to my imperfect knowledge of the Kanarese language··········I have invariably found them full of interest and with very high moral ideals. I am happy to see that Mysore has produced a lady author of your stamp and I sincerely wish that your desire for founding an independent monthly journal, may be fulfilled.

With continued good wishes for your success in your laudable endeavour to improve and adorn the Kanarese language and with best regards.

BANGALORE,
19th March 1915.

I am,
Yours faithfully,
(Sd.) **J. S. CHAKRAVARTI.**

THE MYSORE PATRIOT.

Sathi-Hithaishini Granthamala.

Srimathi Tirumalammal of Nanjangud has brought out a number of very useful Kannada books. "Vidyullatha," "Satheethvarakshini," "Viragini" and "Suseele" are four books which she has published. In all these books she has portrayed human nature in its simplicity. The language of the books is generally simple and rises to sublimity here and there. The stories are told in the most interesting and attractive manner. Some of the dialogues are excellent. There is an ultimate tone of morality pervading the treatment adopted in the books. There is, however, room for improvement which, we hope, will be attended to in the next edition, if any.

August 24, 1915.

DEWAN BAHADUR J. S. CHAKRAVARTI,
(KAVYANANDA) M.A., F.R.A.S.,
3/2 Brindaban Mullick Lane,
Harrison Road, P. O.

Calcutta, January 5, 1915.

DEAR MADAM,

I am greatly obliged to you for your very kind letter of the 25th Dec. 1914 and for the copy of your excellent work "Vidyullata" which accompanied it.

I read your last book "Nabha" with very great interest and was much impressed with the excellence of its styles and the nobleness of the thought expounded.

I shall also read the present work at an early date and have no doubt that it will disclose the same remarkable powers of the authoress as the previous volumes did.

It is a matter of great pride and satisfaction to our Hindu Society that one in your position is working in the field of literature in the way you are doing.

With best wishes.
I am
Yours Sincerely,
(Sd.) J. S. CHAKRAVARTI.

2656—26. ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ